ಆಧುನಿಕ ವಿಜ್ಞಾನಕ್ಕೆ

# ಗಾಂಧಿಯ ಸವಾಲು




ಮೂಲ

ಪ್ರೊ. ಸುನಿಲ್ ಸಹಸ್ರಬುಧೆ

ಕನ್ನಡಕ್ಕೆ

ಕೆ. ಪುಟ್ಟಸ್ವಾಮಿ



ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಗ್ರಂಥಕರ್ತ

# ಪ್ರೊ. ಸುನಿಲ್ ಸಹಸ್ರಬುಧೆ

ಪ್ರೊ. ಸುನಿಲ್ ಸಹಸ್ರಬುಧೆ ಅವರು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಮತ್ತು ಕಾನ್ಪುರದ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್‌ನಲ್ಲಿ ಎಂ.ಎಸ್ಸಿ ಪದವಿ ಪಡೆದವರು. ಅವರು ಕಾನ್ಪುರದ ಐ.ಐ.ಟಿ.ಯಲ್ಲಿ ತತ್ತ್ವಶಾಸ್ತ್ರ ವಿಷಯ ತೆಗೆದುಕೊಂಡು ಹಿಂದಿಯಲ್ಲಿ ಮಹಾಪ್ರಬಂಧ ಬರೆದ ಕಾರಣ ಪಿಎಚ್.ಡಿ. ಪದವಿ ಲಭಿಸಲಿಲ್ಲ. ಇಂದು ಸಹಸ್ರಬುಧೆ ವಿದ್ಯಾರ್ಥಿಗಳ, ಕಾರ್ಮಿಕರ, ಕರಕುಶಲಗಾರರ, ರೈತ ಚಳುವಳಿಗಳ ಸಂಘಟನಕಾರರಾಗಿ ವಿಜ್ಞಾನ, ರಾಜಕೀಯ ಮತ್ತು ಜನಾಂದೋಲನಗಳ ಬಗೆಗೆ ಸಂಶೋಧನೆ, ಲೋಕವಿದ್ಯೆ, ಸ್ಥಳೀಯ ಮಾರುಕಟ್ಟೆ ಮತ್ತು ರಾಜಕೀಯೇತರ ಸಾಮಾಜಿಕ ಶಕ್ತಿಗಳ ಪರಿಕಲ್ಪನೆಗಳ ಸುತ್ತ ಚಿಂತನೆಗಳನ್ನು ರೂಪಿಸುತ್ತಿದ್ದಾರೆ. ವಾರಣಾಸಿಯ ಗಾಂಧಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಟಡೀಸ್ ಸಂಸ್ಥೆಯಲ್ಲಿ ಸಂಶೋಧನೆಯಲ್ಲಿ ತೊಡಗಿದ್ದಾರೆ. ಹಲವಾರು ಪ್ರಗತಿಪರ ಸಂಸ್ಥೆಗಳ ಸಂಸ್ಥಾಪಕರಾಗಿ ರೈತ ಚಳುವಳಿ, ವಿಜ್ಞಾನ ಮತ್ತು ರಾಜಕೀಯ ಚಿಂತನೆಗಳ ಮೇಲೆ ಅವರು ಬರೆದ ಗ್ರಂಥಗಳು ಬಹುಖ್ಯಾತಿ ಪಡೆದಿವೆ. ಅವು ಮಹಾತ್ಮ ಗಾಂಧಿಯಿಂದ ಸ್ಫೂರ್ತಿ ಪಡೆದಿವೆ. ಗಾಂಧಿಯವರ ವಿಚಾರಗಳ ಸಾಂಸ್ಕೃತಿಕ ಅನುಸಂಧಾನಕಾರರಾಗಿದ್ದಾರೆ. ಇಂದು ಬದಲಾಗುತ್ತಿರುವ ಸಂದರ್ಭಗಳ ಸವಾಲುಗಳಿಗೆ ಮುಖಾಮುಖಿಯಾಗಿ ಗಾಂಧಿ ಚಿಂತನೆಯ ಮರುವ್ಯಾಖ್ಯಾನವನ್ನು ಮಾಡುತ್ತಿದ್ದಾರೆ. ಸುನಿಲ್ ಸಹಸ್ರಬುಧೆ ಜಾಗತೀಕರಣ ಮತ್ತು ಸಾಮ್ರಾಜ್ಯಶಾಹೀ ಪ್ರಭುತ್ವಕ್ಕೆ ಪ್ರಬಲವಾದ ಜನಪದೀಯ ಸವಾಲನ್ನು ಲೋಕವಿದ್ಯಾ ದೃಷ್ಟಿಯ ಮೂಲಕ ರೂಪಿಸುವಲ್ಲಿ ನಿರತರಾಗಿದ್ದಾರೆ. ಸಮಾಜದಲ್ಲಿ ಅಂತರ್ಗತವಾಗಿರುವ ಅನುಭವಜನ್ಯ ಜ್ಞಾನದ ಬಗೆಗೆ ಇತರರ ಜತೆ ಗಾಢವಾದ ಸಂವಾದದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಅನುವಾದಕ

## ಡಾ. ಕೆ. ಪುಟ್ಟಸ್ವಾಮಿ

ಕನಕಪುರ ತಾಲೂಕಿನ ವರಗೇರಹಳ್ಳಿ ಗ್ರಾಮದಲ್ಲಿ ಜನನ. ಅಕ್ಷರ ಲೋಕಕ್ಕೆ ಅಪರಿಚಿತವಾದ ಕುಟುಂಬದ ಮೊದಲ ಪದವೀಧರ. ಗ್ರಾಮಾಂತರ ಶಾಲೆಗಳಲ್ಲಿ ಆರಂಭದ ವಿದ್ಯಾಭ್ಯಾಸ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಕೃಷಿ ಪದವಿ (1980) ಗಳಿಕೆ. ಮೈಸೂರು ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ, ಕನ್ನಡ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಪದವಿ ಗಳಿಕೆ.

ಸಾಹಿತ್ಯ, ಜೀವವಿಜ್ಞಾನ, ಪರಿಸರ, ಕ್ರೀಡೆ, ಸಿನೆಮಾ ಹಾಗೂ ಜನಪರ ಚಳವಳಿಗಳ ಬಗೆಗೆ ಆಸಕ್ತಿ. ಪ್ರಜಾವಾಣಿ ಪತ್ರಿಕೆಯ ಮೂಲಕ ಪತ್ರಕರ್ತರಾಗಿ (1981) ವೃತ್ತಿಜೀವನ ಆರಂಭ. ಮುಂಗಾರು (1984) ಪತ್ರಿಕೆಯಲ್ಲಿ ವೃತ್ತಿ ಮುಂದುವರಿಕೆ. 1985ರಲಿ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಗೆ ಸೇರ್ಪಡೆ. ಅನಂತರ ಅರಣ್ಯ, ಜೀವ ಪರಿಸರ, ಹಿಂದುಳಿದ ವರ್ಗಗಳ ಇಲಾಖೆ, ಯುವಜನ ಸೇವೆ ಮತ್ತು ಕ್ರೀಡೆ ಇತ್ಯಾದಿ ಸರ್ಕಾರಿ ಇಲಾಖೆಗಳಲ್ಲಿ ಸೇವೆ. 2002ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ವಿಜ್ಞಾನಗಳ ಇತಿಹಾಸ ವಿಭಾಗದ ಮುಖ್ಯಸ್ಥರಾಗಿ ಸೇವೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ನಂತರ ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿದ್ದಾರೆ.

ಚಾರ್ಲ್ಸ್ ಡಾರ್ವಿನ್ನರ ಯುಗಕೃತಿ "ದಿ ಆರಿಜಿನ್ ಆಫ್ ಸ್ಪೀಷಿಸ್" ಕೃತಿಯನ್ನು ಕನ್ನಡಕ್ಕೆ "ಜೀವ ಸಂಕುಲಗಳ ಉಗಮ"ವನ್ನಾಗಿಸಿದ ಸಾಹಸ (1991). ಪ್ರಖ್ಯಾತ ಛಾಯಾಚಿತ್ರಗ್ರಾಹಕ ಕೃಪಾಕರ–ಸೇನಾನಿ ಜೋಡಿಯ ಜೊತೆಗೂಡಿ ಅಂಗೈಯಲ್ಲಿ ಜೀವಜಗತ್ತಿನ ವಿರಾಟ್ ಪ್ರಪಂಚ ತೋರುವ "ಜೀವಜಾಲ" ಕೃತಿ ರಚನೆ (1999). ಓದುಗರ ಮತ್ತು ವಿಮರ್ಶಕರ ಅಪಾರ ಮೆಚ್ಚುಗೆ. 1999ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಪ್ರಶಸ್ತಿ ಗಳಿಕೆ. ಕನ್ನಡ ಸಾಹಿತ್ಯ ಲೋಕಕ್ಕೆ ವಿಶಿಷ್ಟವೆನಿಸಿದ, ಕ್ರೀಡಾ ಜಗತ್ತಿನ ವಿಸ್ಮಯ, ಅಳುಕು–ಪುಳಕಗಳನ್ನು ತೆರೆದಿಟ್ಟ "ಭುವನದ ಬೆಡಗು" ಕೃತಿ ಪ್ರಕಟಣೆ (2000). ಐವರು ಮಹನೀಯರ ಜೀವನ ಚರಿತ್ರೆಯ ಅನುವಾದದ ಜೊತೆಗೆ ಜ್ಞಾನಪೀಠ ಪ್ರಶಸ್ತಿ ವಿಜೇತ ಅಸ್ಸಾಂ ಲೇಖಕ ಬೀರೇಂದ್ರ ಕುಮಾರ ಭಟ್ಟಾಚಾರ್ಯರ "ಯಾರ್‍ಯುಂಗಮ್" ಕೃತಿಯನ್ನು "ಜನತೆಯ ರಾಜ್ಯ" ಶೀರ್ಷಿಕೆಯಡಿ ಅನುವಾದ ಮಾಡಿದ್ದಾರೆ.

ಸುವರ್ಣ ಕರ್ನಾಟಕ – ೨೦೦೬

# ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು


ಮೂಲ

**ಸುನಿಲ್ ಸಹಸ್ರಬುಧೆ**

ಕನ್ನಡಕ್ಕೆ

**ಡಾ. ಕೆ. ಪುಟ್ಟಸ್ವಾಮಿ**



**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೪೮ ೪೫೧೬

**ADHUNIKA VIJNANAKKE GANDHIYA SAVALU :** A Kannada translation of 'Gandhi's Challenge to Modern Science' by **Proof. Sunil Sahasrabudhey,** B-31/83 R, Rashmi Nagar, Lanka, Varanasi - 221 005 Ph : 0542 - 2369253

Translated by : **Dr. K. Puttaswamy,** # 90, 16th Cross, 4th Phase, J.P. Nagar, Bangalore - 560 078

*Published by*
**Ashoka N. Chalavadi**
Administrative officer
Kannada Pustaka Pradhikara
Kannada Bhavana, J.C. Road
Bangaluru - 560 002.

© ಕನ್ನಡ ಪುಸ್ತಕ ಪ್ರಾಧಿಕಾರ

First Impression : 2003
Second Print : 2007
Copies : 1000
Pages : 36 + 114
Price : **Rs. 60/-**

ಮೊದಲ ಮುದ್ರಣ : ೨೦೦೩
ಎರಡನೇ ಮುದ್ರಣ : ೨೦೦೭
ಪ್ರತಿಗಳು : ೧೦೦೦
ಪುಟಗಳು : ೩೬ + ೧೧೪
ಬೆಲೆ : ರೂ. ೬೦/-
ISBN : 81-7713-159-1

ಪ್ರಕಾಶಕರು :
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೨೦

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

# ಅಧ್ಯಕ್ಷರ ಮಾತು

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಗಾಂಧೀಜಿಯವರ ತತ್ವಚಿಂತನೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು. ಆಧುನಿಕ ವಿಜ್ಞಾನ ಹುಟ್ಟುಹಾಕಿದ ಬೃಹತ್ತಿನ ಪರಿಕಲ್ಪನೆ ಜಾಗತಿಕ ಪೈಪೋಟಿಯಲ್ಲಿ ಅಭಿವೃದ್ಧಿಶೀಲವಾಗಿಸುತ್ತದೆಂಬ ಭ್ರಮೆ ಗಾಂಧೀಜಿಯವರ ಚಿಂತನೆಗಳನ್ನು ತಿರಸ್ಕರಿಸಲು ಕಾರಣವಾಯಿತು. ಇದರ ಪರಿಣಾಮ ನಮ್ಮ ಪಂಚಭೂತಗಳ ಮೇಲೆ ಆದ ಅತ್ಯಾಚಾರ. ಪ್ರಗತಿಯ ಹೆಸರಿನಲ್ಲಿ ಪರಿಸರದ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ನೆನಪಿಸಿಕೊಂಡರೆ, ಜೀವ ತಲ್ಲಣಿಸುತ್ತದೆ. ಕರ್ನಾಟಕದ ಗಣಿಗಾರಿಕೆಯನ್ನು ಒಮ್ಮೆ ಕಣ್ಣಾರೆ ನೋಡಿಬಂದರೆ ಸಾಕು, ಈ ಮಾತಿನಾಳದ ನೋವು ಏನೆಂಬುದು ಅರಿವಾಗುತ್ತದೆ. ಮನುಷ್ಯನ ದುರಾಸೆ ಮಿತಿ ಮೀರಿದೆ. ಜಾಗತೀಕರಣದ ಹೆಸರಿನಲ್ಲಿ ಸ್ಥಳೀಯತೆ ನಾಶವಾಗುತ್ತಿದೆ ; ತನ್ನ ಭೌಗೋಳಿಕ ಪಾರಂಪರಿಕ ಸಾಂಸ್ಕೃತಿಕ ಅನನ್ಯತೆಯನ್ನು ಕಳೆದುಕೊಳ್ಳುತ್ತಿದೆ. ಜೀವ ವೈವಿಧ್ಯಗಳು ನಾಶವಾಗುತ್ತಿವೆ. ಮಾನೋ–ಮೆಟ್ರೋಗಳ ಹಾವಳಿಯಲ್ಲಿ ನಗರಗಳು ದಣಿಯುತ್ತಿವೆ. ಕೃಷಿ ಗುಡಿಕೈಗಾರಿಕೆಗಳು ಆತ್ಮಹತ್ಯೆಯ ಹಾದಿ ಹಿಡಿದಿವೆ. ಸಮೃದ್ಧಿಯಂತೆ ಕಾಣುತ್ತಿರುವ ಸುಖಭೋಗ ವರ್ಗತಾರತಮ್ಯವನ್ನು ದಿನದಿಂದ ದಿನಕ್ಕೆ ಅಗಾಧವಾಗಿಸುತ್ತಿದೆ. ಯಂತ್ರೋಪಕರಣಗಳ ಮೇಲೆ ಮನುಷ್ಯನ ಬದುಕು ಪೂರ್ಣ ಅವಲಂಬಿತವಾಗುತ್ತಿದೆ. ಮನುಷ್ಯನ ವಿಷಯಜ್ಞಾನ ವಿಪರೀತವಾಗಿ ಬೆಳೆಯುತ್ತಿರುವುದರ ಬೆನ್ನಲ್ಲೇ ಆತ್ಮವಿಕಾಸ ಅವನತಿಯ ಹಾದಿ ಹಿಡಿದಿದೆ. ಜೀವನಶೈಲಿಯಲ್ಲಿ ಜನಜಂಗುಳಿಯ ಪ್ರಮಾಣ ದಿನದಿಂದ ದಿನಕ್ಕೆ ಕಿಕ್ಕಿರಿಯುತ್ತಿದ್ದರೂ ಮನುಷ್ಯ ಸಂಬಂಧಗಳ ಭಾವನಾತ್ಮಕ ಒಳಗೊಳ್ಳುವಿಕೆಯಲ್ಲಿ ದಾರಿದ್ರ್ಯವೇ ತುಂಬಿ ತುಳುಕುತ್ತಿದೆ. ಏಕಾಂಗಿಭಾವ ಮಾನಸಿಕ ಅಸ್ವಸ್ಥತೆಯನ್ನು ಹೆಚ್ಚಿಸುತ್ತಿದೆ – ಈ ಎಲ್ಲ ವಿದ್ಯಮಾನಗಳನ್ನು ಪ್ರಗತಿ ಎನ್ನುವುದಾದರೆ, ಪೈಪೋಟಿ, ಪ್ರಚಂಡಸ್ವಾರ್ಥಭಾವ ಈ ನಾಣ್ಯದ ಎರಡು ಮುಖಗಳಾಗುತ್ತಿವೆ. ಚಲಾವಣೆಯ ಪರಿಣಾಮವನ್ನು ಊಹಿಸಿದರೆ, ಜೀವ ನಡುಗುತ್ತದೆ. ಇಂಥ ಹೊತ್ತಿನಲ್ಲಿ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಜೀವನಕ್ರಮ ತೀವ್ರವಾಗಿ ಕಾಡುವುದು ಸಹಜ. ಅವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಬಹುಮುಖಿ ಸಂಸ್ಕೃತಿಗಳ ಶ್ರಮ ಹಾಗೂ ಸೃಜನಶೀಲತೆಗಳನ್ನು ಗೌರವಿಸಿದಂತೆ ಸ್ವಾವಲಂಬನೆಯ ಮಾರ್ಗವನ್ನು ತೆರೆದು ತೋರಿಸಿದ ಜೀವನ ವಿಧಾನ. ಅಹಿಂಸಾ ತತ್ವದಿಂದ ಪ್ರಕಟಗೊಂಡ

ಸತ್ಯಾಗ್ರಹ, ಸ್ವದೇಶಿ, ಸ್ವರಾಜ್ಯಗಳ ಚಿಂತನೆ ನಿಸರ್ಗ ಲಯಗಳೊಡನೆ ಸಂಲಗ್ನಗೊಂಡ ಧರ್ಮದೃಷ್ಟಿಯಿಂದ ಕೂಡಿದುದಾಗಿದೆ. ಭಾರತದ ಬದುಕಿನ ಗತಿಯನ್ನು ರೂಪಿಸುವಾಗಲೆಲ್ಲಾ ನಮ್ಮ ರಾಜಕೀಯ ಪ್ರಜ್ಞೆ, ಗಾಂಧೀಜಿಯವರ ಇಂಥ ಚಿಂತನೆಗಳನ್ನು ಅವಜ್ಞೆಗೈದಿದೆ ; ತಿರಸ್ಕರಿಸಿದೆ. ಅದರ ಪರಿಣಾಮ ಈ ವೈಪರೀತ್ಯ. ಈ ವೈಪರೀತ್ಯದ ಒಳ ಸಂಕಟಗಳನ್ನು ಚಿಂತನೆಯ ದ್ರವ್ಯವಾಗಿಸಿಕೊಂಡು ಗಾಂಧೀಜಿಯವರ ಆಲೋಚನೆಗಳಿಗೆ ಮುಖಾಮುಖಿಯಾಗಿ ರೂಪಿತಗೊಂಡ ಕೃತಿ **ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು**. ಭೌತವಿಜ್ಞಾನಿಯಾಗಿ ಗಾಂಧಿಯವರ ತತ್ವ ಜಿಜ್ಞಾಸುವಾಗಿ ಪ್ರಸಿದ್ಧಿಯಾಗಿರುವ ಶ್ರೀ ಸುನೀಲ್ ಸಹಸ್ರಬುಧೆ ಅವರು ಗಾಂಧೀಜಿಯವರ ಜೀವನ ದರ್ಶನವನ್ನು ಸಮಗ್ರವಾಗಿ ಆಧುನಿಕ ವಿಜ್ಞಾನದ ಬೆಳವಣಿಗೆಗೆ ಒಡ್ಡಿಕೊಂಡಂತೆ ವಸ್ತುನಿಷ್ಠವಾಗಿ ವಿಶ್ಲೇಷಣೆಗೆ ಒಳಗು ಮಾಡಿದ್ದಾರೆ. ಇಲ್ಲಿಯ ಆಳವಾದ ಚಿಂತನೆ ದೂರಗಾಮಿ ದರ್ಶನವು ಮನುಷ್ಯನ ಬದುಕನ್ನು ಗ್ರಹಿಸುವುದರ ಪರಿಣಾಮದ ಫಲವಾಗಿದೆ.

ಶ್ರಮ – ಜ್ಞಾನಗಳನ್ನು ಸಂಗತಗೊಳಿಸಿಕೊಂಡ ಪರಿಕ್ರಮದಲ್ಲಿ ಪರಿಸರಧರ್ಮವನ್ನು, ಗೌರವಿಸುವ ಭಾವಸಿರಿ ಮನುಷ್ಯನ ನಡೆಯಾದಾಗ ಭೂಮಿಯ ಬದುಕು ಸಹನೀಯವಾಗುತ್ತದೆಂಬ ತಾತ್ವಿಕ ಶೋಧವನ್ನು ಪ್ರೊ. ಸಹಸ್ರ ಬುಧೆಯವರ ಬರಹ ತೆರೆದು ಕಾಣಿಸಿದೆ. ಈ ಮುಖೇನ ಗಾಂಧೀಜಿಯವರ ಜೀವನದರ್ಶನದ ಪ್ರಸ್ತುತತೆಯನ್ನು ವಸ್ತುನಿಷ್ಠ ವಿಶ್ಲೇಷಣೆಗೆ ಒಡ್ಡಿದ್ದಾರೆ. ಇಂಥ ಚಿಂತನೆ ಇಂದಿನ ತುರ್ತು. ಈ ಕೃತಿಯನ್ನು ಕನ್ನಡಕ್ಕೆ ತಂದವರು ಆತ್ಮೀಯರಾದ ಡಾ. ಕೆ. ಪುಟ್ಟಸ್ವಾಮಿ. ಹಳ್ಳಿಗಾಡಿನ ಬಂಗ ಬವಣೆಗಳ ಬದುಕಿನ ಮೂಲದಿಂದ ಬಂದ ಪುಟ್ಟಸ್ವಾಮಿಯವರು ಯಾವುದೇ ಒಣ ಸಿದ್ಧಾಂತದ ಕಣ್ಣುಪಟ್ಟಿಯಲ್ಲಿ ಬದುಕನ್ನು ನೋಡುವವರಲ್ಲ. ತತ್ವಬದ್ಧ ಚಿಂತಕರಾದರೂ ತತ್ವ ಜಡರಲ್ಲ. ಜೀವಕೇಂದ್ರದ ವ್ಯಾಪ್ತಿಯಲ್ಲಿ ಭೂಮಿಯ ಬದುಕನ್ನು ಗೌರವಿಸುವ ಮನೋಧರ್ಮವು ಇವರ ಬರಹದ ವ್ಯಾಪ್ತಿಯನ್ನು ವಿಸ್ತರಿಸಿದೆ. ಅದರ ಪರಿಣಾಮ ಈ ಕೃತಿಯ ಅನುವಾದ. ತುಂಬ ಸಂಕೀರ್ಣವಾದ ಚಿಂತನೆಯನ್ನು ಕನ್ನಡಕ್ಕೆ ಅನುವಾದಿಸುವಾಗ ಇವರು ಕನ್ನಡ ಭಾಷೆಯನ್ನು ಬಳಸಿರುವ ರೀತಿ ಅನುವಾದಕ್ಕೊಂದು ಮಾದರಿಯ ಪ್ರಮಾಣುವಾಗಿದೆ. ಸರಳವೂ ಸುಭಗವೂ ಆದ ಶೈಲಿಯಲ್ಲಿ ವಿಚಾರದ ಮೂಲದ್ರವ್ಯಕ್ಕೆ ಲೋಪವಾಗದ ರೀತಿಯಲ್ಲಿ ಕನ್ನಡಿಸಿದ್ದಾರೆ. ಇವರಿಗೆ ಆತ್ಮೀಯ ಕೃತಜ್ಞತೆಗಳು. ಈ ಕೃತಿ ಮರು ಮುದ್ರಣವನ್ನು ಕಾಣುತ್ತಿರುವುದೇ ಬೆಳಕಿನ ಕಡೆಗಿನ ನಮ್ಮ ಆಸೆಯನ್ನು ದೃಢವಾಗಿಸುವ ಸೂಚನೆ ಎಂದು ಭಾವಿಸುತ್ತೇನೆ. ಮೂಲ ಲೇಖಕರಿಗೆ ಮತ್ತು ಅನುವಾದಕರಿಗೆ ಕನ್ನಡಿಗರ ಪರವಾಗಿ ಆತ್ಮೀಯ ಕೃತಜ್ಞತೆಗಳು.

ಬೆಂಗಳೂರು **ಪ್ರೊ. ಎಸ್.ಜಿ. ಸಿದ್ಧರಾಮಯ್ಯ**

ದಿನಾಂಕ : 2.12.2007 ಅಧ್ಯಕ್ಷರು

# ಅಕ್ಷರ ಸೂರ್ಯನಿಗೆ ನಮನ

(ಮೊದಲ ಮುದ್ರಣದಿಂದ)

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ ಇದು. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು !

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು ! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದಿಂದ ಕೇಡು' ಎಂದು

ಬಸವಣ್ಣನವರು ಹೇಳಿದ್ದುಂಟು ! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನವು ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ ! ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಇಂದು ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. 1820ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ನಮಗೆ ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನಕೌಶಲ್ಯ, ಜ್ಞಾನ ಸಂಪತ್ತನ್ನು – ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಲೈಬ್ಯದಲ್ಲಿ ಮುಳುಗಬೇಕಾಗುತ್ತದೆ ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಾರಂಭಗೊಂಡು ಹತ್ತು ವರ್ಷಗಳು ಸಂದುವು. ಅದು ಪ್ರಾರಂಭಗೊಂಡಾಗ ಹಲವು ಮಾಲೆಗಳನ್ನು ಕಾಲಕಾಲಕ್ಕೆ ಪ್ರಾರಂಭಿಸಿತ್ತು. ಈ ಬಗೆಯ ಮಾಲೆಗಳಲ್ಲಿ 'ಅನುವಾದ ಮಾಲೆ'ಯೂ ಒಂದು. ಇದೊಂದು ಹೊಸಕ್ರಮ. ನಮ್ಮ ಕಾಲಕ್ಕೆ ತಕ್ಕಂತೆ ಹೊಸ ಬಗೆಯ ಚಿಂತನೆಗಳಿಗೆ ಅನುಗುಣವಾಗಿಯೇ ನಾವು ಓದುತ್ತೇವೆ. ಅವರೊಬ್ಬ ತತ್ವಜ್ಞಾನಿಯೋ,

ವಿಜ್ಞಾನಿಯೋ, ಸಮಾಜಶಾಸ್ತ್ರಜ್ಞನೋ, ಭಾಷಾಭಿಜ್ಞನೋ ಯಾರಾದರೂ ಆಗಿರಬಹುದು. ಆದರೆ ಅವರು ನಡೆದ ಹಾದಿ ನಮಗೆ ಕನ್ನಡಿಯಾಗಬೇಕು.

ಕನ್ನಡ ಪುಸ್ತಕ ಪ್ರಾಧಿಕಾರವು ಅನುವಾದ ಮಾಲೆಯ ಸರಣಿಯಲ್ಲಿ ಕೆ. ಪುಟ್ಟಸ್ವಾಮಿಯವರು ಅನುವಾದಿಸಿರುವ 'ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು' ಪುಸ್ತಕವನ್ನು ಪ್ರಕಟಿಸುತ್ತಿದೆ. ಕಳೆದ ಶತಮಾನವನ್ನು ಗಾಂಧಿಯುಗವೆಂದೇ ಕರೆಯುತ್ತೇವೆ. ಇಪ್ಪತ್ತೊಂದನೆಯ ಶತಮಾನ ಗಾಂಧಿ ಚಿಂತನೆಯ ವ್ಯಾಖ್ಯಾನ ಮತ್ತು ಅನುಸಂಧಾನದ ಯುಗವೆಂದು ನಾವು ಪರಿಭಾವಿಸುವುದರ ಅಗತ್ಯವಿದೆ. ಹೀಗಾಗಿ, ಗಾಂಧೀಜಿ ಈಗ ನಮ್ಮ ಸಮಸ್ತ ಪರಿಸರವನ್ನು ಆವರಿಸಿದ್ದಾರೆ. ಆತ ಸೂರ್ಯ, ಆತ ಭೂಮಿ, ಆತ ನಿಸರ್ಗ, ಆತ ನೀರು, ಆತ ಬೆಂಕಿ, ಆತ ಜೀವ, ಆತ ಆತ್ಮ, ಆತ ಎಲ್ಲವೂ ಆಗಿದ್ದಾನೆ. ಬಸವೇಶ್ವರರು ಆದ ಮೇಲೆ ಕರ್ನಾಟಕದ ಸಾಂಸ್ಕೃತಿಕ ರಂಗದ ಸಮಸ್ತವನ್ನು ಗಾಂಧೀಜಿ ಆವರಿಸಿದ್ದಾರೆ. ಇಂದಿನ ನಮ್ಮ ಎಲ್ಲ ವಿಕಲ್ಪಗಳಿಗೆ ಸಕೀಲ ಸಂಬಂಧಗಳನ್ನು ಜೋಡಿಸುವ ಶಕ್ತಿ ಇರುವುದು ಗಾಂಧೀಜಿಯವರ ತತ್ತ್ವಚಿಂತನೆಗೆ ಮಾತ್ರ. ಗಾಂಧೀಜಿಯವರ ಸ್ವದೇಶಿ ಚಿಂತನೆ ಮತ್ತು ಸ್ವದೇಶಿ ಭಾವನೆ ಇಂದು ತೀರ ಅಗತ್ಯವಿದೆ. ನಮ್ಮ ವ್ಯಕ್ತಿತ್ವೀಕರಣದಲ್ಲಿ ಇದು ಐಕ್ಯಗೊಳ್ಳುವುದು ಅನಿವಾರ್ಯವಾಗಿದೆ. ಹೀಗಾಗಿ, ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಅವರ ಮುಖ್ಯ ಚಿಂತನೆ ನಮಗೆ ಹೊಸ ಉಸಿರಾಗುವುದು ಅನಿವಾರ್ಯವಾಗಿದೆ. ಜಾಗತೀಕರಣ, ಖಾಸಗೀಕರಣದಂಥ ದೈತ್ಯ ರಾಕ್ಷಸರು ಮನುಷ್ಯ ಸಮಾಜದ ಉಸಿರನ್ನೇ ಹೀರಿಬಿಡುವ ದೈತ್ಯ ಸಾಹಸಕ್ಕೆ ಕೈಹಾಕಿದ್ದಾರೆ. ಇಂಥ ಸಂಕಟದ ಸಂದರ್ಭದಲ್ಲಿ ಗಾಂಧೀಜಿಯವರೊಬ್ಬರೇ ನಮಗೆ ಆದರ್ಶವಾಗಿದ್ದಾರೆ, ಆದರ್ಶವಾಗುತ್ತಿದ್ದಾರೆ. ಪ್ರೊ. ಸುನಿಲ್ ಸಹಸ್ರಬುಧೆ ಅವರ ಒಟ್ಟು ಚಿಂತನೆ ಮೂರು ಮುಖ್ಯ ನೆಲೆಗಳನ್ನು ಅವಲಂಬಿಸಿಕೊಂಡಿದೆಯೆಂದು ನನ್ನ ಗ್ರಹಿಕೆ. ಮೊದಲನೆಯದು ಲೋಕವಿದ್ಯೆ, ಎರಡನೆಯದು ಸ್ವರಾಜ್ಯ ಚಿಂತನೆ, ಮೂರನೆಯದು ಬಂಡವಾಳ ಮತ್ತು ಆರ್ಥಿಕತೆ. ಈ ಮೂರು ಪರಿಕಲ್ಪನೆಗಳು ನಮ್ಮ ಸಮಾಜದ, ನಮ್ಮ ಸಾಂಸ್ಕೃತಿಕ ಜೀವನದ ಬೇರುಗಳಾಗಬೇಕೆಂಬ ಸದಾಶಯ ಅವರದಾಗಿದೆ. ಹೀಗಾಗಿ, ಸುನಿಲ್ ಸಹಸ್ರಬುಧೆ ಅವರ ಈ ಗ್ರಂಥವು ಗಾಂಧಿ ಚಿಂತನೆಯ ಮುಖ್ಯ ಅನುಸಂಧಾನದ ಮಾರ್ಗವಾಗಿದೆ.

ಈ ಪುಸ್ತಕದ ಮೂಲ ಲೇಖಕರಾದ ಪ್ರೊ. ಸುನಿಲ್ ಸಹಸ್ರಬುಧೆ ಗಾಂಧೀಜಿಯವರ ಸ್ವದೇಶಿ ಚಿಂತನೆಯ ಅಡಿಯಲ್ಲಿ ವಿಜ್ಞಾನ, ತತ್ತ್ವಜ್ಞಾನ, ನೀತಿ ಮತ್ತು ಯಂತ್ರಸಂಬಂಧೀ ಚಿಂತನೆಗಳನ್ನು ಕುರಿತು ಆಲೋಚಿಸಿದ್ದಾರೆ. ಗಾಂಧೀಜಿಯವರ ಮೂಲ ಚಿಂತನೆಗಳು ಇಂದು ಎಷ್ಟು ಪ್ರಸ್ತುತವಾಗಿವೆ, ಅವು ನಮ್ಮ ದೇಸಿ ಚಿಂತನೆಗೆ ಎಷ್ಟರ ಮಟ್ಟಿಗೆ ಆಹಾರವಾಗುತ್ತವೆ ಎಂಬ ಮೂಲ ಸತ್ಯವನ್ನು ಹಲವು ಬಗೆಗಳಲ್ಲಿ ವಿವರಿಸಿ, ವಿಶ್ಲೇಷಿಸಿ, ವ್ಯಾಖ್ಯಾನಿಸಿ

ತೋರಿಸಿಕೊಟ್ಟಿದ್ದಾರೆ. ಇದು ಜಾಗತೀಕರಣಕ್ಕೆ ಪರ್ಯಾಯ ಸಾಧ್ಯತೆಗಳ ಉತ್ತರಗಳಾಗಿವೆ ಎಂದು ನನ್ನ ದೃಢವಾದ ನಂಬಿಕೆ.

ಕಳೆದ ವರ್ಷ (2002) ಉಡುಪಿಯಲ್ಲಿ 'ಗ್ಲೋಬಲೈಜೇಶನ್ : ಎ ಸಸ್ಟೈನಬಲ್ ಆಲ್ಟ್ರನೇಟಿವ್ಸ್' ಎಂಬ ಶೀರ್ಷಿಕೆಯಡಿಯಲ್ಲಿ ಪುಸ್ತಕ ಪ್ರಾಧಿಕಾರವು ಉಡುಪಿಯ ರಥಬೀದಿ ಗೆಳೆಯರ ಸಹಯೋಗದೊಂದಿಗೆ ಜಾಗತಿಕ ಮಟ್ಟದ ವಿಚಾರ ಕಮ್ಮಟವೊಂದನ್ನು ಹಮ್ಮಿಕೊಂಡಿತ್ತು. ಆ ಎರಡು ದಿನ ಪ್ರೊ. ಸುನಿಲ್ ಸಹಸ್ರಬುಧೆ ನಮ್ಮ ಜೊತೆಗಿದ್ದರು. ಅಲ್ಲಿ ಭಾರತದ ಖ್ಯಾತ ಚಿಂತಕರೆಲ್ಲ ಸೇರಿದ್ದರು. ಡಾ. ನಿ. ಮುರಾರಿ ಬಲ್ಲಾಳ ಆ ಸಂದರ್ಭದಲ್ಲಿ ಪ್ರೊ. ಸುನಿಲ್ ಸಹಸ್ರಬುಧೆ ಅವರ 'ಗಾಂಧೀಸ್ ಛಾಲೇಂಜ್ ಟು ಮಾಡರ್ನ್ ಸೈನ್ಸ್' ಎಂಬ ಪುಸ್ತಕವನ್ನು ನನಗೆ ನೀಡಿದ್ದರು. ಇದು ಕನ್ನಡಕ್ಕೆ ಬರಬೇಕೆಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದರು. ನಾನು ಆ ಕೃತಿಯನ್ನು ಓದಿ ಮಾರುಹೋದೆ. ಕನ್ನಡದ ಜನ ಈ ಕೃತಿಯನ್ನು ಓದುವುದು ಅವಶ್ಯವೆಂದು ತಿಳಿದೆ. ಪ್ರಿಯ ಮಿತ್ರರಾದ ಕೆ. ಪುಟ್ಟಸ್ವಾಮಿ ಇಂಥ ವಿಚಾರಗಳ ಆಸಕ್ತರು. ಅವರು ಆಗ ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನಗಳ ನಿಕಾಯದಲ್ಲಿ ದೇಶಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ಸಂಶೋಧನೆಯಲ್ಲಿ ತೊಡಗಿದ್ದರು. ನಾನು ಅವರಿಗೆ ಸುನಿಲ್ ಸಹಸ್ರಬುಧೆ ಅವರ ಪುಸ್ತಕವನ್ನು ಕೊಟ್ಟು ಅನುವಾದಿಸಿಕೊಡಲು ಕೋರಿಕೊಂಡೆ. ಅವರು ಬಹು ಚೆನ್ನಾಗಿ ಕನ್ನಡಿಸಿದರು. ಆಮೇಲೆ ಪ್ರಿಯ ಮಿತ್ರ ಡಾ. ನಿ. ಮುರಾರಿ ಬಲ್ಲಾಳ ಎರಡು ಮೂರು ಬಾರಿ ತಿದ್ದಿ ಪರಿಷ್ಕರಿಸಿಕೊಟ್ಟರು. ಅಷ್ಟು ಮಾತ್ರವಲ್ಲ, ಒಳ್ಳೆಯ ಸಾಂಸ್ಕೃತಿಕ ಹಿನ್ನುಡಿಯನ್ನು ಬರೆದುಕೊಟ್ಟರು. ಈ ಎಲ್ಲ ಕೆಲಸಗಳನ್ನು ಬಹು ಪ್ರೀತಿಯಿಂದ ಮಾಡಿಕೊಟ್ಟ ಡಾ. ನಿ. ಮುರಾರಿ ಬಲ್ಲಾಳ ಅವರಿಗೂ ಬಹುಶ್ರಮಪಟ್ಟು ಕನ್ನಡೀಕರಿಸಿಕೊಟ್ಟ ಸಹೃದಯ ಸನ್ಮಿತ್ರರಾದ ಕೆ. ಪುಟ್ಟಸ್ವಾಮಿ ಅವರಿಗೂ ನಾನು ಮನಸಾರೆ ಅಭಿನಂದಿಸುತ್ತೇನೆ.

ಈ ಪುಸ್ತಕ ಹೊರತರುವಲ್ಲಿ ಪ್ರಾಧಿಕಾರದ ಸದಸ್ಯ ಮಿತ್ರರ ನೆರವು, ಸಲಹೆಗಳು ಕಾರಣವಾಗಿವೆ. ಡಿ.ಟಿ.ಪಿ. ಮಾಡಿಕೊಟ್ಟ ರಚನಾ ಗ್ರಾಫಿಕ್ಸ್ ಗೆಳೆಯರನ್ನೂ, ಮುದ್ರಿಸಿಕೊಟ್ಟ ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್‌ನ ಸಿ.ವಿ.ಜಿ. ಚಂದ್ರು ಅವರನ್ನು ಹಲವು ಬಗೆಗಳಲ್ಲಿ ನೆರವಾದ ಇತರ ಗೆಳೆಯರನ್ನೂ ಈ ಸಂದರ್ಭದಲ್ಲಿ ನೆನೆಯವುದು ನನ್ನ ಕರ್ತವ್ಯವಾಗಿದೆ.

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು

# ಗಾಂಧಿ ಮತ್ತು ಟಾಲ್‌ಸ್ಟಾಯ್

(ಸಹಸ್ರಬುಧೆ ಪುಸ್ತಕದ ಬಿಡುಗಡೆ ನೆವದಲ್ಲಿ)

ಪ್ರೊ. ಸುನಿಲ್‌ಕುಮಾರ್ ಸಹಸ್ರಬುಧೆ ಜೊತೆಗಿನ ನನ್ನ ಸ್ನೇಹ ಬಹಳ ಹಳೆಯದು. ಅವರು ಗಾಂಧಿಯನ್ನು ಕೇವಲ ಪೂಜ್ಯ ಭಾವನೆಯಿಂದಲ್ಲದೆ ಒಬ್ಬ ತತ್ತ್ವಜ್ಞಾನಿಯ ತರಹ ನೋಡುತ್ತಾರೆ. ಅವರು ಸ್ವತಃ ವಿಜ್ಞಾನಿಯೂ ಆಗಿರುವುದರಿಂದ ವಿಜ್ಞಾನದ ಎಲ್ಲ ಶಿಸ್ತುಗಳನ್ನು ಬಳಸಿಕೊಂಡು ಗಾಂಧಿಯನ್ನು ಅಧ್ಯಯನ ಮಾಡಿದ್ದಾರೆ. ಒಬ್ಬ ತತ್ವಜ್ಞಾನಿಯ ಶಿಸ್ತನ್ನು, ವಿಜ್ಞಾನಿಯ ಶಿಸ್ತನ್ನು ಮತ್ತು ಸಮಾಜಶಾಸ್ತ್ರಜ್ಞನ ಶಿಸ್ತನ್ನೂ ಇಟ್ಟುಕೊಂಡು ಅವರು ಗಾಂಧಿಯನ್ನು ನೋಡುತ್ತಾರೆ.

ಈ ಪುಸ್ತಕದ ಬಹಳ ಮುಖ್ಯವಾದ ಒಳನೋಟವೊಂದನ್ನು ಮೊದಲು ಹೇಳಿಬಿಡುತ್ತೇನೆ : ಗಾಂಧಿಯವರು ತಮ್ಮ ಎಲ್ಲ ನೈತಿಕ ಪ್ರೇರಣೆ ಮತ್ತು ತಾತ್ವಿಕತೆಯನ್ನು ಪಡೆಯುವುದು–ಬದುಕಿನ ಸಾಮಾನ್ಯತೆಯಿಂದ. ಪ್ರತಿಯೊಬ್ಬ ಗೃಹಸ್ಥನಿಗೂ, ಗೃಹಿಣಿಗೂ ಗೊತ್ತಿರುವ ಎಲ್ಲ ತಾಕಲಾಟ, ಗೋಜಲು, ಸಂಕಷ್ಟಗಳಿಗೆ, ನಮ್ಮ ದಿನನಿತ್ಯದ ಸಂಕಟಗಳಿಗೆ ಗಾಂಧೀಜಿ ಸ್ಪಂದಿಸಬಲ್ಲರು. ನಮ್ಮ ಮಲೆನಾಡಿನಲ್ಲಂತೂ ಗೃಹಣಿಯ ದಿನನಿತ್ಯದ ಸಂಕಷ್ಟಗಳು ಕಟ್ಟಿಗೆಯಿಂದಲೇ ಪ್ರಾರಂಭವಾಗುತ್ತವೆ. ಇಬ್ಬರು ಗೃಹಿಣಿಯರು ಸಂಧಿಸಿದಾಗ ಅವರು ಮಾತನಾಡುವುದು ಮನೆಯ ಸೌದೆ/ಕಟ್ಟಿಗೆಯ ಕುರಿತಾಗಿ. 'ನಿಮ್ಮ ಮನೆ ಕಟ್ಟಿಗೆ ಒಣಗಿದೆಯೇ ? ನಮ್ಮ ಮನೆ ಸೌದೆ ಇನ್ನೂ ಹಸಿ....' ಇತ್ಯಾದಿ. ಹೀಗೆ ಗಾಂಧೀಜಿ ಅವರ ನೈತಿಕತೆ ಬಂದಿರುವುದು ಆರ್ಡಿನರಿ ಜನರ ಅಗತ್ಯಗಳನ್ನು ಕಂಡು. ಅವರ ಗ್ರಹಿಕೆಗಳೆಲ್ಲ ಬಂದಿರುವುದು ಈ ನೆಲೆಯಿಂದಲೇ. ವಿಜ್ಞಾನದ ಗ್ರಹಿಕೆ ಕೂಡ ಗಾಂಧೀಜಿಗೆ ಸಾಮಾನ್ಯನೊಬ್ಬನು ಅದನ್ನು ಗ್ರಹಿಸುವ ದೃಷ್ಟಿಯಿಂದಲೇ ಬಂದಿರುವಂಥದು.

ಅಷ್ಟೇ ಅಲ್ಲ; ಗಾಂಧಿಯೂ ಒಬ್ಬ ಸಾಮಾನ್ಯ ಮನುಷ್ಯನೇ ತಾನೆ ? ಅದಕ್ಕೇ ಆ ಗ್ರಹಿಕೆ ಸಾಧ್ಯ. ಸಾಮಾನ್ಯನ ರೀತಿ ಬದುಕುವುದು ಸಾಧ್ಯ ಎಂದು ಗಾಂಧಿ ತಿಳಿದಿದ್ದರು. ಏಕೆಂದರೆ ಅವರು ನಮ್ಮ ಹಾಗೆ ಸುಳ್ಳು ಹೇಳಿದ್ದಾರೆ. ರಟ್ಟೆಗೆ ಬಲ ಬರಲಿ ಎಂದು ಮಾಂಸ ತಿಂದಿದ್ದಾರೆ, ಕಾಮೋದ್ರಿಕ್ತರಾಗಿ ವೇಶ್ಯಾಗೃಹಕ್ಕೆ ಹೋಗಿದ್ದಾರೆ. ಯಾವುದೋ ಬ್ರಿಟಿಷ್ ಹುಡುಗಿ ತನ್ನನ್ನು ಪ್ರೀತಿಸುತ್ತಾಳೆ ಎಂದು ಗೊತ್ತಾದಾಗ–ತಮಗೆ ಮದುವೆ ಆಗಿದ್ದನ್ನು ಹೇಳದೇ ಇದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ನಮಗೆ ನಮ್ಮ ಮುಜುಗರಗಳನ್ನು ಹೇಳಿಕೊಳ್ಳಲು ಆಗುವುದಿಲ್ಲ. ಅವುಗಳನ್ನು ಮುಚ್ಚಿಡುವುದಕ್ಕೆ ನೋಡುತ್ತೇವೆ. ಆದರೆ ಗಾಂಧಿ ತನ್ನ ಮುಗುಜರಗಳನ್ನು ಮುಚ್ಚಿಡುವುದಿಲ್ಲ.

ಗಾಂಧೀಜಿಯವರ ಆತ್ಮಕಥೆಯನ್ನೇ ನೋಡಿ. ಅವರು ಇಂಗ್ಲೆಂಡಿನಲ್ಲಿ ಹೋಗಿ ಇಳಿದ ಕೂಡಲೇ ಅಲ್ಲಿನ ಭಾರತೀಯರ ನಡುವೆ ದೊಡ್ಡ ಮನುಷ್ಯ ಎನ್ನಿಸಿಕೊಂಡ ಒಬ್ಬರನ್ನು ನೋಡುವುದಕ್ಕೆ ಹೋಗುತ್ತಾರೆ. ಆ ಉದ್ಯಮಿಯ ಹತ್ತಿರ ಒಂದು ಉಣ್ಣೆಯ ಟೋಪಿ ಇರುತ್ತದೆ. ಬಹಳ ಮೃದುವಾದ ಉಣ್ಣೆಯಿಂದ ಮಾಡಿದಂತಹ ಟೋಪಿ ಅದು–ಟೇಬಲ್ ಮೇಲೆ ಅದನ್ನು ಅವರು ಇಟ್ಟಿರುತ್ತಾರೆ. ಲಾಯರ್ ಪರೀಕ್ಷೆ ಕಟ್ಟಲು ಹೋಗಿದ್ದ ಹುಡುಗ ಗಾಂಧಿ ತನ್ನ ಕುತೂಹಲ ತಡೆಯಲಾರದೆ ಅದರ ನಯವಾದ ರೋಮಗಳನ್ನು ಬೆರಳಿನಿಂದ ಸವರುತ್ತಾರೆ. (ಗಾಂಧಿಯವರಿಗೆ ಮುಟ್ಟುವುದೊಂದು ಆತ್ಮದ ಹಂಬಲವಿದ್ದಂತೆ ದೇಹದ ತುಡಿತವೆಂದೂ ಅನ್ನಿಸುತ್ತದೆ. ಅಸ್ಪೃಶ್ಯತೆಯ ಆಚರಣೆ ಅವರಿಗೆ ಅಸಹ್ಯ. ಅವರು ಕೊನೆಯಲ್ಲಿ ಇಬ್ಬರು ಹುಡುಗಿಯರ ಹೆಗಲಮೇಲೆ ಕೈ ಇಟ್ಟು ನಡೆಯುತ್ತ ಇದ್ದರು. ನವಾಖಲಿ ದಿನಗಳಲ್ಲಿ ಹುಡುಗಿಯ ಜೊತೆ ಬೆತ್ತಲೆ ಮಲಗಿ ತನ್ನ ಬ್ರಹ್ಮಚರ್ಯವನ್ನು ಪರೀಕ್ಷೆಗೆ ಒಡ್ಡಿಕೊಂಡು ತನ್ನ ಆಪ್ತರ ಟೀಕೆಗೆ ಒಳಗಾಗಿದ್ದರು.) ಗಾಂಧೀಜಿ ಟೊಪ್ಪಿ ಮುಟ್ಟಿದ್ದನ್ನು ನೋಡಿದ ಆ ದೊಡ್ಡ ವ್ಯಕ್ತಿ 'ಇಂಗ್ಲೆಂಡಿನಲ್ಲಿ ನೀನು ಕಲಿಯಬೇಕಾದ ಮೊದಲ ಪಾಠ, ಬೇರೆಯವರ ವಸ್ತುಗಳನ್ನು ಮುಟ್ಟದಿರುವುದು' ಎಂದು ಹೇಳುತ್ತಾನೆ. ಇದನ್ನು ಗಾಂಧೀಜಿ ಸಂಕೋಚವಿಲ್ಲದೆ ಬರೆಯುತ್ತಾರೆ. ಅವರಿಗೆ ಯಾವುದೂ ಸಣ್ಣ ವಿಚಾರವಲ್ಲ ; ಯಾವುದೂ ದೊಡ್ಡ ವಿಚಾರವಲ್ಲ.

ಈ ಕನ್‌ಫೆಷನ್ ರೈಟಿಂಗ್‌ನಲ್ಲಿ ಒಂದು ಸಮಸ್ಯೆ ಇದೆ. ಸೇಂಟ್ ಥೆರೇಸಾ ಅಂತ ಒಬ್ಬಳು ಬಹಳ ದೊಡ್ಡ ಕ್ರಿಶ್ಚಿಯನ್ ಸನ್ಯಾಸಿನಿ ಇದ್ದಳು. ತಪ್ಪೊಪ್ಪಿಗೆ ಮಾಡುವಾಗ ಅವಳ ಎಷ್ಟು ದೊಡ್ಡ ಗಂಟಲಲ್ಲಿ ಅದನ್ನು ಮಾಡುತ್ತಾಳೆಂದರೆ 'ಇವತ್ತು ಬ್ರೆಡ್ ಇಷ್ಟ ಆಯ್ತು ಹೆಚ್ಚಿಗೆ ತಿಂದುಬಿಟ್ಟೆ, ಸ್ವಲ್ಪ ಬೆಣ್ಣೆ ಜಾಸ್ತಿ ಹಾಕ್ಕೊಂಡೆ....' ಎನ್ನುವುದರಿಂದ ಹಿಡಿದು ನೂರಾರು ಸಣ್ಣ ಪುಟ್ಟ ತಪ್ಪುಗಳವರೆಗೆ ನಿವೇದನೆ ಮಾಡಿಕೊಳ್ಳುತ್ತಾಳೆ. (ನಂಬಿಕೆಯನ್ನೇ ಅಲ್ಲಾಡಿಸಬಲ್ಲ ತಪ್ಪೊಪ್ಪಿಗೆ ಇದಲ್ಲ.) ತಪ್ಪೊಪ್ಪಿಕೊಳ್ಳುವವರ ಮನಸ್ಸಿನಲ್ಲಿ 'ನಾನು ಮಾಡಿದ ತಪ್ಪುಗಳನ್ನು ಹೇಳಿಕೊಂಡುಬಿಟ್ಟರೆ ಮುಂದೆ ಅಂಥ ತಪ್ಪುಗಳನ್ನು ಮಾಡುವುದಿಲ್ಲ, ನೋಡು ನಾನು ಕ್ಲೀನಾದೆ' ಎನ್ನುವ ತೋರುಗಾಣಿಕೆ ಇರುವುದು ಸಾಧ್ಯ. ಅಥವಾ ನಾನು ತಪ್ಪೊಪ್ಪಿಗೆ ಮಾಡಿಕೊಳ್ಳುತ್ತಿರುವುದರಿಂದ ನಾನು ಶ್ರೇಷ್ಠವ್ಯಕ್ತಿ ಎನ್ನುವ ಭಾವನೆಯೂ ಇರಬಹುದು. ಅಲ್ಲದೆ ಇಷ್ಟೇ ನನ್ನ ದೋಷ ಎಂದು ಮಹತ್ವದ ದೋಷಗಳನ್ನು ಮುಚ್ಚಿಡುವ ಉಪಾಯವೂ ಇದಾಗಬಹುದು. ಆದರೆ ಒಂದು ತಪ್ಪೊಪ್ಪಿಗೆಯನ್ನು ಈ ಯಾವ ಭಾವನೆಯೂ ಇಲ್ಲದೆ ಬರೆದುಕೊಳ್ಳುವುದು ಸುಲಭವಲ್ಲ. ಸೇಂಟ್ ಅಗಸ್ಟೀನ್ ಬರೆದಿರುವ 'ಕನ್‌ಫೆಷನ್' ಪುಸ್ತಕದಲ್ಲಿ ಅಂಥಾ ನಿರ್ಲಿಪ್ತತೆ ಇದೆ. ಬಹುಶಃ ಅದರ ನಂತರ ಅದೇ ಮಟ್ಟದ ದೊಡ್ಡ ಕೃತಿ ಎಂದರೆ ಗಾಂಧಿಯವರ ಸತ್ಯಾನ್ವೇಷಣೆಯ ಆತ್ಮಕಥೆ. ಇದನ್ನು ಬರೆದಾದ ನಂತರವೂ ಕನಸಿನಲ್ಲಿ ತನಗೆ ಕಾಮೋದ್ರೇಕವಾಗುವುದನ್ನು ಮಹಾತ್ಮರು ಬರೆದುಕೊಳ್ಳಲು ಹಿಂಜರಿಯುವುದಿಲ್ಲ.

ಅಮೇರಿಕಾದ ಪ್ರಸಿದ್ಧ ವಿಮರ್ಶಕ ಮಾರ್ಟಿನ್ ಗ್ರೀನ್ ಅವರು ಗಾಂಧಿ ಮತ್ತು ಟಾಲ್‌ಸ್ಟಾಯ್ (1828–1910) ಅವರನ್ನು ಹೋಲಿಸಿ ಒಂದು ಗಹನವಾದ ಪುಸ್ತಕ

ಬರೆದಿದ್ದಾರೆ. ಟಾಲ್‌ಸ್ಟಾಯ್ ಗಾಂಧಿಗೆ ಬಹಳ ಹತ್ತಿರವಾದಂಥವರು. ಟಾಲ್‌ಸ್ಟಾಯ್ ಕೂಡ ಗಾಂಧಿಯಂತೆಯೇ ಸರಳತೆಯನ್ನು ಹುಡುಕಿಕೊಂಡು ಹೊರಟವರು. ಅವರು ಸರಳತೆಯನ್ನು ಎಷ್ಟು ಹುಡುಕಿದರೆಂದರೆ ಅವರ ಯಾಸ್ನಾ ಪೊಲ್ಯಾನದ ಮನೆಯನ್ನು ನೋಡಿದರೇ ತಿಳಿಯುತ್ತದೆ. ಅವರದು ಅರಮನೆಯಂಥಹ ದೊಡ್ಡ ಮನೆ. ಈ ಮನೆಯಲ್ಲಿ ಅವರು ತಾನು ಮಲಗುವ ಕೋಣೆಯನ್ನು, ತನ್ನ ಉಡುಗೆ ತೊಡುಗೆಗಳನ್ನು, ತನ್ನ ಆಹಾರವನ್ನು ಬದಲಿಸುತ್ತ ಹೋದರು ; ಕೊನೆಗೆ ಕೆಲಸದ ಆಳುಗಳಿಗೆಂದು ಇದ್ದ ಕೋಣೆಯೊಂದರಲ್ಲಿ ಮಲಗಲು ಶುರುಮಾಡಿದರು. ರೈತನ ಪೋಷಾಕನ್ನು ತೊಟ್ಟು ಓಡಾಡಿದರು, ಸಸ್ಯಾಹಾರಿಯಾದರು. ತನ್ನ ಘನವಂತಳೂ, ಆಕರ್ಷಕ ಸುಂದರಿಯೂ, ಸೂಕ್ಷ್ಮಜ್ಞ ಓದುಗಳೂ ಆದ ಹೆಂಡತಿಗೆ ಕೃತಕವೂ, ಗುರು ಪಟ್ಟದಲ್ಲಿ ಉನ್ನತನಾಗಲು ಪೆದ್ದು ಶಿಷ್ಯಬಳಗದ ಹೊಗಳಿಕೆ ಗಳಿಸುವ ಆತ್ಮಘಾತುಕ ಹುನ್ನಾರವೂ ಎನ್ನಿಸಿದ ಈ ಸರಳತೆಯ ಹುಡುಕಾಟದಲ್ಲಿ ಅವರು ತಮ್ಮ ಹೆಂಡತಿಯ ಜೊತೆಗೆ ಗುದ್ದಾಡಿ ಬಳಲಿದರು. ಬದಲಾಗದ ಶ್ರೀಮಂತಿಕೆಯ ಆಸೆಯ ಹೆಂಡತಿಯಿಂದ ಬೇಸತ್ತರು. ತನಗೆ ಶರಣಾದ ಮೊಂಡು ಹಠದ ಶಿಷ್ಯಕೋಟಿಯ ನಿರೀಕ್ಷಣೆಗಳಿಂದ ಜಡ್ಡಾದರು. ಕೊನೆ ಮಗಳು ಮಾತ್ರ ಅಪ್ಪನ ಕಡೆ ; ಉಳಿದ ಮಕ್ಕಳು, ಮುಖ್ಯವಾಗಿ ಗಂಡುಮಕ್ಕಳು ಅಮ್ಮನ ಕಡೆ. ಟಾಲ್‌ಸ್ಟಾಯ್ ಹೆಂಡತಿಗೆ ಗಂಡನ ಎಲ್ಲ ಗುಟ್ಟುಗಳೂ ತೀಟೆ ತೆವಲುಗಳೂ ಗೊತ್ತಿದ್ದವು, ಅಲ್ಲವೆ ? ಬೆತ್ತಲಲ್ಲಿ ತನಗೆ ತಿಳಿದವನು ಅವನು ಅಲ್ಲವೆ ? ತನಗಿಂತ ಹದಿನೈದು ವರ್ಷ ಕಿರಿಯಳಾದ, ತನ್ನೆಲ್ಲ ಬರವಣಿಗೆಯನ್ನೂ ಅಚ್ಚುಕಟ್ಟು ಮಾಡಿ ಪ್ರಕಟಿಸುತ್ತ ಇದ್ದ ಹೆಂಡತಿಗೆ ತನ್ನೆಲ್ಲ ದೌರ್ಬಲ್ಯಗಳನ್ನೂ ಗಂಡನೇ ಹೇಳಿಕೊಂಡಿದ್ದರು. "ನೀನು ಎಲ್ಲರಗಿಂತ ಹೆಚ್ಚಿನ ಲೋಲುಪನಾದ ಕಾಮುಕ. ನಿನ್ನ ಸೃಜನಶಕ್ತಿಯ ಮೂಲ ಈ ನಿನ್ನ ಅದಮ್ಯ ಕಾಮದಲ್ಲೇ ಇರುವುದು ; ನಿನ್ನ ಸರಳತೆಯ ಸೋಗಿನಲ್ಲಿ ಅಲ್ಲ" ಎಂದು ಅವಳು ಮೂದಲಿಸುತ್ತ ಇದ್ದಳು–ಅವನ ಭಾವನಾ ಪರವಶ ಶಿಷ್ಯರಿಗೆ ಗೊತ್ತಾಗುವ ಹಾಗೆ. ಅಷ್ಟೇ ಅಲ್ಲ ; ಟಾಲ್‌ಸ್ಟಾಯ್ ಒಬ್ಬ ಸಂತನಿರಬಹುದೇನೋ ಎಂಬ ರಷ್ಯನ್ನರ ನಂಬಿಕೆ ಗಾಢವಾಗುತ್ತಿದ್ದ ಕಾಲದಲ್ಲಿ ಆಕೆ ಗರ್ಭಿಣಿಯಾಗುತ್ತ ಇದ್ದಳು. ಟಾಲ್‌ಸ್ಟಾಯ್‌ಗಿಂತ ಕಿರಿಯವಳಾದ ಈ ಮೋಹದ ಹೆಂಡತಿಯೂ ಸಾಮಾನ್ಯಳೇನೂ ಅಲ್ಲ. ಅವಳದೇ ಆದ ಸತ್ಯಪ್ರತಿಪಾದನೆ ಅವಳ ಹಠದಲ್ಲಿ ಇದೆ. ಅವಳು ಕೂಡ ಅವನ ಒಳಗಿನ ಇನ್ನೊಂದು ಸತ್ಯ. ಅನ್ನಾ ಕೆರನೀನಾದಂತಹ ಕೃತಿಯನ್ನು ಸೃಷ್ಟಿಸಿದವನಿಗೆ ತನ್ನ ಒಳಗೇ ಗೊತ್ತಿದ್ದ ಸತ್ಯ.

ಸಂಸಾರ ಜೀವನದ ಶ್ರೀಮಂತಿಕೆಯನ್ನು, ಆಕರ್ಷಣೆಗಳನ್ನು ತಾಳಲಾರದೆ ಕೊನೆಯಲ್ಲಿ ಮುದುಕ ಟಾಲ್‌ಸ್ಟಾಯ್ ತನ್ನ 82ನೇ ವಯಸ್ಸಿನಲ್ಲಿ ಹೆಂಡತಿಯನ್ನು ಬಿಟ್ಟು, ಅರಮನೆಯಂಥ ಮನೆಯನ್ನು ಬಿಟ್ಟು, ಆಸ್ತಿಯನ್ನು ತ್ಯಜಿಸಿ ರೈತರ ಪೋಷಾಕು ತೊಟ್ಟು ಹೊರಬೀಳುತ್ತಾರೆ. ಇದು ಪುರಾತನರ ಪದ್ಧತಿಯಂತೆ ಸನ್ಯಾಸಕ್ಕಿಂತ ಮುಂಚಿನ ತನ್ನ ವಾನಪ್ರಸ್ಥವೆಂದು ಹೆಂಡತಿಗೊಂದು ಕಾಗದ ಬರೆದಿಟ್ಟು ಬೆಳಗಾಗುವ ಮುಂಚೆ ಮನೆ ತೊರೆಯುತ್ತಾರೆ. ಎಲ್ಲೆಲ್ಲೋ ಅಲೆದು ಅಲೆದು ಕೊನೆಗೆ ರೈತ ಪೋಷಾಕಿನಲ್ಲಿ ಎಲ್ಲೋ ಒಂದು ರೈಲ್ವೆ ಸ್ಟೇಷನ್‌ನಲ್ಲಿ ಕುಳಿತು ರೈಲ್‌ಗಾಗಿ ಕಾಯುತ್ತಿದ್ದಾಗ ಖಾಯಿಲೆ ಬೀಳುತ್ತಾರೆ, ಜಗತ್ತಿನಲ್ಲೇ

ಖ್ಯಾತನಾಗಿದ್ದ ಸಾಹಿತಿ ಒಬ್ಬ ಬೀದಿಹೋಕನಂತೆ ಆಸ್ಪತ್ರೆಗೆ ದಾಖಲಾಗುತ್ತಾರೆ. ಇಲ್ಲೂ ಅವರ ಹೆಂಡತಿ ಟಾಲ್‌ಸ್ಟಾಯ್ ಅವರನ್ನ ನೋಡುವುದಕ್ಕೆ ಬಯಸುತ್ತಾಳೆ. 'ಎಲ್ಲವನ್ನೂ ಬಿಟ್ಟು ಮುಕ್ತವಾಗಿ ಅವರು ಸಾಯ್ತಾ ಇದ್ದಾರೆ, ನೀನು ಹೋಗುವುದು ಬೇಡ' ಎಂದು ಯಾರು ಹೇಳಿದರೂ ಅವಳು ಕೇಳುವುದಿಲ್ಲ. ತನಗೆ ಗೊತ್ತಿರುವ ಅವನು ಮಾತ್ರ ನಿಜವೆಂದು ಜಗತ್ತಿಗೆ ಸಾರಲು ಅವಳು ಅಂಜುವುದಿಲ್ಲ. ಆಕೆ ಎಷ್ಟು ಹಠದ ಹೆಂಗಸೆಂದರೆ – ಟಾಲ್ ಸ್ಟಾಯ್ ಮಲಗಿದ್ದ ರೂಮಿನ ಹೊರಗೆ ನಿಂತು ಅಲ್ಲಿಂದ ಹೊರಬರುತ್ತ ಇರುವಳೆಂದು ಭಾಸವಾಗುವಂತೆ ಫೋಟೋ ತೆಗೆಸಿಕೊಳ್ಳುತ್ತಾಳೆ ಎಂದು ಓದಿದ ನೆನಪು ನನಗೆ.

ಅದು ಮಾಧ್ಯಮದವರು ಮೇಲೆ ಬರುತ್ತಿದ್ದ ಕಾಲ. ಅಮೆರಿಕಾದಿಂದ ಕ್ಯಾಮೆರಾ ಹಿಡಿದುಕೊಂಡು ಈ ದೃಶ್ಯವನ್ನು ಸೆರೆಹಿಡಿಯಲು ಮಾಧ್ಯಮದವರು ಬಂದಿರುತ್ತಾರೆ.... ಜಗತ್ತಿನ ಒಬ್ಬ ದೊಡ್ಡ ಸಾಹಿತಿ ಹೀಗೆ ತನ್ನ ಇನ್ನೊಂದು ಸಾಧ್ಯತೆಯ ಹುಡುಕಾಟದಲ್ಲಿ ಸತ್ತ.

ಈ ಟಾಲ್‌ಸ್ಟಾಯ್ ಗಾಂಧಿಗೆ ಪ್ರಿಯನಾದ. ಗಾಂಧಿ ಟಾಲ್‌ಸ್ಟಾಯ್‌ಗೂ ಪ್ರಿಯನಾದ. ದಕ್ಷಿಣ ಆಫ್ರಿಕಾದಲ್ಲಿ ತನ್ನ ಪ್ರಯೋಗಗಳನ್ನು ಗಾಂಧಿ 'ಟಾಲ್‌ಸ್ಟಾಯ್ ಫಾರ್ಮ್' ಎಂದೇ ಶುರು ಮಾಡಿದರು.

ಟಾಲ್‌ಸ್ಟಾಯ್ ತಾನು ಮೆಚ್ಚುವ ಗಾಂಧಿ ಬಗ್ಗೆ ಒಂದು ಮಾತು ಬರೆಯುತ್ತಾರೆ– 'ಈತನ ರಾಷ್ಟ್ರಪ್ರೇಮ ಮಾತ್ರ ಅವನ ಸರಳತೆ ಸತ್ಯಗಳ ಹುಡುಕಾಟದಲ್ಲಿ ಅಡ್ಡಿಯಾಗಬಹುದು' ಎಂದು... ಆದರೆ ಗಾಂಧಿಗೆ ಸಂತತನದ ಹುಡುಕಾಟ ಟಾಲ್‌ಸ್ಟಾಯ್‌ದಕ್ಕಿಂತ ಭಿನ್ನವಾದ್ದು. ರಾಜಕಾರಣದ ಕೊಳಚೆ ಪ್ರದೇಶದಲ್ಲಿ ಇದ್ದು ಅವರು ಸಂತರಾದ್ದು, ಅದೇ ಅವರ ವಿಶೇಷ ; ಟಾಲ್‌ಸ್ಟಾಯ್‌ರಂತೆ ಎಲ್ಲವನ್ನು ಕಳಚಿಕೊಂಡ ನಿರ್ಲಿಪ್ತತೆಯಲ್ಲಿ ಅಲ್ಲ. ನಮ್ಮ ದೇಶವನ್ನು ದಾಸ್ಯದಿಂದ ಬಿಡುಗಡೆ ಮಾಡುವ ಮೂಲಕವೇ ಗಾಂಧಿಗೆ ಸತ್ಯದ ದರ್ಶನವಾಗಬೇಕು. ಟಾಲ್‌ಸ್ಟಾಯ್ ಏನನ್ನು ಮಾಡುವುದಕ್ಕೆ ಲೆನಿನ್ ಬೆಳೆಯುತ್ತ ಇದ್ದ ರಷ್ಯದಲ್ಲಿ ಸಾಧ್ಯವಾಗಲಿಲ್ಲವೋ ಗಾಂಧಿ ಅದನ್ನು ಸಾಧಿಸಿದರು. ಅಥವಾ ಸಾಧಿಸಲು ಯತ್ನಿಸಿ ಟಾಲ್‌ಸ್ಟಾಯ್‌ರಂತೆಯೇ ಸೋತು ಸತ್ತು ಗೆದ್ದರು.

ಟಾಲ್‌ಸ್ಟಾಯ್ ಎಂಥಾ ದೊಡ್ಡ ಲೇಖಕ ; ಆದರೂ ತಾನು ಬರೆದಿದ್ದೆಲ್ಲಾ ಪೊಳ್ಳು ಎಂದು ನಮಗೆ ಅದು ನಿಜವೆನ್ನಿಸದಂತೆ, ಹೆಂಡತಿಗೂ ನಿಜವೆನ್ನಿಸದಂತೆ ಭಾವಿಸಿದ್ದರು. ಆಮೇಲೆ ಜನ ಸಾಮಾನ್ಯರಿಗೆ ಗೊತ್ತಾಗಲಿ ಎಂದು ಸರಳವಾದ ನೀತಿ ಕಥೆಗಳನ್ನು ಬರೆದರು. ಶೇಕ್ಸ್‌ಪಿಯರನನ್ನು ಜರೆದರು. ಆದರೆ ನಿಜದಲ್ಲಿ ಟಾಲ್‌ಸ್ಟಾಯ್ ಕಿಂಗ ಲಿಯರ್‌ನಂತಹ ಮನುಷ್ಯನೇ ಎಂದು ಆರ್ವೆಲ್ ಟೀಕಿಸಿದರು.

ಗಾಂಧಿಯನ್ನು ಮೆಚ್ಚಿಕೊಂಡಿರುವ ಮಾರ್ಟಿನ್ ಗ್ರೀನ್ ಕೂಡಾ ಒಂದು ಮಾತನ್ನು ಹೇಳುತ್ತಾರೆ. "ಗಾಂಧಿಯಲ್ಲಿ ಒಂದು ಅಪಾಯ ಇದೆ. ಅದೇನೆಂದರೆ – ಒಬ್ಬ ಇಂಟಲೆಕ್ಚುಯಲ್ ಆಗುವುದಕ್ಕೆ ಗಾಂಧಿಯಲ್ಲಿ ಅವಕಾಶವಿಲ್ಲ." ವೈಚಾರಿಕತೆಯಲ್ಲಿ ಖುಷಿ ಕಾಣುವುದೂ ಒಂದು ಬಗೆಯ ಲೋಲುಪತೆಯೇ. ಆದರೆ ಸಹಸ್ರ ಬುಧೆಯವರು ಈ

ಪುಸ್ತಕದಲ್ಲಿ ಗಾಂಧಿಯ ಒಳಗಿದ್ದ ಒಬ್ಬ ಅಸಾಮಾನ್ಯ ಧೀಮಂತನನ್ನು ಕಂಡಿದ್ದಾರೆ. ಎಲ್ಲಿ ಇಂಟಲೆಕ್ಚುಯಾಲಿಟಿಯ ಮೇಲಾಟಗಳಿಗೆ ಅವಕಾಶವಿಲ್ಲವೆಂಬಂತೆ ತೋರುತ್ತದೋ ಅಲ್ಲಿ ಇಂಟಲೆಕ್ಚುಯಾಲಿಟಿ, ಅಂದರೆ ತಾಜಾ ಆದ ಇಂಟೆಲೆಕ್ಚುಯಾಲಿಟಿ, ಇರುವುದನ್ನು ಅವರು ಕಂಡಿದ್ದಾರೆ. ಸಹಸ್ರ ಬುಧೆಯನ್ನು ಓದುತ್ತ ಇದ್ದಂತೆ ಇದನ್ನು ಮಾರ್ಟಿನ್ ಗ್ರೀನ್ ಗಮನಕ್ಕೆ ತರಬೇಕೆಂದು ನನಗೆ ಅನ್ನಿಸಿತು.

ಗಾಂಧೀಜಿಯವರು ತಮ್ಮ ನೈತಿಕತೆಯನ್ನು ಸಾಮಾನ್ಯ ಜೀವನದಿಂದ ಪಡೆಯುತ್ತಾರೆ ಎಂದೆ. ಅದಕ್ಕಿಂತ ಹೆಚ್ಚಾಗಿ ಜೀವನದ ಸಾಮಾನ್ಯತೆಯಿಂದ ಪಡೆಯುತ್ತಾರೆ ಎನ್ನುವುದು ಹೆಚ್ಚು ಸಮಂಜಸ. ವಿಜ್ಞಾನದ ಬಗ್ಗೆ ಅವರ ಅಭಿಪ್ರಾಯ ಹೀಗಿದೆ. 'ಈ ಅಣುವನ್ನು ಒಡೆಯೋದಕ್ಕೆ ಸಾಧ್ಯ' ಎಂದು ಹೇಳಿದವನು ಐನ್‌ಸ್ಟೀನ್. ಅಣುವನ್ನು ಒಡೆದಾಗ E=mc2 ನಷ್ಟು ದೊಡ್ಡ ಪ್ರಮಾಣದ ಶಕ್ತಿ ಉತ್ಪಾದನೆಯಾಗುತ್ತದೆ ಎಂದು ಹೇಳಿದನಲ್ಲಾ ಅದು ವಿಜ್ಞಾನ; ಸತ್ಯದ ನಿರ್ಲಿಪ್ತ ತಿಳುವಳಿಕೆ. ಆದರೆ ಒಡೆಯಬಹುದಾದ ಅಣುವಿನಿಂದ ಬಾಂಬ್ ತಯಾರಿಸಬಹುದು ಎಂಬುದನ್ನು ತೋರಿಸಿಕೊಟ್ಟು ವಿಜ್ಞಾನವನ್ನು ತಂತ್ರಜ್ಞಾನಕ್ಕೆ ಅಳವಡಿಸಿದವನು ರಾಬರ್ಟ ಓಪನ್ ಹೈಮರ್. ಅವನಂಥವರು ವಿಚಾರದಲ್ಲಿ ಆಸಕ್ತರು ಮಾತ್ರವಲ್ಲ ; ವಿಲಾಸಿಗಳು. ಅಣು ಸ್ಫೋಟವನ್ನು ಕಣ್ಣಾರೆ ಕಂಡು (ಕಾಣದೇ ಇರಲು ಸಾಧ್ಯವೇ?) ವಿಸ್ಮಯದಲ್ಲಿ ಅವನು ಗೀತೆಯನ್ನು ಉದ್ಧರಿಸುತ್ತಾನೆ–ವಿಶ್ವರೂಪ ದರ್ಶನವಾದಾಗ ಅರ್ಜುನನಿಗೆ ಸಹಸ್ರ ಸೂರ್ಯರನ್ನು ಕಂಡಹಾಗೆ ಆಯಿತು ಎನ್ನುವ ಮಾತನ್ನು. ಅದು ಜಗತ್ತನ್ನೇ ನಾಶ ಮಾಡಬಲ್ಲ ಸ್ಫೋಟ ಎಂದು ಗೊತ್ತಿದ್ದರೂ ಅವನು ಅದನ್ನು ಯಾಕೆ ತಯಾರು ಮಾಡಿದ ? ಇದಕ್ಕೆ ಒಬ್ಬರು ಹೇಳುತ್ತಾರೆ : 'ವಿಜ್ಞಾನಿಗೆ ಇಂಥದ್ದೊಂದು ವಿಷಯ ನಿಜ ಎಂದು ಗೊತ್ತಾದ ಮೇಲೆ ಅದು ಎಷ್ಟು ನಿಜ ಎಂದು ತಿಳಿಯದೇ ಸುಮ್ಮನಿರಲಾರ'. ಗಾಂಧಿ ಇದನ್ನೇ, ಈ ಕುತೂಹಲವನ್ನೇ, 'ಆಸುರಿ' ಎನ್ನುತ್ತಾರೆ.

ಅಷ್ಟೇ ಅಲ್ಲ ; ಈ ಬಾಂಬ್ ಸ್ಫೋಟವಾದ ಮೇಲೆ ಅಮೆರಿಕನ್ನರು ಜಪಾನಿನಲ್ಲಿ ಎರಡು ಆಸ್ಪತ್ರೆಗಳನ್ನು ಮಾಡಿದರಂತೆ. ರೇಡಿಯೇಶನ್‌ನಿಂದ ನರಳುವವರನ್ನು ಗುಣ ಮಾಡುವುದಕ್ಕಲ್ಲವಂತೆ ಆ ಆಸ್ಪತ್ರೆಗಳನ್ನು ಮಾಡಿದ್ದು ; ಈ ವಿಕಿರಣದ ಪರಿಣಾಮಕ್ಕೆ ಒಳಗಾದವರ ಚರ್ಯೆ ಹೇಗಿರುತ್ತದೆ ಎನ್ನುವುದನ್ನು ತಿಳಿಯವುದಕ್ಕಂತೆ. ವಿಜ್ಞಾನ ಅಸುರಿಯಾಗುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ನಮ್ಮೆಲ್ಲರಲ್ಲೂ ಅಡಗಿರುವ ಜೈನ ತಿಳುವಳಿಕೆಯಾದ 'ಸಂಕಲ್ಪ ಹಿಂಸೆ' ಈ ಅಸುರಿತನದ ಮೂಲದಲ್ಲಿ ಇರುವುದು.

ನಮ್ಮ ದೇಶದಲ್ಲೂ ಬಾಂಬ್ ಸ್ಫೋಟವಾಯ್ತು. ನಮ್ಮ ಕವಿಗಳಾದ ಪ್ರಧಾನಿಗಳು ಅದೇನೋ 'ಬುದ್ಧ ಸ್ಮಿತ' ಎಂದು ಹೇಳಿದರು. ನಮ್ಮ ವಿಜ್ಞಾನಿಗಳೂ ಖುಷಿಯಾಗಿಬಿಟ್ಟರು– ನಾವೂ ಒಂದು ಬಾಂಬ್ ಮಾಡಿಬಿಟ್ಟೆವು ಎಂದು. ಆದರೆ ಅದರಿಂದ ಮೂರು ಕಾಸಿನ ತಿಳುವಳಿಕೆ ಏನೂ ಹೆಚ್ಚಾಗಲಿಲ್ಲ.

ಆದರೂ ಸ್ಫೋಟ ಮಾಡಬೇಕು. ಅದನ್ನು ನೋಡಬೇಕು. ಅದು ಚಾಲ್ತಿಗೆ ಬಂದ ನಂತರ ಅದರ ಪರಿಣಾಮಗಳನ್ನು ನೋಡಬೇಕು. ಅದರಿಂದ ಸಾವಿರಾರು ಜನ

ಸಾಯುತ್ತಾ ಇದ್ದರೆ ಅವರು ಹೇಗೆ ಸಾಯುತ್ತಾರೆ ಎನ್ನುವುದನ್ನು ನೋಡಬೇಕು. ಇದು ಹಿಂಸೆ ; ಇದು ವಿಜ್ಞಾನ ಹುಟ್ಟು ಹಾಕುವಂತಹ ಹಿಂಸೆ. ಜೈನರು ತಿಳಿಯುವಂತೆ ಇದು ನಾನು ಮೇಲೆ ಹೇಳಿದ ಸಂಕಲ್ಪ ಹಿಂಸೆ. ಹಿಪ್ಪಿ ಕೂದಲಿನ, ಮಗುವಿನ ಮುಗ್ಧತೆಯ ನಮ್ಮ ಸಸ್ಯಾಹಾರಿ ರಾಷ್ಟ್ರಪತಿಯಲ್ಲೂ ಕಾಣಿಸಿಕೊಳ್ಳುವ ಹಿಂಸೆ. ಬಾಂಬ್ ಮಾಡಿದರೆ ಸಾಕೆ ? ಅದನ್ನು ರವಾನಿಸುವ ಕ್ಷಿಪಣಿಗಳನ್ನೂ ನಾವು ತಯಾರಿಸುವುದು ಅಗತ್ಯವಲ್ಲವೆ? ಎಂದವರು ನಮ್ಮ ಮೆಚ್ಚುಗೆಯ ಅಬ್ದುಲ್ ಕಲಾಮರು. ಕೈಯಾರೆ ಒಂದು ಇಲಿಯನ್ನು ಕೊಲ್ಲಲು ಒಲ್ಲದವರು.

ಹಿಂಸೆಯ ಮಾತು ಬಂದಾಗ ನೆನಪಾಗುತ್ತದೆ. ನಮ್ಮಲ್ಲಿ ಹಿಂಸೆ ಹೇಗೆ ಸೆಲಬ್ರೇಟ್ ಆಗುತ್ತೆ ನೋಡಿ. ನಮ್ಮ ಮಾಧ್ಯಮಗಳಿಗೆ ಹಿಂಸೆ ಹಬ್ಬ. ಒಂದು ಅಪಘಾತ ಅಂದರೆ ಕೇವಲ ವರದಿ ಇರುವುದಿಲ್ಲ. ಸತ್ತವನ ಬುರುಡೆ ಒಡೆದಿರುವುದು, ರಕ್ತ ಎಲ್ಲದರ ಚಿತ್ರವನ್ನೂ ಹಾಕುತ್ತಾರೆ. ಏನಾದರೂ ಇಂಥದ್ದೊಂದು ಆಯ್ತು ಎಂದರೆ ಕ್ಯಾಮೆರಾಮನ್‌ಗೆ ಇರುವ ದೊಡ್ಡ ಅವಕಾಶ ಅದು.

ನಾನು ಇಂಗ್ಲೆಂಡಿನಲ್ಲಿ ಓದಿದವನು. ಇಂಗ್ಲೆಂಡ್ ಬಗ್ಗೆ ಬಹಳ ಗೌರವ ಇತ್ತು. ಮೊನ್ನೆ ಬಿಬಿಸಿಯಲ್ಲಿ ಸದ್ದಾಂ ಹುಸೇನನನ್ನು ಹಿಡಿದಿದ್ದ ಚಿತ್ರವನ್ನು ನೋಡಿದೆ. ಪ್ರತಿಯೊಂದು ನಿಮಿಷವೂ ಮತ್ತೆ ಮತ್ತೆ ಅದನ್ನೇ ತೋರಿಸುತ್ತಿದ್ದರು. ಆ ಸದ್ದಾಂ ಹುಸೇನ್ ಗಡ್ಡ ಬಿಟ್ಟಿದ್ದಾನೆ ; ಮುಖವೆಲ್ಲಾ ಕೊಳಕಾಗಿದೆ. ರೋಗಿಷ್ಟನಾಗಿ ಕಾಣುತ್ತಾನೆ. ಒಬ್ಬ ಡಾಕ್ಟರ್ ಟಾರ್ಚ್ ಹಿಡಿದು ಅವನ ಬಾಯನ್ನು ಅಗಲಿಸಿ ನೋಡುತ್ತಾನೆ. ಸದ್ದಾಂ ಬಾಯಿ ತೆಗೆಯುತ್ತಾನೆ, ಮುಚ್ಚುತ್ತಾನೆ. ನಿಮಿಷ ನಿಮಿಷಕ್ಕೂ ಅದನ್ನೇ ತೋರಿಸುತ್ತಿದ್ದಾರೆ ! ವಲ್ಗಾರಿಟಿ ಎನ್ನುವುದು ಜಗತ್ತಿನಲ್ಲಿ ಇದ್ದರೆ ಅದಿರುವುದು ಪಾಶ್ಚಾತ್ಯ ದೇಶದಲ್ಲಿ.

ನಮ್ಮ ದೇಶದಲ್ಲಿ ಇಲ್ಲ ಎಂದಲ್ಲ. ಕೂಡಲೇ ನನಗೆ ನೆನಪಾಗುವುದು– ಭಾಸ ದುರ್ಯೋಧನನನ್ನು ಹೀರೋ ಆಗಿ ನೋಡುತ್ತಾನೆ. ರಾಮಾಯಣದಲ್ಲೂ ಸಹಾ ಕವಿಗಳು ರಾವಣನನ್ನು ಜ್ವಾಜ್ವಲ್ಯಮಾನವಾದ ಅನೇಕ ಸಾಧ್ಯತೆಗಳ ವ್ಯಕ್ತಿಯನ್ನಾಗಿ ನೋಡುತ್ತಾರೆ. ಕುವೆಂಪು ರಾಮಾಯಣದಲ್ಲಿ ರಾವಣ ಕೊನೆಗೆ ಶಿಶುವಾಗಿ ಸೀತೆಯನ್ನು ತಾಯಿಯಾಗಿ ಪಡೆಯುತ್ತಾನೆ. ಇದು ನಮ್ಮ ಪರಂಪರೆ ; ನೀನು ಯಾರ ವಿರುದ್ಧ ಯುದ್ಧ ಮಾಡಬೇಕೋ ಆ ಪ್ರತಿಸ್ಪರ್ಧಿಯ ವಿರುದ್ಧ ಗೌರವದಿಂದ ಯುದ್ಧ ಮಾಡಬೇಕು ಎನ್ನುವುದು ಇಲ್ಲಿಯ ನೀತಿ. ಈ ನೀತಿಯನ್ನು ಭೀಮ ಮೀರಿದನೆಂಬುದು ಒಂದು ಕಳಂಕವೇ ನಮಗೆ.

ಇವತ್ತು ಯಾರನ್ನು ಕೇಳಿದರೂ ಸದ್ದಾಂ ಬಹಳ ಕ್ರೂರಿ ಎನ್ನುತ್ತಾರೆ. ಕ್ರೂರಿ ಹೌದು. ತನ್ನ ಕಲ್ಪನೆಯ ಬಲಿಷ್ಠ ರಾಷ್ಟ್ರ ಕಟ್ಟುವುದಕ್ಕೆ ಹಿಂಸೆ ಉಪಾಯ ಎಂದು ಸದ್ದಾಂ ಎಲ್ಲರಂತೆ (ಲೆನಿನ್‌ರಂತೆ, ಮಾವೋರಂತೆ, ನೆಪೋಲಿಯನ್‌ನಂತೆ) ಭಾವಿಸಿದ್ದ. ಪಶ್ಚಿಮರಾಷ್ಟ್ರಗಳು ಅರಬರ ನಾಡನ್ನು ಹರಿದು ಹಂಚಿ ಇದು ಕುರ್ಡ್‌ರಿಗೆ, ಇದು ಶಿಯಾರಿಗೆ, ಇದು ಸುನ್ನಿಗಳಿಗೆ ಎಂದು ಅಪ್ಪಣೆ ಮಾಡಿ, ಪಾಲಿಸ್ಟೇನರಿಂದ ಅವರು ಬದುಕುತ್ತ ಇದ್ದ ನಾಡನ್ನು ಕಸಿದು ಇಸ್ರೇಲ್ ಮಾಡಿ ಈ ಜನ ಸಮುದಾಯ ಎಂದೂ

ಒಟ್ಟಾಗದಂತೆ ಮಾಡಿದರು. (ನಮಗೂ ಬ್ರಿಟೀಷರು ಹಾಗೇ ಮಾಡಿದರು) ಸದ್ದಾಂ ಈ ಎಲ್ಲರನ್ನೂ ಒಟ್ಟಾಗಿಟ್ಟುಕೊಳ್ಳಲು, ಹಲವರನ್ನು ಕೊಂದ, ಕೆಲವರನ್ನು ಬಡಿದ ಅಥವಾ ಎತ್ತಿದ, ಒಟ್ಟಿನಲ್ಲಿ ಹಿಂಸೆಯನ್ನು ಬಳಸಿದ. ಜನರಲ್ಲಿ ಸಾಕಷ್ಟು ಭಯೋತ್ಪಾದನೆ ಮಾಡಿದರೆ ಅವರು ವಿಧೇಯರಾಗಿರುತ್ತಾರೆ ಎಂಬುದು ಅವನ ನಂಬಿಕೆ. ನಮ್ಮಲ್ಲಿ ಕೆಲವರು ಈ ಹೊತ್ತು ಅದನ್ನೇ ಹೇಳುತ್ತಿದ್ದಾರೆ – ಮುಸ್ಲಿಮರಿಗೆ ಮತ್ತು ಕ್ರಿಶ್ಚಿಯನ್ನರಿಗೆ ಸಾಕಷ್ಟು ಭಯ ಹುಟ್ಟಿದರೆ ಅವರು ನಮ್ಮ ದೇಶಕ್ಕೆ ವಿಧೇಯರಾಗಿರುತ್ತಾರೆ ಎಂದು.

ಉಳಿದವರಿಗೆ ನೀತಿ ಹೇಳಲು ಪಾಶ್ಚಾತ್ಯ ದೇಶಗಳಿಗೆ ಯಾವ ಹಕ್ಕು ಇದೆ ? ಯೂರೋಪಿನ ಜನರು ಅಮೆರಿಕಾಕ್ಕೆ ಹೋಗಿ ಅಲ್ಲಿನ ಬುಡಕಟ್ಟು ಜನರನ್ನು ಸಂಪೂರ್ಣ ನಾಶ ಮಾಡಿದರು. ಇವತ್ತು ಅಮೆರಿಕಾದ ಬುಡಕಟ್ಟು ಜನರು ಹೆಂಡ ಕುಡಿದು ಕೆಲವು ರಿಸರ್ವೇಷನ್ ಕ್ಯಾಂಪ್‌ಗಳಲ್ಲಿ ಪ್ರಯೋಜನಕ್ಕೆ ಬಾರದ ರೀತಿಯಲ್ಲಿದ್ದಾರೆ. ಆಸ್ಟ್ರೇಲಿಯಾದಲ್ಲಿರುವ ಬುಡಕಟ್ಟು ಜನರು ಸಂಪೂರ್ಣವಾಗಿ ನಾಶವಾಗಿದ್ದಾರೆ. ನಾವು ಅಧಿಕ ಸಂಖ್ಯೆಯಲ್ಲಿದ್ದ ಕಾರಣ ಬ್ರಿಟೀಷರು ನಮ್ಮನ್ನು ಸಂಪೂರ್ಣ ನಾಶ ಮಾಡಲು ಸಾಧ್ಯವಾಗಲಿಲ್ಲವೇನೋ ! ಇಲ್ಲದಿದ್ದರೆ ಅಮೆರಿಕನ್ನರೋ ಇನ್ನ್ಯಾರೋ ಈ ದೇಶವನ್ನು ಆಳಿಬಿಡುತ್ತಿದ್ದರು.

ಇಡೀ ಜಗತ್ತನ್ನು ಒಂದು ಮುಷ್ಟಿಯಲ್ಲಿಟ್ಟುಕೊಳ್ಳಬೇಕೆಂಬ ಐರೋಪ್ಯ ಜನಾಂಗದ ಆಸೆ ಇಂದು ಸಫಲವಾಗುತ್ತ ಇರುವಂತೆ ಕಾಣುತ್ತಿದೆ, ನಮ್ಮ ಸಹಕಾರದಿಂದಲೇ. ಹೇಗೆಂದರೆ ನಮ್ಮ ಬಹಳ ಸುಂದರವಾದ ಹುಡುಗಿಯರು ಅಮೆರಿಕಾದವರು ಮಾತನಾಡುವ ರೀತಿಯನ್ನು ಕಲಿತು ರಾತ್ರಿಯಲ್ಲಿ ಯಾವುದೋ ಒಂದು ಶಿಬಿರದಲ್ಲಿ ಯಾವನೋ ಎಲ್ಲಿಂದಲೋ ಫೋನ್ ಮಾಡಿದರೆ ಅಮೆರಿಕಾದ ವಾಯ್ಸ್‌ನಲ್ಲೆ ಉತ್ತರ ಕೊಡುತ್ತಾರೆ. ಅದನ್ನೇ ನಾವು ಭಾಗ್ಯ ಎಂದು ತಿಳಿದುಕೊಂಡಿದ್ದೇವೆ. ಈಗ ನಮ್ಮ ಕಾಲೇಜು ಶಿಕ್ಷಣ ಸಂಸ್ಥೆಗಳೂ ಇಂಥಾ 'ವಾಯ್ಸ್'ನ್ನು ಸೃಷ್ಟಿ ಮಾಡುವ ಕಡೆ ಇದೆ.

ಇದೂ ಒಂದು ರೀತಿಯ ಹಿಂಸೆಯೇ. ರಾಗಿ ಮುದ್ದೆ ಸೊಪ್ಪಿನ ಸಾರಿನಲ್ಲಿ ಸುಖ ಕಾಣುತ್ತಿದ್ದ ನಾಗರಿಕತೆಯನ್ನೇ ನಾಶ ಮಾಡಿದ ನಂತರ ಭಾರತದ ಜನರನ್ನು ಗೆಲ್ಲಬಹುದು ಎನ್ನುವುದೂ ನಮ್ಮನ್ನು ಆಳುವ ಶ್ರೀಮಂತರಿಗೆ ಗೊತ್ತಿದೆ. ಕುಡಿಯಲು ನೀರಿಲ್ಲದಾಗ, ಕೋಕಾಕೋಲಾ ಬಾಯಾರಿದವರ ವರವಾಗಿ ಕಾಣುತ್ತದೆ ಎಂದು ಅವರಿಗೆ ಗೊತ್ತಿದೆ.

ಇದು ಗಾಂಧೀಜಿಯವರಿಗೆ ಆಡಳಿತ ಹೇರುವ ಹಿಂಸೆ ಎಂದು ಗೊತ್ತಿತ್ತು. ಆದ್ದರಿಂದ ಈ ರೀತಿಯ ಹಿಂಸೆಯನ್ನು ಸಾಧ್ಯ ಮಾಡುವ ವಿಜ್ಞಾನಕ್ಕೆ, ಟೆಕ್ನಾಲಜಿಗೆ ಅವರು ವಿರೋಧಿಯಾದರು. ಆದರೆ ಗಾಂಧೀಜಿ ವಿಜ್ಞಾನ ವಿರೋಧಿಯಲ್ಲ. ಯಾಕೆಂದರೆ ಚರಕವೂ ಒಂದು ಯಂತ್ರ ಎಂದು ತಿಳಿದಿದ್ದರು.

ಇದು ಕಥೆಯಲ್ಲ ಎಲ್ಲೋ ಓದಿದ್ದು. ಸಿಂಗರ್ ಎನ್ನುವವನು ಒಂದು ಹೊಲಿಗೆ ಯಂತ್ರವನ್ನು ಕಂಡು ಹಿಡಿದ. ಯಾಕೆಂದರೆ ಅವನ ಹೆಂಡತಿಗೆ ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ. ಅವಳು ಸೂಜಿಗೆ ದಾರ ಪೋಣಿಸಲು ಪಡುತ್ತಿದ್ದ ಕಷ್ಟವನ್ನು ಕಂಡು ಒಂದು ಹೊಲಿಗೆ ಯಂತ್ರವನ್ನು ಕಂಡುಹಿಡಿಯಬೇಕು ಎನ್ನಿಸಿತು. ಇದನ್ನು ಗಾಂಧಿ

ಓದಿದ ಕೂಡಲೇ 'ಎಲ್ಲರ ಮನೆಯಲ್ಲಿ ಒಂದು ಹೊಲಿಗೆ ಯಂತ್ರ ಇರಬೇಕು.' ಎಂದರಂತೆ. ನಾನು ಒಂದೊಂದು ಸಾರಿ ತಮಾಷೆಯಾಗಿ ಹೇಳುತ್ತೇನೆ : 'ಕಂಪ್ಯೂಟರ್ ಸೌಲಭ್ಯವನ್ನು ನೋಡಿದ್ದರೆ ಗಾಂಧಿ ಪ್ರತಿಯೊಂದು ಮನೆಯಲ್ಲೂ ಕಂಪ್ಯೂಟರ್ ಇರಬೇಕು ಎಂದು ಹೇಳುತ್ತಿದ್ದರೋ ಏನೋ' ಎಂದು. (ಪುಟ್ಟಸ್ವಾಮಿಯವರು ಆರಂಭದಲ್ಲಿ ಗಾಂಧೀ ಮತ್ತು ನೆಹರೂ ಅವರಿಗೆ ನಡೆದ ಒಂದು ಮುಖ್ಯವಾದ ಪತ್ರವನ್ನು ಪ್ರಕಟಿಸಿ ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ) ಗಾಂಧಿಯವರು ಯಂತ್ರಕ್ಕೆ ವಿರೋಧಿಯಲ್ಲ. ಆದರೆ ಯಂತ್ರದಿಂದ ಹುಟ್ಟುವ ಹಿಂಸೆ, ಮತ್ತು ಅಧಿಕಾರದ ಹೇರಿಕೆಗೆ ವಿರೋಧಿಯಾಗಿದ್ದರು. ಅದಕ್ಕಾಗಿಯೇ ಪ್ರತಿಯೊಬ್ಬರೂ ಕಾಯಕವನ್ನು ಮಾಡಬೇಕು ಎಂದು, ಟಾಲ್‌ಸ್ಟಾಯ್ ರಂತೆಯೇ ಹೇಳುತ್ತಿದ್ದರು. ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಆಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮ ಸಮಭಾವ, ಸ್ವದೇಶಿ, ಸ್ಪರ್ಶ ಭಾವನಾ ಇವನ್ನು ಅವರು ಮಂತ್ರ ಮಾಡಿಕೊಂಡಿದ್ದರು.

ಗಾಂಧಿ ಹೇಳುವ ಅಸ್ವಾದದ ಬಗ್ಗೆ ಒಂದು ಮಾತು : ರುಚಿಗಳನ್ನು ಬೆಳೆಸಿಕೊಂಡ ಕಾರಣದಿಂದಲೇ ಈ ದಿನ ಕಾಡೆಲ್ಲಾ ಟೀ ಗಾರ್ಡನ್ ಮತ್ತು ಕಾಫಿ ತೋಟ ಆಗಿವೆ. ಆದರೆ ನಮ್ಮ ನಾಗರಿಕತೆ ಇರುವುದು ರುಚಿಗಳನ್ನು ಸೂಕ್ಷ್ಮಗೊಳಿಸುವ ವಿಧಾನದಲ್ಲಿ. ನಮ್ಮ ಎಲ್ಲಾ ಮಾರಾಟಗಳೂ ಸಾಧ್ಯವಾಗುವುದೂ ರುಚಿಗಳನ್ನು ಬೆಳೆಸಿಕೊಳ್ಳುತ್ತಾ ಹೋಗುವುದರಲ್ಲಿ. ಇದರಲ್ಲಿ ನಾವೆಲ್ಲರೂ ಪಾಲುದಾರರೇ. ಇಷ್ಟಪಡುವ ಪಾಲುದಾರರೇ. ಇದನ್ನು ತಾತ್ವಿಕವಾಗಿ ವಿರೋಧಿಸಿದರೂ ನಿಜದಲ್ಲಿ ಅದನ್ನೇ ಇಷ್ಟಪಡುತ್ತೇವೆ ಎಂಬ ವಿಷಾದವಾದರೂ ನಮ್ಮಲ್ಲಿ ಕಾಣಿಸಿಕೊಂಡರೆ ನಾವು ಕೊನೆಯ ಪಕ್ಷ ಮನುಷ್ಯ ಮಾತ್ರದವರು.

ಗಾಂಧಿ ಮತ್ತು ಟಾಲ್‌ಸ್ಟಾಯ್ ಈ ಆಸೆಯಲ್ಲೇ ಹಿಂಸೆಯ ಉಗಮ ಕಂಡರು. ಇಂಥಾ ಹಿಂಸೆಯನ್ನು ಕಂಡ ಗಾಂಧೀ ವಿಜ್ಞಾನ ವಿರೋಧಿಯಂತೆ ಕಂಡರೂ ಅದರ ಹಿಂಸೆಗೆ ವಿರೋಧವಾಗಿದ್ದರೆ ಹೊರತು, ಜೀವಪರವಾದ ವಿಜ್ಞಾನ ತಂತ್ರಜ್ಞಾನಕ್ಕೆ ವಿರೋಧವಾಗಿರಲಿಲ್ಲ. ಈಗ ಬೇಕಾಗಿರುವುದು ಪರ್ಯಾಯ ತಂತ್ರಜ್ಞಾನ ; ಮಧ್ಯಮ ಮಾರ್ಗೀಯ ತಂತ್ರಜ್ಞಾನ. ಬಹುಶಃ ಗಾಂಧಿಯ ಪ್ರೇರಣೆಯಿಂದ ಜೀವಪರ ವಿಜ್ಞಾನವೂ ಪರ್ಯಾಯ ತಂತ್ರಜ್ಞಾನವೂ ಹುಟ್ಟಬಹುದು. ಆ ದಿಸೆಯಲ್ಲಿ ಈ ಪುಸ್ತಕ ಗಾಂಧಿಯ ನೈತಿಕ ಭಾಷೆಯಲ್ಲಿ ಇಲ್ಲದ, ಶಾಸ್ತ್ರೀಯವಾಗಿ ಗಾಂಧಿಯ ಬಗ್ಗೆ ಬರೆದಿರುವ ಬಹಳ ಗಹನವಾದ ಪುಸ್ತಕ.

**–ಪ್ರೊ. ಯ.ಆರ್. ಅನಂತಮೂರ್ತಿ**

(ಪ್ರೊ. ಯು.ಆರ್. ಅನಂತಮೂರ್ತಿಯವರು 'ಆಧುನಿಕ ವಿಜ್ಞಾನಕ್ಕೆ ಗಾಂಧಿ ಸವಾಲು' ಕೃತಿಯನ್ನು (ಮೊದಲ ಮುದ್ರಣ) ದಿ. 23ನೇ ಡಿಸೆಂಬರ್ 2003ರಂದು ಬಿಡುಗಡೆ ಮಾಡಿ ಆಡಿದ ಮಾತುಗಳ ಸಾರಾಂಶರೂಪ.)

# ಅನುವಾದಕನ ಅರಿಕೆ

'ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು 'ಕೃತಿಯನ್ನು ಅನುವಾದಿಸುವಾಗ ನನಗೆ ಪದೇ ಪದೇ ನೆನಪಿಗೆ ನುಗ್ಗಿ ಬರುತ್ತಿದ್ದದ್ದು, ಗಾಂಧೀಜಿ ಕೊನೆಯ ಬಾರಿಗೆ ನೆಹರೂರವರಿಗೆ ಬರೆದ ಪತ್ರ ಮತ್ತು ನಂತರ ನೆಹರೂರವರು ಅದಕ್ಕೆ ನೀಡಿದ ಉತ್ತರ. ಅದು ಭಾರತದ ಬೆಳವಣಿಗೆಯ ಗತಿಯನ್ನೆ ನಿರ್ದೇಶಿಸಿದ ಚಾರಿತ್ರಿಕ ಘಟನೆಯೆಂದೇ ನನ್ನ ಭಾವನೆ. ಈ ಕೃತಿಯನ್ನು ಅರ್ಥಮಾಡಿಕೊಳ್ಳಲು ಆ ಪತ್ರಗಳು ಪೂರಕ ಮಾಹಿತಿಯನ್ನು ಒದಗಿಸುತ್ತವೆಂಬುದು ನನ್ನ ಅನಿಸಿಕೆ. ಹಾಗಾಗಿ ಆ ಪತ್ರಗಳ ಸಾರಾಂಶವನ್ನು ಇಲ್ಲಿ ಓದುಗರ ಅನುಕೂಲಕ್ಕಾಗಿ ನೀಡುತ್ತಿದ್ದೇನೆ.

ಇದು ಗಾಂಧಿಯವರು ಬರೆದ ಪತ್ರ

ಪೂನಾ. ಅಕ್ಟೋಬರ್ 5, 1945
**ನನ್ನ ಪ್ರಿಯ ಜವಾಹರಲಾಲ್,**

ನಿನಗೆ ಪತ್ರ ಬರೆಯಬೇಕೆಂಬುದು ನನ್ನ ಅನೇಕ ದಿನಗಳ ಬಯಕೆ. ಆದರೆ ಈ ದಿನದವರೆವಿಗೂ ಅದು ಸಾಧ್ಯವಾಗಲಿಲ್ಲ. ಪತ್ರವನ್ನು ಇಂಗ್ಲಿಷ್‌ನಲ್ಲಿ ಬರೆಯಲೋ, ಹಿಂದೂಸ್ತಾನಿಯಲ್ಲಿ ಬರೆಯಲೋ ಎಂಬ ಗೊಂದಲ ಸಹ ನನ್ನ ಮುಂದಿತ್ತು. ದೀರ್ಘ ಚಿಂತನೆಯ ನಂತರ ಹಿಂದೂಸ್ತಾನಿಯಲ್ಲೇ ಬರೆಯಲು ನಿರ್ಧರಿಸಿದ್ದೇನೆ.

ನಾನು ಬರೆಯಬೇಕೆಂದಿರುವ ಮೊದಲ ವಿಷಯ ನಮ್ಮಿಬ್ಬರ ದೃಷ್ಟಿಕೋನದ ನಡುವಿನ ವ್ಯತ್ಯಾಸಕ್ಕೆ ಸಂಬಂಧಿಸಿದ್ದು. ಸಾರ್ವಜನಿಕರೂ ಇದನ್ನು ತಿಳಿದುಕೊಳ್ಳುವುದು ಅಗತ್ಯವೆಂಬುದು ನನ್ನ ಇಚ್ಛೆ. ಈ ಬಗ್ಗೆ ಅವರನ್ನು ಕತ್ತಲಲ್ಲಿಡುವುದು ಸ್ವರಾಜ್ಯಕ್ಕಾಗಿ ದುಡಿಯುತ್ತಿರುವ ನಮಗಿಬ್ಬರಿಗೂ ಅಪಾಯಕಾರಿ. 'ಹಿಂದ್ ಸ್ವರಾಜ್'ನಲ್ಲಿ ನಾನು ರೂಪಿಸಿರುವ ಆಡಳಿತ ವ್ಯವಸ್ಥೆ (ಸರ್ಕಾರ)ಗೆ ಈಗಲೂ ನಾನು ಬದ್ಧನಾಗಿದ್ದೇನೆಂದು ಹೇಳಿದ್ದೇನೆ. ಇಲ್ಲಿನ ವಾಕ್ಯಗಳು ಕೇವಲ ಪದಗಳ ಸಂಯೋಜನೆಯಲ್ಲ. 1909ರಲ್ಲಿ ಆ ಕೃತಿಯನ್ನು ರಚಿಸಿದಾಗಿನಿಂದ ನಾನು ಪಡೆದ ಅನುಭವಗಳೆಲ್ಲ ಅಲ್ಲಿನ ನನ್ನ ನಂಬಿಕೆಯನ್ನು ದೃಢೀಕರಿಸಿವೆ. ಆದುದರಿಂದ ನಾನು ಆ ಸತ್ಯದ ಪರವಾಗಿ ಏಕಾಂಗಿಯಾಗಿ ಉಳಿದರೂ ಧೃತಿಗೆಡುವುದಿಲ್ಲ. ಏಕೆಂದರೆ ನಾ ಕಂಡ ಸತ್ಯಕ್ಕೆ ನಾನೊಬ್ಬನೇ

ಸಾಕ್ಷಿ. ನನ್ನ ಮಾತುಗಳಲ್ಲಿಯೇ ಹಿಂದ್ ಸ್ವರಾಜ್‌ನ ಚಿತ್ರವನ್ನು ಹೊಸದಾಗಿ ಬಿಡಿಸುವುದು ಒಳ್ಳೆಯದು....ಭಾರತವು ನಿಜವಾದ ಸ್ವಾತಂತ್ರ್ಯವನ್ನು ಮತ್ತು ಆ ಮೂಲಕ ಇಡೀ ಜಗತ್ತು ಸ್ವಾತಂತ್ರ್ಯವನ್ನು ಗಳಿಸಬೇಕಾದರೆ, ಜನರೆಲ್ಲ ಇಂದಲ್ಲ ನಾಳೆ ಗ್ರಾಮಗಳಲ್ಲಿ ಬದುಕಬೇಕಲ್ಲದೆ ಪಟ್ಟಣಗಳಲ್ಲಲ್ಲ; ಗುಡಿಸಲುಗಳಲ್ಲಲ್ಲದೆ ಅರಮನೆಗಳಲ್ಲಲ್ಲ ಎಂಬ ಸತ್ಯವನ್ನು ಮನಗಾಣಬೇಕು. ಇದರಲ್ಲಿ ನನಗೆ ಸಂಪೂರ್ಣವಾದ ವಿಶ್ವಾಸವಿದೆ. ಪಟ್ಟಣ ಮತ್ತು ಅರಮನೆಗಳಲ್ಲಿ ಕೋಟ್ಯಂತರ ಜನರು ಸಹಬಾಳ್ವೆ, ನೆಮ್ಮದಿಯಿಂದ ಬದುಕಲಾರರು. ಅಲ್ಲಿ ಹಿಂಸೆ ಮತ್ತು ಅಸತ್ಯದ ಆಚರಣೆ ಬಿಟ್ಟರೆ ಅವರಿಗೆ ಅನ್ಯಮಾರ್ಗವಿಲ್ಲ. ಸತ್ಯ ಮತ್ತು ಅಹಿಂಸೆಗಳಿಲ್ಲದಿದ್ದರೆ ಮನುಕುಲದ ವಿನಾಶ ಖಂಡಿತ. ಗ್ರಾಮೀಣ ಬದುಕಿನ ಸರಳತೆಯಲ್ಲಿ ಸತ್ಯ ಮತ್ತು ಅಹಿಂಸೆಗಳ ಸಾಕ್ಷಾತ್ಕಾರ ಸಾಧ್ಯ. ಅಂಥ ಸರಳತೆಯನ್ನು ಚರಕ ಮತ್ತು ಅದು ಪ್ರತಿನಿಧಿಸುವ ಎಲ್ಲ ಅಂಶಗಳಲ್ಲಿಯೂ ಕಾಣಬಹುದು. ಜಗತ್ತು ಇಂದು ಅಡ್ಡದಾರಿ ಹಿಡಿದಿದ್ದರೆ ನಾವು ಧೃತಿಗೆಡಬಾರದು. ಭಾರತವೂ ಸಹ ಜ್ವಾಲೆಯ ಕುಡಿಗೆ ಆಕರ್ಷಿತವಾಗಿ ಅದನ್ನು ಸುತ್ತುತ್ತಾ ತನ್ನನ್ನೇ ಸುಟ್ಟುಕೊಳ್ಳುವ ಪತಂಗದ ರೀತಿಯಲ್ಲಿ ಅದೇ ಅಡ್ಡದಾರಿಯನ್ನು ಹಿಡಿಯಬಹುದು. ಆದರೆ, ಅಂಥ ದುರಂತದಿಂದ ಭಾರತವನ್ನು ಆ ಮೂಲಕ ಇಡೀ ಜಗತ್ತನ್ನು ರಕ್ಷಿಸಲು ನನ್ನ ಕೊನೆಯುಸಿರಿನವರೆಗೂ ಪ್ರಯತ್ನಿಸುವುದು ನನ್ನ ಕರ್ತವ್ಯ. ನನ್ನ ಮಾತಿನ ಸಾರಾಂಶವಿಷ್ಟೆ. ಮಾನವ ತನ್ನ ನಿಜ ಅಗತ್ಯಗಳಿಗೆ ತೃಪ್ತಿಪಟ್ಟು ಸ್ವಾವಲಂಬಿಯಾಗಬೇಕು. ಅಂಥ ನಿಯಂತ್ರಣವಿಲ್ಲದಿದ್ದರೆ ಆತ ತನ್ನನ್ನು ತಾನು ರಕ್ಷಿಸಿಕೊಳ್ಳಲಾರ.

"....ನಾನು ಇಷ್ಟಪಡುವುದು ಹೊಸ ದೃಷ್ಟಿಕೋನದಿಂದ, ನಿಜವನ್ನು ಹೀರಿ ಹೊಸ ರೂಪ ಪಡೆದ ಆಧುನಿಕ ವಿಜ್ಞಾನದ ಬೆಳಕಿನಲ್ಲಿ ಹಳೆಯದನ್ನು ನೋಡುವ ಪರಿಯನ್ನು. ನಮ್ಮ ಹಳ್ಳಿಗಳೆಲ್ಲ ಈಗಿರುವ ಸ್ಥಿತಿಯಲ್ಲೇ ಇರಬೇಕೆಂದು ನಾನು ಬಯಸಿದ್ದೇನೆಂದು ಕಲ್ಪಿಸಿಕೊಳ್ಳಬೇಡ. ನನ್ನ ಕನಸಿನ ಹಳ್ಳಿಗಳ ಚಿತ್ರ ನನ್ನ ಮನದಲ್ಲಿನ್ನೂ ಸ್ಪಷ್ಟವಾಗಿದೆ. ಪ್ರತಿಯೊಬ್ಬ ಮನುಷ್ಯನೂ ತನ್ನದೇ ಕನಸಿನ ಜಗತ್ತಿನಲ್ಲಿ ಬದುಕುತ್ತಾನೆ. ನನ್ನ ಆದರ್ಶ ಗ್ರಾಮ ಬುದ್ಧಿವಂತ ಜನರಿಂದ ತುಂಬಿರುತ್ತದೆ. ಅವರು ಪ್ರಾಣಿಗಳಂತೆ ಕೊಳಚೆ ಮತ್ತು ಅಜ್ಞಾನದಲ್ಲಿ ಬದುಕುವುದಿಲ್ಲ. ಅಲ್ಲಿ ಸ್ತ್ರೀ-ಪುರುಷರು ಮುಕ್ತವಾಗಿ ಬದುಕುತ್ತಾರೆ. ಜಗತ್ತಿನ ಯಾವ ನಿಲುವಿನ ವಿರುದ್ಧವೂ ದನಿಯೆತ್ತುವ ಸಾಮರ್ಥ್ಯ ಅವರಿಗಿರುತ್ತದೆ. ಅಲ್ಲಿ ಪ್ಲೇಗ್, ಕಾಲರಾ ಅಥವಾ ಸಿಡುಬಿನ ಆತಂಕವಿರದು. ಯಾರೊಬ್ಬರೂ ಸೋಮಾರಿಯಾಗಿರುವುದಿಲ್ಲ. ಯಾರೊಬ್ಬರೂ ಭೋಗದಲ್ಲಿ ಮೈಮರೆತಿರುವುದಿಲ್ಲ. ಅಲ್ಲಿ ಪ್ರತಿಯೊಬ್ಬರೂ ತಮ್ಮ ಪಾಲಿನ ದುಡಿಮೆಯನ್ನು ಸಲ್ಲಿಸಲೇಬೇಕು. ನಾನು ಈ ಬಗ್ಗೆ ವಿಶಾಲವಾದ ಚಿತ್ರವೊಂದನ್ನು ಬಿಡಿಸಲು ಹೋಗುವುದಿಲ್ಲ. ಅಲ್ಲಿ ರೈಲ್ವೇ, ಅಂಚೆ, ತಂತಿ ಮುಂತಾದ ಸೌಲಭ್ಯಗಳು ದೊರೆಯುವುದು ಸಾಧ್ಯ. ನಿಜವಾದ ವಸ್ತುಗಳನ್ನು

ಪಡೆಯುವುದೇ ನನಗೆ ಮುಖ್ಯ. ಬಳಿಕ ಉಳಿದೆಲ್ಲವೂ ಆ ಚೌಕಟ್ಟಿನೊಳಗೆ ತಾನಾಗಿಯೇ ಬಂದು ಬೀಳುತ್ತವೆ. ನಿಜವಾದ ವಸ್ತುಗಳನ್ನು ತ್ಯಜಿಸಿದರೆ ಎಲ್ಲವನ್ನೂ ತ್ಯಜಿಸಿದಂತೆ.

"ಈ ವಿಷಯವನ್ನು ಎರಡು ಮೂರು ದಿನಗಳ ಅಧಿವೇಶನದಲ್ಲಿ ಸಂಪೂರ್ಣವಾಗಿ ಚರ್ಚಿಸಿ ಅಲ್ಲಿ ತೆಗೆದುಕೊಂಡ ನಿರ್ಣಯವನ್ನು ಸ್ಪಷ್ಟಪಡಿಸಬೇಕೆಂದು (ಕಾಂಗ್ರೆಸ್) ಕಾರ್ಯಕಾರಿ ಸಮಿತಿಯ ಸಭೆಯ ಕೊನೆಯ ದಿನದಂದು ನಿರ್ಣಯವಾಗಿತ್ತು. ಆದರೆ ಸಮಿತಿ ಸೇರಲಿ ಬಿಡಲಿ. ಈ ಬಗ್ಗೆ ನಾವಿಬ್ಬರೂ ನಮ್ಮ ನಮ್ಮ ನಿಲುವನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವಂತಾಗ ಬೇಕೆಂಬುದು ನನ್ನ ಬಯಕೆ. ಇದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು ನಮ್ಮಿಬ್ಬರನ್ನು ಬಂಧಿಸಿರುವ ಬೆಸುಗೆ ಕೇವಲ ರಾಜಕೀಯ ಕಾರ್ಯದಿಂದ ಆದುದಲ್ಲ. ಅದು ಅಳತೆಗೆ ಮೀರಿದ ಮುರಿಯದ ಬೆಸುಗೆ. ಆದುದರಿಂದ ರಾಜಕೀಯ ಕ್ಷೇತ್ರದಲ್ಲೂ ನಾವು ಸ್ಪಷ್ಟವಾಗಿ ಪರಸ್ಪರ ಅರಿತಿರಬೇಕೆಂಬುದು ನನ್ನ ಕಳಕಳಿ. ಎರಡನೆಯದಾಗಿ ನಾವಿಬ್ಬರೂ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ದುಡಿಯುತ್ತಿದ್ದೇವೆ. ಅದಕ್ಕಾಗಿ ಸಾಯಲು ಸಿದ್ಧರಿದ್ದೇವೆ. ಜಗತ್ತಿನ ಹೊಗಳಿಕೆಯ ಪರಿವೆ ನಮಗಿಲ್ಲ. ಸೇವೆಯಲ್ಲಿ ಹೊಗಳಿಕೆಗೆ ಅವಕಾಶವಿಲ್ಲ. ಭಾರತದ ಸೇವೆಯ ಸಲುವಾಗಿ 125 ವರ್ಷ ಬದುಕಬೇಕೆಂಬ ಆಸೆ ನನ್ನದು. ಆದರೆ ನನಗೆ ವಯಸ್ಸಾಗಿರುವುದನ್ನು ಒಪ್ಪಿಕೊಳ್ಳಬೇಕು. ನನಗೆ ಹೋಲಿಸಿದರೆ ನೀನು ಚಿಕ್ಕವನು. ಆದುದರಿಂದ ನಿನ್ನನ್ನು ನನ್ನ ಉತ್ತರಾಧಿಕಾರಿಯೆಂದು ಹೇಳಿದ್ದೇನೆ. ನಾನು ನನ್ನ ಉತ್ತರಾಧಿಕಾರಿಯನ್ನು, ನನ್ನ ಉತ್ತರಾಧಿಕಾರಿ ನನ್ನನ್ನು ಅರ್ಥ ಮಾಡಿಕೊಳ್ಳಬೇಕು. ಹಾಗಾದಾಗಲೇ ನನಗೆ ತೃಪ್ತಿ....'–ಬಾಪುವಿನಿಂದ ಆಶೀರ್ವಾದಗಳು."

ಈ ಪತ್ರಕ್ಕೆ ಅಲಹಾಬಾದ್‌ನಿಂದ ನೆಹರೂರವರು ಉತ್ತರಿಸಿದ ಅಕ್ಟೋಬರ್ 9, 1945ರ ಪತ್ರದ ಸಾರಾಂಶ ಇಂತಿದೆ.

ನನ್ನ ಪ್ರಿಯ ಬಾಪು

"....ಸಂಕ್ಷಿಪ್ತವಾಗಿ ಹೇಳುವುದಾದರೆ ನಮ್ಮ ಮುಂದಿರುವುದು ಹಿಂಸೆ ವಿರುದ್ಧ ಅಹಿಂಸೆ ಅಥವಾ ಸತ್ಯದ ವಿರುದ್ಧ ಅಸತ್ಯದ ಪ್ರಶ್ನೆಯಲ್ಲ. ನಿಜವಾದ ಸಹಕಾರ ಮತ್ತು ಶಾಂತಿಯುತ ವಿಧಾನಗಳ ಗುರಿ ನಮ್ಮದಾಗಬೇಕು. ಇಂಥವುಗಳನ್ನು ಪ್ರೋತ್ಸಾಹಿಸುವ ಸಮಾಜದ ನಿರ್ಮಾಣ ನಮ್ಮ ಉದ್ದೇಶವಾಗಬೇಕು. ಆದರೆ ಇಂಥ ಸಮಾಜದ ಸಾಕ್ಷಾತ್ಕಾರದ ವಿಧಾನ ಮತ್ತು ಅದು ಒಳಗೊಳ್ಳಬೇಕಿರುವ ವಿಷಯಗಳು ಯಾವುವು ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಒಂದು ಗ್ರಾಮವು ಸತ್ಯ ಮತ್ತು ಅಹಿಂಸೆಗಳನ್ನೆ ಒಳಗೊಂಡಿರಬೇಕು ಎಂಬುದು ನನಗೆ ಅರ್ಥವಾಗದು. ಸಾಮಾನ್ಯ

ಅಭಿಪ್ರಾಯವೆಂದರೆ, ಒಂದು ಗ್ರಾಮ ಬೌದ್ಧಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದಿದೆ. ಒಂದು ಹಿಂದುಳಿದ ಪರಿಸರದಿಂದ ಯಾವುದೇ ಪ್ರಗತಿ ಸಾಧನೆ ಅಸಾಧ್ಯ. ಸಂಕುಚಿತ ಮನೋಭಾವನೆಯ ಜನರು ಹೆಚ್ಚು ಸುಳ್ಳರೂ ಹಿಂಸಾವಾದಿಗಳೂ ಆಗಿರುವ ಸಾಧ್ಯತೆಯಿದೆ.

"ಆಹಾರ, ಉಡುಪು, ವಸತಿ, ಶಿಕ್ಷಣ, ನೈರ್ಮಲ್ಯ ಇತ್ಯಾದಿಗಳನ್ನು ಒದಗಿಸುವ ಗುರಿಗಳನ್ನು ನಾವು ಹಮ್ಮಿಕೊಳ್ಳಬೇಕು. ಈ ಉದ್ದೇಶದಿಂದ ಅವುಗಳನ್ನು ತ್ವರಿತಗತಿಯಲ್ಲಿ ನಿರ್ದಿಷ್ಟವಾಗಿ ಸಾಧಿಸುವ ಹಾದಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ಆಧುನಿಕ ಸಾರಿಗೆ ವಿಧಾನಗಳು ಮತ್ತು ಇತರೆ ಆಧುನಿಕ ಅಭಿವೃದ್ಧಿಗಳು ನಿರಂತರವಾಗಿ ಬೆಳೆಯಬೇಕು. ಇವುಗಳನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ. ಇವೆಲ್ಲ ಬಡ ಗ್ರಾಮಗಳ ಚೌಕಟ್ಟಿನಲ್ಲಿ ಹೇಗೆ ಹೊಂದಿಕೊಳ್ಳುತ್ತವೆ? ಬೃಹತ್ ಅಥವಾ ಲಘು ಉದ್ದಿಮೆಗಳನ್ನು ಸಾಧ್ಯವಾದಷ್ಟು ವಿಕೇಂದ್ರಿಕರಿಸಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ವಿದ್ಯುತ್‌ನಿಂದ ಇದು ಸಾಧ್ಯ. ಎರಡು ಬಗೆಯ ಅರ್ಥವ್ಯವಸ್ಥೆಗಳಿದ್ದರೆ, ಒಂದನ್ನೊಂದು ಮೆಟ್ಟಿ ನಿಲ್ಲಬಹುದು ಅಥವಾ ಎರಡರ ನಡುವೆ ಸಂಘರ್ಷ ಸಾಧ್ಯ.

"....ನಾನು ಹಿಂದ್ ಸ್ವರಾಜ್ ಓದಿದ್ದು ಅನೇಕ ವರ್ಷಗಳ ಹಿಂದೆ. ನನ್ನ ಮನಸ್ಸಿನಲ್ಲಿ ಅದರ ಅಸ್ಪಷ್ಟ ಚಿತ್ರವಿದೆ. ಇಪ್ಪತ್ತು ವರ್ಷ ಅಥವಾ ಅದಕ್ಕಿಂತ ಹಿಂದೆ ಓದಿದಾಗಲೂ ಅದು ಅವಾಸ್ತವವೆಂದು ನನಗೆ ಅನಿಸಿತು. ಆ ನಂತರದ ನಿಮ್ಮ ಭಾಷಣ, ಬರವಣಿಗೆಯಲ್ಲಿ ನೀವು ನಿಮ್ಮ ಹಳೆಯ ನಿಲುವಿನಿಂದ ಮುಂದುವರಿದು ಆಧುನಿಕ ಪ್ರವೃತ್ತಿಗಳನ್ನು ಅಭಿಮಾನದಿಂದ ನೋಡಿರುವುದನ್ನು ಗಮನಿಸಿದ್ದೇನೆ. ಆದರೆ ನಿಮ್ಮ ಹಳೆಯ ಚಿತ್ರವೇ ಮನದಲ್ಲಿ ದೃಢವಾಗಿದೆಯೆಂದು ಬರೆದಾಗ ಅಚ್ಚರಿಯಾಯಿತು. ಕಾಂಗ್ರೆಸ್ ಆ ಚಿತ್ರವನ್ನು ಕಾರ್ಯರೂಪಕ್ಕೆ ತರುವುದಿರಲಿ ಅದನ್ನು ಎಂದೂ ಪರಿಗಣಿಸಲಿರಲಿಲ್ಲ....ಪ್ರಸ್ತುತ ಸಂದರ್ಭದಲ್ಲಿ ಕಾರ್ಯರೂಪಕ್ಕೆ ತರಲಾಗದ, ಜನರ ಮನಸ್ಸಿನಲ್ಲಿ ಗೊಂದಲ ಮಾತ್ರ ಸೃಷ್ಟಿಸುವ ಇಂಥ ವಿಷಯಗಳ ಬಗ್ಗೆ ಚರ್ಚೆ ನಡೆಸುತ್ತಾ ಕಾಂಗ್ರೆಸ್ ಕಾಲಹರಣ ಮಾಡಬಾರದೆಂದು ನನ್ನ ಅಭಿಪ್ರಾಯ. ಹಿಂದ್ ಸ್ವರಾಜ್ ಬರೆದು 38 ವರ್ಷಗಳಾದವು. ಅಲ್ಲಿಂದೀಚೆಗೆ ಜಗತ್ತು ಸಂಪೂರ್ಣ ಬದಲಾಗಿದೆ. ಬಹುಶಃ ಅಡ್ಡದಾರಿ ಹಿಡಿದಿರಬಹುದು. ಈ ವಿಷಯವನ್ನು (ಹಿಂದ್ ಸ್ವರಾಜ್) ಪರಿಗಣಿಸಬೇಕಾದರೂ ಪ್ರಚಲಿತ ವಿಚಾರ, ಶಕ್ತಿಗಳು, ಮಾನವ ಸಂಪನ್ಮೂಲ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಅದು ಅವಾಸ್ತವವಾಗುತ್ತದೆ. ಜಗತ್ತು ಆತ್ಮಹತ್ಯೆಯೆಡೆಗೆ ಹೋಗುತ್ತಿದೆ ಎಂಬ ನಿಮ್ಮ ಮಾತು ನಿಜ. ನನಗೂ ಹಾಗೆನಿಸಿದೆ. ಆದರೆ ಈ ದುಷ್ಟತನವನ್ನು ಹೋಗಲಾಡಿಸಿ ಹಿಂದಿನಂತೆ ಒಳ್ಳೆಯದನ್ನು ಉಳಿಸಿಕೊಳ್ಳುವುದೇ ನಮ್ಮ ಮುಂದಿರುವ ಸಮಸ್ಯೆ. ಪ್ರಸ್ತುತ ಪರಿಸ್ಥಿತಿಯಲ್ಲೂ ಒಳ್ಳೆತನ ಇದ್ದೇ ಇದೆ....ನಿಮ್ಮ ಪ್ರೀತಿಯ ಜವಾಹರಲಾಲ್"

ಎರಡು ವಿಭಿನ್ನ ದೃಷ್ಟಿಕೋನದ ರಾಷ್ಟ್ರ ನಿರ್ಮಾಣದ ಪ್ರಜ್ಞೆ ಅಧಿಕೃತವಾಗಿ ಹೋಳಾದ ಚಾರಿತ್ರಿಕ ಸನ್ನಿವೇಶವನ್ನು ಈ ಪತ್ರ ವ್ಯವಹಾರ ಚಿತ್ರಿಸುತ್ತದೆ. ಅದಕ್ಕೆ ಕಾರಣವಿಲ್ಲದಿಲ್ಲ.

ಹೆಚ್ಚು ಕಡಿಮೆ ಕಳೆದ ನೂರು ವರ್ಷಗಳಿಂದ ಗಾಂಧಿಯವರನ್ನು ಅರ್ಥ ಮಾಡಿಕೊಂಡಿರುವುದಕ್ಕಿಂತಲೂ ತಪ್ಪಾಗಿ ಅರ್ಥೈಸಿರುವುದೇ ಹೆಚ್ಚು. ಆದರೂ ಅವರು ಪ್ರತಿಯೊಂದು ಬಿಕ್ಕಟ್ಟಿನ ಸಮಯದಲ್ಲೂ ಸಾಕ್ಷಿಪ್ರಜ್ಞೆಯಾಗಿ ನಮ್ಮೆದುರು ನಿಲ್ಲುತ್ತಾರೆ. ಮಾನವೀಯತೆಯನ್ನು ಆರಾಧಿಸುವ, ಆಚರಿಸುವ ಜನರೆಲ್ಲರಿಗೂ ಗಾಂಧೀಜಿ ನೈತಿಕ ಶಕ್ತಿಯಾಗಿ ನಿಲ್ಲುತ್ತಾರೆ. ಆದರೆ ಜನಮಾನಸದಲ್ಲಿ ಅವರು ಉಳಿದಿರುವುದು ಅವರನ್ನು ಅರ್ಥಮಾಡಿಕೊಂಡ ರೀತಿಯಿಂದಲ್ಲ. ಅವರ ವಿಚಾರಗಳು ಸ್ಪಷ್ಟವಾಗದಿದ್ದರೂ, ಅಪ್ಪಟ ಪ್ರಾಮಾಣಿಕತೆ, ನೈತಿಕಶಕ್ತಿ ಮತ್ತು ಮೌಲ್ಯಗಳನ್ನು ಪ್ರತಿಪಾದಿಸುವ ದೃಢಸಂಕಲ್ಪಗಳ ಸಂಕೇತವಾಗಿ ಈ ಹಿನ್ನೆಲೆಯಿಂದ ಗಾಂಧೀಜಿ ಒಂದು ವರ್ಗಕ್ಕೆ ಅಧ್ಯಾತ್ಮ ಪುರುಷನಾಗಿ, ಚರ್ಚಾತೀತ ವ್ಯಕ್ತಿಯಾಗಿ, ಆತ್ಮಸ್ವರೂಪಿಯಾಗಿದ್ದಾರೆ. ಅವರ ಸಿದ್ಧಾಂತಗಳ ಆಚರಣೆ ಸಾಧ್ಯವಿಲ್ಲವಾದರೂ ಆದರ್ಶ ಪುರುಷ. ಅವರ ಪಾಲಿಗೆ ಮಹಾತ್ಮ. ಆ ವರ್ಗಕ್ಕೆ ಗಾಂಧೀಜಿಯನ್ನು ಚರ್ಚೆಗೆಳೆಯುವುದು ದೈವದ್ರೋಹವನ್ನು ಪ್ರಚೋದಿಸಿದಂತೆ. ಮತ್ತೊಂದು ವರ್ಗಕ್ಕೆ ಅವರು ಧಾರ್ಮಿಕ ಶಠರಾಗಿ, ವೈಜ್ಞಾನಿಕ ಮನೋಧರ್ಮ ರಹಿತರಾಗಿ, ತಾಂತ್ರಿಕ ಪ್ರಗತಿಗೆ ವಿರೋಧಿಯಾಗಿ ಗೋಚರಿಸುತ್ತಾರೆ. ಅವರ ಪಾಲಿಗೆ ಗಾಂಧಿ ಪ್ರತಿಗಾಮಿ. ಅದೇ ವೇಳೆ ಸಂಪ್ರದಾಯ ನಿಷ್ಠರಾದ, ಚಲನರಹಿತ ಸಮಾಜದಲ್ಲಿ ನಂಬಿಕೆಯಿರದ ಜಡಧರ್ಮ ಪಾಲಕರಿಗೆ ಗಾಂಧೀಜಿ ಪರಂಪರೆಯನ್ನು ಉಲ್ಲಂಘಿಸುವ, ಅನೇಕ ಬಗೆಯ ಸಂಕರಗಳಿಗೆ, ಸಾಮಾಜಿಕ ಕ್ಷೋಭೆಗೆ ಕಾರಣನಾಗುವ ಪಾಷಂಡಿಯಂತೆ ಕಾಣುತ್ತಾರೆ. ಕೊನೆಯ ಈ ಎರಡೂ ವರ್ಗಕ್ಕೆ 'ಗಾಂಧಿ' ಹತರಾಗಬೇಕಾದ ವ್ಯಕ್ತಿ. ಅವರ ಸಿದ್ಧಾಂತಗಳೆಲ್ಲ ಇತಿಹಾಸದ ಕಸದ ಬುಟ್ಟಿ ಸೇರಲು ಅರ್ಹ.

ಗಾಂಧೀಜಿಗೆ ಅಂಟಿದ್ದ ಈ ದ್ವಂದ್ವ ಬಹಳ ಹಳೆಯದು. ಇನ್ನು ಅದು ಹಾಗೆಯೇ ಉಳಿದಿದೆ. ಆದರೆ ಗಾಂಧಿ ದ್ವಂದ್ವವನ್ನು ಪ್ರತಿನಿಧಿಸುತ್ತಿರಲಿಲ್ಲ. ಅವರ ಚಿಂತನೆಯಲ್ಲಿ ಸ್ಪಷ್ಟತೆಯಿತ್ತು. ಬದುಕಿನ ಬಗೆಗೆ ಅವರ ಪೂರ್ಣದೃಷ್ಟಿ ಮತ್ತು ಸೌಹಾರ್ದ ಮನಸ್ಸನ್ನು ಅವರ ಆರಾಧಕರೂ ಮತ್ತು ಕಡು ವಿರೋಧಿಗಳಿಬ್ಬರೂ ಗ್ರಹಿಸಲಿಲ್ಲ. ಗಾಂಧೀವಾದವನ್ನೇ ಬದುಕಿನುದ್ದಕ್ಕೂ ಉಸಿರಾಡಿದವರಿಗೂ ಅದು ಸಾಧ್ಯವಾಗಲಿಲ್ಲ. ಮಹಾತ್ಮ ಆಗಿದ್ದ ಅವರ ಪಾಲಿಗೆ ಗಾಂಧೀಜಿ ಕೇವಲ ಆದರ್ಶಪುರುಷ. ಗಾಂಧೀವಾದವನ್ನು ತಮ್ಮ ಶುಕಭಾಷೆಯಲ್ಲಿ ಬಿತ್ತರಿಸುತ್ತಾ ಕಾಲ ಕಳೆದವರೇ ಹೆಚ್ಚು. ಆ ಕಾಯಕ ಇಂದಿಗೂ ಮುಂದುವರೆದಿದೆ.

ನಮ್ಮ ಬಂಧನಕಾರಿ ವ್ಯವಸ್ಥೆಯನ್ನು ಭಾರತೀಯ ಜೀವನದರ್ಶನ ಮತ್ತು ನಾಗರಿಕತೆ ಕೇವಲ ರೂಪಕಗಳ ಮೂಲಕವೇ ನಿಯಂತ್ರಿಸಿತ್ತು. ಅಂಥ ವ್ಯವಸ್ಥೆಯನ್ನು

ಪೋಷಿಸಿತ್ತು. ಗಾಂಧೀಜಿ ಆ ಮಾನವ ವಿರೋಧಿ ರೂಪಕಗಳನ್ನು ತಮ್ಮ ಶಕ್ತಿಶಾಲಿ ರೂಪಕ, ಉಪಮೆಗಳಿಂದಲೇ ಛಿದ್ರಗೊಳಿಸಿದರು. ಗಾಂಧೀಜಿಯ ಈ ಕ್ರಿಯೆ ನೆನೆದಾಗ ಚಾರಿತ್ರಿಕ ಚಿತ್ರವೊಂದು ಮನಸಿನಂಗಳಕ್ಕೆ ಇಣುಕಿ ಹಾಕುತ್ತದೆ. 1880ರ ದಶಕದಿಂದ 1910ರ ದಶಕದವರೆಗೆ ಕಾಂಗ್ರೆಸ್ ಭಾರತೀಯ ಜನರಿಗೆ ಹೆಚ್ಚು ಸೌಲಭ್ಯಗಳನ್ನು ಕೇಳುವ ಮನವಿದಾರ ಸಂಸ್ಥೆಯಾಗಿತ್ತು. ನಾಯಕರ ಭಾಷಾ ಪ್ರೌಢಿಮೆ, ವಾದಕೌಶಲ್ಯ ಪ್ರದರ್ಶನಕ್ಕೆ ಅದೊಂದು ವೇದಿಕೆ. ಕಾಂಗ್ರೆಸ್‌ನ ಒಂದು ಸಮಾವೇಶದಲ್ಲಿ ಮೊದಲ ಬಾರಿಗೆ ಭಾಗವಹಿಸಲು ಬಂದ ಗಾಂಧೀಜಿ 'ಮೌನ' ತಾಳಿದರು. ವೇದಿಕೆಯಲ್ಲಿ ಅಬ್ಬರದ ದನಿಯಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ, ಮನವಿ – ಎರಡನ್ನೂ ಕೊಡುತ್ತಿದ್ದ ನಾಯಕರಿಂದ ನುಸುಳಿ ಹೊರಬಂದರು. ಸಮಾವೇಶದ ಶೌಚಾಲಯಗಳಲ್ಲಿ ತುಂಬಿದ್ದ ಮಲವನ್ನು ಪೊರಕೆ ಹಿಡಿದು ಗುಡಿಸಲಾರಂಭಿಸಿದರು. ಐದು ಸಾವಿರ ವರ್ಷಗಳ ಕಾಲ ಮಲದ ಮೇಲೆ ನಿದ್ರಿಸಿ 'ಕಾಯಕ'ವನ್ನು ಹೀನಾಯ ಸ್ಥಿತಿಗೆ ತಂದಿದ್ದ ಭಾರತದ ಜಡತ್ವದ ವಿರುದ್ಧ ಸಮರ ಸಾರಿದರು. ಐದುಸಾವಿರ ವರ್ಷಗಳಿಂದ ಅನೂಚಾನವಾಗಿ ನಡೆದು ಬಂದ ವರ್ಣಾಶ್ರಮ ಧರ್ಮ ಪದ್ಧತಿಯನ್ನು ತೊಳೆಯುತ್ತಿದ್ದ ಗಾಂಧೀಜಿಯ ಕೈಯಲ್ಲಿ ಪೊರಕೆ ಹೊಸ ರೂಪಕ ಪಡೆಯಿತು.

ಭಾರತದ ಅಂದಿನ ನಾಯಕರು ಭಾರತದ ಸಮಸ್ಯೆಗಳಿಗೆ ಭಾರತದ್ದೇ ಆದ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು. ಗ್ರಾಮಭಾರತದ ವೈಲಕ್ಷಣ್ಯಗಳಿಗೆ, ಭಾರತೀಯ ಸಮಾಜದ ರೋಗಲಕ್ಷಣಗಳಿಗೆ ಅವರು ಅಪರಿಚಿತರಾಗಿದ್ದರು. ಪಶ್ಚಿಮದ ಸಂಸತ್ ಸದನದ ಬೌದ್ಧಿಕ ಚರ್ಚೆಯಿಂದ ಪ್ರಭಾವಿತರಾಗಿದ್ದ ಅವರು ತಮ್ಮ ಭಾಷಾ ನಿಪುಣತೆ, ವಾಗಾಡಂಬರದಿಂದ ಬ್ರಿಟನ್ ಸಾಮ್ರಾಜ್ಯದ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದರು. ಅವರ ಗೊಣಗಾಟವೆಲ್ಲ ಒಂದೂವರೆ ಶತಮಾನಗಳ ಕಾಲ ಕೈಗಾರಿಕಾ ಕ್ರಾಂತಿಯ ಭೋಗವಸ್ತುಗಳ ಸವಿಯನ್ನು ನಿರಾಕರಿಸಿದ ಈಸ್ಟ್ ಇಂಡಿಯಾ ಕಂಪನಿಯ ವಿರುದ್ಧ ಎದ್ದ ದನಿಯಾಗಿತ್ತು. ತಾಂತ್ರಿಕ ಪ್ರಗತಿ, ಬೃಹತ್ ಕೈಗಾರಿಕೆ, ಪಶ್ಚಿಮದ ವಿಜ್ಞಾನ ಮತ್ತು ಅಲ್ಲಿನ ಜೀವನಶೈಲಿ ಭಾರತದ ವಿಮೋಚನೆಗೆ ದಾರಿಯೆಂದು ಭಾವಿಸಿದ್ದರು. ಸ್ವಾತಂತ್ರ್ಯದ ನಂತರ ಭಾರತದ ವಿಮೋಚನೆಗಾಗಿ ಇದೇ ಮಾದರಿಗಳನ್ನು ಆಹ್ವಾನಿಸಲಾಯಿತು. ಆದರೆ ಗಾಂಧೀಜಿ ಬೃಹತ್ ಕೈಗಾರಿಕೆಗಳ ವಿರುದ್ಧ 'ಚರಕ'ವನ್ನು ಸವಾಲಾಗಿ ಒಡ್ಡಿದರು. ಭೋಗದ ವಿರುದ್ಧ ತುಂಡು ಪಂಚೆಯ ಸರಳತೆಯನ್ನು ಪ್ರತಿಪಾದಿಸಿದರು. ಅದೇ ರೀತಿ ಗ್ರಾಮ ಸ್ವರಾಜ್, ಸ್ವಾವಲಂಬಿ ಹಳ್ಳಿಗಳನ್ನು ಕುರಿತ 'ಹಿಂದ್ ಸ್ವರಾಜ್' ಪ್ರಣಾಳಿಕೆಯನ್ನು ಬರೆದರು. ಆದರೆ ಗಾಂಧೀಜಿಯವರ ಸಿದ್ಧಾಂತ ಮತ್ತು ಪರಿಕಲ್ಪನೆಗಳೆಲ್ಲವನ್ನು ಕುಚೋದ್ಯದ ನಡುವೆ ಕೈಬಿಡಲಾಯಿತು.

ಆದರೆ ನಿಜವಾದ ದುರಂತವೆಂದರೆ ನಾವು ಅವರನ್ನು ಕೈಬಿಟ್ಟ ಸಂದರ್ಭ. ಬುದ್ಧ, ಬಸವಣ್ಣ, ಕ್ರಿಸ್ತ, ಮುಂತಾದ ದಾರ್ಶನಿಕರ ತತ್ವಗಳೆಲ್ಲ ಕೇವಲ ತತ್ವಗಳಾಗಿ ಉಳಿಯದೆ ಸಾಮಾಜಿಕ ಆಚರಣೆಗಳಾಗಿ ಜಾರಿಗೊಂಡವು. ಆದ್ದರಿಂದಲೇ ಅವುಗಳ ಸತ್ಯಾಸತ್ಯತೆ, ಸಾಮಾಜಿಕ ಸಂಘರ್ಷದ ನಿಕಷದಲ್ಲಿ ಹೊಸ ರೂಪು ಪಡೆಯುತ್ತಾ, ಹೊಸ ಅರ್ಥ ವಿಸ್ತರಿಸುತ್ತಾ ಜನಸಮುದಾಯವನ್ನು ಮುನ್ನಡೆಸಿದವು. ಆದರೆ ಗಾಂಧೀಜಿಯವರ ತತ್ವಗಳನ್ನು ಪ್ರಯೋಗಿಸಲು ನಾವು ಸಿದ್ಧರಿರಲಿಲ್ಲ. ಗಾಂಧಿಯವರ ಸಿದ್ಧಾಂತಗಳನ್ನೆಲ್ಲ ಆಚರಣೆಗೆ ಬಾರದಂತೆ ತಡೆಯುವಲ್ಲಿ ನಮ್ಮ ಮನಸ್ಸು ಯಶಸ್ವಿಯಾಯಿತು. ಸ್ವಾತಂತ್ರ್ಯಾನಂತರ ಗಾಂಧೀ ತತ್ವಗಳನ್ನು ಐದು ದಶಕಗಳವರೆಗೆ ಪ್ರಯೋಗಿಸಬಲ್ಲ ಸಾಮರ್ಥ್ಯ ನಮಗಿತ್ತು. ಆ ವೆಚ್ಚವನ್ನು ಹೊರಬಲ್ಲ ಶಕ್ತಿಯೂ ಇದ್ದಿತು. ಖಂಡಿತವಾಗಿಯೂ ಗಾಂಧೀಜಿ ಅತಿ ಘೋರ ವೆಚ್ಚದ ಪ್ರಯೋಗವೂ ಆಗುತ್ತಿರಲಿಲ್ಲ. ಹಾಸ್ಯಾಸ್ಪದವೂ ಆಗುತ್ತಿರಲಿಲ್ಲ. ಆದರೆ ಈ ಲೇಖನದ ಆರಂಭದಲ್ಲಿರುವ ಗಾಂಧೀಜಿಯ ಪತ್ರದಲ್ಲಿರುವ ಹಿಂದ್ ಸ್ವರಾಜ್‌ನ ಪರಿಕಲ್ಪನೆಯನ್ನು ಸಾರಾಸಗಟಾಗಿ ತಳ್ಳಿಹಾಕಲಾಯಿತು. ಗಾಂಧೀಜಿಯವರ ಹಳ್ಳಿ ನಿಷ್ಫಲವಾದ, ಹಸಿಹಸಿಯಾದ ಉತ್ಪಾದನಾ ಸಾಮರ್ಥ್ಯವಿಲ್ಲದ ಜಡಘಟಕವೆಂದು ಬಣ್ಣಿಸಿದ ನೆಹರೂರವರು ಬೃಹತ್ ಕೈಗಾರಿಕೆ ಮತ್ತು ಪಶ್ಚಿಮದ ತಂತ್ರಜ್ಞಾನದಲ್ಲಿ ಭಾರತದ ವಿಮೋಚನೆಯನ್ನು ಕಂಡುಕೊಂಡರು. ಯೂರೋಪಿನ ಚಾರಿತ್ರಿಕ ದೃಷ್ಟಾಂತಗಳಿಂದ ಸಂಮೋಹಿತರಾಗಿದ್ದ ನೆಹರೂರವರ ಮುಂದೆ 'ಆಧುನಿಕ ದೇವಾಲಯ'ಗಳ ನಿರ್ಮಾಣದ ಕನಸಿತ್ತು. ಸಹಜವಾಗಿ ಗಾಂಧೀಜಿಯವರ ಹಿಂದ್ ಸ್ವರಾಜ್‌ನ ಪ್ರಯೋಗಗಳು ಅವಾಸ್ತವವಾಗಿ ಕಂಡವು. ಸ್ವಾತಂತ್ರ್ಯಾನಂತರದ ಯುಗ ನಮ್ಮ ಸಾರ್ವಭೌಮತ್ವದ ಮೆರುಗನ್ನು ಹೆಚ್ಚಿಸುವ ಕೈಗಾರಿಕೆ ಮತ್ತು ಮಿಲಿಟರಿಯ ಅಭಿವೃದ್ಧಿಯಲ್ಲೇ ಬಳಕೆಯಾಯಿತು. ಎರಡು ವಿಭಿನ್ನ ಪಂಥದ ವ್ಯಕ್ತಿಗಳು ಅಭಿವ್ಯಕ್ತಿಸಿದ ರಾಷ್ಟ್ರೀಯ ಪ್ರಜ್ಞೆ ಹೋಳಾದ ದುರಂತದಲ್ಲಿ ಭಾರತದ ಜನತೆ ಬಳಲುವಂತಾಯಿತು.

ಗಾಂಧಿಯವರನ್ನು ಆಳವಾಗಿ ಅಭ್ಯಾಸ ಮಾಡಿದಂತೆಲ್ಲ ಅಚ್ಚರಿಯ ತೆರೆಗಳೇಳುತ್ತವೆ. ಆಧುನಿಕ ಜ್ಞಾನ ವಿವರಿಸುವ ರೀತಿಯಿಂದ ನೋಡಿದರೆ ಅವರು ರಾಜನೀತಿಜ್ಞರಲ್ಲ. ಸಮರ ತಜ್ಞರಲ್ಲ. ಅರ್ಥಶಾಸ್ತ್ರಜ್ಞರೂ ಅಲ್ಲ. ತತ್ವಜ್ಞಾನಿಯಲ್ಲ. ಅಪಾರ ಓದಿನ ಬುದ್ಧಿಜೀವಿಯೂ ಅಲ್ಲ. ಪಾಂಡಿತ್ಯದ ಶಿಖರವೇರಿದವರಲ್ಲ. ಸಾಹಿತಿಯಲ್ಲ. ವಿಜ್ಞಾನಿಯಂತೂ ಮೊದಲೇ ಅಲ್ಲ. ಆದರೆ ತಮ್ಮ ಬದುಕನ್ನೆ ಪ್ರಯೋಗಗಳಿಗೆ ಒಡ್ಡಿಕೊಂಡ ಅವರು ಆಧುನಿಕ ವಿಜ್ಞಾನ ಯಾವುದನ್ನು ಮೌಢ್ಯವೆಂದು ಕರೆಯುವುದೋ ಆ ಮೂಲಕವೇ ಹೊಸ ದರ್ಶನವೊಂದನ್ನು ನೀಡಿದರು. ಅಧಿಕಾರ ವಿಕೇಂದ್ರಿಕರಣದ ರಾಜನೀತಿಯನ್ನು ಮಂಡಿಸಿದರು. ಆಯುಧವಿಲ್ಲದೇ ಹೋರಾಡುವ ಸಮರತಂತ್ರವೊಂದನ್ನು ರೂಪಿಸಿದರು. ಅರ್ಥಶಾಸ್ತ್ರಕ್ಕೆ ಹೊಸ ಭಾಷ್ಯ ಬರೆದರು. ಪರಂಪರಾನುಗತ

ಸಮಾಜ ವಿಫಲವಾಗುತ್ತದೆಂಬ ನಂಬಿಕೆಯನ್ನು ತಿರಸ್ಕರಿಸಿದರು. ನೈಸರ್ಗಿಕ ಲಯಗಳ ಜೊತೆ ಮೂಡಿಬಂದ ಅನುಭವವೇ ನಿಜವಾದ ವಿಜ್ಞಾನವೆಂಬುದನ್ನು ತೋರಿಸಿದರು. ಪಶ್ಚಿಮದ ತತ್ವಜ್ಞಾನ, ತರ್ಕಶಾಸ್ತ್ರ ಮತ್ತು ವಿಜ್ಞಾನವೆಲ್ಲವೂ ನೀತಿ ನಿರ್ಲಿಪ್ತ ಹಾಗೂ ಮೌಲ್ಯರಹಿತವಾದುದರಿಂದ ಅದು ಜನವಿರೋಧಿಯಾಗಿಯೇ ಉಳಿಯುವ ಸತ್ಯವನ್ನು ಮನಗಂಡರು. ಮಾನವನಿಂದಲೇ ಸೃಷ್ಟಿಗೊಂಡ ತಂತ್ರಜ್ಞಾನ ಅವನ ಮೇಲೆ ಯಜಮಾನಿಕೆ ಸ್ಥಾಪಿಸುವ ದುರಂತದ ಬಗ್ಗೆ ಎಚ್ಚರಿಸಿದರು. ಬೃಹತ್ ಯಂತ್ರಗಳು ತರುವ ಅಪಾರ ಹಿಂಸೆ ಮತ್ತು ಅರಾಜಕತೆಯ ಬಗ್ಗೆ ಭವಿಷ್ಯ ನುಡಿದರು. ಬೃಹತ್ ಕೈಗಾರಿಕೆ ಸೃಷ್ಟಿಸುವ ಸಂಪತ್ತು ಮತ್ತು ಸಾಮ್ರಾಜ್ಯ ವಿಸ್ತರಣೆಯ ಮೋಹ ಮಾನವೀಯತೆ ವಿರುದ್ಧ ನಡೆಸುವ ಅತ್ಯಾಚಾರವೆಂದು ಘೋಷಿಸಿದರು. ನೀತಿ ಸಂತೃಪ್ತ ಮತ್ತು ಮೌಲ್ಯಭರಿತ ಬದುಕು ಮಾತ್ರವೇ ಮಾನವೀಯತೆಗೆ ಆಶ್ರಯ ನೀಡುವ ಪರಿಯನ್ನು ತೋರಿಸಿಕೊಟ್ಟರು. ವೈಜ್ಞಾನಿಕ ತರ್ಕಕ್ಕೆ ಬದಲು ಧ್ಯಾನದ ಭಾವ ಮತ್ತು ಪ್ರಜ್ಞೆಯ ಆಳದಲ್ಲಿ ಗೋಚರಿಸುವ ಬೆಳಕಿನಲ್ಲಿ ಅವರು ಮಾನವನ ಸಂಕಷ್ಟ ಮೂಲವನ್ನು ಗುರುತಿಸಿದರು. ಬುದ್ಧ 'ಆಸೆ'ಯೆಂದು ಕರೆದ ಆ ಮೂಲವನ್ನು ಗಾಂಧೀಜಿ 'ಹಿಂಸೆ' ಎಂದು ಕರೆದರು. 'ಸತ್ಯ', 'ಅಹಿಂಸೆ'ಯೆಂಬ ಅಮೂರ್ತಭಾವಗಳೇ ಮನುಕುಲದ ಬಿಡುಗಡೆಗೆ ತಾರಕಮಂತ್ರವೆಂಬ ಗಾಂಧಿಯವರ ಅಭಿಪ್ರಾಯವು ಪಾಶ್ಚಿಮಾತ್ಯ ಜ್ಞಾನದ ಶಿಸ್ತಿಗೆ ಒಳಗಾದ ಮನಸ್ಸಿಗೆ ಸ್ಪಷ್ಟವಾಗಲಿಲ್ಲ. ಹಾಗಾಗಿ ಪಾಶ್ಚಿಮಾತ್ಯ ಜ್ಞಾನದ ಪ್ರಮಾಣಗಳಿಂದ ವಿಜ್ಞಾನಿ, ತತ್ವಜ್ಞಾನಿ, ರಾಜನೀತಿಜ್ಞ, ಅರ್ಥಶಾಸ್ತ್ರಜ್ಞನಾಗಿ ಗೋಚರಿಸಿದೆ ಗೊಡ್ಡು ಸಂಪ್ರದಾಯವಾದಿಯಾಗಿ ಮೌಢ್ಯದ ಆರಾಧಕರಾಗಿ, ಪರಂಪರೆಯ ಪೋಷಕರಾಗಿ ಗಾಂಧಿ ಚಿತ್ರಿತವಾದರು. ಪಶ್ಚಿಮದ ಮನಸ್ಸು ಉಣಬಡಿಸಿದ ಭೋಗ ಸಂಸ್ಕೃತಿಯ ಅರಿವಳಿಕೆಯಲ್ಲಿ ಮೈಮರೆತ ಭಾರತದ ಜನತೆ ಗಾಂಧೀಜಿ ಬಳಸಿದ ಭಾರತದ್ದೇ ಆದ ರೂಪಕ, ಉಪಮೆ, ಸಂಕೇತಗಳನ್ನು ಅರಿಯಲಾರದೆ, ಅವರು ಸೂಚಿಸಿದ ಪರಿಹಾರಗಳಿಗೆ ಬೆನ್ನು ತಿರುಗಿಸಿತು.

ಆದರೆ ಇಂದು ಉದ್ದೇಶವಿಲ್ಲದೇ ಅಭಿವೃದ್ಧಿಯಾಗುತ್ತಿರುವ ಬಂಡವಾಳಶಾಹಿ ಸಮಾಜಗಳು ಹಿಂಸಾಕೂಪಗಳಾಗುತ್ತಿವೆ. ಸಂಪತ್ತು ಸೃಷ್ಟಿಸುವ ಹಿಂಸೆಗಳು ನಿಯತವಾಗಿ ಭುಗಿಲೇಳುತ್ತಿವೆ. ವಿಯಟ್ನಾಂ ದುರಂತ, ಕೊಲ್ಲಿಯುದ್ಧದ ಕಾರ್ಮೋಡಗಳು ಆಗಾಗ್ಗೆ ಘನೀಕೃತವಾಗುತ್ತವೆ. ಹಿಂಸೆಯಿಂದ ನಿರ್ವೀರ್ಯವಾಗುತ್ತಿರುವ ಸಮಾಜವೊಂದು ಈಗ ನಿಧಾನವಾಗಿ ಗರಿಗಟ್ಟಿಕೊಳ್ಳುತ್ತಿದೆ. ಹಿಂಸೆಯನ್ನೆ ಉಂಡು, ಹಿಂಸೆಯನ್ನೇ ಉಣಿಸುವ ಅಭಿವೃದ್ಧಿಶೀಲ, ಸಮರಶಕ್ತ ರಾಷ್ಟ್ರದ ಆರ್ಥಿಕ ಮತ್ತು ಸೈನಿಕ ಸಂಕೇತಗಳೇ ನೆಲಕಚ್ಚಿದ್ದು ಹಿಂಸೆ ತರುವ ಫಲ ಏನು ಎಂಬುದು ಸಾಬೀತಾಗಿದೆ. ಜಗತ್ತನ್ನೇ ಉರಿಸಿ ಭಸ್ಮ ಮಾಡುವ ಸಾಮರ್ಥ್ಯವಿದ್ದ ರಾಷ್ಟ್ರ ವಿಯೆಟ್ನಾಂನ ಸ್ವಾಭಿಮಾನಿಗಳ

ಮಾನವೀಯ ಶಕ್ತಿಯೆದುರು ತಲೆಬಾಗಿದ್ದು ಸತ್ಯ, ಅಹಿಂಸೆಗಳಿಗೆ ಸಂದ ಜಯದಂತೆ ಕಾಣುತ್ತದೆ. ಶೋಷಣ ಸ್ವರೂಪದ ಹೊಸ ಆರ್ಥಿಕ ಸಿದ್ಧಾಂತಗಳನ್ನು ಹೊಸೆಯುವ, ಸಮರಶೀಲ ನಕಾಶೆಯನ್ನು ಕ್ಷಣಾರ್ಧದಲ್ಲೇ ತಯಾರಿಸುವ ತಜ್ಞರಿಗೆ ತಮ್ಮ ಕಾರ್ಯಗಳ ಮೂಲಕ ಶಾಂತಿಯುತ ಜಗತ್ತನ್ನು ನಿರ್ಮಿಸಲಸಾಧ್ಯವೆಂಬುದು ಇದೀಗ ಸ್ಪಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗಾಂಧೀಜಿ ಬಳಸಿದ ರೂಪಕ, ಉಪಮೆ, ಸಂಕೇತಗಳೆಲ್ಲವೂ ಹೊಸ ಅರ್ಥಸಾಧ್ಯತೆಯೊಂದಿಗೆ ಮನುಕುಲದ ವಿಮೋಚನೆಗೆ ಮುಂದಾಗುತ್ತಿವೆ. ಚರಕ, ಪೊರಕೆ, ಉಪ್ಪು, ಸತ್ಯಾಗ್ರಹ, ಅಹಿಂಸೆ, ನೀತಿ, ಆತ್ಮವೇದನೆ, ಆತ್ಮಬಲಿದಾನ, ಅಂತರಂಗದ ದನಿ, ಪ್ರಾರ್ಥನೆ ಇತ್ಯಾದಿಗಳೆಲ್ಲ ಪ್ರಪಂಚದ ಜನಾಂದೋಲನಗಳಲ್ಲಿ ಮರಳಿ ಸ್ಥಾನ ಗಳಿಸಿಕೊಳ್ಳುತ್ತಿವೆ. ಈಗ ಗರಿಗಟ್ಟಿಕೊಳ್ಳುತ್ತಿರುವ ಇಕಾಲಜಿ ಚಳವಳಿ, ಪರ್ಯಾಯ ತಂತ್ರಜ್ಞಾನ, ಗ್ರೀನ್ ಪೀಸ್ ಮೂವ್‌ಮೆಂಟ್, ಶಾಂತಿ ಚಳವಳಿ, ಜಾಗತಿಕ ರೈತಚಳವಳಿ, ನಿಶ್ಶಸ್ತ್ರೀಕರಣ ಇತ್ಯಾದಿಗಳಲ್ಲಿ ಗಾಂಧೀಜಿಯವರ ಪ್ರಭಾವ, ಸಿದ್ಧಾಂತಗಳನ್ನು ಗುರುತಿಸಲು ಸಾಧ್ಯವಿದೆ. ಹಾಗಾಗಿ ಗಾಂಧೀಜಿಯ ಮರು ಓದು ಹೆಚ್ಚು ಪ್ರಸ್ತುತ ಮತ್ತು ಅರ್ಥಪೂರ್ಣ.

ಕೊನೆಯದಾಗಿ ಹೇಳುವುದಿಷ್ಟೆ. ಜಗತ್ತಿನ ರಾಷ್ಟ್ರಗಳು ಅಭಿವೃದ್ಧಿಗಾಗಿ ಪೈಪೋಟಿ ನಡೆಸುತ್ತಿವೆ. ಭಾರತ ಅದರಲ್ಲಿ ಹಿಂದೆ ಬಿದ್ದಿಲ್ಲ. ಕೈಗಾರಿಕಾ ಕ್ರಾಂತಿಯಲ್ಲಿ ಸೃಷ್ಟಿಯಾದ ವಸ್ತುಗಳ ಒಂದೂವರೆ ಶತಮಾನದ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಭಾರತ ದಾಪುಗಾಲು ಹಾಕಿದೆ. ಭಾರತೀಯರಿಗೆ ಸಹಜವಾದ 'ದುರಾಸೆ' ಮತ್ತು 'ಆಸ್ತಿ ಸಂಚಯ' ಮೋಹವನ್ನು ಜಾಗತೀಕರಣದಂಥ ಅರ್ಥವ್ಯವಸ್ಥೆಗಳು ಸಹಜವಾಗಿ ಬಳಸಿಕೊಳ್ಳುತ್ತಿವೆ. ಆ ಭರದಲ್ಲಿ ಗ್ರಾಮಭಾರತ ಛಿದ್ರವಾಗುತ್ತಿದೆ. ನೀತಿ ನಿರ್ಲಿಪ್ತವಾದ ವಿದ್ಯೆ ಮಾನವನವ ವಿಮೋಚನೆಗೆ ಬದಲು ಜಾತಿವ್ಯವಸ್ಥೆ, ಧರ್ಮಾಂಧತೆಯನ್ನು ಪೋಷಿಸುತ್ತಿದೆ. ಈ ಹಿನ್ನೆಲೆಯಲ್ಲಿ ಗಾಂಧಿಯವರನ್ನು ತೆಗಳುವುದು ಸುಲಭ. ಅವರ ಅನುಭವಗಳನ್ನು ನಿಗೂಢ, ಭಾವುಕವೆಂದು ಕರೆಯುವುದು ಇನ್ನೂ ಸುಲಭ. ಅವರ ಸಿದ್ಧಾಂತ ಆಚರಣೆ ಯೋಗ್ಯವಲ್ಲ ಎಂದು ದೂರೀಕರಿಸುವುದು ತುಂಬಾ ಸುಲಭ. ಅವರ ತತ್ವಗಳೆಲ್ಲ ಚರಿತ್ರೆಯನ್ನು ತಿರುಗುಮಾಡಿ ಕಂದಾಚಾರಿ ಸಮಾಜಕ್ಕೆ ಒಯ್ಯುತ್ತದೆಂದು ನಂಬಿಸುವುದು ಮತ್ತಷ್ಟೂ ಸುಲಭ. ಆದರೆ ಗಾಂಧೀಜಿಯ ಉಪಮೆಯನ್ನೇ ಬಳಸಿ ಹೇಳುವುದಾದರೆ, ಭೋಗ ಸಂಸ್ಕೃತಿಯ ಮೂಲಕ ಅಸಮಾನತೆ ಹುಟ್ಟುಹಾಕಿ, ಪ್ರಕ್ಷುಬ್ಧ ಸಮಾಜವನ್ನು ನಿರ್ಮಿಸುವ ಆಧುನಿಕತೆಗಿಂತಲೂ, ಪ್ರಾರ್ಥನೆ, ಸತ್ಯ, ಅಹಿಂಸೆಯ ಆಚರಣೆ ಹೆಚ್ಚು ಅರ್ಥಪೂರ್ಣ.

ಈ ನಿಟ್ಟಿನಲ್ಲಿ ಪ್ರೊ. ಸುನಿಲ್ ಸಹಸ್ರಬುಧೆಯವರ ಈ ಕೃತಿ ಒಂದು ವಿಶಿಷ್ಟ ಪ್ರಯತ್ನ. ಆಧುನಿಕ ವಿಜ್ಞಾನಕ್ಕೆ ಗಾಂಧೀಜಿಯವರು ಒಡ್ಡಿದ ಸವಾಲುಗಳನ್ನು ಚರ್ಚಿಸುತ್ತಲೇ ಗಾಂಧೀಜಿಯವರ ಸಿದ್ಧಾತಂತಗಳನ್ನು ಅಪೂರ್ವವಾದ

ದೃಷ್ಟಿಕೋನದಿಂದ ಇಲ್ಲಿ ಅವರು ಚರ್ಚಿಸುತ್ತಾರೆ. ಆಧುನಿಕ ಪಾಶ್ಚಿಮಾತ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ತರ್ಕಗಳ ಪರಂಪರೆಯ ಮಿಥ್ಯಾ ರೂಪಗಳನ್ನು ಅನಾವರಣಗೊಳಿಸಿ, ದೇಸೀ ಪರಂಪರೆಯ ಮೂಲಕ ಗಾಂಧೀಜಿ ಕಂಡ ಸತ್ಯದ ದರ್ಶನವನ್ನು ಮಾಡಿಸುತ್ತಾರೆ. ಖಂಡ ದೃಷ್ಟಿಯ ಆಧುನಿಕ ವಿಜ್ಞಾನ, ತತ್ವಶಾಸ್ತ್ರ ಮತ್ತು ತರ್ಕಶಾಸ್ತ್ರದ ವಿರೂಪಗಳನ್ನು ಗುರುತಿಸಿ, ದೇಸಿ ಪರಂಪರೆಯ ಪೂರ್ಣದೃಷ್ಟಿಯ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ಇದು ಗಾಂಧಿಯವರ ಸಿದ್ಧಾಂತಗಳ ಬಗೆಗಿನ ಹೊಸ ಓದು, ಹೊಸ ದರ್ಶನವೊಂದನ್ನು ಕಟ್ಟಿಕೊಡುವ ಕೃತಿ. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳು ರಾಜಕೀಯಕ್ಕೆ ನೀಡುವ ನಿರಂಕುಶ ಅಧಿಕಾರವು ಜನವಿರೋಧಿಯಾಗುವ ಪರಿಯನ್ನು ಗಾಂಧೀಜಿಯವರ ಪರಿಕಲ್ಪನೆಗಳಲ್ಲಿ ಸೆರೆಹಿಡಿಯಲಾಗಿದೆ. ಗಾಂಧೀಜಿ ಬಳಸುವ ಪರಿಭಾಷೆ, ರೂಪಕ, ಉಪಮೆ, ಸಂಕೇತಗಳೆಲ್ಲವೂ ಹೊಸ ಅರ್ಥ, ಭಾವಗಳೊಂದಿಗೆ ಮೂಡಿಬಂದಿವೆ. ಡಾ. ರಾಮಮನೋಹರ ಲೋಹಿಯಾ ನಂತರ ಗಾಂಧೀಜಿಯ ಸಿದ್ಧಾಂತಗಳನ್ನು ಮತ್ತೊಂದು ದೃಷ್ಟಿಯಿಂದ ಪರಿಗ್ರಹಿಸಿ ಮಂಡಿಸಿರುವ ಕೃತಿಯಿದು. ಗಾಂಧೀಜಿಯ ವ್ಯಕ್ತಿತ್ವದ ಆರಾಧನೆಯನ್ನು ಬಿಟ್ಟು ಅವರ ತತ್ವ ಸಿದ್ಧಾಂತಗಳನ್ನು ತರ್ಕಶಾಸ್ತ್ರ, ನೀತಿ ಮತ್ತು ದೇಸೀಯ ಪರಿಕಲ್ಪನೆಗಳ ಮೂಲಕ ನಿರ್ಲಿಪ್ತವಾಗಿ ವಿವರಿಸುವ ರೀತಿ ಈ ಕೃತಿಯ ವಿಶಿಷ್ಟತೆ. ಇಲ್ಲಿ ಒಂದು ಮಾತನ್ನು ಹೇಳುವುದು ಉಚಿತ. ಮೂಲ ಕೃತಿಯ ಭಾಷೆ ಸ್ವಲ್ಪ ಕಠಿಣ. ಗಾಂಧೀಜಿಯವರ ಸಿದ್ಧಾಂತಗಳನ್ನು ಅವಲೋಕಿಸಲು ಬಳಸಿರುವ ಪರಿಭಾಷೆ ಹೆಚ್ಚು ಪರಿಚಿತವಲ್ಲವಾದ್ದರಿಂದ ಅದು ಸಹಜ. ಆದರೆ ಗಾಂಧೀಜಿಯನ್ನು ಅರಿಯಲು ಹೊಸ ಪರಿಕರಗಳನ್ನು ಈ ಕೃತಿ ನೀಡಿರುವುದಂತೂ ಸ್ಪಷ್ಟವಿದೆ. ಗಾಂಧೀಜಿಯವರ ಸಿದ್ಧಾಂತಗಳು ಇಲ್ಲಿ ದೃಢರೇಖೆಗಳಿಂದ ಮೈದಳೆದಿವೆ. ಕನ್ನಡದ ಓದುಗರಿಗೆ ಇದು ಅಗತ್ಯವಾಗಿ ನೀಡಬೇಕಾದ ಕೃತಿಯೆಂದು ಭಾವಿಸಿ ಮೂಲಕೃತಿಯನ್ನು ಓದಲು ಕೊಟ್ಟು, ಅನುವಾದಿಸಲು ಪ್ರೇರೇಪಿಸಿ, ಪ್ರಕಟಣೆಗೆ ಕಾರಣರಾದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ ನನ್ನ ಮೊದಲ ಕೃತಜ್ಞತೆಗಳು ಸಲ್ಲುತ್ತವೆ.

ಹಸ್ತಪ್ರತಿಯನ್ನು ವಿವರವಾಗಿ ಓದಿ, ಪರಿಷ್ಕಾರಿಸಿ, ಮುತುವರ್ಜಿಯಿಂದ ತಿದ್ದಿ, ತೀಡಿ ಒಂದು ಹೊಸ ರೂಪವನ್ನೇ ನೀಡಿದ ನಾಡಿನ ಚಿಂತಕರಲ್ಲೊಬ್ಬರಾದ ಡಾ. ನಿ. ಮುರಾರಿ ಬಲ್ಲಾಳರಿಗೆ ನಾನು ಋಣಿಯಾಗಿದ್ದೇನೆ. ಗಾಂಧೀಜಿ ಬದುಕು, ಸಾಧನೆ ಮತ್ತು ಸಾಹಿತ್ಯದ ಬಗ್ಗೆ ಪರಿಚಯ ಮಾಡಿಕೊಟ್ಟು ಆ ನಿಟ್ಟಿನಲ್ಲಿ ಸಾಕಷ್ಟು ಓದಲು ಪ್ರೇರೇಪಿಸಿದ ಗೆಳೆಯ ಎನ್. ಎಸ್. ಶಂಕರ್‌ಗೆ ನನ್ನ ತುಂಬುಮನದ ವಂದನೆಗಳು ಸಲ್ಲುತ್ತವೆ.

ಅಕ್ಟೋಬರ್ 2, 2003 **ಕೆ. ಪುಟ್ಟಸ್ವಾಮಿ**
ಗಾಂಧಿಜಯಂತಿ

# ಮೂಲ ಲೇಖಕರ ಮಾತು

ಈ ಕೃತಿಯ ಕಲ್ಪನೆ ಮೂಡಿದ್ದು ಎಂಬತ್ತರ ದಶಕದ ಆರಂಭದಲ್ಲಿ. ಅಂದಿನಿಂದ ಎಂಬತ್ತರ ದಶಕದ ಅಂತ್ಯದವರೆಗೆ ರೈತ ಚಳುವಳಿಯಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದ ನಾನು ಆ ಆಂದೋಲನದ ಸಂಚಾಲನೆ ಮತ್ತು ಪ್ರಕಟಣೆಯ ಕಾರ್ಯಗಳಲ್ಲಿ ಮಗ್ನನಾಗಿದ್ದೆ. ಹಾಗಾಗಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ನಾನು ಬರೆದ ಟಿಪ್ಪಣಿಗಳು ವಿರಳವಾಗಿ ಎಲ್ಲೆಲ್ಲೋ ಹರಡಿಕೊಂಡಿದ್ದವು. ಈ ಬರವಣಿಗೆಗಳೆಲ್ಲ ಆ ದಶಕದ ಅಂತ್ಯದಲ್ಲಿ ಪ್ರಕಟವಾದ "ಸೈನ್ಸ್ ಅಂಡ್ ಪೊಲಿಟಿಕ್ಸ್: ಎಸ್ಸೇಸ್ ಇನ್ ಗಾಂಧಿಯನ್ ಪರ್‌ಸ್ಪೆಕ್ಟಿವ್ಸ್" (ವಿಜ್ಞಾನ ಮತ್ತು ರಾಜಕೀಯ : ಗಾಂಧಿವಾದದ ದೃಷ್ಟಿಕೋನದಲ್ಲಿ) ಎಂಬ ನನ್ನ ಕೃತಿಯಲ್ಲಿ ಪ್ರಕಟಗೊಂಡವು.

ಇದೇ ಸಮಯದಲ್ಲಿ ಪ್ರಸ್ತುತ ಕೃತಿಯ ಚಿಂತನೆಗಳೆಲ್ಲ ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ರೀಸರ್ಚ್ ಸಂಸ್ಥೆಗೆ ಮಂಡಿಸಿದ ಯೋಜನಾ ಪ್ರಸ್ತಾವನೆಯಲ್ಲಿ ಸ್ಪಷ್ಟ ರೂಪ ತಳೆದವು. ಅಲ್ಲದೆ ಆ ಚಿಂತನೆಗಳೆಲ್ಲ ನಾನು 1982 ರಿಂದಲೂ ಸಿಬ್ಬಂದಿ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಗಾಂಧಿ ಅಧ್ಯಯನ ಸಂಸ್ಥೆಯಲ್ಲಿ ಒಂದು ಸಂಶೋಧನಾ ವಿಷಯವಾಗಿಯೂ ರೂಪುಗೊಂಡಿದ್ದವು. ಈ ಕೃತಿಯ ಚಿಂತನೆಯು ಪ್ರಧಾನವಾಗಿ ಒಡಮೂಡಿದ್ದು ಮಜ್ದೂರ್ ಕಿಸಾನ್ ನೀತಿ ತಂಡ, ಪಿಪಿಎಸ್‌ಟಿ ಫೌಂಡೇಷನ್ ಮತ್ತು ನಾರಿ ಹಸ್ತಕಲಾ ಉದ್ಯೋಗ ಸಮಿತಿಯ ಕಾರ್ಯಚಟುವಟಿಕೆ ಮತ್ತು ಅಲ್ಲಿ ನಡೆದ ಚರ್ಚೆಗಳಲ್ಲಿ. ನಾನು ಸತತವಾಗಿ ತೊಡಗಿಸಿಕೊಂಡ ಚಟುವಟಿಕೆಗಳಿಂದಾಗಿ ವಿವಿಧ ಆಂದೋಲನಗಳಲ್ಲಿ ತೊಡಗಿಸಿಕೊಂಡ ರಾಜಕೀಯ ಕಾರ್ಯಕರ್ತರು, ಮಹಿಳೆಯರು ಮತ್ತು ಪುರುಷರೊಡನೆ ಅನೇಕ ವಿಚಾರಗಳನ್ನು ಚರ್ಚಿಸಲು ಸಾಧ್ಯವಾಯಿತು. ಆ ಸಂವಾದಗಳಲ್ಲಿ ಮೂಡಿಬಂದ ವಿಚಾರಗಳನ್ನು ಪುಸ್ತಕ ರೂಪದಲ್ಲಿ ತರಲು ಯತ್ನಿಸಿದೆ. ಆದರೂ ಒಂದೇ ಬಾರಿಗೆ ದೀರ್ಘವಾಗಿ ಬರೆಯಲು ಅಗತ್ಯವಾದ ಸಮಯದ ಅಭಾವವಿತ್ತು. ಇದರಿಂದಾಗಿ 1991ರಿಂದ 1995ರ ಅವಧಿಯಲ್ಲಿ ವರ್ಷಕ್ಕೊಂದು ಅಧ್ಯಾಯದಂತೆ ಈ ಕೃತಿಯನ್ನು ರಚಿಸುವಂತಾಯಿತು. ಈ ರೀತಿಯ ದೀರ್ಘಕಾಲದ ಬರವಣಿಗೆಯು ಅಧ್ಯಾಯಗಳ ನಡುವಿನ ಸಾಂಗತ್ಯವನ್ನು ಸ್ವಲ್ಪಮಟ್ಟಿಗೆ ಕುಂದಿಸಿದೆ ಎಂದು ನನಗನ್ನಿಸುತ್ತದೆ. ನನ್ನ ಕಾರ್ಯ ಬಾಹುಳ್ಯದಿಂದಾಗಿ ಕೃತಿಯ ಸುಸಂಗತ ನಿರೂಪಣೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಲೋಕವಿದ್ಯಾ ಎಂಬ ಪರಿಕಲ್ಪನೆಯು ವಿಜ್ಞಾನ, ವೈಜ್ಞಾನಿಕತೆ, ಜ್ಞಾನ ಮೀಮಾಂಸೆ ಮತ್ತು ಅದನ್ನು ಆಧರಿಸಿದ ಎಲ್ಲ ತಾತ್ತ್ವಿಕ ಪರಿಣಾಮಗಳನ್ನು ಕ್ರಿಯಾತ್ಮಕ ಚೈತನ್ಯದಿಂದ ಅವಿರತವಾಗಿ, ಸಮರ್ಥವಾಗಿ ವಿರೋಧಿಸಲು ಸಾಧ್ಯವಿರುವ ಕ್ರಾಂತಿಕಾರಿ ಚಿಂತನೆ. ಈ ಕೃತಿಯು ಅಂಥ ಲೋಕವಿದ್ಯಾ ಪರಿಕಲ್ಪನೆಯನ್ನು ಸೃಷ್ಟಿಸಿದ ಚಿಂತನಾ ವಿಧಾನದ ಒಂದು ಭಾಗ. ಲೋಕವಿದ್ಯಾ ಚಿಂತನೆಯು ಸ್ಪಷ್ಟರೂಪ ಪಡೆದ ಮೇಲೆಯೇ ಈ ಕೃತಿಯ ಕೊನೆಯ ಅಧ್ಯಾಯ 'ತರ್ಕಶಾಸ್ತ್ರ'ವನ್ನು ಬರೆದೆ. ಇದು ಬರೆದು ಐದು ವರ್ಷಗಳಾಗಿವೆ. ಈ ಅವಧಿಯಲ್ಲಿ ಲೋಕವಿದ್ಯಾ ಚಿಂತನೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಗಾಢವಾದ ಸಂವಾದಗಳು ಮತ್ತು ಚಟುವಟಿಕೆಗಳು ನಡೆದಿವೆ. ಹಾಗಾಗಿ ಈ ಕೃತಿಯ ಪ್ರಕಟಣೆ ತಡವಾಯಿತು. ವಿಜ್ಞಾನವೂ ಸೇರಿದಂತೆ ಇಪ್ಪತ್ತೊಂದನೇ ಶತಮಾನದಲ್ಲಿನ ಸಾಮ್ರಾಜ್ಯಶಾಹಿಯ ಎಲ್ಲಾ ಮುಖಗಳಿಗೆ ಸವಾಲೊಡ್ಡಲು ಅಗತ್ಯವಾದ ಮತ್ತು ಗಾಂಧಿಯ ಪುನಾರಚನೆ ಹಾಗೂ ಹೊಸಚಿಂತನೆಗಳ ಹುಟ್ಟಿಗೆ ಈ ಕೃತಿ ಉಪಯುಕ್ತವಾಗಬಹುದೆಂದು ಭಾವಿಸಿದ್ದೇನೆ.

ಇತ್ತೀಚಿನ ವರ್ಷಗಳು, ಎಲ್ಲಾ ಪ್ರಮುಖ ವಿದ್ಯಮಾನ ಮತ್ತು ಕ್ಷೇತ್ರಗಳಲ್ಲಿ ಗಮನಾರ್ಹ ಪರಿವರ್ತನೆಗಳನ್ನು ಕಂಡಿವೆ. ಸಾಮ್ರಾಜ್ಯಶಾಹಿ ತನ್ನ ಸ್ವರೂಪವನ್ನು ಒಳಗೊಂಡಂತೆ ಇಡೀ ಜಗತ್ತನ್ನೆ ಪುನಾರಚಿಸುವಂತಿದೆ. ಇಂದು ಜಾಗತೀಕರಣವೆಂದು ಕರೆಯಲಾಗುತ್ತಿರುವ ಸಾಮ್ರಾಜ್ಯಶಾಹಿ ವ್ಯವಸ್ಥೆಯು ತನ್ನ ಹೊಸ ಬಗೆಯ ದಮನಕಾರೀ ಮತ್ತು ಪಾರತಂತ್ರ್ಯ ನೀತಿಗಳ ಮೂಲಕ ಹೊಸ ರಾಜಕೀಯ ಮತ್ತು ಹೊಸ ಆರ್ಥಿಕ ವ್ಯವಸ್ಥೆಯನ್ನು ನೇರವಾಗಿ ಹೇರುತ್ತಿದೆ. ಕೈಗಾರಿಕಾ ಬಂಡವಾಳವು ಆರ್ಥಿಕ ಬಂಡವಾಳಕ್ಕೆ ಎಡೆಮಾಡಿಕೊಡುತ್ತಿದೆ. ಮಾರುಕಟ್ಟೆಯು ಹೊಸ ಗುಣಮಟ್ಟ ಮತ್ತು ವ್ಯಾಪಕತೆಯ ರೂಪವನ್ನು ತಾಳುತ್ತಿದ್ದು ಹಿಂದೆಂದಿಗಿಂತಲೂ ಹೆಚ್ಚಿನ ಅಸಮಾನ ವಿನಿಮಯವನ್ನು ಜಾರಿಗೊಳಿಸುತ್ತಿದೆ. ಬೃಹತ್ ಕೈಗಾರಿಕಾ ಘಟಕಗಳು ಇಂದು ತಮ್ಮ ಆದರ್ಶ ಆಕರ್ಷಣೆಯನ್ನು ಕಳೆದುಕೊಳ್ಳುತ್ತಿದ್ದು, ಸಣ್ಣ ಮತ್ತು ಗೃಹ ಕೈಗಾರಿಕೆಗಳ ಘಟಕಗಳಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡುತ್ತಿವೆ. ಕೈಗಾರಿಕಾ ಕಾರ್ಮಿಕ ವರ್ಗ ಹೊಸಬಗೆಯ ಕುಶಲಕರ್ಮಿಗಳ ವರ್ಗವಾಗಿ ಬದಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಉತ್ಪಾದನೆಯ ಶಕ್ತಿಗಳು ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯ ವರ್ತುಲದಿಂದ ಹೊರಕ್ಕೆ ವರ್ಗಾವಣೆಯಾಗುತ್ತಿವೆ. ಶೋಷಣೆಯ ಕೇಂದ್ರವು ಉತ್ಪಾದನಾ ಕ್ಷೇತ್ರದಿಂದ ಮಾರುಕಟ್ಟೆಯ ಕ್ಷೇತ್ರಕ್ಕೆ ಬದಲಾಗುತ್ತಿದೆ.

ಈ ಹೊಸ ವ್ಯವಸ್ಥೆಯ ಶೋಷಣಾ ತಂತ್ರವು ಜನರ ಶ್ರಮದ ಜೊತೆಗೆ ಅವರ ಜ್ಞಾನ ಮತ್ತು ಕೌಶಲ್ಯಗಳ ಕ್ಷೇತ್ರದಲ್ಲೂ ಬೇರೂರಿದೆ. ಪರಿಣಾಮವಾಗಿ, ಕಾರ್ಮಿಕ ವರ್ಗದ ಜಗತ್ತು ಎರಡನೆಯ ಸ್ಥಾನಕ್ಕೆ ಕುಸಿದು, ಕೌಶಲ್ಯಗಳ ಮೌಲ್ಯವನ್ನು ಪರಿಗಣಿಸುವ ಹೊಸ ಜಗತ್ತೇ ಮೊದಲ ಸ್ಥಾನವನ್ನು

ಆಕ್ರಮಿಸಿಕೊಳ್ಳುತ್ತಿದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ದಾಪುಗಾಲು ಹಾಕಿ ಮುನ್ನಡೆಯುತ್ತಿರುವುದರ ಮೂಲಕ ತಂತ್ರಜ್ಞಾನ ಕ್ಷೇತ್ರವೂ ಅಗಾಧ ಪರಿವರ್ತನೆಯನ್ನು ಕಾಣುತ್ತಿದೆ. ಆಧುನಿಕ ಮತ್ತು ಪಾರಂಪರಿಕ ತಂತ್ರಜ್ಞಾನಗಳ ನಡುವಿನ ವ್ಯತ್ಯಾಸವು ಅಳಿಸಿಹೋದಂತೆ ಹೊಸ ವಾಸ್ತವ ಸಂಗತಿಗಳನ್ನು ಸಂಪನ್ಮೂಲವೆಂದು ಗುರುತಿಸಲು ಇದು ಸಿದ್ಧಗೊಳಿಸುತ್ತಿದೆ. ಆಡಳಿತದ ನಿರ್ವಹಣೆಯ ಪರಿಕಲ್ಪನೆ ಮತ್ತು ಆಚರಣೆಯಲ್ಲಿ ಅಪಾರ ಬದಲಾವಣೆಯಾಗುತ್ತಿದೆ. ಈ ಪಟ್ಟಿಯನ್ನು ಇನ್ನೂ ದೀರ್ಘ ಮಾಡಬಹುದು. ಜಗತ್ತಿನ ಕೋಟ್ಯಂತರ ಕಾರ್ಮಿಕರ ಉದ್ಯೋಗವನ್ನು ನಷ್ಟಮಾಡುವುದರ ಜೊತೆಗೆ ಅವರಿಗೆ ದಕ್ಕಬೇಕಾದ ದಿನಗೂಲಿಯೂ ಕುಸಿಯಲು ಕಾರಣವಾಗುವ ಈ ಪರಿವರ್ತನೆಗಳು ಪ್ರಭಾವಶಾಲಿಯಾಗಿವೆ.

ಆರ್ಥಿಕ ಮತ್ತು ರಾಜಕೀಯ ರಂಗದ ಬದಲಾವಣೆಗಳು ಜೊತೆ ಜೊತೆಯಾಗಿಯೇ ಸಂಭವಿಸುತ್ತಿವೆ. ರಾಷ್ಟ್ರೀಯ ಆರ್ಥಿಕತೆಯ ಮೇಲಿನ ಒತ್ತಡಗಳು ರಾಜಕೀಯ ರಂಗದಲ್ಲಿ ಸ್ಪಷ್ಟವಾಗಿ ಪ್ರತಿಫಲಿಸುತ್ತಿವೆ. ಪ್ರಭುತ್ವ (State) ಮತ್ತು ಜನಾಂಗದ (Nation) ನಡುವಣ ಸಂಬಂಧಗಳಲ್ಲೂ ಕ್ರಾಂತಿಕಾರ ಬದಲಾವಣೆಗಳು ಸಂಭವಿಸಲಿವೆ. ಆಧುನಿಕ ರಾಷ್ಟ್ರದ ಪ್ರಧಾನ ಘಟಕವೆನಿಸಿದ ರಾಷ್ಟ್ರಪ್ರಭುತ್ವವು (Nation-State) ತನ್ನ ಹಿಂದಿನ ಹಿರಿಮೆಯನ್ನು ಹೊಸ ಜಗತ್ತಿನಲ್ಲಿ ಉಳಿಸಿಕೊಳ್ಳುವುದು ಕಷ್ಟವಾಗಬಹುದು. ಕಲ್ಯಾಣರಾಷ್ಟ್ರದ ಪರಿಕಲ್ಪನೆಯೇ ಬುಡಮೇಲಾಗಿದೆ. ಶಿಕ್ಷಣ, ಆರೋಗ್ಯ, ಜಲನಿರ್ವಹಣೆ, ಗ್ರಾಮೀಣಾಭಿವೃದ್ಧಿ, ಬಡತನ ನಿವಾರಣೆ ಕಾರ್ಯಕ್ರಮಗಳೆಲ್ಲವೂ ಷೇರು ಮಾರುಕಟ್ಟೆಯ ಪಟ್ಟಿಯಲ್ಲಿ ಸೇರಲು ತಮ್ಮ ಸರದಿಗಾಗಿ ಕಾಯುತ್ತಿವೆ. ಹಾಗಾದಲ್ಲಿ ವಿಜ್ಞಾನ ಮತ್ತು "ವಿಜ್ಞಾನಪ್ರಶ್ನೆ"ಯ (Science question) ಗತಿ ಏನು ?

ಜಗತ್ತು ಸಾಮಾನ್ಯ 'ಸಾಮಾನ್ಯ ನಾಗರಿಕರು' (Citizens) ಮತ್ತು 'ನೆಟ್ ಗ್ರಾಹಕರು' ಅಥವಾ 'ಯಂತ್ರಸಂಬಂಧಿ ನಾಗರಿಕರು' (Netizens) ಎಂದು ಇಬ್ಭಾಗವಾಗಿದೆಯೆಂದು ಹೇಳಲಾಗುತ್ತಿದೆ. ಆಧುನಿಕ ವಿಜ್ಞಾನ ಮತ್ತು ಬಂಡವಾಳಶಾಹಿಯು ಮುಂಚೂಣಿಗೆ ಬಂದ ನಂತರ ಜಗತ್ತು ಮುಖ್ಯವಾಗಿ ಎರಡು ಭಾಗವಾಗಿ ಒಡೆದಿದೆ. ಒಂದು ಯಂತ್ರದೊಡನೆ ಕೆಲಸ ಮಾಡುವವರಿಗೆ ಸೇರಿದ್ದು. ಮತ್ತೊಂದು ಯಂತ್ರದೊಡನೆ ಕೆಲಸ ಮಾಡದೆ ಇರುವವರದು. ಅಂದರೆ ಯಂತ್ರದೊಡನೆ ಧನಾತ್ಮಕ ಸಂಬಂಧವುಳ್ಳವರು ಇಲ್ಲವೇ ಋಣಾತ್ಮಕ ಸಂಬಂಧ ಹೊಂದಿರುವವರು ಎಂದು ವರ್ಗೀಕರಿಸಬಹುದು. ಅಥವಾ ಯಂತ್ರದಿಂದ ಲಾಭ ಪಡೆದ ಸಮುದಾಯ ಮತ್ತು ಯಂತ್ರದಿಂದಾಗಿಯೇ ಉದ್ಯೋಗ, ಬದುಕು, ಸಮಸ್ತವನ್ನೂ ಕಳೆದುಕೊಂಡ ಸಮುದಾಯ ಎಂದೂ ಜಗತ್ತನ್ನು ವಿಂಗಡಿಸಬಹುದು. ಯಂತ್ರವು ಬಂಡವಾಳಶಾಹಿಯ ಪ್ರಧಾನ ಅಭಿವ್ಯಕ್ತಿ ಅಥವಾ ಸಾಧನ. ಬಂಡವಾಳವು ಹಣಕಾಸಿನ ರೂಪದಲ್ಲಿ ಪ್ರಕಟಗೊಂಡಾಗ

ಅದರ ಪ್ರಮುಖ ಕಾಯಾಚರಣಾ ಕ್ಷೇತ್ರ ಮಾರುಕಟ್ಟೆಯಾಗಿರುತ್ತದೆ. ಆಗ ಮಾರುಕಟ್ಟೆ ಕಾರ್ಯಾಚರಣೆಯ ಪ್ರಮುಖ ಸಾಧನವೇ ಯಂತ್ರವಾಗುತ್ತದೆ. ಹಾಗಾಗಿ ಈ ಹೊಸ ಯಂತ್ರದ ಮೂಲಕವೇ ಜಗತ್ತು–ಸಾಮಾನ್ಯ ನಾಗರಿಕರು ಮತ್ತು ನೆಟ್ ಗ್ರಾಹಕರು ಎಂದು ಇಬ್ಭಾಗವಾಗುತ್ತದೆ.

ಈ ರೀತಿಯ ತಿಳಿವಳಿಕೆಯು ಜನಸಾಮಾನ್ಯರ ಅನುಭವಕ್ಕೆ ಬರುತ್ತಿದೆ. ಆದರೂ, ಇಂದು ಜ್ಞಾನಾಧಾರಿತ ಸಮಾಜವೆಂದು ವ್ಯಾಖ್ಯಾನಗೊಳ್ಳುತ್ತಿರುವ ರಾಜಕೀಯ ಮತ್ತು ಆರ್ಥಿಕ ಬದುಕನ್ನೊಳಗೊಂಡ ಹೊಸ ರಾಜಕೀಯ ಆರ್ಥಿಕತಾ ಸಿದ್ಧಾಂತದ ಬಗೆಗಿನ ಚರ್ಚೆ ಇನ್ನು ಆರಂಭವಾಗಿಲ್ಲ. ಆದರೆ ಸತ್ಯಸಂಗತಿಯೆಂದರೆ, ಗ್ರಹಿಕೆಗೆ ಮೀರಿದ ವೇಗದಲ್ಲಿ ಸಂಭವಿಸುತ್ತಿರುವ ಈ ಪರಿವರ್ತನೆಗಳಿಂದ ಮಾನವ ಬದುಕಿನ ಎಲ್ಲ ಸಂಬಂಧಗಳು ತತ್ತರಿಸಿವೆ. ಇತಿಹಾಸ, ಸಂಸ್ಕೃತಿ, ಆರ್ಥಿಕತೆ, ರಾಜಕೀಯ ಸಮಸ್ತವೂ ಹೊಸ ಅವತಾರಗಳನ್ನು ಎತ್ತಲು ಕಾಯುತ್ತಿವೆ. ಇದಕ್ಕೆ ವಿಜ್ಞಾನವೊಂದೇ ಹೊರತಾಗಿರುವುದು ಸಾಧ್ಯವಿಲ್ಲ. ಎರಡು ನೂರು ಅಥವಾ ಐದು ನೂರು ವರ್ಷಗಳ ವಿಜ್ಞಾನ ಅಷ್ಟು ಸುಲಭವಾಗಿ ಬುಡಮೇಲಾಗುವುದೇ ? 'ಆಧುನಿಕ ನಾಗರಿಕತೆ'ಯ ಯುಗದೊಟ್ಟಿಗೇ ಬೆಳೆದ ವಿಜ್ಞಾನವು ಪ್ರಸ್ತುತ ಯುಗದ ಆಘಾತವನ್ನು ಎದುರಿಸುತ್ತದೆಯೇ ಎಂಬ ಪ್ರಶ್ನೆ ಈಗ ಊಹೆಗಿಂತಲೂ ಹೆಚ್ಚು ಚಿಂತನಾರ್ಹವಾಗಿದೆ. ಆದರೆ ಗಾಂಧಿಯ ಬಳಿ ಬಿಡುಗಡೆಯ ದಾರಿಯೊಂದು ಇದೆ ಎಂದು ಅನ್ನಿಸುತ್ತದೆ.

ಇಂಥ ತೂಗುಯ್ಯಾಲೆಯ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಚಿಂತನೆಯ ಬೇರುಗಳನ್ನು ಅನಿರ್ಬಂಧಿತ ಬದುಕಿನ ವಿಧಾನದಲ್ಲಿ ಬೆಳೆಸುವುದನ್ನು ಬಿಟ್ಟರೆ ಅನ್ಯಮಾರ್ಗವಿಲ್ಲ. ಅನಿರ್ಬಂಧಿತ ಬದುಕು ಎಂದರೆ ಸಾಮಾನ್ಯ ಬದುಕು (Ordinary life).

ತನ್ನ ಸುತ್ತಮುತ್ತಲು ಲಭ್ಯವಿರುವ ಕ್ರಿಯಾತ್ಮಕ ಹಾಗೂ ಅರ್ಥಪೂರ್ಣ ವಾಗಿರುವ ಸಂಗತಿಗಳನ್ನು ತನ್ನೊಳಗೆ ಸಮಗ್ರವಾಗಿ ಅಳವಡಿಸಿಕೊಂಡೂ ತಾನು ಯಾವೊಂದು ನಿರ್ದಿಷ್ಟ ಸಂಗತಿಯನ್ನು ಅವಲಂಬಿಸದೆ ಸ್ವತಂತ್ರವಾಗಿರುವುದೇ ಸಾಮಾನ್ಯ ಬದುಕು. ಹಾಗಾಗಿ ಅದು ಏಕಕಾಲಕ್ಕೆ ಶ್ರೀಮಂತವೂ, ಅವಶ್ಯವೂ, ಅನಿವಾರ್ಯವೂ ಆದ ಬದುಕು. ಇದನ್ನು ಕೇವಲ ಸಾಮಾನ್ಯ ಸ್ತ್ರೀ–ಪುರುಷರ ಯಃಕಶ್ಚಿತ್ ಬದುಕೆಂದು ಕಡೆಗಣಿಸುವಂಥದಲ್ಲ. ನಿಜಕ್ಕೂ ಈ ಬದುಕು ಶ್ರೀಮಂತವೂ, ಅನಿವಾರ್ಯವೂ, ಸರ್ವವ್ಯಾಪಿಯೂ ಆಗಿದೆ. ಸಾಮಾನ್ಯ ಬದುಕು ಎಂಬುದು ಇಲ್ಲ ಎನ್ನುವುದಾದರೆ ಮಾನವನ ಬದುಕೇ ಅಸಂಭವವಾಗಿದೆ. ಅದರ ಅರ್ಥ, ಬದುಕು ಎಲ್ಲೆಲ್ಲಿದೆಯೋ ಅಲ್ಲೆಲ್ಲ ಸಾಮಾನ್ಯ ಬದುಕಿದೆ. ಅದಿಲ್ಲ ಎಂದಾದರೆ ಯಾವುದೇ ಬಗೆಯ ಬದುಕು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ, ಮಾತ್ರವಲ್ಲದೆ ಅಂಥ ಸನ್ನಿವೇಶದಲ್ಲಿ ಮಾನವ

ಬದುಕಿನ ಬಗ್ಗೆ ಮಾತನಾಡುವುದೇ ಅರ್ಥಹೀನ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ 'ಛೂ' ಬಿಡುತ್ತಿರುವ ಬದಲಾವಣೆಗಳು ಭವಿಷ್ಯದಲ್ಲಿ 'ಸಾಮಾನ್ಯ ಬದುಕೇ' ಇಲ್ಲದಿರುವಂಥ ಬದುಕಿನ ಸ್ವರೂಪಗಳನ್ನು ಕಲ್ಪಿಸಿಕೊಳ್ಳುವಂತೆ ಮಾಡಿವೆ. ಇದೊಂದು ವಿರೋಧಾಭಾಸ. ಏಕೆಂದರೆ ಸಾಮಾನ್ಯ ಬದುಕು ಇಲ್ಲದೆ ಯಾವುದೇ ಬದುಕಿನ ಸ್ವರೂಪವನ್ನು ಊಹಿಸಲಾಗದು. ಉದಾಹರಣೆಗೆ ಕೇಲವು ನಿರ್ದಿಷ್ಟ ಮತ್ತು ವಿಶೇಷ ಕಾರ್ಯಗಳಿಗೆ ನೀವು ತಾಂತ್ರಿಕ ಪರಿಭಾಷೆಗಳನ್ನು ಬಳಸಬಹುದಾದರೂ ಅವು ಜನಸಾಮಾನ್ಯರ ಸಾಧಾರಣ ಭಾಷೆಗೆ ಪರ್ಯಾಯವಾಗದು. ಏಕೆಂದರೆ ತಾಂತ್ರಿಕ ಭಾಷೆಯ ಅರ್ಥವಂತಿಕೆಗೆ ಸಾಮಾನ್ಯ ಭಾಷೆಯು, ವಸ್ತು ಮತ್ತು ಪಠ್ಯವನ್ನು ಒದಗಿಸುತ್ತದೆ. ತಾಂತ್ರಿಕ ಭಾಷೆಯ ಬಗ್ಗೆ ಮಾತನಾಡಲು ಹೇಗೆ ನಿಮಗೆ ಸಾಮಾನ್ಯ ಭಾಷೆಯು ಅಗತ್ಯವಿರುವುದೋ ಹಾಗೆಯೇ ವಿಶೇಷ ಸ್ವರೂಪದ ಬದುಕನ್ನು ಸಾಧಾರಣ ಬದುಕಿನ ಮೂಲಕವೇ ಕಲ್ಪಿಸಿಕೊಳ್ಳಲು ಸಾಧ್ಯ. ಅಂದರೆ ವಿಶೇಷ ಸ್ವರೂಪದ ಬದುಕು ಸಾಧಾರಣ ಬದುಕಿನ ಅಖಂಡ ಜಾಲದಲ್ಲಿ ಹೆಣೆದುಕೊಂಡಿದೆ.

ಸಾಮಾನ್ಯ ಬದುಕು ನೈತಿಕವಾದುದು, ನಿಜವಾದುದು, ದಕ್ಷವಾದುದು, ನಿಖರವಾದುದು, ವೇಗವಾದುದು, ನೇರವಾದುದು, ಕಾನೂನು ಪಾಲಿಸುವಂಥದ್ದು, ಸ್ವಾವಲಂಬಿಯಾದುದು, ಜವಾಬ್ದಾರಿಯುತವಾದುದು, ತೃಪ್ತಿ-ಸಂತೋಷ ನೀಡುವಂಥದು, ಇತ್ಯಾದಿ. ನಮಗಿಷ್ಟಬಂದಷ್ಟು ದೀರ್ಘ ಈ ಪಟ್ಟಿಯನ್ನು ಬೆಳೆಸಬಹುದು. ಆದರೆ, ಅದೇ ವೇಳೆ ಸಾಮಾನ್ಯ ಬದುಕಿನಲ್ಲಿ ಅನೈತಿಕತೆಗೆ, ಅಸತ್ಯಕ್ಕೆ, ಜಡತ್ವಕ್ಕೆ, ಅಸ್ಪಷ್ಟತೆಗೆ, ಕಪಟತೆ, ಸಂಕೀರ್ಣ, ಅಪರಾಧ, ಅವಲಂಬನೆ, ಪರೋಪಜೀವನ, ಬೇಜಾವಾಬ್ದಾರಿ, ಸಂಕಷ್ಟ, ಇತ್ಯಾದಿಗಳಿಗೂ ಎಡೆಯಿದೆಯಲ್ಲವೇ? ಆದರೆ ಈ ದುಷ್ಟ ವರ್ತನೆಗಳು ಸಾಮಾನ್ಯ ಬದುಕನ್ನು ಭಂಗಗೊಳಿಸವು. ಅವು ಸಾಮಾನ್ಯ ಬದುಕು ದೈನಂದಿನ ಚಟುವಟಿಕೆಯಲ್ಲಿ ನಿರ್ವಹಿಸಬಹುದಾದಂಥ ಆತಂಕಗಳನ್ನಷ್ಟೇ ಉಂಟುಮಾಡುತ್ತವೆ. ಅಹಿತಕಾರಿ ಗುಣಗಳು ಅಹಿತವೇ ಹೊರತು ಆಸುರಿ ಗುಣಗಳಲ್ಲ. ಆಸುರಿ ಗುಣ ಮಾತ್ರ ಸಾಮಾನ್ಯ ಬದುಕನ್ನು ಭಂಗಪಡಿಸುತ್ತದೆ. ಮಾನವೀಯವಾದುದೆಲ್ಲವೂ ಸಾಮಾನ್ಯ ಬದುಕನ್ನು ಸಮಗ್ರವಾಗಿ ಕಟ್ಟಿದೆ ಮತ್ತು ಇದೇ ಸಾಮಾನ್ಯ ಬದುಕನ್ನು ಸಹಜವಾಗಿಸುತ್ತದೆ. ಅಂದರೆ ಸಾಧಾರಣ ಬದುಕಿನಲ್ಲಿ ಅಸಹಜವಾದದು ಏನೂ ಇಲ್ಲ ಎಂದಲ್ಲ. ಅದರರ್ಥ ಯಾವುದು ಸಹಜ, ಯಾವುದು ಅಲ್ಲ ಎಂದು ನಿರ್ಧರಿಸುವ ಮಾನದಂಡಗಳೆಲ್ಲವೂ ಸಾಧಾರಣ ಬದುಕಿನೊಳಗೇ ಅಂತರ್ಗತವಾಗಿವೆ. ತಾತ್ಪರ್ಯದಲ್ಲಿ ಸಾಮಾನ್ಯ ಬದುಕಿನ ಸಹಜ ಸಮಗ್ರತೆಯ (Natural unity) ಪರಿಕಲ್ಪನೆಯೊಂದಿದೆ.

ಸೈತಾನನ ಶಕ್ತಿಗಳು ಮೇಲ್ಮೈ ಸಾಧಿಸಿರುವ ಇಂದಿನ ಜಗತ್ತಿನಲ್ಲಿ ತಮ್ಮ ಚಿಂತನೆ ಮತ್ತು ಆಚರಣೆಗಳ ಮೂಲಕ ಗಾಂಧಿಯವರು ಮರುಸೃಷ್ಟಿಸುವುದೇ

ಈ ಸಾಮಾನ್ಯ ಬದುಕಿನ ಸಹಜ ಸಮಗ್ರತೆಯನ್ನು. ಈ ಏಕತೆಯ ಮೂರು ಘಟಕಗಳೆಂದರೆ, ಲೋಕವಿದ್ಯೆ, ಸ್ವರಾಜ್ ಮತ್ತು 'ಬಂಡವಾಳ' ಮುಕ್ತ ಆರ್ಥಿಕತೆ. ಹಾಗೆ ನೋಡಿದರೆ ಸಾಮಾನ್ಯ ಬದುಕು ನಿರಂತರವಾಗಿ ಬದಲಾಗುವ ಸ್ವಭಾವವುಳ್ಳ ಮಾನವನ ಮೂಲತತ್ವವನ್ನು ಅಭಿವ್ಯಕ್ತಿಪಡಿಸುವ ಅಖಂಡಧಾರೆ. ಎದುರಾಗುವ ಹೊಸ ಸನ್ನಿವೇಶಗಳಲ್ಲಿ ತಮ್ಮ ಚಿಂತನೆ ಮತ್ತು ಆಚರಣೆಯ ಮೂಲಕ ಸಾಮಾನ್ಯ ಬದುಕನ್ನು ಸೃಷ್ಟಿಸುವ ಮತ್ತು ಮರುಸೃಷ್ಟಿಸುವ ಪರಂಪರೆಯೇ ನಮ್ಮ ಸಂತರ ಭವ್ಯ ಪರಂಪರೆ. ಇದು ಆಯಾ ಕಾಲಮಾನಕ್ಕೆ ತಕ್ಕಂತೆ ಪ್ರಸ್ತುತವಾದ ಮಾನದಂಡಗಳನ್ನು ಒದಗಿಸುವ ಪರಂಪರೆ. ನಮ್ಮ ಕಾಲದಲ್ಲಿ ಈ ಮಾನದಂಡಗಳನ್ನು ಗಾಂಧಿ ನಮಗೆ ನೀಡಿದ್ದಾರೆ.

ಸಾಮಾನ್ಯ ಬದುಕಿನ ಪ್ರಮಾಣಗಳಿಗೆ ಒಪ್ಪಿಸಿಕೊಳ್ಳಲು ನಿರಾಕರಿಸುವ ಸಂಗತಿಗಳು ಸಾಮಾನ್ಯ ಬದುಕನ್ನು ಭಂಗಗೊಳಿಸುವ ಕೃತ್ಯಗಳು. ಈ ದಿಸೆಯಲ್ಲಿ ಎರಡು ನಿರ್ದಿಷ್ಟ ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳಬಹುದು. ಮೊದಲನೆಯದು, ಸಾಮಾನ್ಯ ಬದುಕಿನಲ್ಲಿ ತಲೆದೋರುವ, ಎಂದೂ ಹೊಂದಿಕೊಳ್ಳದ ಬದ್ಧ ವಿರೋಧದ ಸನ್ನಿವೇಶಗಳು. ಒಂದಕ್ಕಿಂತ ಹೆಚ್ಚು ಸಂಗತಿಗಳು, ಘಟನೆಗಳು, ವಿದ್ಯಮಾನಗಳು, ಹಿತಾಸಕ್ತಿಗಳು, ಚಿಂತನೆಗಳು, ಸಾಮಾಜಿಕ ಮಾರ್ಗಗಳೇ ಮುಂತಾದವು ಪರಸ್ಪರ ಪರಿಹರಿಸಲಾಗದ ಸಂಘರ್ಷದ ಸಂಬಂಧದ ಸ್ಥಿತಿ ತಲುಪಿದಾಗ ಅಂಥ ಸನ್ನಿವೇಶವನ್ನು ಬದ್ಧವೈರ ಸ್ಥಿತಿ ಎಂದು ಹೇಳುತ್ತಾರೆ. ಈ ರೀತಿ ರಾಜಿಯಾಗದ ಬದ್ಧವೈರದ ಮನೋಧರ್ಮವು ಸಾಮಾನ್ಯ ಬದುಕಿನ ಪ್ರಮಾಣಗಳಿಂದ ಮಾರ್ಗದರ್ಶನ ಪಡೆಯಲು ನಿರಾಕರಿಸುವ ಸಂಬಂಧಗಳಿಂದಲೇ ಹುಟ್ಟುತ್ತದೆ. ಇದು ಸಾಮಾನ್ಯ ಬದುಕಿನ ಹೊರಗಿನ ಶಕ್ತಿಗಳ ಹಸ್ತಕ್ಷೇಪಕ್ಕೆ ಎಡೆಮಾಡಿಕೊಟ್ಟು, ಸಾಮಾನ್ಯ ಬದುಕನ್ನು ಭಂಗಗೊಳಿಸುತ್ತದೆ.

ಎರಡನೆಯದು, ಮಾನವನ ಅಂಕೆಯಿಲ್ಲದ ಅವನಿಂದ ಸ್ವತಂತ್ರವಾದ ವಸ್ತು, ಸಂಗತಿ, ಆಸ್ತಿ ಅಥವಾ ಇನ್ನಿತರ ಅಂಶಗಳಿಗೆ ಸಂಬಂಧಿಸಿದ ಸನ್ನಿವೇಶ. ಸಾಮಾನ್ಯ ಬದುಕಿನ ನಿಯಮಗಳಿಗೆ ಅಧೀನವಾಗದ ಇವು, ಉಲ್ಲಂಘನೆಗೆ ಎಡೆ ದೊರಕಿದಾಗ ಆಸುರೀ ಶಕ್ತಿಗಳಾಗಿ ಪರಿವರ್ತನಗೊಳ್ಳುತ್ತವೆ. ಸಹಜವಾಗಿ 'ಬಂಡವಾಳ', 'ವಿಜ್ಞಾನ' ಮತ್ತು 'ಪ್ರಭುತ್ವ' ಈ ಆಸುರಿ ಶಕ್ತಿಗೆ ಸರಿಯಾದ ಉದಾಹರಣೆಗಳು. ಇವು ಮೂರೂ ಸಾಮ್ರಾಜ್ಯಶಾಹಿಯ ಪ್ರಧಾನ ಅಸ್ತ್ರಗಳು. ಈ ಸಾಮಾನ್ಯ ಬದುಕಿನಲ್ಲಿ ಹಸ್ತಕ್ಷೇಪ ಮಾಡುವ 'ಬದ್ಧವೈರ' ಪ್ರಕ್ರಿಯೆಯೂ ಸಾಮ್ರಾಜ್ಯಶಾಹಿಯ ಮುಖವೇ ಆಗಿದೆ. ಈ ಹಸ್ತಕ್ಷೇಪದ ತೀವ್ರತೆಯೆಷ್ಟೆಂದರೆ, ಇಂದಿನ ಸಮಾಜದ ಪ್ರತಿಯೊಂದು ಕೆಡುಕಿನ ಮೂಲವನ್ನು ಬಂಡವಾಳ, ಪ್ರಭುತ್ವ ಮತ್ತು ವಿಜ್ಞಾನಗಳು ಹುಟ್ಟುಹಾಕಿದ ಕಾರ್ಯಗಳಲ್ಲಿ ಗುರುತಿಸಬಹುದು.

ಈ ಕೃತಿಯು ಒಂದರ್ಥದಲ್ಲಿ ಗಾಂಧಿಯ ನೆರವಿನಿಂದ ಸಾಮಾನ್ಯ ಬದುಕಿನಲ್ಲಿ .ವಿಜ್ಞಾನವು ಉಂಟುಮಾಡಿದ ಭಂಗಗಳನ್ನು ಮತ್ತು ಅವುಗಳ ಸ್ವಭಾವವನ್ನು ಜೊತೆ ಜೊತೆಗೇ ಅದಕ್ಕೆ ವಿಮೋಚನೆಯ ಮಾರ್ಗಗಳನ್ನೂ ಹುಡುಕುವ ಪ್ರಯತ್ನವಾಗಿದೆ. ವಿಜ್ಞಾನದ ಜಗತ್ತಿನಲ್ಲಿ ಆಗುತ್ತಿರುವ ಮಹತ್ತರ ಬದಲಾವಣೆಗಳು ಸಾಮಾನ್ಯ ಬದುಕನ್ನು ಭಂಗಗೊಳಿಸುವ ಹೊಸ ಶಕ್ತಿಗಳನ್ನು ಖಂಡಿತವಾಗಿಯೂ ಬಿಡುಗಡೆ ಮಾಡಲಿವೆ. ಇದು ಈಗಾಗಲೇ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಸ್ಪಷ್ಟವಾಗಿದೆ. ಇಂಥ ಸನ್ನಿವೇಶದಿಂದ ವಿಮೋಚನೆ ಪಡೆಯಲು ಸಾಮಾನ್ಯ ಬದುಕು ನಾಂದಿಯೂ, ಗುರಿಯೂ ಆಗಬೇಕು. ಗಾಂಧಿಯಿಂದ ಪಾಠ ಕಲಿಯುವ ಒಂದು ಮಾರ್ಗವಿದು.

ವಾರಣಾಸಿ
ಜನವರಿ 2002

**ಸುನಿಲ್ ಸಹಸ್ರಬುಧೆ**

# ಪರಿವಿಡಿ


| | | |
|---|---|---|
| | ಅಧ್ಯಕ್ಷರ ಮಾತು | v |
| | ಅಕ್ಷರ ಸೂರ್ಯನಿಗೆ ನಮನ | vii |
| | ಗಾಂಧಿ ಮತ್ತು ಟಾಲ್‌ಸ್ಟಾಯ್ | xi |
| | ಅನುವಾದಕನ ಅರಿಕೆ | xix |
| | ಮೂಲ ಲೇಖಕರ ಮಾತು | xxix |
| 1. | ಪ್ರವೇಶಿಕೆ | 1 |
| 2. | ವಿಜ್ಞಾನಪ್ರಶ್ನೆ | 6 |
| 3. | ತತ್ತ್ವಜ್ಞಾನ | 14 |
| 4. | ನೀತಿತತ್ತ್ವ | 30 |
| 5. | ಯಂತ್ರ | 46 |
| 6. | ತರ್ಕಶಾಸ್ತ್ರ | 74 |
| | ಹಿನ್ನುಡಿ | 95 |
| | ಪಾರಿಭಾಷಿಕ ಪದ ವಿವರಣೆ | 109 |

## ಅಧ್ಯಾಯ ಒಂದು

# ಪ್ರವೇಶಿಕೆ

ವಿಜ್ಞಾನ ದಿಗ್ವಿಜಯ ಸಾಧಿಸಿದೆ. ಅದರ ಡ್ರಾಯಿಂಗ್ ರೂಂ ತುಂಬಾ ಗೆಲುವನ್ನು ಸಾರುವ ಷೀಲ್ಡ್‌ಗಳು, ಪದಕಗಳು, ಟ್ರೋಫಿಗಳು. ಅದು ಜಗತ್ತನ್ನು ಆಳುತ್ತಿದೆ. ಆಳುವ ಅಧಿಕಾರವಿರುವವರನ್ನು ಅವರ ಗೆಲುವಿನ ವಿಧಾನದ ಬಗ್ಗೆ ಪ್ರಶ್ನಿಸುವ ಎದೆಗಾರಿಕೆ ಯಾರಿಗಿದೆ ? ಆದರೆ ಯಾವ ಗೆಲುವೂ ಶಾಶ್ವತವಲ್ಲ. ಇದುವರೆವಿಗಂತೂ ಅಂಥ ಅಮರವಾದ ಗೆಲುವನ್ನು ಜಗತ್ತು ಕಂಡಿಲ್ಲ. ಪ್ರತಿಯೊಂದು ಉತ್ಕರ್ಷವೂ ಆರಂಭದಿಂದಲೇ ವಿರೋಧವನ್ನು ಎದುರಿಸಬೇಕಾಗುತ್ತದೆ. ಹಾಗೆಯೇ ವಿಜ್ಞಾನ ಸಹ. ಯಶಸ್ಸು ತುತ್ತತುದಿಯಿಂದ ಕೆಳಮುಖ ತಿರುಗಿದ ಕ್ಷಣದಿಂದಲೇ ಸವಾಲುಗಳು ಎದುರಾಗುತ್ತವೆ. ಇದು ವಿಜ್ಞಾನಕ್ಕೂ ಹೊರತಲ್ಲ.

ಸವಾಲು ಎನ್ನುವುದು ವಿಮರ್ಶೆಯ ಪ್ರಕ್ರಿಯೆಗಿಂತ ಭಿನ್ನ. ಸವಾಲಿನಲ್ಲಿ ನೈಜ ಪ್ರತಿರೋಧವಿರುತ್ತದೆ. ಹಾಗಾಗಿ ವಿಜ್ಞಾನದ ಬಗೆಗಿನ ವಿಮರ್ಶೆ ಮತ್ತು ಅದರ ವಿರುದ್ಧ ಎತ್ತುವ ಸವಾಲು ಒಂದೇ ಎಂದು ಭಾವಿಸಬಾರದು. ವಿಜ್ಞಾನದ ಸಮಗ್ರ ವಿಮರ್ಶೆಯೇನೂ ಸುಲಭದ ಕಾರ್ಯವಲ್ಲ. ಅದಕ್ಕೆ ಸವಾಲು ಹುಟ್ಟು ಹಾಕುವುದಂತೂ ಅದಕ್ಕಿಂತಲೂ ಕಠಿಣವಾದ ಕಾರ್ಯ. ಒಂದು ಸ್ಪರ್ಧೆಯು ಏಕಪಕ್ಷೀಯವಾಗದೆ ಸವಾಲಿನ ಸೋಲು ಪೂರ್ವ ನಿಶ್ಚಿತವಾಗದಿದ್ದಲ್ಲಿ ಮಾತ್ರ ಸವಾಲಿನ ಕುರಿತು ಮಾತಾಡುವುದು ಮುಖ್ಯವಾಗುತ್ತದೆ. ಸಂಘರ್ಷವು ಸರಿಯಾಗಿರುವ ಸಾಧ್ಯತೆಯಿರಬೇಕಾದರೆ ಅದರ ಅಂತಿಮ ಫಲ ಮೊದಲೇ ಖಚಿತವಾಗಿ ತಿಳಿದಿರಬಾದು.

ವಿಜ್ಞಾನದ ಎದುರು ಗಾಂಧಿಯ ಸವಾಲುಗಳನ್ನು ಪುನಾರಚಿಸುವ ಪ್ರಯತ್ನವೇ ಈ ಕೃತಿಯು ಉದ್ದೇಶ. ವಿಜ್ಞಾನ, ಗಾಂಧಿ ಮತ್ತು ಆಗಬೇಕಾಗಿರುವ ಕಾರ್ಯಚಟುವಟಿಕೆಗಳನ್ನು ಒಳಗೊಂಡಿರುವ ಈ ಪ್ರವೇಶಿಕೆಯು ಕೃತಿಯ ದೃಷ್ಟಿಕೋನ ಮತ್ತು ಸಂಯೋಜನೆಯನ್ನು ಓದುಗರಿಗೆ ಪರಿಚಯಿಸುತ್ತದೆ.

### ವಿಜ್ಞಾನ

'ವಿಜ್ಞಾನ' ಎಂಬ ಪದ ಬಳಕೆಯಲ್ಲೇ ಸಮಸ್ಯೆ ಅಡಗಿದೆ. ಪಶ್ಚಿಮವು ಯಾವುದನ್ನು ವಿಜ್ಞಾನ ಎನ್ನುತ್ತದೋ ಅದನ್ನು ಪೌರ್ವಾತ್ಯರು ಅದನ್ನು ಆಧುನಿಕ ವಿಜ್ಞಾನ ಎಂದು ಕರೆಯಬಯಸುತ್ತಾರೆ. ಇವೆರಡರ ಮಧ್ಯೆ ಭೌತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಸಿಕ್ಕಿಬಿದ್ದಿರುವ ನಾವು ಈ ಕೃತಿಯಲ್ಲಿ ಪಾಶ್ಚಿಮಾತ್ಯ ಇಲ್ಲವೇ ಪೌರ್ವಾತ್ಯದ ಪರಿಕಲ್ಪನೆಯನ್ನು

ಸಂಪೂರ್ಣವಾಗಿ ಆಯ್ಕೆ ಮಾಡಿಕೊಳ್ಳುವುದಿಲ್ಲ. ನಮ್ಮ ಆಯ್ಕೆ ಏನಿದ್ದರೂ ಆಯಾ ಸಂದರ್ಭಗಳನ್ನು ಆಧರಿಸಿರುತ್ತದೆ. 'ಆಧುನಿಕ ವಿಜ್ಞಾನ'ವು ಖಚಿತತೆ ಮತ್ತು ಸ್ಪಷ್ಟತೆ ಹೊಂದಿದೆ. ಆದರೆ 'ವಿಜ್ಞಾನ' ಎಂಬ ಪದವನ್ನು ಹಲವು ಬಾರಿ ವಿಶಾಲಾರ್ಥದಲ್ಲಿ ಬಳಸುತ್ತೇವೆ. ಪ್ರಾಯಶಃ ನಿಖರವಾಗಿ ವ್ಯಾಖ್ಯಾನಿಸಲಾಗದಿದ್ದರೂ ಸಹ ಅದು 'ಪಾರಂಪರಿಕ ವಿಜ್ಞಾನಗಳು' 'ನಮ್ಮ (ದೇಶೀಯ) ವಿಜ್ಞಾನಗಳು' 'ಭಾರತೀಯ ವಿಜ್ಞಾನಗಳು' 'ಪೂರ್ವರಾಷ್ಟ್ರಗಳ ವಿಜ್ಞಾನಗಳು' 'ಇಸ್ಲಾಮಿಕ್ ವಿಜ್ಞಾನಗಳು': ಹೀಗೆ ಇತ್ಯಾದಿ ಪದಸಮುಚ್ಚಯಗಳಿಗೆ ಅನ್ವಯಿಸುತ್ತದೆ ಎಂದೆನ್ನಲಾಗುತ್ತದೆ.

'ವಿಜ್ಞಾನ'ವೆಂಬುದು ಇಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಎರಡಕ್ಕೂ ಅನ್ವಯಿಸುತ್ತದೆ. ಈ ರೀತಿ ವಿಜ್ಞಾನವನ್ನು ಎರಡಕ್ಕೂ ಅನ್ವಯಿಸುವುದು ಸರಿಯೇ ಎನ್ನುವುದು ಸ್ವಯಂ ಸ್ಪಷ್ಟವಾಗಿಲ್ಲ. ಏಕೆಂದರೆ ವಿಜ್ಞಾನ ಎನ್ನುವುದು ಸಿದ್ಧಾಂತವನ್ನು ಅದರ ಆಚರಣೆಯಿಂದ, ಗುರಿಯನ್ನು ಅದರ ಕಡೆಗಿನ ಮಾರ್ಗದಿಂದ ಬೇರ್ಪಡಿಸದಿರುವ ತಾತ್ವಿಕ ನಿಲುವನ್ನು ಒಳಗೊಂಡಿರುತ್ತದೆ.

ಆಧುನಿಕ ಜ್ಞಾನವು ಯುರೂಪಿಯನ್ ನಾಗರಿಕತೆಯ ಆದರ್ಶಗಳಾದ 'ಸ್ವಾತಂತ್ರ್ಯ' ಮತ್ತು 'ವೈಚಾರಿಕತೆ'ಗಳ ತಾತ್ತ್ವಿಕ ತಳಪಾಯದ ಮೇಲೆ ಬೆಳೆದುಬಂದ ಜ್ಞಾನ ಮೀಮಾಂಸೆ (Epistemology) ಯನ್ನು ಆಧರಿಸಿದೆ. ಆಧುನಿಕ ಸಮಾಜಗಳಲ್ಲಿ ವಿಜ್ಞಾನವು ಸಂಪತ್ತು ಮತ್ತು ಪ್ರಭುತ್ವದ ಮೂಲವಾಗಿದೆ. ವಿಜ್ಞಾನದ ಬೆಳವಣಿಗೆಯ ಕತೆಯೆಂಬುದು ಯುದ್ಧಗಳ ಕತೆ : ದಬ್ಬಾಳಿಕೆಯ ಕತೆ; ವಸಾಹತೀಕರಣದ ಕತೆಯೇ ಆಗಿದೆ. ಸಾಮ್ರಾಜ್ಯಶಾಹಿಯ ಸಫಲತೆಗೆ ಮೂಲಭೂತ ಅಗತ್ಯವೆನಿಸಿದ ಜಗತ್ತಿನ ಸಂಪನ್ಮೂಲಗಳ ಲಭ್ಯತೆಯ ನಕಾಶೆಯ ತಯಾರಿಯನ್ನು ಆಧುನಿಕ ವಿಜ್ಞಾನ ಸಾಧ್ಯಗೊಳಿಸುತ್ತದೆ. ಪಾಶ್ಚಾತ್ಯ ವಿಸ್ತರಣಾ ನೀತಿಯ ಜೊತೆಗೆ ನಿಕಟ ಸಂಬಂಧವಿರುವ ಸಾಮ್ರಾಜ್ಯವಾದದ ಕತೆಯು ಒಂದು ಯಶೋಗಾಥೆಯಾಗಿದೆ. ಹಾಗೆಯೇ ಅದೊಂದು ಭೀಕರ ಕತೆಯೂ ಆಗಿದೆ. ವಿಜ್ಞಾನ ಆಧುನಿಕ ಕೈಗಾರಿಕೆಯನ್ನು ಸೃಷ್ಟಿಸುವ ಮೂಲಕ ಪ್ರಭುತ್ವದ ಕೇಂದ್ರೀಕರಣಕ್ಕೆ ಅಸ್ತಿಭಾರವನ್ನೂ ಹಾಕಿತು.

ಈ ಎಲ್ಲಾ ಸಂಗತಿಗಳ ಜೊತೆಗೆ ಆಧುನಿಕ ವಿಜ್ಞಾನವು ಹೊಸ ಸಾರ್ವತ್ರಿಕತೆಗೂ ಎಡೆಮಾಡಿಕೊತ್ತಿದೆ; ಸರ್ವಜನರ ಸುಖ-ನೆಮ್ಮದಿಯ ಭರವಸೆಯನ್ನು ನೀಡುತ್ತದೆ. ಆದರೆ ಈ ಎಲ್ಲ ಭರವಸೆಗಳ ಪೊಳ್ಳುತನ ಈ ಜಗತ್ತಿನ ದರಿದ್ರರಿಗೆ ಚೆನ್ನಾಗಿ ಗೊತ್ತಿದೆ. ವಿಜ್ಞಾನ ಸೃಷ್ಟಿಸಿದ ಅಥವಾ ನೀಡಿದ ಯಾವುದೇ ವಸ್ತು ತಮಗೆ ಸೇರಿದ್ದಲ್ಲವೆಂಬ ಸತ್ಯ ಅವರಿಗೆ ತಿಳಿದಿದೆ. ಬದಲು ತಮ್ಮ ಬೆವರು, ರಕ್ತ, ದುಡಿಮೆಯ ಫಲವಾದ ಅಧಿಕಾರ, ದೇಶೀ ಜ್ಞಾನಸಂಪನ್ಮೂಲ ಮತ್ತು ಭೌತಿಕ ಸಂಪತ್ತನ್ನು ಅನ್ಯರು ತಮ್ಮದಾಗಿಸಿಕೊಂಡು ಕ್ರೋಢೀಕರಿಸಿಕೊಂಡಿರುವ ಸಂಗತಿಯನ್ನು ದರಿದ್ರರು ಚೆನ್ನಾಗಿ ಗ್ರಹಿಸಿದ್ದಾರೆ. ಆದರೆ ಆ ಬಗ್ಗೆ ಅವರು ನಿಸ್ಸಹಾಯಕರು, ಹಾಗಾಗಿ ಸುಮ್ಮನಿದ್ದಾರೆ. ಪ್ರತಿ ಸೂಕ್ಷ್ಮ ಸಾಮಾಜಿಕ ಸನ್ನಿವೇಶಗಳಲ್ಲೂ ವಿಜ್ಞಾನದ ಬಗ್ಗೆ ಅವರಿಗಿರುವ ಅಸಹನೆಯನ್ನು ಊಹಿಸಬಹುದು.

ಆದುದರಿಂದ, ವಿಜ್ಞಾನದ ಬಗ್ಗೆ ಬೃಹತ್ ಮಟ್ಟದ ವಿರೋಧ ವ್ಯಕ್ತಪಡಿಸಲು ಗಾಂಧಿಯ ಅಗತ್ಯವಿದೆ.

**ಗಾಂಧಿ**

ವಿಜ್ಞಾನದ ಬಗ್ಗೆ ಗಾಂಧಿ ನೇರವಾಗಿ ಮಾತನಾಡುವುದು ಅಪರೂಪ. ತಮ್ಮ ತಾತ್ತ್ವಿಕ ನಿಲುವುಗಳನ್ನು ವ್ಯಾಖ್ಯಾನಿಸಲು ಅವರಿಗೆ ಆಧುನಿಕ ಜೀವನ ಮತ್ತು ಆಧುನಿಕ ಪಾಶ್ಚಾತ್ಯ ಚಿಂತನೆ ಮತ್ತು ಅದರ ಆಚರಣೆಯನ್ನು ಪ್ರಸ್ತಾಪಿಸುವ ಅಗತ್ಯವಿದ್ದುದರಿಂದ ಆಧುನಿಕ ಜೀವನ ಕ್ರಮದ ವಿಮರ್ಶೆಯಲ್ಲೇ ಅನಿವಾರ್ಯವಾಗಿ ವಿಜ್ಞಾನದ ವಿಮರ್ಶೆಯೂ ಅಂತರ್ಗತವಾಗಿದೆ. ಆಧುನಿಕ ಯಂತ್ರಗಳಿಗೆ ಗಾಂಧಿಯ ವಿರೋಧ ಮತ್ತು ಗುಡಿ ಕೈಗಾರಿಕೆಗಳ ಬಗೆಗಿನ ಅವರ ಒಲವು ಆಧುನಿಕ ವಿಜ್ಞಾನಕ್ಕೆ ಸವಾಲೆಸೆಯಲು ಒಂದು ರಚನಾತ್ಮಕ ಮತ್ತು ಪರ್ಯಾಯ ತಳಹದಿಯೊಂದನ್ನು ಒದಗಿಸುತ್ತದೆ. ಕೇವಲ ವಿಜ್ಞಾನದ ಬಗೆಗಿನ ಅತಿ ಕಾಳಜಿಯು ಅದರ ಮೇಲಿನ ವಿಮರ್ಶೆಯನ್ನು ಅಪೂರ್ಣವನ್ನಾಗಿಯೂ, ನಿಷ್ಫಲವನ್ನಾಗಿಯೂ ಮಾಡುವ ಸಂಭವವಿದೆ.

ಗಾಂಧಿ ಹೊಸಯುಗದ ತತ್ತ್ವಜ್ಞಾನಿ (Metaphysics) ಅವರ ಆಧ್ಯಾತ್ಮಿಕ ಶಾಸ್ತ್ರ ಜ್ಞಾನಶಾಸ್ತ್ರ (Epistemology) ನೀತಿಶಾಸ್ತ್ರ, ತರ್ಕ, ರಾಜಕೀಯ ತಾತ್ತ್ವಿಕತೆಯೆಲ್ಲವೂ ಸಾಮಾನ್ಯ ಜನರು ಅರ್ಥೈಸಿಕೊಂಡ ಬದುಕು ಮತ್ತು ಬದುಕಿನ ಸಾಮಾನ್ಯತೆಯಲ್ಲಿ ಅಡಕವಾಗಿದೆ. ಅದೇ ಅವರ ತತ್ತ್ವಜ್ಞಾನ. ಅವರ ಈ ಸಾಮಾನ್ಯ ತತ್ತ್ವಜ್ಞಾನದ ಮೂಲಕ ವಿಜ್ಞಾನದ ಬಗೆಗಿನ ಅವರ ಆ ದೃಷ್ಟಿಕೋನವನ್ನು ರೂಪಿಸಬಹುದು. ಆಧುನಿಕ ಚಿಂತನೆಗೆ ಅಪರಿಚಿತವಾದ ಜಗತ್ತಿನ ಬಗ್ಗೆ ಅವರು ಮಾತನಾಡುವುದರಿಂದ ಅವರನ್ನು ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟ ಕೆಳಗಿನ ಕೋಷ್ಟಕವು ಗಾಂಧಿಯ ವಿಚಾರಧಾರೆಯು ಆಧುನಿಕ ಜಗತ್ತಿನ ವಿಚಾರಧಾರೆಗಿಂತ ಹೇಗೆ ಭಿನ್ನ ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ.

| ಆಧುನಿಕತೆ | ಗಾಂಧಿ |
|---|---|
| ಸ್ವಾತಂತ್ರ್ಯ | ಸತ್ಯ |
| ವೈಚಾರಿಕತೆ, ಕಾರಣ (reason) | ಒಳಗಿನ ಧ್ವನಿ (inner voice), ನಂಬಿಕೆ (faith), ಕಟ್ಟ ಕಡೆಯ ಮನುಷ್ಯನೇ ಮುಖ್ಯ. |
| ನ್ಯಾಯ | ಅಹಿಂಸೆ |
| ಪ್ರಜಾಪ್ರಭುತ್ವ | ಸ್ವರಾಜ್ಯ |
| ಸಾರ್ವತ್ರಿಕತೆ | ಸ್ವದೇಶಿ |

ಮೇಲಿನ ಪಟ್ಟಿಯ ಎಡಭಾಗದಲ್ಲಿ (ಕಾಲಂನಲ್ಲಿ) ಆಧುನಿಕ ಸಿದ್ಧಾಂತದ ಬಗೆಗಿನ ಕೆಲವು ಮೂಲಭೂತ ಪರಿಕಲ್ಪನೆಗಳಿವೆ. ಬಲಗಡೆಯಲ್ಲಿ (ಕಾಲಂನಲ್ಲಿ) ಅದಕ್ಕೆ ಪರ್ಯಾಯವಾಗಿ ಗಾಂಧೀಜಿಯವರು ತಮ್ಮ ಜೀವನದುದ್ದಕ್ಕೂ ಪ್ರಯೋಗ

ಮಾಡಿಕೊಂಡು ಬಂದ ಪರಿಕಲ್ಪನೆಗಳಿವೆ. ಇಲ್ಲಿ ಪರಿಕಲ್ಪನೆಗಳನ್ನು ಅಕ್ಕಪಕ್ಕದಲ್ಲಿ ಒಂದಕ್ಕೊಂದು ಪರ್ಯಾಯವೆಂಬಂತೆ ನೀಡಿದ್ದರೂ ಅವು ಒಂದಕ್ಕೊಂದು ಸಂಪೂರ್ಣ ಸಂವಾದಿಯಾಗಿವೆ ಎಂದು ತಿಳಿದುಕೊಳ್ಳಬಾರದು. ಈ ಕೋಷ್ಟಕ ಕೇವಲ ಪ್ರಾತಿನಿಧಿಕ ಉದಾಹರಣೆ ಮಾತ್ರ. ಅದು ಆಧುನಿಕ ಜಗತ್ತಿನಿಂದ ಗಾಂಧಿಯ ಜಗತ್ತು ಸಂಪೂರ್ಣ ಭಿನ್ನ ಎಂಬುದರ ಬಗ್ಗೆ ನಮ್ಮ ಗಮನ ಸೆಳೆಯಲು ಮಾಡಿದ ಪ್ರಯತ್ನ ಮಾತ್ರ.

ಗಾಂಧಿಯ ಈ ಪರಿಕಲ್ಪನೆಗಳೆಲ್ಲಾ 'ಗಾಂಧಿಯ ಜಗತ್ತು ಹಳೆಯ ಜಗತ್ತು' ಎಂಬುದನ್ನೇನೂ ಸೂಚಿಸುವುದಿಲ್ಲ. ಆದರೆ ಪ್ರತಿಯಾಗಿ ಈ ಚಿಂತನೆಗಳಿಂದ 'ಗಾಂಧಿಯು ಕೈಗಾರಿಕೋತ್ತರ ಯುಗದ ಮೊದಲ ದೊಡ್ಡ ತತ್ತ್ವಜ್ಞಾನಿ' ಎಂದು ವಾದಿಸಬಹುದು. ಅಂದರೆ ಬದುಕು ಮತ್ತು ಸಮಾಜ ಹೊಸ ಬಗೆಯ ವ್ಯವಸ್ಥೆ ಕಂಡುಕೊಳ್ಳಲು ಪರ್ಯಾಯ ವೈಜ್ಞಾನಿಕ ಅಭಿವೃದ್ಧಿಗಳ ಅಗತ್ಯವಿದ್ದು, ಅದಕ್ಕೆ ಗಾಂಧಿಯ ತತ್ತ್ವಗಳು ಹೊಸ ಮಾರ್ಗಗಳನ್ನು ತೆರೆಯುತ್ತವೆ ಮತ್ತು ಆ ಮೂಲಕ ಅವರ ತತ್ತ್ವ ಆಧುನಿಕ ವಿಜ್ಞಾನಕ್ಕೆ ಒಂದು ದೊಡ್ಡ ಸವಾಲನ್ನು ಎಸೆಯುತ್ತದೆ, ಪ್ರತಿರೋಧವನ್ನು ಒಡ್ಡುತ್ತದೆ ಎಂದು ಹೇಳಬಹುದು.

## ಈ ಕೃತಿಯ ಧ್ಯೇಯ

ವಿಜ್ಞಾನವು ಸೃಷ್ಟಿಸಿದ ಜನವಿರೋಧಿ ಪರಿಸ್ಥಿತಿ, ವಿಜ್ಞಾನ ಇನ್ನೂ ಬಗೆಹರಿಸದ ಸಮಸ್ಯೆಗಳು, ವಿಜ್ಞಾನ ಹರಡುತ್ತಿರುವ ಸುಳ್ಳುಗಳು ಇವೇ ಮುಂತಾದ ಸಮಸ್ಯಾತ್ಮಕತೆ (Problematique) ಯನ್ನು "ವಿಜ್ಞಾನ ಪ್ರಶ್ನೆ" ಎಂದು ಇಲ್ಲಿ ಕರೆಯಲಾಗಿದೆ. *(ಲೇಖಕರು ವಿಜ್ಞಾನದ ಸಮಸ್ಯಾತ್ಮಕತೆಯನ್ನು ವಿವರಿಸಲು 'ಸಾಯನ್ಸ್ ಕ್ವೆಶ್ಚನ್' (Science Question) ಎಂಬ ಎಂಬ ಪರಿಭಾಷೆಯನ್ನು ಉಪಯೋಗಿಸಿದ್ದರಿಂದ ಭಾಷಾಂತರದಲ್ಲಿ ವಿಜ್ಞಾನದ ಪ್ರಶ್ನೆಯ ಬದಲು 'ವಿಜ್ಞಾನ ಪ್ರಶ್ನೆ' ಎಂದು ಬಳಸಲಾಗಿದೆ).* ಎರಡನೇ ಅಧ್ಯಾಯವು "ವಿಜ್ಞಾನ ಸಮಸ್ಯೆ" ಎಂಬ ನುಡಿಗಟ್ಟನ್ನು ಏಕಕಾಲಕ್ಕೆ ವ್ಯಾಖ್ಯಾನಿಸಲು ಮತ್ತು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಈ ಪ್ರಯತ್ನವನ್ನು ಯಾವುದೇ ಒಂದು ನಿರ್ದಿಷ್ಟ ನಿಲುವಿನಿಂದ ಮಾಡದೆ, ವಿಜ್ಞಾನವು ಸೃಷ್ಟಿಸಿರುವ ಅಥವಾ ಇನ್ನೂ ಸೃಷ್ಟಿಸದ ಸನ್ನಿವೇಶಗಳಿಗೆ ಸಾರ್ವಜನಿಕರ ವಿವಿಧ ಪ್ರತಿಕ್ರಿಯೆಗಳ ಬಗೆಗಿನ ಚರ್ಚೆಯ ಮೂಲಕ ಮಾಡುತ್ತದೆ. ಈ ಸನ್ನಿವೇಶಗಳೆಂದರೆ ಸಾಮಾನ್ಯ ಜನರ ವಿಜ್ಞಾನ ಚಳವಳಿ, ಸೂಕ್ತ ತಂತ್ರಜ್ಞಾನ ಚಳವಳಿ, ಶಾಂತಿ ಆಂದೋಲನ ಮತ್ತು ಪರ್ಯಾಯ ವಿಜ್ಞಾನ ಚಳುವಳಿ. ಈ ಎಲ್ಲಾ ಆಂದೋಲನಗಳು ಗಾಂಧಿಯ ಬಗ್ಗೆ ಒಲವು ಹೊಂದಿವೆ ಎಂದು ಹೇಳಲಾಗುತ್ತದೆ. ಆದರೆ ಆಧುನಿಕ ವಿಜ್ಞಾನಕ್ಕೆ ಮೂಲಭೂತ ಸವಾಲುಗಳನ್ನು ಒಡ್ಡುವಾಗ ಅವು ಗಾಂಧಿಯ ಸಮರ್ಥನೆಗೆ ನಿಲ್ಲುವುದಿಲ್ಲ. ಅಸತ್ಯವು ಆಧುನಿಕ ವಿಜ್ಞಾನದ ಒಳಗೆಯೇ ಅಂತರ್ಗತವಾಗಿದ್ದು ಅದನ್ನು ಗಾಂಧಿಯ ಸಿದ್ಧಾಂತ ಬೆತ್ತಲೆಯಾಗಿ ನಿಲ್ಲಿಸುತ್ತದೆ ಎಂದು ಹೇಳಲಾಗುತ್ತದೆ. ಈ ಅಸತ್ಯದ ಸ್ವರೂಪವನ್ನು ಗ್ರಹಿಸುವ ಮತ್ತು ಗಾಂಧಿಯ ನೆರವಿನಿಂದ ಅದಕ್ಕೊಂದು ಪರಿಹಾರ ಹುಡುಕುವ ಪ್ರಯತ್ನವೇ ಈ ಕೃತಿ.

## *ಪ್ರವೇಶಿಕೆ / 5*

ನೈತಿಕತೆ, ಯಂತ್ರ ಮತ್ತು ತರ್ಕ – ಈ ಮೂರು ಪ್ರಧಾನ ವಿಷಯಗಳ ಸುತ್ತ ಈ ಕೃತಿಯ ರಚನೆಯನ್ನು ಕೈಗೊಳ್ಳಲಾಗಿದೆ. ಈ ವಿಷಯಗಳ ಪ್ರಸ್ತಾವನೆಯ ಮೊದಲು ಅವಕ್ಕೆ ಅಗತ್ಯವಾದ ಧ್ವನಿ ಮತ್ತು ದೃಷ್ಟಿಕೋನವನ್ನು ರೂಪಿಸಲು ಕೆಲವು ತಾತ್ತ್ವಿಕ ಚಿಂತನೆ ಮತ್ತು ವಿಶ್ಲೇಷಣೆ ಮಾಡಲಾಗಿದೆ. ಇದಾದ ನಂತರ ಬರುವ ಚರ್ಚೆಗಳು ಸಂಕ್ಷಿಪ್ತ ಹಾಗೂ ಗೂಢವಾಗಿದ್ದು ಅವನ್ನು ಇಲ್ಲೇ ಊಹಿಸಿ ಉಲೇಖಿಸುವುದರಲ್ಲಿ ಅರ್ಥವಿಲ್ಲ. ವಿಚಾರಗಳೆಲ್ಲವೂ ವಿಶ್ಲೇಷಣೆಯ ಫಲಿತಾಂಶಗಳೇ ಆಗಿದ್ದೂ, ಈ ವಿಶ್ಲೇಷಣೆಗಳ ಜೊತೆ ಅದಕ್ಕೆ ಅಗತ್ಯವಾದ ವಿಸ್ತಾರವಾದ ಚರ್ಚೆಯ ಕೊರತೆಯಿದೆ ಎಂಬುದನ್ನು ಓದುಗ ಗಮನದಲ್ಲಿಟ್ಟುಕೊಳ್ಳಬೇಕೆಂದು ಎಚ್ಚರಿಸಬಯಸುತ್ತೇನೆ.

●

## ಅಧ್ಯಾಯ ಎರಡು

# ವಿಜ್ಞಾನಪ್ರಶ್ನೆ

'ವಿಜ್ಞಾನ ಪ್ರಶ್ನೆ' ಎನ್ನುವುದು ಸಾಮಾನ್ಯ ಬಳಕೆಯಲ್ಲಿರುವ ಪರಿಭಾಷೆಯಲ್ಲ ವಾದ್ದರಿಂದ ಅದಕ್ಕೆ ವಿವರಣೆ ಅಗತ್ಯವಿದೆ. ವಿಜ್ಞಾನದಲ್ಲಿ ಹಲವಾರು ಸಮಸ್ಯೆಗಳಿದ್ದು, ಅದು ಅನೇಕ ವೈರುಧ್ಯಗಳನ್ನು ಹುಟ್ಟುಹಾಕಿದೆ. ವಿಜ್ಞಾನವೆಂದರೆ ವೈಚಾರಿಕತೆ, ಜ್ಞಾನ, ಸಂಪತ್ತು ಮತ್ತು ಅಧಿಕಾರ ಎಂದು ಪರಿಗಣಿಸಲಾಗಿದೆ. ಆದರೆ ಸಾಮಾನ್ಯ ಜನರು ವಿಜ್ಞಾನದ ಈ ಫಲಿತಗಳಿಂದ ವಂಚಿತರಾಗಿದ್ದಾರೆ. ಅದಕ್ಕೆ ವಿಜ್ಞಾನದ ಗುಣವೇ ಹೊಣೆ. ದಾರಿದ್ರ್ಯ, ಅಜ್ಞಾನ, ಅಂಧಶ್ರದ್ಧೆ, ಮೌಢ್ಯ ಇತ್ಯಾದಿಗಳೂ ವಿಜ್ಞಾನಕ್ಕೆ ಸಂಬಂಧಪಟ್ಟಿವೆ. ವಿಜ್ಞಾನ ಈ ಪಿಡುಗುಗಳನ್ನು ಇನ್ನೂ ಪರಿಹರಿಸಿಲ್ಲವೆಂದು ಕೆಲವರು ಭಾವಿಸಿದರೆ, ಇನ್ನು ಹಲವರು ಇವೆಲ್ಲವೂ ವಿಜ್ಞಾನವೇ ಸೃಷ್ಟಿಸಿದ ಸನ್ನಿವೇಶಗಳು ಅಥವಾ ಹಣೆಪಟ್ಟಿಗಳೆಂದು ನೋಡುತ್ತಾರೆ. ಹಾಗಾಗಿ ಇಲ್ಲಿ ಸಮಸ್ಯೆಯಿದೆ. ಈ ಸಮಸ್ಯೆಯನ್ನು ಯಾವುದೇ ಸೈದ್ಧಾಂತಿಕ ನಿಲುವಿನಿಂದ ಗುರುತಿಸಬಾರದೆಂಬ ಪ್ರಯತ್ನಕ್ಕೆ ಇಲ್ಲಿನ ಚರ್ಚೆಗಳು ಬದ್ಧವಾಗಿವೆ. ಈ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಇರುವ ಬೇರೊಂದು ಮಾರ್ಗವೆಂದರೆ, ವಿಜ್ಞಾನವು ತಾನೇ ಸೃಷ್ಟಿಸಿದ ಅಥವಾ ಇನ್ನೂ ಸೃಷ್ಟಿಸದಿರುವ ಸನ್ನಿವೇಶ ಅಥವಾ ಪರಿಸ್ಥಿತಿಗಳ ಬಗ್ಗೆ ವಿಜ್ಞಾನ ಎದುರಿಸಿದ ಭಿನ್ನಾಭಿಪ್ರಾಯಗಳು, ಪ್ರತಿಕ್ರಿಯೆಗಳು ಮತ್ತು ಸವಾಲುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು. 'ವಿಜ್ಞಾನ ಪ್ರಶ್ನೆ' ಎಂದು ಇಲ್ಲಿ ಕರೆಯಲಾದ ವಿಜ್ಞಾನದ ಸಮಸ್ಯೆಯ ಸ್ವರೂಪವನ್ನು ಅರಿಯಲು ಪ್ರಸ್ತುತ ಅಧ್ಯಾಯದಲ್ಲಿ ಈ ಮಾರ್ಗವನ್ನು ಅನುಸರಿಸಲಾಗಿದೆ.

### ಹಿನ್ನೆಲೆ

ಆಧುನಿಕ ವಿಜ್ಞಾನದ ಚರಿತ್ರೆಯು ಬೌದ್ಧಿಕ ಮತ್ತು ಜನಪ್ರಿಯ, ವಿಮರ್ಶಾತ್ಮಕ ಮತ್ತು ಸರಳಗ್ರಹಿಕೆ, ಆಂತರಿಕ ಮತ್ತು ಬಾಹ್ಯ ಇತ್ಯಾದಿ ಭಿನ್ನಾಭಿಪ್ರಾಯಗಳಿಂದ ತುಂಬಿಹೋಗಿದೆ. ಈ ಭಿನ್ನಾಭಿಪ್ರಾಯಗಳಿಂದ ಉದ್ಭವಿಸಿದ ಎಲ್ಲಾ ಸಂಘರ್ಷಗಳ ವಿರುದ್ಧವೂ ವಿಜ್ಞಾನ ಅಂತಿಮ ದಿಗ್ವಿಜಯ ಸಾಧಿಸಿದೆ. ಆದರೆ ಈ ಹೋರಾಟದಲ್ಲಿ ವಿಜ್ಞಾನದ ಪರ ಬಳಸಿದ ಆಯುಧ, ಪ್ರಧಾನವಾಗಿ ವೈಚಾರಿಕತೆಯೇ ಅಥವಾ ಪ್ರಬಲವಾದ ರಾಜಕೀಯವೇ? ಆರ್ಥಿಕ ಅಥವಾ ಮಿಲಿಟರಿ ಶಕ್ತಿಯೇ ? ಎಂಬುದು ಎಂದೂ ಚರ್ಚೆಯ ವಸ್ತುವಾಗಲೇ ಇಲ್ಲ. ಆದರೆ ವಿಜ್ಞಾನ ಪ್ರಶ್ನೆಯು ಹುಟ್ಟುಹಾಕಿದ ಭಿನ್ನಾಭಿಪ್ರಾಯ ಮತ್ತು ಸಂಘರ್ಷಗಳು ಹೆಚ್ಚು ಕಡಿಮೆ ಹತ್ತೊಂಬತ್ತನೇ ಶತಮಾನದ ಕೊನೆಯಲ್ಲೆ ಕೊನೆಗೊಂಡಿವೆ. ವಿಜ್ಞಾನದ ವಿಕ್ಟೋರಿಯನ್ ಯುಗ ಹೊಸ ತಾತ್ತ್ವಿಕ ಜಿಜ್ಞಾಸೆಗಳಿಗೆ

ಜನ್ಮ ನೀಡಿತು. ವಿಜ್ಞಾನದ ಮೂಲಭೂತ ತಳಪಾಯದ ಸಾಮರ್ಥ್ಯವನ್ನು ಲೋಕಸಿದ್ಧವಾದಿಗಳು (positivists) ಹಾಗೂ ಕಟು ವಿಮರ್ಶಕರು ಒಪ್ಪಿಕೊಂಡರು. ಬೂರ್ಷ್ವಾ ಸಿದ್ಧಾಂತಿಗಳು ಮತ್ತು ಸಮಾಜವಾದಿಗಳಿಬ್ಬರೂ ನವ ವಿಜ್ಞಾನದ ಹೆಸರಲ್ಲಿ ಪ್ರತಿಜ್ಞೆಗೈಯ್ಯುವ ಮೂಲಕ ವಿಜ್ಞಾನಕ್ಕೆ ಅಚಲ ನಿಷ್ಠೆ ವ್ಯಕ್ತಪಡಿಸಿದರು. ಮಾನವ ಚಿಂತನೆಯ ಎಲ್ಲಾ ಸಂಶೋಧನಾ ಶಿಸ್ತುಗಳು ಜೀವ ವಿಜ್ಞಾನದ ತಳಹದಿಯಲ್ಲೆ ತಮ್ಮ ವೈಚಾರಿಕತೆಯನ್ನು ಮರು ರೂಪಿಸಿಕೊಳ್ಳಲು ಆರಂಭಿಸಿದವು. ಆದರೆ, ವಿಜ್ಞಾನದ ತಾತ್ತ್ವಿಕತೆ ಮಾತ್ರ ನಿರಾಶಾದಾಯಕವಾಗಿ ಪ್ರಬುದ್ಧಸ್ಥಿತಿಗೆ ತಲುಪಿತು. ಆದರೆ ಎಲ್ಲ ಸಂಗತಿಗಳಿಗೆ ಒದಗಿ ಬರುವ ರೀತಿಯಲ್ಲೇ ಈ ವಿಜ್ಞಾನದ ಉತ್ಕರ್ಷ ಯುಗವೂ ಅಂತ್ಯ ಕಾಣಲೇಬೇಕು. ವಿಜ್ಞಾನವು ತನಗೆ ತಾನೇ ನೆಮ್ಮದಿಯಿಂದಿರಲು ಸಾಧ್ಯವಿಲ್ಲದಂಥ ಪ್ರಬಲ ಸವಾಲು ಈಗ ಗಾಂಧಿಯ ಹೆಸರಿನಲ್ಲಿ ಉದ್ಭವವಾಗಿದೆ.

ಅಣುಶಕ್ತಿಯ ಹುಟ್ಟು ಮತ್ತು ಜಗತ್ತಿನ ಬಹುತೇಕ ರಾಷ್ಟ್ರಗಳಿಗೆ ದಕ್ಕಿದ ರಾಜಕೀಯ ಸ್ವಾತಂತ್ರ್ಯ. ಇವು ವಿಜ್ಞಾನಕ್ಕೆ ಹೊಸ ಪ್ರತಿಕ್ರಿಯೆಗಳನ್ನು ಮುನ್ನಡೆಸುವ ಮತ್ತು ರೂಪಿಸುವ ಎರಡು ಸನ್ನಿವೇಶಗಳು. ಗಾಂಧಿ ಈಗ ಬದುಕಿಲ್ಲ. ಆದರೆ ಈ ಹೊಸ ಪ್ರತಿಕ್ರಿಯೆಗಳಲ್ಲಿ ಗಾಂಧೀವಾದ ಬದುಕಿದೆ. ಮೇಲುನೋಟಕ್ಕೆ ಹಾಗೆ ಕಾಣದಿದ್ದರೂ, ಈ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸಿದಾಗ ಆತ್ಯಂತಿಕವಾಗಿ ಅವು ಗಾಂಧಿಚಿಂತನೆಯ ಲಕ್ಷಣಗಳನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಮಹಾಯುದ್ಧದ ನಂತರದ ಯುಗದಲ್ಲಿ ವಿಜ್ಞಾನದ ಸಮಸ್ಯಾತ್ಮಕತೆ (ಈ ದಿನದವರೆಗೂ ಅದು ತನ್ನೆಲ್ಲ ದೈತ್ಯಶಕ್ತಿಯಿಂದ ಮುಂದುವರೆದಿದೆ)ಯನ್ನು ಎತ್ತಿ ತೋರಿಸುತ್ತಿರುವುದೇ ಈ ಹೊಸ ಪ್ರತಿಕ್ರಿಯೆಗಳು; ಮತ್ತು ಈ ಸಮಸ್ಯಾತ್ಮಕತೆಯನ್ನೇ ಸಾಮಾನ್ಯವಾಗಿ 'ವಿಜ್ಞಾನ ಪ್ರಶ್ನೆ' ಎಂದು ಕರೆಯುತ್ತಾರೆ.

### ಸಮಸ್ಯೆಗಳು ಮತ್ತು ಪ್ರತಿಕ್ರಿಯೆಗಳು

ವಿಜ್ಞಾನ ಮತ್ತು ತಂತ್ರಜ್ಞಾನ ಇಂದಿನ ಸಮಾಜದಲ್ಲಿ ಸರ್ವವ್ಯಾಪಿಯಾಗಿದ್ದು, ಪ್ರಬಲ ಅಸ್ತಿತ್ವ ಪಡೆದಿವೆ. ಜನಸಾಮಾನ್ಯರ ಬದುಕಿನಲ್ಲಿ ಅವು ಅನೇಕ ರೀತಿಯಲ್ಲಿ, ಅನೇಕ ರೂಪದಲ್ಲಿ ಹಾಸುಹೊಕ್ಕಾಗಿ ಸೇರಿಕೊಂಡಿವೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನರ ಅಭೀಪ್ಸೆ ಮತ್ತು ಅವಶ್ಯಕತೆಯ ದೃಷ್ಟಿಯಲ್ಲಿ ಕಂಡಾಗ ಅವುಗಳ ಕೆಲವು ಮುಖಗಳು ಜನಪ್ರಿಯವಾದ ಕಟುವಿಮರ್ಶೆಗೆ ತುತ್ತಾಗಿವೆ. ಈ ಮುಖಗಳು ವಿಜ್ಞಾನವು ಜನಸಮುದಾಯವನ್ನು ತಲುಪಲು ಅದಕ್ಕಿರುವ ಮಿತಿ, ತಂತ್ರಜ್ಞಾನದ ಅಸಂಗತತೆ, ನಿಸರ್ಗ ಮತ್ತು ಜನರನ್ನು ನಾಶಪಡಿಸುವ ಸಾಮರ್ಥ್ಯ ಹಾಗೂ ಜ್ಞಾನಶಾಖೆಯ ವಿಲಕ್ಷಣತೆಗೆ ಸಂಬಂಧಿಸಿದೆ. ಈ ಸಮಸ್ಯೆಗಳಿಗೆ ಹುಟ್ಟಿದ ಪ್ರತಿಕ್ರಿಯೆಗಳನ್ನು ಜನಪದೀಯ ವಿಜ್ಞಾನ ಚಳವಳಿ (People's Science Movement), ಸೂಕ್ತ ತಂತ್ರಜ್ಞಾನ ಚಳವಳಿ, ಪರಿಸರ ಚಳವಳಿ, ಶಾಂತಿ ಚಳವಳಿ ಹಾಗೂ ಪರ್ಯಾಯ ವಿಜ್ಞಾನ ಚಳವಳಿಗಳಲ್ಲಿ ಗುರುತಿಸಬಹುದು. ಈ ಎಲ್ಲಾ ಆಂದೋಲನಗಳ ಸಂಕ್ಷಿಪ್ತ ಹಾಗೂ ಒಟ್ಟಂದದ ಸಮೀಕ್ಷೆಯು ವಿಜ್ಞಾನದ ಸಮಸ್ಯಾತ್ಮಕತೆಯನ್ನು ಸೂತ್ರೀಕರಿಸಲು ಅನುವು ಮಾಡಿಕೊಡುತ್ತದೆ.

## i. ಜನಪದೀಯ ವಿಜ್ಞಾನ ಚಳವಳಿ

'ವಿಜ್ಞಾನ ಮತ್ತು ತಂತ್ರಜ್ಞಾನದ ಭೌತಿಕ ಮತ್ತು ಆಧ್ಯಾತ್ಮಿಕ ಫಲಿತಗಳು ಜನಸಮುದಾಯವನ್ನು ತಲುಪಿಲ್ಲ ; ಸಮಾಜದ ಬಹುತೇಕ ಜನರು, ಈ ಕಾರಣದಿಂದ, ಆರ್ಥಿಕ ಪ್ರಗತಿ (ಸಂಪತ್ತು) ಮತ್ತು ಮನೋವಿಕಾಸದಿಂದ ವಂಚಿತರಾಗಿದ್ದಾರೆ; ಈ ಸನ್ನಿವೇಶದ ಸೃಷ್ಟಿಗೆ ಆಧುನಿಕ ವಿಜ್ಞಾನವೇ ನೇರ ಹೊಣೆ' ಎಂಬ ಗ್ರಹಿಕೆಯ ಮೇಲೆ ಇಂದು ಅನೇಕ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಜನಪದೀಯ ವಿಜ್ಞಾನ ಚಳವಳಿಗಳು ರೂಪುಗೊಂಡಿವೆ. ಈ ಗ್ರಹಿಕೆಯ ಆಧಾರದ ಮೇಲೆಯೇ ಹೋರಾಟ ಮಾಡುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಅಲ್ಪಸಂಖ್ಯಾತರ ಕೈಯಲ್ಲಿರುವ ಆಯುಧ; ಬಹುಸಂಖ್ಯಾತರ ಶೋಷಣೆಗೆ ಆಗಿಂದಾಗ್ಗೆ ಅದು ಬಳಕೆಯಾಗುತ್ತಿದೆಯೆಂದು ಬಹುತೇಕ ಜನಪದೀಯ ವಿಜ್ಞಾನ ಚಳವಳಿಗಳು ನಂಬಿವೆ. ಆದುದರಿಂದ ವಿಜ್ಞಾನವನ್ನು ಜನರ ಬಳಿಗೆ ಒಯ್ದಾಗ ಅದು ಅವರ ಕೈಯಲ್ಲಿ ಸಾಮಾಜಿಕ ಪರಿವರ್ತನೆಯ ಸಾಧನೆಗೆ ಬಳಸುವ ಅಸ್ತ್ರವಾಗುತ್ತದೆ; ವಿಜ್ಞಾನಿಗಳು ತಮ್ಮ ಪ್ರಯೋಗಾಲಯವನ್ನು ತ್ಯಜಿಸಿ ಹೊರಬಂದು ಜನರ ನಡುವೆ ಬೆರೆತು ವೈಜ್ಞಾನಿಕ ಮನೋಭಾವ ಮತ್ತು ಸಂಸ್ಕೃತಿಯನ್ನು ಹರಡಬೇಕೆಂಬ ತತ್ತ್ವವನ್ನು ಈ ಚಳವಳಿಗಳು ಪ್ರೋತ್ಸಾಹಿಸುತ್ತಿವೆ.

ಜನಪದೀಯ ವಿಜ್ಞಾನ ಚಳವಳಿಗಳ ತತ್ತ್ವ ಮತ್ತು ಗುರಿಗಳು ಗಾಂಧಿಯ ದೃಷ್ಟಿಕೋನಕ್ಕೆ ಅನುಗುಣವಾಗಿರುವಂತೆ ತೋರುತ್ತವೆ. ಆದರೆ ಅವೆರಡರ ಸಾದೃಶ್ಯ ಅಲ್ಲಿಗೇ ಕೊನೆಯದಾಗುತ್ತದೆ. ಆಧುನಿಕ ವಿಜ್ಞಾನವು ಸತ್ಯ, ಸಂಪತ್ತು ಮತ್ತು ತಿಳುವಳಿಕೆಗಳ ಆತ್ಯಂತಿಕ ಭಂಡಾರ ಎಂದು ಜನಪದೀಯ ವಿಜ್ಞಾನ ಚಳವಳಿಯ ನಿಲುವಾಗಿದೆ. ಈ ನಿಲುವು ಜನರ ನಂಬಿಕೆಗಳನ್ನು ಸಂಶಯದಿಂದ ನೋಡುತ್ತದೆ; ಮತ್ತು ಆಧುನಿಕ ವಿಜ್ಞಾನದ ಬಗ್ಗೆ ಅನುಮಾನ ವ್ಯಕ್ತಪಡಿಸುವವರನ್ನು ಅದು ಸಂದೇಹದಿಂದ ನೋಡಿ, ಅವರನ್ನು ಅಂಧಶ್ರದ್ಧೆ, ಪ್ರಗತಿ ವಿರೋಧೀ ಎಂದು ವರ್ಗೀಕರಿಸುತ್ತದೆ. ಇದು ಗಾಂಧಿಯ ದೃಷ್ಟಿಕೋನಕ್ಕೆ ವ್ಯತಿರಿಕ್ತವಾಗಿದೆ. ವಿಜ್ಞಾನವು ಸಂದೇಹಾತೀತವೆಂದು ಮೇಲ್ಮಣೆ ಹಾಕಿ ಗಾಂಧೀಜಿ ಅದನ್ನು ಆರಾಧಿಸಲಿಲ್ಲ. ಮಾತ್ರವಲ್ಲ, ಬಹುಜನ ಸಮೂಹದಲ್ಲಿ ದೀರ್ಘಕಾಲದಿಂದ ಹರಿದುಬಂದ ಪಾರಂಪಾರಿಕ ತಿಳುವಳಿಕೆ, ಬದುಕಿನ ಮಾರ್ಗದ ಬಗ್ಗೆ ಗೌರವ ಹೊಂದಿದ್ದರು. ಅಲ್ಲದೆ ಅನೇಕ ವೇಳೆ ಆ ಬಗ್ಗೆ ನಂಬಿಕೆ ಇರಿಸಿದ್ದರು.

ಹಾಗಾಗಿ ಜನಪದೀಯ ವಿಜ್ಞಾನ ಚಳವಳಿಗಳು ನಿಜಕ್ಕೂ ವಿಜ್ಞಾನದ ಪ್ರಚಲಿತ ಆಚರಣೆಗೆ ಸಂಬಂಧಿಸಿದಂತೆ ಸ್ಪಷ್ಟರೂಪದ ಸಮಸ್ಯೆಯನ್ನೇನ್ನೋ ಎತ್ತಿ ತೋರಿಸುತ್ತವೆ. ಆದರೆ ವಿಜ್ಞಾನದ ಬಗ್ಗೆ ಈ ಚಳವಳಿಗೆ ಇದ್ದ ಅಚಲ ನಂಬಿಕೆಯ ಕ್ರಮವು ಈ ಸಮಸ್ಯೆಗಳ ಆಧುನಿಕ ವಿಜ್ಞಾನದಲ್ಲಿ ಅಂತರ್ಗತವಾಗಿರುವ ಲಕ್ಷಣಗಳ ಜೊತೆ ಸಂಬಂಧ ಹೊಂದಿದೆ ಎಂಬುದನ್ನು ಗುರುತಿಸಲು ಬಿಡುವುದಿಲ್ಲ. ವಿಜ್ಞಾನ ಬಹುಜನ ಸಮುದಾಯಕ್ಕೆ ತಲುಪದಿರಲು ಸಾಮಾಜಿಕ ಮತ್ತು ರಾಜಕೀಯ ಅಂಶಗಳೇ ಕಾರಣವೆಂದು ಈ ಚಳವಳಿಗಳು ತರ್ಕಿಸುತ್ತವೆಯೇ ವಿನಾ ವಿಜ್ಞಾನಕ್ಕೆ ಸಹಜವಾಗಿಯೇ ಇರುವ ಮಿತಿ

ನಿಜಕ್ಕೂ ಕಾರಣವೆಂದು ಒಪ್ಪುವುದಿಲ್ಲ. ನಿಜಕ್ಕೂ ಈ ಸಮಸ್ಯೆಯನ್ನು ಅವು ಎತ್ತಲೇ ಇಲ್ಲ. ಆದರೆ ಆ ಸಮಸ್ಯೆಯನ್ನು ಎತ್ತಲು ಗಾಂಧಿ ನೆರವಾಗುತ್ತಾರೆ.

**ii. ಸೂಕ್ತ ತಂತ್ರಜ್ಞಾನದ ಚಳವಳಿ**

ಒಂದು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸರದಲ್ಲಿ ಅಭಿವೃದ್ಧಿಯಾದ ತಂತ್ರಜ್ಞಾನವು ಅದಕ್ಕಿಂತ ಭಿನ್ನವಾದ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಪರಿಸರಕ್ಕೆ ಸೂಕ್ತವಾಗಿ ಅನ್ವಯವಾಗದು ಎಂಬ ನಿಲುವನ್ನು ಸೂಕ್ತ ತಂತ್ರಜ್ಞಾನದ ಚಳವಳಿಗಳು (Appropriate Technology Movement) ಆಧರಿಸಿವೆ. ನಿರ್ದಿಷ್ಟವಾಗಿ ಹೇಳುವುದಾದರೆ, ಅಭಿವೃದ್ಧಿ ಹೊಂದಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೂಪತಳೆದ ತಂತ್ರಜ್ಞಾನಗಳು ಅನೇಕ ಕಾರಣಗಳಿಂದಾಗಿ ಅಷ್ಟೇನು ಮುಂದುವರಿಯದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸೂಕ್ತವಾಗದು ಎಂಬ ಅಭಿಪ್ರಾಯವಿದು. (ಸೂಕ್ತ ತಂತ್ರಜ್ಞಾನ ಚಳವಳಿಗಳು ಅಭಿವೃದ್ಧಿಗೆ ಒಂದು ವೈಜ್ಞಾನಿಕ ಮಾಪಕವನ್ನು ರೂಢಿಸುವ ನೆಲೆಯ ಮೇಲೆ ನಿಂತಿವೆ.) ಹೀಗಾಗಿ ಸೂಕ್ತ ತಂತ್ರಜ್ಞಾನ ಚಳವಳಿಗಳು ವಿವಿಧ ರಾಷ್ಟ್ರಗಳಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಆಯಾ ಪ್ರದೇಶದ ನಿರ್ದಿಷ್ಟ ಅಗತ್ಯತೆ ಮತ್ತು ಅವುಗಳ ಅಭಿವೃದ್ಧಿಯ ಪ್ರಮಾಣಕ್ಕೆ ತಕ್ಕಂತೆ ಅನೇಕ ಸ್ವರೂಪಗಳನ್ನು ತಳೆದಿವೆ. ಈ ಆಂದೋಲನಗಳ ಪ್ರಮುಖ ಲಕ್ಷಣಗಳೆಂದರೆ–1. ಅಗಾಧ ಜನಸಾಮಾನ್ಯರು ಬಳಸುವ ದೈನಂದಿನ ಉಪಕರಣಗಳ (ಉದಾ : ನೇಗಿಲು, ಎತ್ತಿನಬಂಡಿ, ಸೌದೆ ಒಲೆ, ರಿಕ್ಷಾ ಇತ್ಯಾದಿ) ಸುಧಾರಣೆಗೆ ಆಧುನಿಕ ವೈಜ್ಞಾನಿಕ ಜ್ಞಾನದ ಬಳಕೆ. 2. ಬಳಸುವ ತಂತ್ರಜ್ಞಾನವು ಆಯಾ ಪ್ರದೇಶದ ಅಭಿವೃದ್ಧಿ ಮಟ್ಟವನ್ನು ಆಧರಿಸಿರಬೇಕೆಂಬ ಎಚ್ಚರ. (ಉದಾಹರಣೆಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಸಣ್ಣ ಮತ್ತು ಸರಳ ಯಂತ್ರಗಳು ಸಾಕು ಎಂಬ ನಿಲುವು). 3. ಆಯಾ ರಾಷ್ಟ್ರಗಳ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಸಮರ್ಪಕವಾಗಿ ಬಳಸಿಕೊಳ್ಳಲು ಸೂಕ್ತವಾದ ತಂತ್ರಜ್ಞಾನ ಅಭಿವೃದ್ಧಿ; ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ಪದಾರ್ಥಗಳನ್ನು ಕೈಗಾರಿಕೆಗಳಲ್ಲಿ ಬಳಸುವ ಬಗ್ಗೆ ಒತ್ತು (ಉದಾಹರಣೆಗೆ ಭತ್ತದ ಹೊಟ್ಟನ್ನು ಸಿಮೆಂಟ್ ತಯಾರಿಸಲು ಬಳಸುವುದು).

ಆದರೆ ಇಲ್ಲಿ ಒಂದು ಅಂಶವನ್ನು ಗಮನಿಸುವುದು ಅಗತ್ಯ. ಸೂಕ್ತ ತಂತ್ರಜ್ಞಾನದ ಚಳವಳಿಯ ವಿವಿಧ ಕವಲುಗಳು ಇಂಥ ಅನೇಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಪ್ರತ್ಯೇಕ ನಿಲುವುಗಳನ್ನು ತೆಗೆದುಕೊಂಡಿವೆ. ಕೆಲವು ಚಳವಳಿಗಳು ದೇಶೀ ತಂತ್ರಜ್ಞಾನದ ಮಹತ್ತ್ವವನ್ನು ಒತ್ತಿ ಹೇಳಿವೆ. ಸ್ಥಳೀಯ ಪರ್ಯಾವರಣ ವ್ಯವಸ್ಥೆಯನ್ನು ಸಮಗ್ರವಾಗಿ ತಿಳಿದುಕೊಳ್ಳಲು ವಿಜ್ಞಾನಕ್ಕಿಂತ ದೇಶೀ ತಂತ್ರಜ್ಞಾನವು ಉತ್ತಮ ಸಾಧನ ಎಂದು ಪ್ರತಿಪಾದಿಸಿವೆ. ವಿಜ್ಞಾನ ಹಲವು ವೇಳೆ ಅಂಥ ದೇಶೀ ಜ್ಞಾನವನ್ನು ತನ್ನೊಳಗೆ ಜೀರ್ಣಿಸಿಕೊಂಡು ರೂಪಾಂತರಗೊಳ್ಳುವುದಕ್ಕಿಂತ ಅದನ್ನು ನಾಶಮಾಡುವುದೇ ಹೆಚ್ಚು ಎಂದು ಆತಂಕ ವ್ಯಕ್ತಪಡಿಸಿವೆ.

ಸೂಕ್ತ ತಂತ್ರಜ್ಞಾನ ಚಳವಳಿಗೆ 'ಸ್ವದೇಶಿ'ಯ ಸ್ಪರ್ಶವಿರುವಷ್ಟರ ಮಟ್ಟಿಗೆ ಅವು ಗಾಂಧಿ ಚಿಂತನೆಯ ಹಾದಿಯಲ್ಲೇ ಇವೆ ಎಂಬಂತೆ ಕಾಣುತ್ತದೆ. ಸೂಕ್ತ ತಂತ್ರಜ್ಞಾನವನ್ನು ಬಳಸುವ ಅನೇಕರು ತಾವು ಗಾಂಧಿ ಅನುಯಾಯಿಗಳೆಂದೇ ಹೇಳಿಕೊಳ್ಳುತ್ತಾರೆ. ಆದರೆ ಈ ಸ್ವದೇಶಿ ಸ್ಪರ್ಶದ ಮಹತ್ವಕ್ಕೆ ಒಂದು ಮಿತಿಯಿದೆ. ಸೂಕ್ತ ತಂತ್ರಜ್ಞಾನವು ದೇಶೀಯತೆಯನ್ನು, ಅದರಲ್ಲಿ ಅಂತರ್ಗತವಾಗಿರುವ ಕೌಶಲ್ಯಗಳನ್ನು ಅಂದರೆ ತಾಂತ್ರಿಕ ಜ್ಞಾನಕ್ಕಷ್ಟೆ, ಮಾನ್ಯತೆ ನೀಡುತ್ತದೆಯೇ ಹೊರತು ದೇಶೀಯ ಜ್ಞಾನದ ಒಟ್ಟು ಸ್ವರೂಪಕ್ಕಲ್ಲ. ಹಾಗಾಗಿ ಆಧುನಿಕ ವಿಜ್ಞಾನ ನಿಸ್ಸಂದೇಹವಾಗಿ ಉತ್ಕೃಷ್ಟವಾದ ಜ್ಞಾನ ವ್ಯವಸ್ಥೆ ಎಂಬ ಅಧಿಕಾರವಾಣಿಯನ್ನು ಆ ಮೂಲಕ ಒಪ್ಪಿಕೊಂಡಂತಾಯಿತು. ಇಲ್ಲೇ ಸೂಕ್ತ ತಂತ್ರಜ್ಞಾನ ಚಳವಳಿಗಳ ಚಿಂತನೆಗೂ ಗಾಂಧಿಯ ಚಿಂತನೆಗೂ ಸಂಘರ್ಷ ಆರಂಭವಾಗುವುದು.

ಆಧುನಿಕ ತಂತ್ರಜ್ಞಾನಗಳ ವಿಸ್ತರಣೆಯಲ್ಲಿಯ ಅಸಂಗತಿಗಳನ್ನು, ತೊಡಕುಗಳನ್ನು ಸೂಕ್ತ ತಂತ್ರಜ್ಞಾನ ಚಳವಳಿಗಳು ಎತ್ತಿ ತೋರಿಸುತ್ತಿರುವ ಬಗ್ಗೆ ಯಾವ ಸಂದೇಹವೂ ಇಲ್ಲ. ಅವು ಆ ತಂತ್ರಜ್ಞಾನವನ್ನು ಪಡೆಯುವುದರ ಕಡೆಯಿಂದ ಈ ಅಸಂಗತಿಗಳ ಅಗಾಧತೆಯನ್ನು ಸಂಕುಚಿತಗೊಳಿಸಿ ಅವುಗಳಿಗೆ ಪರಿಹಾರವನ್ನು ನೀಡಲು ಯತ್ನಿಸುತ್ತವೆ. ಆದೆ ಈ ಅಸಂಗತಿಗಳು ನೇರವಾಗಿ ವಿಜ್ಞಾನದ ಸ್ವರೂಪ ಸಂಬಂಧವಿರುವಂಥವುಗಳು ಎಂದು ತೋರಿಸುವಲ್ಲಿ ಸೋಲುತ್ತವೆ. ಈ ತಾರತಮ್ಯವು ವಿಜ್ಞಾನದ ಸ್ವಭಾವಸಿದ್ಧ ಗುಣದೊಳಗೆ ಅಂತರ್ಗತವಾಗಿದೆ ಎಂಬುದುನ್ನು ಕಂಡುಕೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿದೆ. ಈ ಅಸಂಗತಿಗಳು ವಿಜ್ಞಾನದ ಆಂತರಿಕ ಸ್ವರೂಪಕ್ಕೆ ಸಂಬಂಧಪಟ್ಟಿದೆಯೇ ಎಂಬುದನ್ನು ಈ ಚಳವಳಿಗಳು ವಿಮರ್ಶೆಗೆ ಒಳಪಡಿಸುವುದೇ ಇಲ್ಲ. ಗಾಂಧಿಯ ಮಾರ್ಗವು ಇಂಥ ಪ್ರಯತ್ನಕ್ಕೆ ನೆರವಾಗಬಲ್ಲದು.

**iii. ಜೀವ ಪರಿಸರ ಚಳವಳಿ**

ಒಂದು ಪರ್ಯಾವರಣದಲ್ಲಿ ಆಂತರಿಕವಾಗಿ ಪರಸ್ಪರ ಸಂಬಂಧಗಳಿರುವ, ಸುಸಂಗತವಾದ ಪರಸ್ಪರ ಪ್ರಭಾವ ಬೀರುತ್ತಾ ಕಾರ್ಯಪ್ರವೃತ್ತವಾದ, ಅಖಂಡವಾದ ಸುವ್ಯವಸ್ಥೆಗಳನ್ನು ಛಿದ್ರಗೊಳಿಸುವ ಆಧುನಿಕ ವಿಜ್ಞಾನದ ಪ್ರವೃತ್ತಿಯ ಬಗ್ಗೆ ಜೀವ ಪರಿಸರ ಚಳುವಳಿಯು (Ecological Movement) ಕಾಳಜಿ ತೋರಿಸುತ್ತಿದೆ. ಮಾಲಿನ್ಯ ವಿರೋಧಿ ಮತ್ತು ಪರಿಸರ ಚಳವಳಿಗಳು ಜೀವಪರಿಸರ ಚಳವಳಿಯ ಸಣ್ಣ ಭಾಗ ಮಾತ್ರ. ಪಾಶ್ಚಾತ್ಯ ರಾಷ್ಟ್ರಗಳಿಗೆ ಮೂರು ದಶಕಗಳಿಗೂ ಹೆಚ್ಚು ಕಾಲದಿಂದ ಈ ಚಳವಳಿಗಳ ಪರಿಚಯವಿದೆ. ಆದರೆ ಇಂದು ಭಾರತದಂಥ ರಾಷ್ಟ್ರಗಳಲ್ಲೂ ಅವು ಬಹು ಮುಖ್ಯ ಕಾಳಜಿಗಳು. ತೆಹ್ರಿ ಜಲಾಶಯ, ನರ್ಮದಾ ಕಣಿವೆ ಯೋಜನೆ, ಕಾಡನ್ನು ನಾಶಮಾಡುವುದರ ವಿರುದ್ಧ ವ್ಯಕ್ತವಾದ ಪ್ರತಿಭಟನೆಗಳು ಭಾರತದಲ್ಲಿ ಪರಿಸರ ಚಳವಳಿಯು ಪಡೆದಿರುವ ಮಹತ್ತ್ವವನ್ನು ಸಾರಿ ಹೇಳುತ್ತವೆ.

ಜೀವಪರಿಸರವಾದಿಗಳು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ವಿನಾಶಕಾರಿ ಬಳಕೆಯ ಬಗ್ಗೆ ಯಶಸ್ವಿಯಾಗಿ ಬೆಳಕು ಚೆಲ್ಲಿದ್ದಾರೆ. ಆದರೆ ತಮ್ಮ ವಿರೋಧವು

ಆಧುನಿಕ ವಿಜ್ಞಾನದ ಅಂತರ್ಯದಲ್ಲೇ ವಿನಾಶ ಹುದುಗಿದೆ ಎಂಬ ಬಗ್ಗೆಯೇ ಅಥವಾ ಸಾಮಾಜಿಕ, ಆರ್ಥಿಕ, ರಾಜಕೀಯ ನೀತಿಯಿಂದ ಹುಟ್ಟಿದ ಅದರ ಆನುಷಂಗಿಕ ಗುಣದ ಬಗ್ಗೆಯೇ ಎಂಬ ಚರ್ಚೆಯನ್ನು ಜೀವಪರಿಸರವಾದಿಗಳು ಇನ್ನೂ ಹುಟ್ಟುಹಾಕಿಲ್ಲ.

ಜೀವಪರಿಸರ ವಿಜ್ಞಾನದ ಪ್ರಶ್ನೆಯು ಹೆಚ್ಚು ಆಳವಾದ ಮತ್ತು ವ್ಯಾಪಕವಾದ ಮಹತ್ತ್ವವನ್ನು ಹೊಂದಿದೆ. ನೈಸರ್ಗಿಕ ಮತ್ತು ಮಾನವ ವ್ಯವಸ್ಥೆಯ ಕಾರ್ಯರೂಪಗಳನ್ನು ಛಿದ್ರಗೊಳಿಸುವುದರ ಕೈಯಲ್ಲಿ ಆಧುನಿಕ ವಿಜ್ಞಾನ ಸುಲಭದ ಉಪಕರಣ ಏಕಾಗಿದೆ? ಆಧುನಿಕ ವಿಜ್ಞಾನ ಎನ್ನುವುದು ಕೇವಲ ಒಂದು ಜ್ಞಾನ ವ್ಯವಸ್ಥೆಯೇ? ಅಥವಾ ನೈಸರ್ಗಿಕ ವ್ಯವಸ್ಥೆಯನ್ನೇ ಭಗ್ನಗೊಳಿಸುವ ಪ್ರವೃತ್ತಿಯನ್ನೂ ಹೊತ್ತು ತರುವುದೇ? ಈ ನೈಸರ್ಗಿಕ ವಿಜ್ಞಾನ ಮೂಲಭೂತವಾಗಿ ನಿಸರ್ಗ ವಿರೋಧಿಯೇ? ವಿಜ್ಞಾನವು ವಿನಾಶಕಾರಿ, ಮಾಲಿನ್ಯಕಾರಿ ಮೌಲ್ಯಗಳಿಗೆ ರೂಪ ನೀಡುವುದೇ ಅಥವಾ ಅವುಗಳನ್ನೇ ಒಳಗೊಂಡಿರುವುದೇ ?

**iv. ಶಾಂತಿ ಚಳವಳಿ**

ಶಾಂತಿ ಚಳವಳಿಯು (Peace Movement) ಜೀವಪರಿಸರ ಸ್ವರೂಪವನ್ನು ಹೊಂದಿದೆ. ಶಾಂತಿ ಚಳವಳಿ ಬಹುತೇಕವಾಗಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಸೀಮಿತವಾಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ದಕ್ಷಿಣ ರಾಷ್ಟ್ರಗಳಲ್ಲಿ ಅಣುಶಕ್ತಿ ಅಭಿವೃದ್ಧಿಯಾದ ನಂತರ, ಇಲ್ಲಿಯೂ ಅದು ರೂಪುಗೊಳ್ಳುತ್ತಿದೆ. ಶಾಂತಿ ಚಳವಳಿ ಪ್ರಮುಖವಾಗಿ ಯುದ್ಧವಿರೋಧಿ. ಮೊದಲ ಬಾರಿಗೆ ಆಧುನಿಕ ವಿಜ್ಞಾನವು ಒಮ್ಮೆಲೇ ಮಿಲಿಯಾಂತರ ಜನರನ್ನು ಕೊಲ್ಲುವ ಸಾಧ್ಯತೆಯನ್ನು ಆಗುಮಾಡಿದೆ. ಹಾಗಾಗಿ ಶಾಂತಿ ಆಂದೋಲನವು ಆಧುನಿಕ ವಿಜ್ಞಾನ ಸೃಷ್ಟಿಸಿದ ಸನ್ನಿವೇಶವನ್ನು ವಿರೋಧಿಸುವ ಚಳವಳಿಯಾಗಿಯಷ್ಟೇ ಹುಟ್ಟಿದೆ.

ಈಗ ನಿಧಾನವಾಗಿ ಮುನ್ನೆಲೆಗೆ ಬರುತ್ತಿರುವ ಪ್ರಶ್ನೆಯೆಂದರೆ, ಹಿಂಸೆ ಎನ್ನುವುದು ಆಧುನಿಕ ವಿಜ್ಞಾನದೊಳಗೆ ಸ್ವಭಾವಸಿದ್ಧವಾಗಿ ಸೇರಿಹೋಗಿದೆಯೇ ಎಂಬುದು. ಹಾಗಿದ್ದರೆ ಅದನ್ನು ಸತ್ಯದ ಭಂಡಾರ ಎಂದು ಅಂಗೀಕರಿಸುವುದು ಸಾಧ್ಯವೇ ? ಈ ಪ್ರಶ್ನೆಗೆ ಉತ್ತರ ಪಡೆಯಲು ಸಹಜವಾಗಿಯೇ ಗಾಂಧಿಯ ನೆರವು ಅಗತ್ಯ.

**v. ಪರ್ಯಾಯ ವಿಜ್ಞಾನ ಚಳವಳಿ**

ಪರ್ಯಾಯ ವಿಜ್ಞಾನ ಚಳವಳಿಯು (Alternative Science Movement) ಇವುಗಳಿಗಿಂತ ತೀರ ಭಿನ್ನ. ಅದರ ಸ್ವರೂಪವೇ ಬೇರೆ. ಇದು ಪಶ್ಚಿಮ ರಾಷ್ಟ್ರಗಳಲ್ಲಿ ಕೆಲವು ಕಾಲ ಮಾನವತಾವಾದಿ ನೆಲೆಯಲ್ಲಿ ವಿಜ್ಞಾನವನ್ನು ಕಟು ವಿಮರ್ಶೆಗೊಳಪಡಿಸುವ ಶಾಂತಿ/ಜೀವಪರಿಸರ ಸಾರ್ವಜನಿಕ ಚಳವಳಿಯಾಗಿ ವಿಶಾಲವಾಗಿ ಹಮ್ಮಿಕೊಂಡು ಅಸ್ತಿತ್ವದಲ್ಲಿತ್ತು. ಆದರೆ ಪೂರ್ವ ರಾಷ್ಟ್ರಗಳಲ್ಲಿ ಈ ಚಳವಳಿ ಇದಕ್ಕಿಂತಲೂ ಶಕ್ತಿಶಾಲಿ ಹಾಗೂ ಕ್ರಾಂತಿಕಾರಕ ರೂಪತಳೆದು ಜಾರಿಗೆ ಬಂದಿದೆ. ಪರ್ಯಾಯ ವಿಜ್ಞಾನ ಚಳವಳಿಗಳು ನಿಜಕ್ಕೂ ವಿಜ್ಞಾನವು ತಾನೇ ಹೇಳಿಕೊಳ್ಳುವ ವಿಶಿಷ್ಟತೆ ಮತ್ತು ನೈತಿಕತೆಯಿಂದ ಮುಕ್ತವಾದ

ಮೌಲ್ಯಗಳನ್ನು ಪ್ರಶ್ನಿಸುತ್ತವೆ. ವಿಜ್ಞಾನವು ಯುರೂಪಿನ ರಾಷ್ಟ್ರಗಳ ಸಾಮ್ರಾಜ್ಯ ವಿಸ್ತರಣಾ ನೀತಿಯನುಸಾರವಾದ ಸಾಮ್ರಾಜ್ಯಶಾಹಿ ಧೋರಣೆಯ ಒಡನಾಡಿ ಎಂದು ಆಧುನಿಕ ವಿಜ್ಞಾನವನ್ನು ಅವು ಬಣ್ಣಿಸುತ್ತವೆ. ಹಾಗಾಗಿ ಯುರೂಪಿಯನ್ನರ ಆಳ್ವಿಕೆ ವಿಶ್ವವ್ಯಾಪಿಯಾದ ನಂತರ ವಿಜ್ಞಾನವು ಜಗತ್ತಿನಾದ್ಯಂತ ಹರಡಿ ವಿಶ್ವವ್ಯಾಪಕತ್ವ ಪಡೆದು ವಿಶ್ವಮಾನ್ಯವಾಯಿತು. ಬಹುತೇಕ ಪರ್ಯಾಯ ವಿಜ್ಞಾನ ಚಳವಳಿಗಳ ಪ್ರಕಾರ ಆಧುನಿಕ ವಿಜ್ಞಾನವು ತನ್ನ ಸ್ವಭಾವಕ್ಕನುಗುಣವಾಗಿ ಕೇಂದ್ರೀಕೃತ ವ್ಯವಸ್ಥೆಯನ್ನು, ಆ ಮೂಲಕ ಶ್ರೇಣೀಕೃತ ವ್ಯವಸ್ಥೆಯನ್ನು ಪೋಷಿಸುತ್ತದೆ. ಹಾಗೆ ನೋಡಿದರೆ ಪರ್ಯಾಯ ವಿಜ್ಞಾನ ಚಳವಳಿಗಳು ವಿಜ್ಞಾನವನ್ನು ಸಾಂಸ್ಕೃತಿಕ, ಸಾಮಾಜಿಕ, ಮಾನವೀಯ, ವೈಜ್ಞಾನಿಕ ಮುಂತಾದ ಹಲವು ದೃಷ್ಟಿಕೋನಗಳಿಂದ ಹಲವು ನಿಲುವುಗಳಿಂದ ಪ್ರಶ್ನಿಸುತ್ತಿವೆ. ಹೆಚ್ಚಿನ ಚಳವಳಿಗಳು 'ವಿಜ್ಞಾನ' ಎಂಬ ಪರಿಕಲ್ಪನೆಯನ್ನೇ ಒಪ್ಪುವುದಿಲ್ಲ. ತಮ್ಮ ನಾಡಿನ ವೈಜ್ಞಾನಿಕ ಪರಂಪರೆಯ ಬಗ್ಗೆ ಗೌರವ ಹೊಂದಿರುವ ಸಂಶೋಧಕರು ಅಂಥ ಪರಂಪರೆಗಳು ಪರ್ಯಾಯ ವೈಜ್ಞಾನಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಮೂಲಗಳೆಂದು ಭಾವಿಸುತ್ತಾರೆ. ಇವೆಲ್ಲವೂ ಸಹಜವಾಗಿ ಆಧುನಿಕ ವಿಜ್ಞಾನದ ಜ್ಞಾನಶಾಸ್ತ್ರದ ಅಸ್ತಿಭಾರಕ್ಕೇ ಸವಾಲೊಡ್ಡುತ್ತವೆ.

ಈ ಹಿನ್ನೆಲೆಯಲ್ಲಿ ಪರ್ಯಾಯ ವಿಜ್ಞಾನ ಚಳವಳಿಗಳು ಗಾಂಧಿಯವರ ಚಿಂತನೆಗೆ ಹತ್ತಿರವಾಗಿರುವಂತೆ ಗೋಚರಿಸುತ್ತವೆ. ಆದರೆ ಈ ಚಳವಳಿಗಳು ಸಾಮಾನ್ಯವಾಗಿ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಪರ್ಯಾಯ ವಿಧಾನಗಳನ್ನು ಬಿಂಬಿಸುವ ಜನಪ್ರಿಯ ಆಚರಣೆಗಳ ಜೊತೆ ಸಂಪರ್ಕ ಸಾಧಿಸಲು ಸಾಧ್ಯವಾಗದೆ ಕೇವಲ ಬೌದ್ಧಿಕ ಚಟುವಟಿಕೆಗಳಾಗಿ ಉಳಿದಿವೆ. ಆದುದರಿಂದ ಅವು ಪ್ರಸ್ತುತ ಜಗತ್ತಿನ ವಾಸ್ತವ ನೆಲೆಯಲ್ಲಿ ಕಾರ್ಯೋನ್ಮುಖವಾಗದೆ ಸೈದ್ಧಾಂತಿಕ ಚರ್ಚೆಗಳ ಗೊಂದಲದಲ್ಲಿ ಸಿಲುಕಿಕೊಂಡಿವೆ. ಪರಿಣಾಮವಾಗಿ ಅವು ಸಿದ್ಧಾಂತಿಗಳ ಒಲವು, ಮರ್ಜಿಗಳಿಗೆ ತಕ್ಕ ಹಾಗೆ ಕೇವಲ ಚರ್ಚೆಯ ವಸ್ತುವಾಗಿ ಉಳಿದು ಬಿಟ್ಟಿವೆ. ಆದರೂ ಪರ್ಯಾಯ ವಿಜ್ಞಾನ ಚಳವಳಿಗಳು ಆಧುನಿಕ ವಿಜ್ಞಾನದ ಪ್ರಶ್ನಾತೀತ ಸ್ಥಾನಮಾನವನ್ನು ಮುರಿಯುವ ಪ್ರಯತ್ನದಲ್ಲಿ ಒಂದು ದೊಡ್ಡ ಸಾಹಸವನ್ನೇ ಮಾಡಿವೆ.

**ಸಮಸ್ಯಾತ್ಮಕತೆ**

ಆಧುನಿಕ ವಿಜ್ಞಾನಕ್ಕೆ ಹುಟ್ಟಿಕೊಂಡ ಪ್ರತಿಕ್ರಿಯೆಗಳು ಎತ್ತಿತೋರಿಸಿದ ವಿಜ್ಞಾನದ ವ್ಯಾಪ್ತಿಗಿರುವ ಮಿತಿ, ಸೂಕ್ತವಲ್ಲದ ತಂತ್ರಜ್ಞಾನ, ಜೀವ ಪರಿಸರ ನಾಶ, ಯುದ್ಧ ಮತ್ತು ಹಿಂಸೆ, ಕೇಂದ್ರೀಕರಣ, ಶ್ರೇಣೀಕೃತ ವ್ಯವಸ್ಥೆ, ಶೋಷಣೆ, ಸಂಕುಚಿತ ಭಾವನೆ ಮುಂತಾದ ಆಧುನಿಕ ಜ್ಞಾನದಿಂದ ಹುಟ್ಟಿ ಉಲ್ಬಣಗೊಂಡ ಸಮಸ್ಯೆಗಳು ಪ್ರತಿಕ್ರಿಯೆಯಾಗಿ ಹರಳುಗಟ್ಟಿದ್ದನ್ನು ಹಿಂದೆ ಚರ್ಚಿಸಿದೆ. ಅಂಥ ಪ್ರತಿಕ್ರಿಯೆಗಳು ಪಾರ್ಶ್ವ ಪ್ರತಿಕ್ರಿಯೆಗಳಾಗಿಯೂ ಸೀಮಿತವೇ ಆಗಿದ್ದರೂ ಕೂಡ ಅವೆಲ್ಲವೂ ಒಟ್ಟಾಗಿ 'ವಿಜ್ಞಾನ ಪ್ರಶ್ನೆ' ಅಥವಾ ವಿಜ್ಞಾನದ ಸಮಸ್ಯಾತ್ಮಕತೆಯನ್ನು ಎತ್ತಿ ತೋರಿಸುತ್ತವೆ ಎಂದು ಹೇಳಬಹುದೇ ?

ಈ ಪ್ರಶ್ನೆಗಳಿಗೆ ನಾವು ಮತ್ತಷ್ಟನ್ನು ಸೇರಿಸಬಹುದು. ಆ ಪಟ್ಟಿಯು ಮಾನವ ಬದುಕಿನ ಯಾವತ್ತೂ ಸಂಗತಿಯನ್ನು ಮತ್ತು ಈ ವಿಶಾಲ ಜಗತ್ತಿನ ಸಮಸ್ತ ವಿದ್ಯಮಾನಗಳನ್ನು ಒಳಗೊಳ್ಳಬಹುದು. ಈ ಎಲ್ಲಾ ಸಮಸ್ಯೆಗಳಿಗೂ ಒಂದೇ ಮೂಲ ಇರಬಹುದೇ, ಒಂದೇ ಅಹಿತಕರವಾದ ಕೇಂದ್ರ ಸತ್ಯದಿಂದ ಎಲ್ಲವೂ ಅಸ್ತಿತ್ವವನ್ನು ಪಡೆದುಕೊಳ್ಳುತ್ತಿವೆಯೇ ಎಂದು ನಾವು ಗುರುತಿಸಲು ಪ್ರಯತ್ನಿಸಬಹುದೇ? ಈ ಬಗ್ಗೆ ನನ್ನ ನಿಲುವನ್ನು ನಾನು ಮುಂದಿನ ಎರಡು ಪ್ರಮೇಯಗಳಲ್ಲಿ ಸ್ಪಷ್ಟಪಡಿಸುತ್ತೇನೆ.

**ಪ್ರಮೇಯ ಒಂದು** : ಆಧುನಿಕ ವಿಜ್ಞಾನ ಎಂಬುದು ಸ್ವಭಾವಸಿದ್ಧವಾಗಿಯೇ ಅಸತ್ಯ. ಸಮಸ್ಯೆಗಳು ಮತ್ತು ವೈರುಧ್ಯಗಳು ಆನುವಂಶಿಯವಾಗಿಯೇ ಆ ಸ್ವಭಾವಸಿದ್ಧ ಅಸತ್ಯದೊಡನೆ ಸಂಬಂಧ ಹೊಂದಿವೆ.

**ಪ್ರಮೇಯ ಎರಡು** : ಗಾಂಧಿಯವರ ತತ್ತ್ವಚಿಂತನೆಯು ವಿಜ್ಞಾನದ ಈ ಅಂತರ್ಗತ ಅಸತ್ಯವನ್ನು ಬಹಿರಂಗೊಳಿಸುತ್ತದೆ; ಹೊಸ ವಿಜ್ಞಾನ ಮತ್ತು ಹೊಸ ಸಮಾಜಕ್ಕೆ ದಾರಿ ಮಾಡಿಕೊಡುತ್ತದೆ.

ಪ್ರಸ್ತುತ ಈ ಕೃತಿಯು ಗಾಂಧಿಯ ತತ್ತ್ವಜ್ಞಾನದ ಬಗೆಗೆ ಮಾಡಿರುವ ಮಹತ್ತ್ವದ ಪ್ರಯೋಗ. ಇದು ವಿಜ್ಞಾನ ಪ್ರಶ್ನೆಯ ಲಕ್ಷಣವನ್ನು ಗ್ರಹಿಸುವ ಮತ್ತು ವಿಜ್ಞಾನದ ಸ್ವಭಾವಸಿದ್ಧ ಅಸತ್ಯವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ. ಈ ವಿಶ್ಲೇಷಣೆಯ ಉದ್ದೇಶವೇ ಆ ಸ್ಥಿತಿಯಿಂದ ಹೊರಬರುವ ಮಾರ್ಗದ ಅನ್ವೇಷಣೆಯಾಗಿದೆ.

●

## ಅಧ್ಯಾಯ ಮೂರು

# ತತ್ತ್ವಜ್ಞಾನ

(Philosophy)

"ಗಾಂಧಿ ಭವಿಷ್ಯತ್ತಿನ ತತ್ತ್ವಜ್ಞಾನಿ ; ಅವರು ಮಾನವಕುಲದ ಕಲ್ಯಾಣಕ್ಕಾಗಿ ಬದುಕನ್ನು ಪುನರ್ ರೂಪಿಸಲು ಅವಶ್ಯವಾದ ಚಿಂತನೆಗಳ ಖನಿ ; ಅವರ ಚಿಂತನೆಗಳು ಮುಂದಿನ ಒಂದು ಸಾವಿರ ವರ್ಷ ಅಥವಾ ಅದಕ್ಕಿಂತಲೂ ದೀರ್ಘವಾದ ಕಾಲದವರೆಗೆ ಮನುಕುಲವನ್ನು ಪ್ರಭಾವಿಸಬಹುದು." ಇದು ಅವರ ತತ್ತ್ವಜ್ಞಾನ ಸ್ವರೂಪ ಮತ್ತು ಅದರ ಆಳ ವಿಸ್ತಾರಗಳನ್ನು ಅಧ್ಯಯನ ಮಾಡಿದಾಗ ಮೂಡಿಬರುವ ಚಿತ್ರ. ಪ್ರಸ್ತುತ ಅಧ್ಯಾಯದಲ್ಲಿ ಅವರ ತತ್ತ್ವಜಿಜ್ಞಾಸೆಯನ್ನು ಸಮಗ್ರವಾಗಿ ಪರಿಶೀಲಿಸುವ ಪ್ರಯತ್ನಕ್ಕೆ ನಾನು ಹೋಗುವುದಿಲ್ಲ.

'ವಿಜ್ಞಾನ ಪ್ರಶ್ನೆ'ಯನ್ನು ಎದುರಿಸಲು ನಮಗೆ ಸಾಧ್ಯವಾಗುವಂಥ ಸಾಕಷ್ಟು ಅರ್ಥಪೂರ್ಣ ಅಂಶಗಳನ್ನಷ್ಟೇ ಅವರ ತತ್ತ್ವಜ್ಞಾನದಿಂದ ಭಟ್ಟಿ ಇಳಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡುತ್ತೇನೆ. ಈ ಪ್ರಯತ್ನ ಗಾಂಧಿಯವರ ಅಧ್ಯಾತ್ಮಶಾಸ್ತ್ರ ಮತ್ತು ಜ್ಞಾನಶಾಸ್ತ್ರಗಳ ಪುನಾರಚನೆಯನ್ನೊಳಗೊಂಡಿರುತ್ತದೆ; ಮತ್ತು ಈ ಅಧ್ಯಾತ್ಮಶಾಸ್ತ್ರ (Ontology) ಮತ್ತು ಜ್ಞಾನ ಶಾಸ್ತ್ರಗಳು (Epistemology) ಅವುಗಳ ಸ್ವರೂಪದಲ್ಲೇ ಒಳಗೊಂಡಿರುವ ಅವರ ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳಿಂದ ಪ್ರತ್ಯೇಕಗೊಂಡರೆ ಅವು ಅವಾಸ್ತವವಾಗಿ ಗೋಚರಿಸುತ್ತವೆ. ಆದರೆ ಈ ಪ್ರತ್ಯೇಕೀಕರಣವು ವಿಶ್ಲೇಷಣೆಯ ಸಂದರ್ಭಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಅದು ನಿಜವಾಗಿರದೆ ಕೇವಲ ತೋರಿಕೆಯದಾಗಿರುತ್ತದೆ. ಅಂದರೆ, ಗಾಂಧಿಯ ತತ್ತ್ವಶಾಸ್ತ್ರದ ಸಮಗ್ರ ತಿಳಿವಳಿಕೆಯು, ಆಧ್ಯಾತ್ಮ ಮತ್ತು ಜ್ಞಾನಶಾಸ್ತ್ರಗಳ ತತ್ತ್ವಗಳನ್ನು ನಿರೂಪಿಸುವಾಗ ಸ್ಪಷ್ಟವಾಗಿ ಹಿನ್ನೆಲೆಯಲ್ಲಿರುತ್ತದೆ.

### ಸಕಲ ಸದಾಚಾರ (Panmarolism) ತತ್ತ್ವ

ಸಕಲ ಸಂಗತಿಗಳ ಬಗ್ಗೆ ಗಾಂಧೀಜಿಯ ದೃಷ್ಟಿಕೋನವು ನೀತಿ ತತ್ತ್ವಗಳ ಮೂಲಕವೇ ಹೇಳಲ್ಪಟ್ಟಿದೆ. ಅವರು ಯಂತ್ರ, ಸಸ್ಯ, ಪ್ರಾಣಿ, ಸಾಮಾಜಿಕ ಅಥವಾ ರಾಷ್ಟ್ರೀಯ ಸಮಸ್ಯೆ ಯಾವುದರ ಬಗ್ಗೆ ಮಾತನಾಡಿದರೂ ನೀತಿ ತತ್ತ್ವಗಳನ್ನೇ ಆಶ್ರಯಿಸುತ್ತಾರೆ. ಹಲವು ವಿಧಾನಗಳಲ್ಲಿ – ದೇವರ ಪ್ರಾರ್ಥನೆ ಅಥವಾ ಮಾನವ ಕಲ್ಯಾಣ ಅಥವಾ ಸತ್ಯ ಮತ್ತು ಅಹಿಂಸೆಗಳನ್ನು ಒರೆಗಲ್ಲನ್ನಾಗಿ ಮಾಡಿಕೊಳ್ಳುವ ಮೂಲಕ ಗಾಂಧೀಜಿಯು ನೀತಿ ತತ್ತ್ವದ ನೆರವು ಪಡೆಯುತ್ತಾರೆ. ಇಲ್ಲೆಲ್ಲ ಮಾನವ ಗ್ರಹಿಕೆಯು

ಅನಿವಾರ್ಯವಾಗಿ ನೀತಿ ತತ್ತ್ವದ ಘಟಕವನ್ನೊಳಗೊಂಡಿದೆ ಎಂಬುದರ ಬಗ್ಗೆ ಗಾಂಧೀಜಿಯ ವಿಶ್ವಾಸವನ್ನು ತತ್‌ಕ್ಷಣದಲ್ಲೇ ಗಮನಿಸಬಹುದು.

## ಜ್ಞಾನಶಾಸ್ತ್ರ ಮತ್ತು ತರ್ಕ (Epistemology and Logic)

ಗಾಂಧಿಯವರು ಜಗತ್ತನ್ನು ಗ್ರಹಿಸಲು ಅಂಗೀಕರಿಸಿದ ದೃಷ್ಟಿಕೋನದ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅವರು ಅನುಭವವಾದೀ – ವಿಚಾರವಾದಿಗಳ (Empiricist-rationalist) ಗುಂಪಿನಿಂದ ಪ್ರತ್ಯೇಕವಾಗಿ ಹೊರಗೆ ನಿಂತಿರುವುದು ಕಾಣುತ್ತದೆ. ಒಂದು ಗ್ರಹಿಕೆ, ಅನುಭವ ಮಾನವೀಯವಾಗುವುದು ನೀತಿಯ ಸ್ಪರ್ಶವಿದ್ದಾಗ ಮಾತ್ರ ಎಂದು ನಂಬುವ ಚಿಂತನಾ ಪರಂಪರೆಗೆ ಗಾಂಧಿ ಸೇರಿದವರು. ನೀತಿಯ ಸ್ಪರ್ಶವಿಲ್ಲದ ಕ್ರಿಯೆ ಆಸುರಿಯಾಗಿದೆ. ಯಾವುದೇ ಗ್ರಹಿಕೆಯ ಪ್ರಕ್ರಿಯೆಯ ಹಿಂದಿನ ಉದ್ದೇಶ ತನ್ನಿಂದ ತಾನೇ ಆಸುರಿ ಅಥವಾ ಮಾನವೀಯವಾಗಲಾರದು; ಬದಲಿಗೆ ಗ್ರಹಿಕೆಯ ಕಲ್ಪನೆಯಲ್ಲೇ ವರ್ಗೀಕರಣ ಮಿಳಿತಗೊಂಡಿರುತ್ತದೆ. ವಾಸ್ತವತೆಯು 'ಮೌಲ್ಯ ತಟಸ್ಥ' (value neutral) ವಾಗಿದೆ ಎಂದು ಗ್ರಹಿಸುವುದೇ ಒಂದು ಆಸುರಿ ಪರಿಕಲ್ಪನೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಒಂದು ಕ್ರಿಯೆ ಅನೈತಿಕವಾಗಿರುವುದರಿಂದ ಅದು ಆಸುರಿಯಾಗುವುದಿಲ್ಲ; ಬದಲಿಗೆ ನೀತಿಗೆ ಸಂಬಂಧವೇ ಇಲ್ಲದ, ನೀತಿಯ ನೆಲೆಯಲ್ಲಿ ಪರೀಕ್ಷಿಸಲು ಸಾಧ್ಯವಿಲ್ಲದ ಕ್ರಿಯೆಯೇ ಆಸುರಿಯಾಗಿದೆ.

ಗ್ರಹಿಸಬಲ್ಲ ಪ್ರತಿಯೊಂದು ಕ್ರಿಯೆಯನ್ನು ನೀತಿಯ ಪರೀಕ್ಷೆಗೊಳಪಡಿಬಹುದು. ಒಂದೊಂದು ಕ್ರಿಯೆಗೂ ಒಂದೊಂದು ಗುಣವಿದೆ. ಹಾಗಾಗಿ, ಪ್ರತಿಯೊಂದು ಗ್ರಹಿಕೆಯ ಕ್ರಿಯೆಯನ್ನೂ ಇದು ಒಳ್ಳೆಯದು, ಕೆಟ್ಟದ್ದು, ಹಿತವಾದದ್ದು, ಅಹಿತವಾದದ್ದು; ಇದು ಸರಿಯಾದುದು ಅಥವಾ ತಪ್ಪಾದುದು ಎಂದು ತಿಳಿಯಬಹುದು. ಕೇವಲ ಈ ಕ್ರಿಯೆಗಳಿಗೆ ಮಾನವೀಯ ಅಥವಾ ಆಸುರಿ ಗುಣಗಳನ್ನು ಆರೋಪಿಸಲಾಗದು. ಯಾವುದು ಮಾನವೀಯ ಅಥವಾ ಆಸುರಿ ಎನ್ನುವುದು ನಮ್ಮ ಗ್ರಹಿಕೆಯ ಕ್ರಮವೇ ಆಗಿದೆ; ಮತ್ತು ಅದು ಗ್ರಹಿಕೆಯ ಸಿದ್ಧಾಂತವೇ ಆಗಿದೆ. ಇವು ತತ್ತ್ವಜ್ಞಾನಿಗಳಿಗೆ ಮಾತ್ರ ಪರಿಚಿತವಾದಂಥ ಅಮೂರ್ತ ಕಲ್ಪನೆ ಅಥವಾ ವಿಧಾನಗಳಲ್ಲ. ಜಗತ್ತಿನ ಎಲ್ಲಾ ಪುರುಷರು–ಮಹಿಳೆಯರು ತಮ್ಮ ದೈನಂದಿನ ಬದುಕನ್ನು ನಿರ್ವಹಿಸಲು ಹೊಂದಿರುವ ಸಿದ್ಧಾಂತಗಳು ಇವು.

ನನ್ನ ಪ್ರತಿಯೊಂದು ಗ್ರಹಿಕೆಯೂ ಮತ್ತು ನನ್ನ ನಂಬಿಕೆ ಅಥವಾ ಲೋಕದೃಷ್ಟಿ ಒಂದೇ ಆಗಿರುತ್ತದೆ. ನಾನು ಪರ್ವತವನ್ನು ನೋಡುವುದು, ಸೂರ್ಯಾಸ್ತ ವೀಕ್ಷಿಸುವುದು, ದೇವಾಲಯದ ಗಂಟೆಯ ನಿನಾದವನ್ನು ಆಲಿಸುವುದು, ಚುಚ್ಚುಮದ್ದಿನ ಸೂಜಿಯ ಮೊನೆಯ ನೋವನ್ನು ಅನುಭವಿಸುವುದು, ಕೊಳೆತ ಮೊಟ್ಟೆಯ ವಾಸನೆಯನ್ನು ಆಘ್ರಾಣಿಸುವುದು ಅಥವಾ ಇನ್ಯಾವುದೇ ಗ್ರಹಿಕೆಯ ಕ್ರಿಯೆ ನನ್ನ ಲೋಕದೃಷ್ಟಿ ಅಥವಾ ನನ್ನ ನಂಬಿಕೆಗಳಿಂದ ವಿಭಿನ್ನವಾದ್ದಲ್ಲ. ಒಬ್ಬ ವ್ಯಕ್ತಿಯ ಗ್ರಹಿಕೆಯ ಕ್ರಿಯೆಯನ್ನು ಜಗತ್ತಿನ ಆತನ ಲೋಕದೃಷ್ಟಿಯಿಂದ ಬೇರ್ಪಡಿಸುವ ಈ ಆಧುನಿಕ ಪ್ರವೃತ್ತಿಯು ಗ್ರಹಿಕೆಯ ಕ್ರಿಯೆಗೆ ಯಾವುದೇ ಗುಣವಿರದು ಎಂದು ಭಾವಿಸುವ "ಮೌಲ್ಯ ನಿರ್ಲಿಪ್ತ ತರ್ಕ"ಕ್ಕೆ

ನಿಕಟ ಸಂಬಂಧ ಹೊಂದಿದೆ. ಈ ತರ್ಕವನ್ನೇ ಆಧುನಿಕ ಮಾನವನ ದೊಡ್ಡ ಆಸ್ತಿಯೆಂದು ಪರಿಭಾವಿಸಲಾಗಿದೆ.

ಆದರೆ ಗಾಂಧೀಜಿಗೆ (ಗುಣರಹಿತವಾದ) ಪರಿಶುದ್ಧ ತರ್ಕ (Pure reason) ಎಂಬುದು ಅಸ್ತಿತ್ವದಲ್ಲೇ ಇಲ್ಲ. ತರ್ಕದಿಂದ ಸತ್ಯವನ್ನು ಪ್ರತ್ಯೇಕಿಸುವ ಎಲ್ಲಾ ಪ್ರಯತ್ನಗಳೂ ಆಸುರಿ. ಗಾಂಧಿಯವರ ತರ್ಕ ಪರಿಕಲ್ಪನೆಯನ್ನು ಅವರ ನಂಬಿಕೆಯಿಂದ ಬೇರ್ಪಡಿಸಲಾಗದು. ಆದುದರಿಂದ ಅವರ ತರ್ಕಕ್ಕೂ ಒಂದು ನೀತಿಯ ಆಯಾಮವಿದೆ.

1930ರ ದಶಕದಲ್ಲಿ ಬಿಹಾರದಲ್ಲಿ ಸಂಭವಿಸಿದ ಭೀಕರ ಬರಗಾಲಕ್ಕೆ ಅಲ್ಲಿನ ಅಸ್ಪೃಶ್ಯತೆ ಆಚರಣೆಯೇ ಕಾರಣವೆಂದು ಗಾಂಧೀಜಿ ಘೋಷಿಸಿದ್ದರು. ಈ ಘೋಷಣೆ ಅವರ ಕಾರ್ಯ–ಕಾರಣ ಸಂಬಂಧದ ಪರಿಕಲ್ಪನೆಯಲ್ಲಿ ಅಡಗಿರುವ ನೀತಿ ತತ್ತ್ವಕ್ಕೆ ಹಿಡಿದ ಕನ್ನಡಿ. ಅದೊಂದು ಬೇಕಾಬಿಟ್ಟಿಯ ಹೇಳಿಕೆ ಅಥವಾ ಸಾಂದರ್ಭಿಕವಾಗಿ ವ್ಯಕ್ತಪಡಿಸಿದ ಅಭಿಪ್ರಾಯವಲ್ಲ. ನಿಜಕ್ಕೂ ಇದು ಗಾಂಧಿಯವರ ನೈತಿಕತೆಯ ಅಚಲ ನಿಲುವಿಗೆ ಒಂದು ದೃಷ್ಟಾಂತ. ಬರಗಾಲ ಮತ್ತು ಅಸ್ಪೃಶ್ಯತೆಯ ಕಾರ್ಯಕಾರಣ ಸಂಬಂಧದ ಕರ್ತೃ ದೇವರೆಂದು ಹೇಳಿದಾಗ ಈ ಸಂಬಂಧವು ಪರಿಶುದ್ಧ ವಿಶ್ಲೇಷಣಾ ತರ್ಕಕ್ಕೆ ಸಿಗಲಾರದು. ಗಾಂಧಿಯವರು ದೇವರ ಬದಲಿಗೆ ಕಾರ್ಯ–ಕಾರಣ ಪ್ರಮೇಯ ವರ್ತುಲದಲ್ಲಿ ದೇವರಿಗೆ ಸಂವಾದಿಯಾಗಿ ಮಾನವರ ತರ್ಕದ ಜಗತ್ತಿನಲ್ಲಿ ನೀತಿಯ ಮೂಲವನ್ನು ಕಂಡರು. ವೈಚಾರಿಕತೆಯ ನೈತಿಕ ಆಯಾಮವು ಅತ್ಯಂತಿಕವಾಗಿ ಮನುಷ್ಯನ ಗ್ರಹಿಕೆಯಲ್ಲಿ ಅಂತರ್ಗತವಾಗಿರುವ ನೈತಿಕ ಸನ್ನಿವೇಶಗಳಿಗಿಂತ ಭಿನ್ನವಾದುದಲ್ಲ. ನೀತಿತತ್ತ್ವ ಮತ್ತು ನೈತಿಕ ಸನ್ನಿವೇಶಗಳೆರಡೂ ಗಾಂಧಿಯವರ ಪರಿಕಲ್ಪನೆಯ ವಾಸ್ತವತೆ, ಅಂದರೆ ಮೌಲ್ಯವನ್ನು ಅಂತರಂಗೀಕರಿಸಿಕೊಂಡ ವಿವೇಕಜ್ಞಾನ (Valure embeded Ontology) ದ ಭಾಗವೇ ಆಗಿದೆ.

## ವಿವೇಕ ಜ್ಞಾನ (Ontology)

ಗಾಂಧಿಯವರಿಗೆ 'ನೀತಿ ವ್ಯಾಪ್ತ'ವೇ ವಾಸ್ತವತೆ. (ನೀತಿವ್ಯಾಪ್ತ ಎಂದರೆ ನೀತಿ ಮೌಲ್ಯಗಳು ಎಲ್ಲೆಡೆ ವ್ಯಾಪಿಸಿಕೊಂಡಿರುವುದು). 'ಹೀಗಿರಬೇಕು' (Ought) ಮತ್ತು 'ಹೀಗಿದೆ' (is) ಎಂಬುದು ಎರಡೂ ಪರಸ್ಪರ ಬೇರ್ಪಡಿಸಲಾಗದ ಸಂಗತಿಗಳು. ಈಗ ಅಸ್ತಿತ್ವದಲ್ಲಿರುವುದು ಮುಂದೆ 'ಹೇಗಿರಬೇಕು' ಎಂಬುದರ ಜೊತೆ ಬೇರ್ಪಡಿಸಲಾರದ ಸಂಬಂಧ ಹೊಂದಿದೆ. ನೈತಿಕತೆ ಎನ್ನುವುದು ಇರುವಿಕೆಯ ಸ್ಥಿತಿ. ಪುರುಷರು–ಮಹಿಳೆಯರು, ಹಕ್ಕಿಗಳು, ಪ್ರಾಣಿಗಳು, ಕಲ್ಲು–ನೀರು, ಭೂಮಿ–ಪರ್ವತ, ಸಾಗರ ಮತ್ತು ನದಿ–ಇವು ಯಾವುವೂ ಮೌಲ್ಯ ನಿರ್ಲಿಪ್ತ ಸಂಗತಿಗಳಲ್ಲ. ನೈತಿಕ ಸನ್ನಿವೇಶಕ್ಕೆ ಸೇರದ ಸ್ವತಂತ್ರವಾದ ಅಸ್ತಿತ್ವವಿರುವ ಯಾವುದೇ ಕಾಲ–ದೇಶಗಳ ಸನ್ನಿವೇಶವಿಲ್ಲ. ಸಂಗತಿಗಳು ತಮ್ಮೊಳಗಿನ ಬದಲಾವಣೆಗಳಿಗೆ ಮತ್ತು ಇತರ ಸಂಗತಿಗಳ ಜೊತೆ ತಮ್ಮ ಸಂಬಂಧಗಳ ಬದಲಾವಣೆಗಳಿಗೆ ತಾವೇ ಸಾಕ್ಷಿಯಾಗಿವೆ. ಈ ಬದಲಾವಣೆಗಳು ಮುಂದೆ ಏನಾಗಬೇಕು ಅಥವಾ ಏನಾಗಬಾರದು ಎಂಬುದರಲ್ಲಿ ನೆಲೆಗೊಂಡಿದೆ.

ಸಕಲ ಸಂಗತಿಗಳಿಗೂ ನೀತಿಯ ಗುಣಧರ್ಮವಿದೆ, ಎಂದ ಮಾತ್ರಕ್ಕೆ ಬದಲಾಗದ ಅಥವಾ ಪರಮೋಚ್ಚ ಅಥವಾ ಆತ್ಯಂತಿಕ ನೀತಿ ತತ್ತ್ವವೊಂದು ಅಸ್ತಿತ್ವದಲ್ಲಿರುತ್ತದೆಂದು ಭಾವಿಸಬಾರದು. ನೈತಿಕ ದೃಷ್ಟಿಯೂ ಬದಲಾವಣೆ ಹೊಂದಬಹುದಾದುದು. 'ಅಸ್ತಿತ್ವದ' ಈ ನೈತಿಕ ಸ್ವರೂಪ ಹೇಗಿದೆಯೆಂದರೆ ವರ್ತಮಾನದ ನೈತಿಕ ಸ್ವರೂಪ ಭವಿಷ್ಯದ ನೈತಿಕ ಸ್ವರೂಪವನ್ನು ನಿರ್ಧರಿಸುವುದಿಲ್ಲ ಅಥವಾ ಯಾವುದೂ ಆತ್ಯಂತಿಕ ಮೂಲವೆಂದು ನಿರ್ಧರಿಸಿಕೊಳ್ಳುವುದಿಲ್ಲ. ನೀತಿಯ ಪರಿವರ್ತನಾ ಸ್ವರೂಪಕ್ಕೆ ಸಂಬಂಧಿಸಿದಂತೆ ಗಾಂಧಿಯವರ ನಿಲುವನ್ನು ಪ್ರಶ್ನಿಸಬಹುದಾದರೂ ನೀತಿ ಮೌಲ್ಯಗಳು ಎಲ್ಲೆಡೆ ವ್ಯಾಪಿಸಿಕೊಂಡಿವೆ ಎಂಬ ಗಾಂಧಿಯವರ ನೀತಿವ್ಯಾಪ್ತದ ಪರಿಕಲ್ಪನೆಯು ಯಾವುದೇ ಪರಮ ಪರಿಕಲ್ಪನೆಯಿಂದ ಸ್ವತಂತ್ರವಾಗಿರುವುದು ಸ್ಪಷ್ಟ. ಅಂದರೆ ನಾನಿಲ್ಲಿ ಸೂಚಿಸುವುದೇನೆಂದರೆ ಪ್ರತಿಯೊಂದು ಸಂಗತಿಗೂ ನೀತಿಯ ಮುಖವಿದೆ. ಆದರೆ ಆ ನೀತಿ ಬಹಳ ಮುಖ್ಯ ಅಥವಾ ಅದು ಆತ್ಯಂತಿಕ ಅಥವಾ ಇದೊಂದು ನಿರ್ಣಾಯಕ ವಿಷಯ ಏನೂ ಅಲ್ಲ. ಭದ್ರವಾಗಿ ಬೇರೂರಿರುವ ನೈತಿಕತೆಯ ಪರಿಕಲ್ಪನೆಯ ನೆಲೆಯಲ್ಲಿ ಹಾಗೂ ಅಂತಿಮವಾಗಿ ಯಾವುದು ಮಾನವೀಯ ಯಾವುದು ಆಸುರಿ ಎಂದು ತೀರ್ಮಾನಿಸುವ ನಿರ್ಣಯಗಾರ. ಸತ್ಯ ಮತ್ತು ಅಹಿಂಸೆ ಎಲ್ಲ ಮಾನವ ಕ್ರಿಯೆಗಳ ಆತ್ಯಂತಿಕ ಪ್ರಮಾಣಗಳೆಂದು ಹೇಳುವಾಗ ಗಾಂಧೀಜಿ ಮತ್ತೆ ಮತ್ತೆ ಪ್ರಸ್ತಾಪಿಸುತ್ತಿದ್ದದ್ದು ಇಂಥ ನೀತಿತತ್ತ್ವವನ್ನೇ.

**ಸತ್ಯ (Truth)**

ಗಾಂಧಿಯವರ ತತ್ತ್ವಜಿಜ್ಞಾಸೆಯಲ್ಲಿ ಸತ್ಯವು ಮೂಲಭೂತ ಸ್ಥಾನವನ್ನು ಪಡೆದಿದೆ. ಸರಿಯಾದ ತಿಳಿವಳಿಕೆಗೆ, ಕ್ರಿಯೆಗೆ, ಬಿಡುಗಡೆಗೆ, ಸಮಸ್ತಕ್ಕೂ ಸತ್ಯವೇ ಮೂಲಾಧಾರ. ಆದ್ದರಿಂದ ಅನ್ಯ ಮಾನದಂಡಗಳ ಮೂಲಕ ಸತ್ಯವನ್ನು ಅರಿಯಲು, ವಿವರಿಸಲು ಸಾಧ್ಯವಿಲ್ಲ. ತಾರ್ಕಿಕ ಚಿಂತನೆಗೆ ಇದು ಸಮಸ್ಯೆಯೊಡ್ಡುತ್ತದೆ. ಗಾಂಧಿಯವರಿಗೆ ಸತ್ಯವು ವೈಚಾರಿಕ ಚರ್ಚೆಗೆ ಸಿಗುವಂಥದಲ್ಲ. ನಮ್ಮ ನಿಜವಾದ ಮೂಲಭೂತ ಸಮಸ್ಯೆ ಇದು : ಸತ್ಯ ಅನಂತ ಮತ್ತು ಅವಿಚ್ಛಿನ್ನ. ಆದರೆ ಅದರ ಸಾರವನ್ನರಿಯಲು ವಿಶ್ಲೇಷಣೆಗೊಳಪಡಿಸಬೇಕಾದರೆ ಅದರ ಅನಂತ ಸ್ವರೂಪವನ್ನು ಸಂಕುಚಿತಗೊಳಿಸಿ, ವಿಭಜಿಸಿ ಒಂದು ಮಿತಿಗೆ ಇಳಿಸುವ ಅಗತ್ಯವಿದೆ. ಈ ಅಂಶವನ್ನು ಸ್ಪಷ್ಟವಾಗಿ ಮನಸ್ಸಿನಲ್ಲಿಟ್ಟುಕೊಂಡು ಸತ್ಯವನ್ನು ಮಿತಿಗೊಳಿಸಿ ವಿಭಜಿಸುವ ಕ್ರಿಯೆಗೆ ತೊಡಗುವ.

ಗಾಂಧಿಯವರು ಸತ್ಯದ ಬಗ್ಗೆ ಮತ್ತೆ ಮತ್ತೆ ಮಾಡುವ ಪ್ರಸ್ತಾಪದಲ್ಲಿ, ಅದರ ಎರಡು ಕೇಂದ್ರಗಳನ್ನು ಗುರುತಿಸಬಹುದು. ಒಂದು ಅವರು ಸತ್ಯವೇ ದೇವರು ಎಂದು ಮಾಡಿದ ಘೋಷಣೆ. ಮತ್ತೊಂದು ತಾನು ಸತ್ಯದಿಂದ ಸತ್ಯಕ್ಕೆ ಚಲಿಸುತ್ತಿದ್ದೇನೆ ಎಂಬ ಅವರ ಹೇಳಿಕೆ. ಮೊದಲನೆಯದು, ಎಂದೂ ಬದಲಾಗದಂಥದು ಮತ್ತು ಎರಡನೆಯದು ಕ್ಷಣಕ್ಷಣಕ್ಕೂ ಬದಲಾವಣೆಗೊಳಗಾಗುವಂಥದು. ಒಂದು ಸತ್ಯದ ಅರ್ಥ ಮತ್ತು ಅದರ ಮೂಲಭೂತ ಸಾರದ ಪ್ರಕಟರೂಪ, ಮತ್ತೊಂದು ವಾಸ್ತವ ಜಗತ್ತಿನಲ್ಲಿ

ಅದರ ಸಂಭವನೀಯ ವಿದ್ಯಮಾನಗಳು. ತತ್ತ್ವಜ್ಞಾನದ ಪರಿಭಾಷೆಯಲ್ಲಿ ಒಂದು ಸತ್ಯದ ಆಳ (intension) ಮತ್ತೊಂದು ಅದರ ವಿಸ್ತರಣೆ (extension). ಇಲ್ಲಿ ಆಳ ಪದವನ್ನು ಸತ್ಯದ 'ಅರ್ಥ' (meaning) ಮತ್ತು 'ಲಕ್ಷಣ' (reference) ವೆಂದೂ ವಿಸ್ತರಣೆ ಪದವನ್ನು 'ಧ್ವನಿತಾರ್ಥ' (connotation) ಮತ್ತು 'ಸಂಕೇತಾರ್ಥ' (denotation) ಎಂದೂ ಬಳಸಲಾಗಿದೆ.

## ಆಳ (Intension)

ಸತ್ಯವೇ ದೇವರು ಎಂದಾದರೆ, ಆಗ ಅದು ಸಕಲಕ್ಕೂ ಪರಮೋಚ್ಚ ಪ್ರಮಾಣ; ಅತ್ಯಂತಿಕ ನಿಕಷ. ಸತ್ಯವೆನ್ನುವುದು ವೇದಾಂತದ ಬ್ರಹ್ಮ, ವೈಷ್ಣವರ ರಾಮ, ಶೈವರ ಮಹಾದೇವ. ಋಷಿ, ಸಂತ ಮತ್ತು ಭಕ್ತನ ಕ್ರಿಯೆಗಳ ನಡುವೆ ತರತಮವಿಲ್ಲ. ಗಾಂಧಿಯವರು ಯೋಗಿಯ ನಿರ್ವಿಕಲ್ಪ ಸಮಾಧಿ ಮತ್ತು ಗೃಹಸ್ಥನ ಭಕ್ತಿಯ ನಡುವೆ ತಾರತಮ್ಯ ಕಾಣುವುದಿಲ್ಲ. ಅವರಿಗೆ ನಿರಾಕಾರ ದೈವವನ್ನು ಸಾಕ್ಷಾತ್ಕರಿಸಿಕೊಂಡ ಯೋಗಿಯ ಸಾಧನೆಗಿಂತ ಮೂರ್ತಿ ಆರಾಧಕನ ಆಚರಣೆ ಕೀಳೇನಲ್ಲ.

ತತ್ತ್ವವು ಆಧುನಿಕ ವಿಜ್ಞಾನದ ಶೋಧನೆಯ ವಸ್ತುವಲ್ಲ. ವೈಜ್ಞಾನಿಕ ಜ್ಞಾನವನ್ನು ಸಂಗ್ರಹಿಸುವ ಅರ್ಥದಲ್ಲಿ ಸತ್ಯವನ್ನು ತಿಳಿಯಲಾಗದು. ಸತ್ಯವು ವಾಸ್ತವ ಸಂಗತಿಯಾದರೂ ಅದು ಸಿದ್ಧವಾಗಿ ಕೊಟ್ಟಿದ್ದಲ್ಲ. ಸತ್ಯವು ಅದರ ಗ್ರಹಿಕೆಯ ಪ್ರತೀ ಕ್ರಿಯೆಯಲ್ಲೂ ಸೃಷ್ಟಿಯಾಗುತ್ತಿರುತ್ತದೆಯಾದರೂ ಈ ಗ್ರಹಿಕೆ ಮತ್ತು ವಾಸ್ತವತೆಯ ಅರಿವಿನ ಕ್ರಿಯೆಗಳಿಂದ ಸ್ವತಂತ್ರವಾಗಿದೆ. ಸತ್ಯವನ್ನು ಪ್ರಜ್ಞೆ ಅಥವಾ ಭೌತ ಅಸ್ತಿತ್ವದ ಅಂಗವಾಗಿ ವರ್ಗೀಕರಿಸಲು ಸಾಧ್ಯವಾಗದುದರಿಂದ ಸಮಕಾಲೀನ ಭಾಷೆಯಲ್ಲಿ ಸದ್ವಿವೇಕ ಶಾಸ್ತ್ರಕ್ಕೆ ಸಂಬಂಧಿಸಿದ ಸಮಸ್ಯಾತ್ಮಕತೆಗೆ ದಾರಿ ಮಾಡಿಕೊಡುತ್ತದೆ. ಸತ್ಯ ವ್ಯಕ್ತಿನಿಷ್ಠವೇ ಅಥವಾ ವಸ್ತು ನಿಷ್ಠವೇ ಎಂಬ ದ್ವಂದ್ವ ಕೂಡ ಅದರ ಗ್ರಹಿಕೆಗೆ ನೆರವಾಗದು. ನಿಜಕ್ಕೂ ಯಾವುದೇ ದ್ವಂದ್ವಾತ್ಮಕ ಅಥವಾ ತರ್ಕಮೀಮಾಂಸಾತ್ಮಕ ಚಿಂತನೆಗಳು ಸತ್ಯವನ್ನು ಗ್ರಹಿಸಲಾರವು. ಅದು ಈ ಹಿಂದೆ ಹೇಳಿದಂತೆ ಸತ್ಯದ ಇನ್ನೊಂದು ಅಭಿವ್ಯಕ್ತಿಯಾದ ಅದರ ವಿಸ್ತರಣೆಯ ಮೂಲಕದ ಚಿಂತನೆಗೆ ಮಾತ್ರ ಲಭ್ಯವಾಗುತ್ತದೆ.

## ವಿಸ್ತರಣೆ (Extension)

ಸತ್ಯದ ಅರ್ಥಸಂಬಂಧಗಳು (ವಿಸ್ತರಣೆ) ಮಾನವ ಕ್ರಿಯೆಯ ಅಸಂಖ್ಯಾತ ಆಯಾಮಗಳಲ್ಲಿ ಹಾಗೂ ಮಾನವ ಚಟುವಟಿಕೆಗೆ ಹೊರತಾದ ಸ್ವತಂತ್ರ ವಿದ್ಯಮಾನಗಳಲ್ಲಿ ಹರಡಿಕೊಂಡಿವೆ. ಅಂಥ ಚಟುವಟಿಕೆ ಮತ್ತು ವಿದ್ಯಮಾನಗಳ ಗ್ರಹಿಕೆ ಮತ್ತು ನಿರ್ವಹಣೆಯ ತತ್ತ್ವಗಳನ್ನು 'ವಿದ್ಯೆ' ಮತ್ತು 'ಧರ್ಮ' ಎಂದು ಕರೆಯುತ್ತಾರೆ. ವಿದ್ಯೆ ಮತ್ತು ಧರ್ಮದ ಸೂಕ್ಷ್ಮ ಅವಲೋಕನ ಸಮಗ್ರವಲ್ಲದಿದ್ದರೂ ಖಂಡಿತವಾಗಿಯೂ ಸತ್ಯದ ಮತ್ತೊಂದು ಕೇಂದ್ರದ ಬಗೆಗಿನ ಒಟ್ಟು ನೋಟವೊಂದನ್ನು ನೀಡುತ್ತದೆ.

## ವಿದ್ಯೆ

ಮನುಷ್ಯನ ಸ್ವಾಭಾವಿಕ ಬದುಕನ್ನು ತನ್ನೊಳಗೆ ಅಂತರಂಗೀಕರಿಸಿಕೊಳ್ಳುವ (Internalisation) ಮತ್ತು ಹೊರಗೆ ಅಭಿವ್ಯಕ್ತಗೊಳಿಸುವ (Generalisation) ಪ್ರಕ್ರಿಯೆ ವಿದ್ಯೆಗೆ ಜನ್ಮ ನೀಡುತ್ತದೆ. ಮಹಿಳೆಯರು ಮತ್ತು ಪುರುಷರು ಜೊತೆಯಾಗಿ ತಮ್ಮ ದೈನಂದಿನ ಸಹಜ ಬದುಕಿನ ಏಕತೆಯನ್ನು ಕಾಪಾಡಿಕೊಳ್ಳಲು ಶ್ರಮಿಸುತ್ತಾ ಪ್ರಕೃತಿಯ ಮಡಿಲಲ್ಲಿ ಕೂಡಿ ಬದುಕುತ್ತಾರೆ. ಈ ಸ್ವಾಭಾವಿಕ ಬದುಕು ಇತರೆ ಮಾನವರೊಡನೆ ನಿರಂತರವಾಗಿ ಸಂಬಂಧಗಳನ್ನು ಸೃಷ್ಟಿಸುತ್ತಾ, ಮರುಸೃಷ್ಟಿಸುತ್ತಾ ಇರುವ ಪ್ರಕ್ರಿಯೆಯನ್ನೊಳಗೊಂಡಿರುತ್ತದೆ.

ವಿದ್ಯೆಯ ಕಾರ್ಯ, ಮಾನವನ ಬದುಕಿನ ಹೋರಾಟಕ್ಕೆ ಮತ್ತು ಪ್ರಕೃತಿಯೊಡನೆ ಸಾಮರಸ್ಯ ಸಾಧನೆಗೆ ಅಗತ್ಯವಾದ ಸತ್ಯದ ದಾರಿಯನ್ನು ತೋರುವುದು. ಪ್ರಕೃತಿಯ ಏಕತೆಯನ್ನು ಅರಿಯುವ ಅಂಥ ವಿಧಾನಗಳಿಗೆ ವ್ಯತಿರಿಕ್ತವಾದದ್ದೇ 'ಅವಿದ್ಯೆ'. ಹಾಗಾಗಿ ಅವಿದ್ಯೆ ಪ್ರಕೃತಿಯ ಲಯಗಳನ್ನು ಭಂಗಪಡಿಸುವ ಮತ್ತು ಹಿಂಸಿಸುವ ಕ್ರಿಯೆಗೆ ಮೂಲ. ಮಾನವನ ನೈಸರ್ಗಿಕ ಬದುಕನ್ನು ಉಲ್ಲಂಘಿಸುವ ಈ ಅವಿದ್ಯೆಯ ಕ್ರಮವು ಅಂತಿಮವಾಗಿ ಎಲ್ಲಾ ಬದುಕನ್ನು ಛಿದ್ರಗೊಳಿಸುತ್ತದೆ.

ತಂತ್ರಜ್ಞಾನ, ವಿಜ್ಞಾನ ಮತ್ತು ಕಲೆಗಳು 'ವಿದ್ಯೆ'ಯ ಸಾಮಾನ್ಯ ಘಟಕಗಳು. ಈ ಕ್ಷೇತ್ರದಲ್ಲೇ ಮಾನವನ ಅನುಭವಗಳು ಮೂರ್ತರೂಪ ತಳೆದು ಸಂಚಯನಗೊಳ್ಳುತ್ತವೆ; ಮತ್ತು ಅವು ಸ್ತ್ರೀ ಪುರುಷರಿಗಾಗಿ, ಸತ್ಯದ ಸೇವೆಯಲ್ಲಿ ಬಳಕೆಯಾಗಲು ಆಯಾ ಕ್ಷೇತ್ರಗಳಲ್ಲಿ ಸಂಸ್ಕರಣಗೊಳ್ಳುತ್ತವೆ. ಈ ವಿದ್ಯಾ ಕ್ಷೇತ್ರದ ಯಾವುದೇ ಘಟಕವು ಪರಸ್ಪರ ಪ್ರತ್ಯೇಕಗೊಳ್ಳುವುದಿಲ್ಲ. ಒಂದು ಘಟಕವಿಲ್ಲದಿದ್ದರೆ ಉಳಿದವು ಅಪೂರ್ಣ. ಅಂದರೆ ಅವುಗಳು ಅರ್ಥ ಪಡೆದುಕೊಳ್ಳುವುದು ಅವು ಒಂದಕ್ಕೊಂದು ಹೆಣೆದುಕೊಂಡು ಅಖಂಡವಾದ ವಿದ್ಯೆಯ ಭಾಗವಾದಾಗ ಮಾತ್ರ.

ತಂತ್ರಜ್ಞಾನವು ತಂತ್ರವಿಧಾನ ಮತ್ತು ಪ್ರಕ್ರಿಯೆಗಳಿಗೆ ಸಂಬಂಧಿಸಿದೆ. ಪ್ರಕೃತಿಯ ಕೆಲವು ವಿಶಿಷ್ಟ ಸ್ವರೂಪಗಳಲ್ಲಿ ತಂತ್ರಜ್ಞಾನದ ಮೂಲವಿದೆ. ಈ ವಿಶಿಷ್ಟ ಸ್ವರೂಪಗಳನ್ನು ನಿರ್ದಿಷ್ಟ ವಿಧಾನದಲ್ಲಿ ವರ್ಧಿಸಿದರೆ ಅಥವಾ ಸಂಯೋಜಿಸಿದರೆ, ಅವು ಕಾರ್ಯನಿರ್ವಹಣೆಯಲ್ಲಿ ಇನ್ನಷ್ಟು ದಕ್ಷತೆಯನ್ನು ಅಥವಾ ವಿಶೇಷ ಗುಣಗಳನ್ನು ಪಡೆದು ಮಾನವನನ್ನು ಇನ್ನಷ್ಟು ಸಶಕ್ತಗೊಳಿಸುತ್ತವೆ. ಕೃಷಿ, ಚರಕ, ನದಿಗಳಿಗೆ ಅಣೆಕಟ್ಟು ನಿರ್ಮಾಣ ಮತ್ತು ಕಬ್ಬಿಣದ ಅದಿರನ್ನು ಕರಗಿಸುವುದು ಇವೆಲ್ಲ ಇಂಥ ತಂತ್ರಜ್ಞಾನಕ್ಕೆ ದೃಷ್ಟಾಂತಗಳು. ಆದರೆ ಪ್ರತಿಯೊಂದು ಸೃಷ್ಟಿಕ್ರಿಯೆಯ ಜೊತೆಜೊತೆಯೂ ವಿನಾಶದ ಪ್ರಕ್ರಿಯೆಯ ಸಾಧ್ಯತೆಗಳ ಬೀಜಗಳಿರುತ್ತವೆ. ಮಾನವ ಕಲ್ಯಾಣಕ್ಕಾಗಿ ನಿಸರ್ಗವನ್ನು ಉಪಯೋಗಿಸಬಹುದಾದರೆ ಅವನ ವಿನಾಶಕ್ಕೂ ಅದನ್ನು ಬಳಸಬಹುದು. ಅಣುಬಾಂಬು ಇದಕ್ಕೊಂದು ಸ್ಪಷ್ಟ ಉದಾಹರಣೆ. ಅವಿದ್ಯಾ ಎಂದರೆ ಇಂಥ ತಂತ್ರಜ್ಞಾನ. ಇದು ಮಾನವನ ಬದುಕನ್ನು ಛಿದ್ರಗೊಳಿಸುವ ಸ್ಪಷ್ಟ ಸಾಧನ. ಮಾನವರ ಆಸುರಿ ಪ್ರವೃತ್ತಿಯನ್ನು

ಪೋಷಿಸುವ ಯಾವುದೇ ವಸ್ತು ಅಥವಾ ಪ್ರಕ್ರಿಯೆಗಳ ಸಂಯೋಜನೆ ಅಥವಾ ಅಂಥ ಪ್ರವೃತ್ತಿಗಳನ್ನು ಸಾಧಿಸಲು ಮಾಧ್ಯಮವಾಗುವ ಯಾವುದೇ ಅಂಶಗಳು ತಂತ್ರಜ್ಞಾನವೂ ಅಲ್ಲ, ವಿದ್ಯೆಯ ಘಟಕವೂ ಅಲ್ಲ. ತಂತ್ರಜ್ಞಾನವು ಕಾರ್ಯಗಳನ್ನು ಮಾಡುವ ವಿಧಾನವಾಗಿರಬೇಕೇ ಹೊರತು ಅವನ್ನು ಭಂಗಪಡಿಸುವ ವಿಧಾನವಾಗಬಾರದು. ಈ ರೀತಿಯಲ್ಲಿ ಮಾತ್ರ ಅದು ಸತ್ಯದ ವಿಸ್ತರಣೆಯ ಭಾಗವಾಗಬಹುದು ಹಾಗೂ ಮನುಷ್ಯನ ಬಿಡುಗಡೆಯ ಪ್ರಯತ್ನಕ್ಕೆ ಸಾಧನವಾಗಬಹುದು.

ವಿಜ್ಞಾನವು ಪ್ರಕೃತಿಯಲ್ಲಿ ಅಂತರ್ಗತವಾಗಿರುವ ಲಯಗಳ ಸಾಮಾನ್ಯ ಪರಿಜ್ಞಾನವನ್ನೊಳಗೊಂಡಿರುತ್ತದೆ. ಪ್ರಕೃತಿಯ ಎಲ್ಲಾ ವಸ್ತುಗಳು ಮತ್ತು ಪ್ರಕ್ರಿಯೆಗಳಲ್ಲಿ ಅಂತರ್ಗತವಾಗಿರುವ ಲಯಗಳ ಗ್ರಹಿಕೆಯ ಸಾಧ್ಯತೆಯ ಫಲವೇ ವಿಜ್ಞಾನ. ಆದರೆ ಈ ಪ್ರಾಕೃತಿಕ ವಸ್ತು ಮತ್ತು ಪ್ರಕ್ರಿಯೆ ಅಥವಾ ಸಂಗತಿಗಳು ತಮ್ಮಷ್ಟಕ್ಕೇ ಪರಿಪೂರ್ಣವೇನಲ್ಲ. ಈ ಪರಿಪೂರ್ಣತೆಯ ತೋರಿಕೆಯು ಪ್ರಕೃತಿಯ ಯಾವುದೇ ಮೌಲ್ಯದಿಂದ ವಸ್ತು ಮತ್ತು ವಿದ್ಯಮಾನಗಳು ಮೌಲ್ಯ ಮುಕ್ತ (value-free) ಅಸ್ತಿತ್ವವನ್ನು ಪಡೆದಿದೆ ಎಂಬ ಭಾವನೆಯನ್ನು ನಮ್ಮಲ್ಲಿ ಹುಟ್ಟಿಸುತ್ತದೆ. ಅಂಥ ಮೌಲ್ಯಮುಕ್ತ ಭಾವನೆ ಹುಸಿವಿಜ್ಞಾನದ ಉಗಮಕ್ಕೆ ದಾರಿಯಾಗುತ್ತದೆ. ಯಾಕೆಂದರೆ ಪ್ರಕೃತಿಯ ಯಾವುದೇ ಸಂಗತಿಗಳು, ಪ್ರಕ್ರಿಯೆಗಳು ತಂತಾನೆ ಪರಿಪೂರ್ಣವಾಗಿರದೆ ಇತರ ಸಂಗತಿ ಮತ್ತು ಪ್ರಕ್ರಿಯೆಗಳಿಗೆ ಸಂಬಂಧ ಹೊಂದಿದ್ದು ಅವುಗಳನ್ನು ಅವಲಂಬಿಸಿಯೇ ಅಸ್ತಿತ್ವವನ್ನು ಪಡೆದುಕೊಂಡಿರುತ್ತವೆ. ಹಾಗಾಗಿ ಪ್ರಕೃತಿಯಲ್ಲಿ ಸಾಮಾನ್ಯವಾಗಿ ನೈತಿಕ ಶ್ರುತಿ ಸತತವಾಗಿ ಸಂಭವಿಸುತ್ತಿರುತ್ತದೆ. ಆ ನೈತಿಕ ಶ್ರುತಿಯನ್ನು ಸರಿಯಾಗಿ ಹಿಡಿದು ಅರ್ಥೈಸಿಕೊಳ್ಳುವುದೇ ವಿಜ್ಞಾನದ ಕರ್ತವ್ಯ. ನಮಗೆ ನೀತಿ ವಿಜ್ಞಾನ (Moral Science) ಬೇಕೆಂದು ವಾದಿಸಲಿಕ್ಕಾಗಿ ಈ ವಿಚಾರ ಮಂಡಿಸುತ್ತಿಲ್ಲ; ಬದಲಿಗೆ ವಿಜ್ಞಾನವು ಮೌಲ್ಯರಹಿತ ಅಸ್ತಿತ್ವ ಪಡೆದಿದೆ ಎಂಬ ಮಿಥ್ಯೆಯನ್ನು ಬಯಲುಗೊಳಿಸುವುದು ಮಾತ್ರ ಈ ವಿಚಾರಸರಣಿಯ ಉದ್ದೇಶ.

ಆದುದರಿಂದ ವಿಜ್ಞಾನವು ನಿಸರ್ಗದ ಮತ್ತು ಮಾನವನ ನೈಸರ್ಗಿಕ ಬದುಕಿನ ಬಗ್ಗೆ ಬಳುವಳಿಯಾಗಿ ಬಂದ ಸಿದ್ಧಾಂತ. ಅದು ಸತ್ಯಾನ್ವೇಷಣೆಯ ಸಾಧನವಾಗಲು ಜಗತ್ತಿನ ಆಸುರಿ ದೃಷ್ಟಿಕೋನದ ವಿರುದ್ಧ ನಿಲ್ಲುವ ಶಕ್ತಿಯನ್ನು ವರ್ಧಿಸಿಕೊಳ್ಳಲು ತನ್ನ ಹಾದಿಯನ್ನು ತಾನೇ ಕಂಡುಕೊಳ್ಳಬೇಕು. ಹಾಗಾದಲ್ಲಿ ಮಾತ್ರ ಅದು ಸ್ತ್ರೀ ಪುರುಷರನ್ನು ಸತ್ಯದಿಂದ ಸತ್ಯಕ್ಕೆ ಚಲಿಸಲು ಅಣಿಗೊಳಿಸುತ್ತದೆ. ಇದೇ ಗಾಂಧಿಯವರ ತರ್ಕದ ಮುಖ್ಯಧಾರೆ.

ಮಾನವನ ಪ್ರಬಲ ಬಯಕೆಯ ಐಹಿಕ ಸುಖಕ್ಕಾಗಿ ಅವನ ಜೀವ ಪ್ರಕ್ರಿಯೆಗಳನ್ನು ವಿರೂಪಗೊಳಿಸಿ, ಅವನಲ್ಲಿ ಆಸುರಿ ಪ್ರವೃತ್ತಿಗಳನ್ನು ಉತ್ತೇಜಿಸುತ್ತದೆ. ಐಹಿಕ ಸಂಪತ್ತಿನ ಬಗೆಗಿನ ದಾಹ ಮತ್ತು ಅದರ ಮೇಲಿನ ಮೋಹ ಸ್ವಾಭಾವಿಕವಾದುದಲ್ಲ. ನಿಜಕ್ಕೂ ಅಂಥ ಬದುಕಿಗೆ ಹಾತೊರೆವ ಪ್ರವೃತ್ತಿ ಕೃತಕ ಬದುಕಿನತ್ತ ಸಾಗುವಂತೆ ನಮ್ಮನ್ನು ಮೋಡಿಗೊಳಿಸಿ, ಸಂಪೂರ್ಣ ದುಃಖಮಯವಾದ ಬದುಕಿಗೆ ನಮ್ಮನ್ನು ತಳ್ಳುತ್ತದೆ.

ನಿಜಕ್ಕೂ ವಿಜ್ಞಾನವು ಸಿದ್ಧಾಂತವಾಗಿ ಇಂಥ ಪ್ರಲೋಭನೆ ದುರಂತಗಳ ವಿರುದ್ಧ ಹೋರಾಡುವ ಅಸ್ತ್ರವಾಗಿದೆ. ಮನುಷ್ಯನ ತೀರ್ಮಾನಗಳು, ಪ್ರಮಾಣಗಳು ಆಧುನಿಕತೆಯ ಸಂಕೀರ್ಣ ಸಂದರ್ಭಗಳಿಂದ ಆತನ ಯುಕ್ತಾಯುಕ್ತ ವಿವೇಚನೆಗೆ ಅಪಾಯ ತರದಿರಬಹುದು. ನಮ್ಮ ಬದುಕಿನ ಆದ್ಯತೆಗಳು ಗೋಜಲು ಗೋಜಲಾಗಿ ಬೆರೆತು ನಮ್ಮ ವಿವೇಚನೆಗೆ ಅವು ಅಪಾಯವನ್ನು ತಂದೊಡ್ಡಬಹುದು. ಅಂಥ ಸಂದರ್ಭದಲ್ಲಿ ವಿಜ್ಞಾನವು ಜಗತ್ತಿನಲ್ಲಿ ನೈಸರ್ಗಿಕವಾಗಿ, ಸಹಜವಾದ ಬದುಕು ಯಾವುದೆಂಬುದರ ಬಗೆಗೆ ಮನುಷ್ಯನಿಗೆ ತರಬೇತುಗೊಳಿಸುವ ಸಾಧನವಾಗಿದೆ. ಕಲೆಗಳು ಮುಖ್ಯವಾಗಿ ಮನುಷ್ಯನ ಸ್ವಾಭಾವಿಕ ಬದುಕಿನಲ್ಲಿ ನೈಸರ್ಗಿಕ ಲಯವನ್ನು ಹೊಂದಿಸುವ ಕಾಯಕದಲ್ಲಿ ತೊಡಗಿಸಿಕೊಳ್ಳುತ್ತವೆ. ಮಾನವನ ಸ್ವಾಭಾವಿಕ ಬದುಕನ್ನು ನಿರಂತರವಾಗಿ ಔನ್ನತ್ಯಕ್ಕೇರಿಸುವ ಅವನ ಸೃಷ್ಟಿ ಮತ್ತು ಮರುಸೃಷ್ಟಿ ಕ್ರಿಯೆಗಳು ಕಲೆಗಳಿಂದ ತುಂಬಿಕೊಂಡಿರುತ್ತವೆ. ಅಂಥ ಕಲೆಯು ಭಾಷೆಯಿಂದ ಮುಕ್ತವಾಗಿರುತ್ತದೆ. ಹಾಗಾಗಿ ಅವು ವೈಜ್ಞಾನಿಕ ತರ್ಕದಿಂದಲೂ ಸ್ವತಂತ್ರವಾಗಿರುತ್ತವೆ. ಈ ಸೌಂದರ್ಯಾತ್ಮಕ ಕ್ರಿಯೆ ಮತ್ತು ಅನುಭವಗಳಲ್ಲಿ ಸಿದ್ಧಾಂತ ಮತ್ತು ಅದರ ಆಚರಣೆಗಳ ನಡುವಿನ ಬೇಧ ಮಾಯವಾಗಿರುತ್ತದೆ. ಹಾಗಾಗಿ ತತ್ತ್ವಜ್ಞಾನ ಒಂದು ಕ್ರಿಯೆಯಾಗಿ ಮತ್ತು ಕ್ರಿಯೆ ತನ್ನ ಮಿತಿಮೀರಿ ತತ್ತ್ವಜ್ಞಾನದ ಸ್ಥಾನಮಾನಕ್ಕೆ ತಂತಾನೆ ಏರುತ್ತದೆ.

ಕಲೆ ತನ್ನ ಹೀನ ಮತ್ತು ಆಸುರಿ ರೂಪದಲ್ಲಿ ಮಾತ್ರ ಭೋಗದ ಮೂಲವಾಗುತ್ತದೆ. ನಿಜವಾದ ಕಲೆ ಸಂವಹನದ ಸೌಂದರ್ಯಾತ್ಮಕ ರೂಪಗಳ ಮತ್ತು ಅರಿವಿನ ಸಾಕ್ಷಾತ್ಕಾರದ ಮೂಲಕ ಸತ್ಯಾನ್ವೇಷಣೆಗೆ ತೊಡಗಿಸಿಕೊಳ್ಳುತ್ತದೆ. ಮಾನವನ ಸ್ವಾಭಾವಿಕ ಬದುಕೇ ಆತನ ಸಾಮಾಜಿಕ ಬದುಕಿಗೆ ದಾರಿತೋರಿದರೆ ಆಗ ಕಲೆ ದೈನಂದಿನ ಬದುಕನ್ನು ತುಂಬಿಕೊಳ್ಳುತ್ತದೆ. ಆಗ ವಿಜ್ಞಾನ ಮತ್ತು ತಂತ್ರವಿಧಾನಗಳು ತಮ್ಮ ಮಿತಿಯನ್ನು ಕಳೆದುಕೊಂಡು ಸಹಜವಾಗಿಯೇ ಕಲೆಯ ಸ್ಥಾನಕ್ಕೇರುತ್ತವೆ.

ಈ ದೃಷ್ಟಿಯಲ್ಲಿ ಕಲೆಯು ಸತ್ಯದ ಅರ್ಥವನ್ನು ತಿಳಿಯಲು ನೇರ ಮಾರ್ಗವನ್ನು ಒದಗಿಸುವ ವಿದ್ಯೆಯ ಘಟಕ. ಇದರಲ್ಲಿ ಸತ್ಯದ ಎರಡು ಕೇಂದ್ರಗಳಾದ 'ಲಕ್ಷಣ' ಮತ್ತು 'ಅರ್ಥ' ಏಕೀಭವಿಸಿದಂತೆ ಕಾಣುತ್ತದೆ. ಹಾಗಾಗಿ ಸತ್ಯದ ಕೇಂದ್ರಗಳು ಒಗ್ಗೂಡುವ ಕಲೆಯಲ್ಲಿ ಸಹಜವಾಗಿಯೇ ಅನೇಕ ಉನ್ನತೋನ್ನತ ರೂಪಗಳಿವೆ. ಅದರ ಆತ್ಯಂತಿಕ ರೂಪವು, ಸ್ವಾಭಾವಿಕ ಬದುಕೆಂಬುದು ಕೇವಲ ಒಂದು ಮಾತ್ರ, ಅನೇಕವಲ್ಲ ಎಂಬ ಅರಿವನ್ನು ತಂದುಕೊಡುತ್ತದೆ. ಸತ್ಯವೇ ದೇವರು ಎಂದು ಅರಿಯುವ ಸ್ಥಿತಿ ಇದೇ.

## ಧರ್ಮ

ಸತ್ಯಕ್ಕೆ ಅನುಗುಣವಾದ ಮಾನವನ ನಡತೆಯ ತತ್ತ್ವವೇ ಧರ್ಮ. ಧರ್ಮ ಎನ್ನುವುದು 'ರಿಲಿಜಿಯನ್' (Religion) ಅಥವಾ ಮತವಲ್ಲ; ನಂಬಿಕೆ ಅಥವಾ ಕಂದಾಚಾರವೂ ಅಲ್ಲ. ಅದು ದೇವರನ್ನಾಗಲೀ ಅಥವಾ ಯಾವುದೇ ಅತೀಂದ್ರಿಯ ಪರಿಕಲ್ಪನೆಯನ್ನು ಒಳಗೊಂಡಿಲ್ಲ.

ಆಧುನಿಕ ಪಾಂಡಿತ್ಯವು ಸಾಮಾನ್ಯವಾಗಿ ಧರ್ಮವನ್ನು 'ರಿಲಿಜಿಯನ್' ಅಥವಾ ಮತವೆಂದೂ ಭಾರತದ ಸಾಂಪ್ರದಾಯಿಕ ಧರ್ಮವನ್ನು ಹಿಂದೂಧರ್ಮ ಎಂದೂ ವ್ಯಾಪಕವಾಗಿ ಅರ್ಥೈಸುತ್ತದೆ. ಯುರೋಪಿಯನ್ ವಿದ್ವಾಂಸರು ಮತಶ್ರದ್ಧೆ ಮತ್ತು ನಂಬಿಕೆಯ ವ್ಯವಸ್ಥೆಗಳನ್ನು ಸಂಘಟಿತ ರೂಪದಲ್ಲಿ ಸಂಪ್ರದಾಯಗಳಾಗಿ ಗ್ರಹಿಸಿದ್ದೇ ಧರ್ಮದ ತಪ್ಪು ಕಲ್ಪನೆಗೆ ಮುಖ್ಯ ಕಾರಣ. ಸಂಪ್ರದಾಯಗಳಿಗೆ ತಮ್ಮ ತಮ್ಮದೇ ಆದ ತತ್ತ್ವಶಾಸ್ತ್ರ ಮತ್ತು ಧಾರ್ಮಿಕ ಆಚಾರಗಳಿವೆ. ಆದರೆ ಭಾರತೀಯ ಪರಂಪರೆಯಲ್ಲಿ ಧರ್ಮವು ಸಾಮಾನ್ಯವಾಗಿ ಸಂಪ್ರದಾಯಗಳಿಂದ ಹೊರತಾದ ಸ್ವತಂತ್ರ ಅಸ್ತಿತ್ವವನ್ನು ಪಡೆದಿದೆ. ಇದರರ್ಥ ಜಗತ್ತಿನಲ್ಲಿರುವ ಲೋಕದೃಷ್ಟಿಗೆ ಧರ್ಮದ ಮೇಲೆ ಪ್ರಭಾವವಿಲ್ಲವೆಂದಲ್ಲ. ಆದರೆ ಧರ್ಮ ಮತ್ತು ಲೋಕದೃಷ್ಟಿ ನಡುವಿನ ಸಂಬಂಧ ಪೂರ್ವ ನಿರ್ಧಾರಿತ ಮಿತಿಯನ್ನು ಕಲ್ಪಿಸುವುದಿಲ್ಲ, ಮಾತ್ರವಲ್ಲ, ಪರಸ್ಪರ ನಿಕಟವಾಗಿಯೂ ಇಲ್ಲ.

ಧರ್ಮವನ್ನು ಪ್ರಾಚೀನ ಕಾಲದಿಂದಲೂ ಗೌರವಕ್ಕೆ ಪಾತ್ರವಾದ ನೀತಿ ಸಂಹಿತೆಯೆಂದು ಸ್ತ್ರೀ ಪುರುಷರ ಬದುಕಿನ ಹಿತಾಸಕ್ತಿಗಳಿಗಾಗಿ ಅವರ ಸುವ್ಯವಸ್ಥಿತ ಸಾಮಾಜಿಕ ಸಂರಚನೆಗಾಗಿ ಸಮಾಜ ಮತ್ತು ವಿಶ್ವದಲ್ಲಿ ಅವರ ಸ್ಥಾನಮಾನಕ್ಕನುಗುಣವಾಗಿ ಅವರ ಬದುಕನ್ನು ನಿರ್ವಹಿಸುವ ಮತ್ತು ನಿರಂತರವಾಗಿ ಬೆಳೆಯುತ್ತಲೇ ಇರುವ ನೀತಿ–ನ್ಯಾಯತತ್ತ್ವಗಳ ಸಂಪುಟ ಎಂದು ಪರಿಭಾವಿಸಲಾಗಿದೆ. ಆದ್ದರಿಂದ ಧರ್ಮದ ಹೆಸರಿನಲ್ಲಿ ನಾವೊಂದು ಹಕ್ಕು ಮತ್ತು ಕರ್ತವ್ಯಗಳ ಸಂಕೀರ್ಣ ರಚನೆಯನ್ನು ಪಡೆದಿದ್ದೇವೆ. ಈ ರಚನೆಯು ವ್ಯಕ್ತಿಗಳ ಸಾಮಾಜಿಕ ಮತ್ತು ಖಾಸಗಿ ಬದುಕನ್ನು ನಿಯಮ ಬದ್ಧವಾಗಿ ರೂಪಿಸುವ ಜೊತೆಗೆ ಅವರ ಕುಟುಂಬದ ಸದಸ್ಯರು, ಸ್ನೇಹಿತರು, ನೆರೆಹೊರೆಯವರು, ಸಹೋದ್ಯೋಗಿಗಳು, ಮೇಲಿನವರು, ಕೆಳಗಿನವರು, ಶತ್ರುಗಳು ಇತ್ಯಾದಿಯೊಡನೆ ಅವರ ನಡತೆಯನ್ನು ಮತ್ತು ಇವುಗಳ ಜೊತೆಗೆ ಪ್ರಾಣಿಗಳೊಂದಿಗೆ ಗಾಳಿ, ಖನಿಜ, ನೀರು ಮುಂತಾದವನ್ನೊಳಗೊಂಡ ಭೌತಿಕ ಸಂಪನ್ಮೂಲಗಳ ಜೊತೆಗಿನ ಅವರ ವರ್ತನೆಯನ್ನು ಶಿಸ್ತಿಗೊಳಪಡಿಸುತ್ತದೆ. ಈ ವಿವರಣೆಯ ಉದ್ದೇಶ ಧರ್ಮದ ವ್ಯಾಪ್ತಿಯ ಬಗ್ಗೆ ಒಂದು ಕಲ್ಪನೆ ನೀಡುವುದು. ಒಟ್ಟಾಗಿ ಧರ್ಮವು ಸಮಸ್ತವನ್ನೂ ಆವರಿಸಿಕೊಳ್ಳುವುದರಿಂದ ಅದು ವ್ಯಾಪಿಸಿಕೊಳ್ಳುವ ಎಲ್ಲಾ ಬಗೆಯ ಸಂಬಂಧಗಳನ್ನು ಮತ್ತು ಸನ್ನಿವೇಶಗಳನ್ನು ಪಟ್ಟಿಮಾಡುವುದು ಸಾಧುವೂ ಅಲ್ಲ; ಸಾಧ್ಯವೂ ಇಲ್ಲ. ಗಮನಾರ್ಹವಾದ ಅಂಶವೆಂದರೆ ಧರ್ಮವು ಪರಸ್ಪರ ವಿರುದ್ಧ ಆಸಕ್ತಿಗಳಿರುವ ಶ್ರೇಣೀಕೃತ ಸಮಾಜಗಳ ವಿದ್ಯಮಾನವೂ ಅಲ್ಲ. ವರ್ಗರಹಿತ ಸಮಾಜಕ್ಕೆ ಪ್ರಸ್ತುತವಾದ ಸಂಗತಿಯೂ ಅಲ್ಲ. ಅಂದರೆ ಧರ್ಮವು ಸಮಾಜವನ್ನು ಶ್ರೇಣೀಕೃತ ವರ್ಗಗಳ ಘಟಕವೆಂದು ಪರಿಭಾವಿಸುವುದಿಲ್ಲ. ಬದಲಿಗೆ ಸಮಾಜವನ್ನು ವರ್ಗಗಳ ದೃಷ್ಟಿಕೋನದಿಂದ ನೋಡುವ ಪರಿಪಾಠಕ್ಕಿಂತ ಸಂಪೂರ್ಣ ಭಿನ್ನವಾದ ನೆಲೆಯಲ್ಲಿ ಧರ್ಮವು ಸಮಾಜವನ್ನು ಗ್ರಹಿಸುತ್ತದೆ ಮತ್ತು ಅರಿತುಕೊಳ್ಳುತ್ತದೆ. ಗಾಂಧಿಯವರು ವರ್ಣಾಶ್ರಮ ವ್ಯವಸ್ಥೆಯ ಬಗ್ಗೆ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸುವಾಗ ಅವರು ವರ್ಗಗಳಿರಬೇಕಾದ ಅಗತ್ಯವನ್ನು ಕುರಿತು ಹೇಳುವುದಿಲ್ಲ. ಬದಲು

ಸತ್ಯಕ್ಕನುಗುಣವಾಗಿ ಧರ್ಮದ ಆದೇಶಗಳನ್ನು ಪಾಲಿಸುವ ಸಂಪೂರ್ಣ ಭಿನ್ನವಾದ ಆದರ್ಶ ಸಮಾಜದ ಮಾದರಿಯೊಂದರ ಬಗ್ಗೆ ತಮ್ಮ ಒಲವನ್ನು ಪ್ರಕಟಪಡಿಸುತ್ತಾರೆ. ಹಾಗಾದರೆ ಧರ್ಮದ ಆಳ್ವಿಕೆಯ ವ್ಯಾಪ್ತಿಗನುಗುಣವಾಗಿ ಸಮಾಜವನ್ನು ಸತ್ಯವಂತ ಸಮಾಜ ಎಂದು ನಾವು ತಿಳಿಯಬೇಕೇ ?

ಧರ್ಮವು ದಿನನಿತ್ಯದ ಬದುಕನ್ನು ನಿರ್ವಹಿಸಲು ಅಗತ್ಯವಾದ ಮಾರ್ಗದರ್ಶಿ ಸೂತ್ರ ಅಥವಾ ನಿಯಮಗಳ ಒಂದು ಕಟ್ಟುಪಾಡು ಎಂದು ಭಾವಿಸುವುದು ತಪ್ಪು. ಅದಕ್ಕೆ ಅದರದೇ ಆದ ಮಹಾನ್ ಕಾರ್ಯಗಳಿವೆ. ಉದಾಹರಣೆಗೆ ಧರ್ಮವು ಶತಮಾನಗಳಿಂದ ಹರಿದುಬಂದ ಮನುಕುಲದ ಸಂಗ್ರಹಿತ ಅನುಭವಗಳ ಘನೀಕೃತ ರೂಪ. ಹಾಗಾಗಿ ಅದು ಪ್ರಾಕೃತಿಕ ಲಯಗಳನ್ನು ಮಾನವ ಮೌಲ್ಯದೊಡನೆ ಮೇಳೈಸಿ ಸಮೃದ್ಧಗೊಳಿಸುತ್ತದೆ. ಅದು ಮಾನವ ಕಲ್ಯಾಣದೆಡೆಗೆ ಅಭಿಮುಖವಾಗುವಂತೆ ನೈಸರ್ಗಿಕ ಪ್ರಕ್ರಿಯೆಗಳನ್ನು ಮತ್ತು ವಿಷಯಗಳನ್ನು ನೈತಿಕವಾಗಿ ಅಣಿಗೊಳಿಸುತ್ತದೆ. ಧರ್ಮವು ವಿದ್ಯೆಯಲ್ಲಿ ಅಂತರ್ಗತವಾಗಿರುವ ಸಂಯಮ (ಋತಶೀಲತೆ)ದ ಮೂಲ. ವಿದ್ಯೆಯು ಧರ್ಮದ ಬೆಳವಣಿಗೆಗೆ ಆಧಾರ.

ಆದುದರಿಂದ ಪರಸ್ಪರ ಬೇರ್ಪಡಿಸಲಾಗದ ಧರ್ಮ ಮತ್ತು ವಿದ್ಯೆಗಳು ಸತ್ಯದ ಎಂಥ ವಿಶಾಲ ಆಯಾಮವನ್ನು ಪಡೆದುಕೊಳ್ಳುತ್ತದೆಂದರೆ, ಆ ಸ್ಥಿತಿಯಲ್ಲಿ ಸತ್ತ್ವಯುತವಾದ ಅರ್ಥವನ್ನು ಮನುಷ್ಯನ ಕ್ರಿಯೆಯ ಮೂಲಕ ಹೊರಹೊಮ್ಮಿಸುತ್ತದೆ.

## ಮಾನವ ಕ್ರಿಯೆ (Human Activity)

ಮಾನವ ಕ್ರಿಯೆ ಅಥವಾ ಚಟುವಟಿಕೆಯು ಸತ್ಯದ ಎರಡು ಕೇಂದ್ರಗಳಾದ ಆಳ (intensional) ಮತ್ತು ವಿಸ್ತರಣೆಯ (extensional) ನಡುವಿನ ತಂತು. ಸ್ತ್ರೀ–ಪುರುಷರು ಬದುಕಿನ ಮಿತಿಯನ್ನು ಮೀರುವ 'ಆತ್ಮೋತ್ಸರ್ಗ' (self-transcending) ವಿಧಾನಗಳನ್ನು ಹೊಂದಿದ್ದಾರೆ. ಇದು ವೈಚಾರಿಕ ವಿಮರ್ಶೆಯೊಳಗೆ ಅರ್ಥ ಮಾಡಿಕೊಳ್ಳಲಾರದ 'ಸ್ಥಿತಿ'. ಇದು ಕೇವಲ ಮನುಷ್ಯ ಸಂತತಿಗೆ ವಿಶಿಷ್ಟವಾದದ್ದು. ಮಾನವ ಕ್ರಿಯೆಯು ಸ್ವಯಂ ಮೀರುವಿಕೆಯನ್ನು ಒಳಗೊಂಡಿರುತ್ತದೆ; ಅಂದರೆ, ತನ್ನ ಸೃಷ್ಟಿಗಳನ್ನು ಮತ್ತು ನಿರ್ಮಿತ ವಸ್ತುಗಳನ್ನು ನಿರಂತರವಾಗಿ ತಾನೇ ಮೀರಲು ಪ್ರಯತ್ನಪಡುವ ಮಾನವನ ದಣಿವರಿಯದ ಸಾಮರ್ಥ್ಯವೇ ಆತ್ಮೋತ್ಸರ್ಗ ಅಥವಾ ಸ್ವಯಂ ಮೀರುವಿಕೆ. ಈ ಸಾಮರ್ಥ್ಯವೇ ಅಂತಸ್ಥ ಶಕ್ತಿಯಾಗಿ ಸ್ತ್ರೀ–ಪುರುಷರನ್ನು ಬೇರೆಲ್ಲ ಸಂಗತಿಗಳಿಂದ ಪ್ರತ್ಯೇಕವಾಗಿ ವಿಂಗಡಿಸುತ್ತದೆ. ಹಾಗೆಯೇ ಒಂದು ಆಚರಣೆಯಾಗಿ ಸತ್ಯಾನ್ವೇಷಣೆಯಲ್ಲಿ ತೊಡಗಿಸಿಕೊಳ್ಳುತ್ತದೆ; ಮತ್ತು ಹಾಗಾಗಿ ಮಾನವನ ಕಾರ್ಯಗತಗೊಳ್ಳುವ ಆಚರಣೆ, ಕ್ರಿಯೆಗಳು ಅವನ ದೈನಂದಿನ ಬದುಕಿನ ಸತ್ಯ ಮತ್ತು ಅದರ ಮುಖ್ಯ ಅರ್ಥವಂತಿಕೆಯ ನಡುವೆ ಒಂದು ಸಂಪರ್ಕ ಸಾಧನವಾಗುತ್ತವೆ. ಈ ವಿಶಿಷ್ಟತೆಯನ್ನೇ ಸಾಮಾನ್ಯ ಬಳಕೆಯಲ್ಲಿ ಸತ್ಯಾನ್ವೇಷಣೆ ಎಂದು ತಿಳಿಯುತ್ತಾರೆ. ಹಾಗಾಗಿ ಮನುಷ್ಯನ ಚಟುವಟಿಕೆಗಳು

ಆತನ ಸ್ವಾಭಾವಿಕ, ಸೈದ್ಧಾಂತಿಕ ಬದುಕಿನ ನಿರ್ದಿಷ್ಟ ದಾರಿಗಳ ವಿಶಿಷ್ಟತೆಯ ವಿವರಣೆ ನೀಡುತ್ತವೆ.

ಮಾನವನ ಕ್ರಿಯೆಯು ಮಾನವನ ಸ್ವಾಭಾವಿಕ ಬದುಕನ್ನು ಕೇವಲ ಪ್ರಾಕೃತಿಕ ಕ್ರಿಯೆಗಿಂತ ಹೆಚ್ಚಿನದು ಎಂದು ತೋರಿಸುತ್ತದೆ. ಪ್ರಕೃತಿಯೇ ನೈತಿಕ ಮತ್ತು ಸೌಂದರ್ಯಾತ್ಮಕ ಅಂಶಗಳನ್ನು ಗರ್ಭೀಕರಿಸಿಕೊಂಡಿದ್ದರೂ ಅದು ಕೆಲವೊಂದು ವೈಚಾರಿಕ ವರ್ತನೆಗಳನ್ನು ಅನುಸರಿಸುತ್ತದೆ. ಇಕಾಲಜಿ (ಜೀವ ಪರಿಸರ ವಿಜ್ಞಾನ) ಎನ್ನುವುದು ಪ್ರಕೃತಿಯ ಈ ವೈಚಾರಿಕ ವರ್ತನೆಯ ಸಿದ್ಧಾಂತ. ಪ್ರಾಣಿಗಳ ವರ್ತನೆಯು ಸ್ಪಷ್ಟವಾಗಿ ಈ ವೈಚಾರಿಕತೆಯನ್ನು ಪ್ರಕಟಪಡಿಸುತ್ತದೆ. ಹಕ್ಕಿಗಳು, ಪ್ರಾಣಿಗಳು, ಕೀಟಗಳ ಆಹಾರ ಸಂಗ್ರಹಣೆಯ ರೀತಿ, ತಮ್ಮ ಪ್ರಭೇದಗಳ ಹಾಗೂ ಇತರ ಪ್ರಭೇದಗಳ ನಡುವಣ ಸಂಬಂಧ, ಅಪಾಯವನ್ನು ಎದುರಿಸುವ ರೀತಿ ಇತ್ಯಾದಿ ದೈನಂದಿನ ಸಾಮಾನ್ಯ ಬದುಕಿನಿಂದ ಹಿಡಿದು ವಿಶೇಷ ಸನ್ನಿವೇಶದವರೆಗೆ ಅವು ಪ್ರತಿ ಹಂತದಲ್ಲಿ ನಾವು ವಿವೇಕವೆಂದು ಕರೆಯುವ ಕ್ರಮಬದ್ಧವಾದ ನವೀನತೆಯನ್ನು ಹೊಂದಿರುತ್ತವೆ. ಇಂಥ ವಿವೇಕವು ತನ್ನ ಉದಾತ್ತ ವಿಮೋಚನೆಯ ಸ್ಥಿತಿಯಲ್ಲಿ ವೈಚಾರಿಕತೆ (Reason) ಎನಿಸಿಕೊಳ್ಳುತ್ತದೆ. ಆಧುನಿಕ ಯೂರೋಪಿಯನ್ ಚಿಂತನೆಯ ಮುಖ್ಯ ಪರಂಪರೆಯು ಮಾನವ ಸಂತತಿಯ ಪರಮೋಚ್ಚ ಸಾಮರ್ಥ್ಯವನ್ನು ಮತ್ತು ವ್ಯಕ್ತಿ ವಿಶಿಷ್ಟ ಸ್ವರೂಪವನ್ನು ಮಿತಿಗೊಳಿಸುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಮಾವನ ಕ್ರಿಯೆಯು ಉಭಯಪಾರ್ಶ್ವದಲ್ಲಿ ಸತ್ಯದಿಂದ ಬಂಧಿತವಾಗಿದೆ; ಮಾತ್ರವಲ್ಲ ಕಾರ್ಯ-ಕಾರಣ ಸಂಬಂಧ (cause and effect) ಮತ್ತು ಜಗದ್ವಿಕಾಸವಾದ (Teleology) ಗಳ ನೋಟದಿಂದ ಸತ್ಯವು ಮಾನವಕ್ರಿಯೆಗೆ ಮಾರ್ಗದರ್ಶನ ನೀಡುತ್ತದೆ. ಪ್ರಕೃತಿಯೊಡನೆ ಮನುಷ್ಯನ ಸಂಘರ್ಷ ಅಥವಾ ಸಾಮರಸ್ಯ ಮುಖ್ಯವಲ್ಲ. ನಿಸರ್ಗದ ಅಂಗವಾಗಿಯೇ ಆತನ ಆತ್ಮೋತ್ಸರ್ಗವು ಮಹತ್ವದ (Self-transcendence) ಸಂಗತಿ. ಇದು ಮಾನವನ ನೈಸರ್ಗಿಕ ಬದುಕಿನ ಕೇಂದ್ರ ಬಿಂದು; ಮತ್ತು ಅಂಥ ಆತ್ಮೋತ್ಸರ್ಗದ ಸಹಜ ಬದುಕು ಸತ್ಯಕ್ಕೆ ಅನುಗುಣವಾಗಿರುತ್ತದೆ. ಸೈದ್ಧಾಂತಿಕ ಮತ್ತು ಸಾಮಾಜಿಕ ಬದುಕು ಈ ಸ್ವಾಭಾವಿಕ ಬದುಕಿನ ಅಂಗಗಳು.

ಒಂದು ಚಟುವಟಿಕೆಯು ಒಬ್ಬ ಮನುಷ್ಯನ ಸಂಬಂಧವನ್ನು ಇತರ ಮಾನವರ ಜೊತೆಗೆ ಬೆಸೆಯುವುದಕ್ಕಿಂತಲೂ ಹೆಚ್ಚಿನದನ್ನು ಅವನ ಮತ್ತು ಅವನ ಸಾಮಾಜಿಕ ಬದುಕಿಗೆ ನೀಡುತ್ತದೆ. ಸ್ತ್ರೀ ಪುರುಷರು ತಮ್ಮ ಸ್ವಾಭಾವಿಕ ಬದುಕಿನ ಅಂಗವಾಗಿ ಅಸಂಖ್ಯ ಬಗೆಗಳ ಜಾಲದಲ್ಲಿ ಪರಸ್ಪರ ಹೆಣೆದುಕೊಳ್ಳುತ್ತಾರೆ. ಮಾನವನ ಚಟುವಟಿಕೆ ಈ ಸಂಬಂಧಗಳನ್ನು ನಿರ್ಮಿಸುತ್ತದೆ. ಆದರೆ ಸಾಮಾಜಿಕ ಮತ್ತು ಸ್ವಾಭಾವಿಕ ಬದುಕುಗಳ ನಡುವಿನ ಸಂಬಂಧವನ್ನು ತಾರ್ಕಿಕ ಅಥವ ಐಹಿಕ ಸಂಬಂಧಗಳು ಪ್ರಮುಖವಾಗಿ ನಿರ್ಧರಿಸಲಾರವು. ನಿಜಕ್ಕೂ ಸಾಮಾಜಿಕ ಬದುಕನ್ನು ಸ್ವಾಭಾವಿಕ ಬದುಕಿನಿಂದ ಬೇರ್ಪಡಿಸಲಾಗದು. ಆದರೆ ಅಧ್ಯಯನದ ಅನುಕೂಲದ ದೃಷ್ಟಿಯಿಂದ ಧರ್ಮವು

ಸಾಮಾಜಿಕ ಬದುಕನ್ನು ನಿರ್ವಹಿಸುತ್ತದೆಂದು ನಾವು ಹೇಳಬಹುದು. ಮಾನವ ಚಟುವಟಿಕೆಯೆಲ್ಲವೂ ಧರ್ಮದ ಸೇವೆಯಲ್ಲಿರುತ್ತದೆ. ನಿರಂತರವಾಗಿ ಸ್ವಯಂ – ಮೀರುವಿಕೆಯ (ಆತ್ಮೋತ್ಸರ್ಗ) ಹೊಸ ರೂಪಗಳನ್ನು ಅಳವಡಿಸಿಕೊಳ್ಳುವ ತನ್ನ ಶಕ್ತಿಯಿಂದ ಮಾನವ ಸತ್ಯದ ಆದೇಶಕ್ಕನುಗುಣವಾಗಿ ಧರ್ಮವನ್ನು ಸುಧಾರಣೆ ಮಾಡುತ್ತಿರುತ್ತಾನೆ. ಆದರೆ, ಅನೇಕ ಬಾರಿ ಸಮಾಜಗಳು ಧರ್ಮದಿಂದ ನಿರ್ದೇಶಿಸಲ್ಪಡುತ್ತಿರುವುದಿಲ್ಲ. ಅಂಥ ಸಂದರ್ಭದಲ್ಲಿ ಸಂಘರ್ಷದ ಕೀಳು ಸ್ವರೂಪಗಳು ಮತ್ತು ಶೋಷಣಾ ವಿಧಾನಗಳು ಧರ್ಮದ ಸ್ಥಳವನ್ನು ಆಕ್ರಮಿಸಿಕೊಳ್ಳುತ್ತವೆ. ಅಂಥ ಸನ್ನಿವೇಶಗಳಲ್ಲಿ ಮನುಷ್ಯನ ಸಾಮಾನ್ಯ ದೈನಂದಿನ ಚಟುವಟಿಕೆಗಳು ಆಸುರಿ ರೂಪವನ್ನು ಪಡೆಯುತ್ತವೆ.

ಸಂಘರ್ಷಗಳು ಮತ್ತು ಶೋಷಣೆಗಳು ಅಧಿಪತ್ಯ ನಡೆಸುವ ಸಮಾಜಗಳಲ್ಲಿ ಅಧರ್ಮವು ರಾಜಕಾರಣದ ವ್ಯವಸ್ಥಿತ ರೂಪವನ್ನು ತೊಡುತ್ತದೆ. ರಾಜಕಾರಣವು ಮಾನವನ ದೈನಂದಿನ ಚಟುವಟಿಕೆಗಳನ್ನು ನಾಶಗೊಳಿಸಿ ಆಸುರಿ ಚಟುವಟಿಕೆಯನ್ನು ಪೋಷಿಸುತ್ತದೆ. ಇಂದು ದಬ್ಬಾಳಿಕೆ ಮತ್ತು ಹಿಂಸೆಯನ್ನು ಬೆನ್ನತ್ತುವ ಪ್ರವೃತ್ತಿಗಳು ಇದನ್ನು ಪ್ರತಿಬಿಂಬಿಸುತ್ತಿವೆ. ಹಾಗೆ ನೋಡಿದರೆ ರಾಜಕಾರಣ ಎನ್ನುವುದು ಸತ್ಯದಿಂದ ಹೊರಬಂದು ವಿರೂಪಗೊಂಡ ದೊಡ್ಡ ಅನೈತಿಕ ಮಾನವಕ್ರಿಯೆ. ಅಂಥ ಸಮಾಜಗಳಲ್ಲಿ ಸಾಮಾನ್ಯವಾಗಿ ಸುಪ್ತಾವಸ್ಥೆಯಲ್ಲಿರುವ ಸಹಜ ಮಾನವ ಕ್ರಿಯೆಗಳು ಆಸುರಿ ಕ್ರಿಯೆಯ ಜೊತೆ ನಿರಂತರ ಸಂಘರ್ಷದಲ್ಲಿರುತ್ತವೆ. ಗಾಂಧಿಯು ತನ್ನ ಕಾಲದಲ್ಲಿ ಇಂಥ ಸಂಘರ್ಷದ ಮೂರ್ತರೂಪ ಆಗಿದ್ದರು. ಸಾರ್ವಜನಿಕ ಬದುಕಿನಲ್ಲಿ ಸತ್ಯ, ಅಹಿಂಸೆ ಮತ್ತು ಧರ್ಮಗಳ ಆಚರಣೆಗೆ ಅವರು ಮಾಡಿದ ಒತ್ತಾಯ ಮತ್ತು ಅವನ್ನು ತಮ್ಮ ಜೀವನದಲ್ಲೇ ಅನುಷ್ಠಾನಕ್ಕೆ ತಂದುಕೊಳ್ಳಲು ಮಾಡಿದ ಅವರ ಪ್ರಯತ್ನ ಆಸುರಿ ಕ್ರಿಯೆ ದಬ್ಬಾಳಿಕೆ ನಡೆಸುತ್ತಿದ್ದ ಸಾಮಾಜಿಕ ಬದುಕಿನಲ್ಲಿ ಬಹುದೊಡ್ಡ ಸುಧಾರಣೆಯನ್ನು ತರುವ ಮೂಲವಾಗಿತ್ತು. ಅವರ ಹನ್ನೊಂದು ವ್ರತಗಳು (ಏಕಾದಶಾವ್ರತ) ವ್ಯಕ್ತಿಯ ಆತ್ಮೋತ್ಸರ್ಗದ ಮಾರ್ಗಗಳಾಗಿದ್ದವು. ಆಸುರಿ ಚಟುವಟಿಕೆ ತುಂಬಿದ ಸಮಾಜದಲ್ಲಿ ಈ ಆತ್ಮೋತ್ಸರ್ಗವು ಮಾನವ ಚಟುವಟಿಕೆಯಾಗಿ ಪಲ್ಲಟಗೊಳ್ಳಲು ಮತ್ತು ಸ್ಪಷ್ಟ ರೂಪ ಪಡೆಯಲು ಬೇಕಾದ ಅವಕಾಶವನ್ನು ಕಲ್ಪಿಸುವ ವಿಧಾನವಾಗಿದೆ. ನಿರ್ದಿಷ್ಟ ಸಮಯದಲ್ಲಿ ಮಾನವಕ್ರಿಯೆಯು ಹೇಗೆ ಸಾಮಾಜಿಕ ಬದುಕಿನ ಮಿತಿಯನ್ನು ಮೀರಿ ವಿಶ್ವವ್ಯಾಪಿಯಾಗಬಲ್ಲದು ಎಂಬುದಕ್ಕೆ ಇದೊಂದು ನಿದರ್ಶನ.

ಹೀಗೆ ಹೇಳಿದಾಗ ಇದನ್ನು ವ್ಯಕ್ತಿಯು ಸಮಾಜಕ್ಕಿಂತ ಹೆಚ್ಚು ಪ್ರಾಶಸ್ತ್ಯ ಪಡೆಯಬೇಕೆಂದು ಪ್ರತಿಪಾದಿಸಲು ಹೊರಟ ವಾದವೆಂದು ತಿಳಿಯಬಾರದು. ಸಮಾಜವು ಪ್ರತ್ಯೇಕಪ್ರತ್ಯೇಕ ವ್ಯಕ್ತಿಗಳಿಂದ ಸಂಯೋಜನೆಗೊಂಡಿದೆ ಎಂದು ಹರಳುಗಟ್ಟಿದ ಚಿಂತನೆಯ ಮೂಲದಲ್ಲಿ ಸಮಾಜ–ವ್ಯಕ್ತಿಗಳನ್ನು ಮುಖಾಮುಖಿಯಾಗಿ ನಿಲ್ಲಿಸುವ ಪ್ರಶ್ನೆ ಮೂಡಿಬಂದ ತಪ್ಪು ಪರಿಕಲ್ಪನೆ ಅಡಗಿದೆ. ಸಮಾಜ ಮತ್ತು ವ್ಯಕ್ತಿಯ ನಡುವಿನ ಶ್ರೇಷ್ಠತೆಯ ಈ ಪ್ರಶ್ನೆಯು ಸಮಕಾಲೀನ ಭೌತವಾದೀ ಅಭಿಪ್ರಾಯವಾಗಿದೆ.

ಗಾಂಧಿಯವರ ದೃಷ್ಟಿಯಲ್ಲಿ ಸಾಮಾಜಿಕ ಬದುಕು ಅಥವಾ ಸಮಾಜಗಳು ವಿಸ್ತರಣೆಗೊಳ್ಳುವ ಸತ್ಯದ ಭಂಡಾರಗಳು. ಸಮಕಾಲೀನ ಸಾಮಾಜಿಕ ಬದುಕು ಅಂಥ ವಿಸ್ತರಣೆಯನ್ನು ಭಂಗಪಡಿಸುವ ಸ್ಥಿತಿ ಮಾತ್ರ. ಆತ್ಮೋತ್ಸರ್ಗದ ಮೂಲಕ ಮಾನವ ಅಂಥ ಸಾಮಾಜಿಕ ಬದುಕನ್ನು ಸತ್ಯದ ಮೂಲಭೂತ ಸಾರದೊಡನೆ ಬೆಸೆಯುತ್ತಾನೆ.

ಮಾನವನ ತಾತ್ತ್ವಿಕ ಬದುಕನ್ನು ಇತರ ಜೀವಿಗಳ ಬದುಕಿನಿಂದ ಬೇರ್ಪಡಿಸಲಾಗದು. ತನ್ನ ಸ್ವಾಭಾವಿಕ ಬದುಕಿನ ಅಂಗವಾಗಿ ಆತ ತನ್ನ ಸಂಚಿತ ಅನುಭವಗಳನ್ನು ಸಾಮಾನ್ಯೀಕರಣಗೊಳಿಸಿ ಪ್ರಚಲಿತಗೊಳಿಸುತ್ತಾನೆ. ನಿಸರ್ಗದ ಲಯವನ್ನು ಆಂತರಂಗೀಕರಿಸಿಕೊಳ್ಳುತ್ತಾನೆ. ವಸ್ತು ಮತ್ತು ಪ್ರಕ್ರಿಯೆಗಳ ಪ್ರಮಾಣಗಳನ್ನು ಗ್ರಹಿಸಿ ಅವನ್ನು ಮರು ಸೃಷ್ಟಿಸುತ್ತಾನೆ. ಈ ಕ್ರಿಯೆ ಮತ್ತು ಈ ರೀತಿಯ ಪ್ರಯತ್ನಗಳು ಅವನ ತಾತ್ತ್ವಿಕ ಬದುಕನ್ನು ರೂಪಿಸುತ್ತವೆ.

ಎಲ್ಲಾ ತತ್ತ್ವಗಳು ಆಚರಣೆಯಲ್ಲೇ ಜನಿಸಿ, ತಮ್ಮ ಅಂತಿಮ ಪ್ರಮಾಣಗಳನ್ನು ಆಚರಣೆಯಲ್ಲೇ ಕಂಡುಕೊಳ್ಳುತ್ತವೆಂಬ ನಿಲುವು ತಾತ್ತ್ವಿಕ ಚಟುವಟಿಕೆಗಳಿಗೆ ಸ್ವಾಯತ್ತತೆಯನ್ನು ನಿರಾಕರಿಸುತ್ತದೆ. ಈ ನಿಲುವು ಹೆಚ್ಚೆಂದರೆ ಕೇವಲ ಸತ್ಯದ ವಿಸ್ತರಣೆಯ ಮುಖವನ್ನು ಮಾತ್ರ ಗುರುತಿಸುತ್ತದೆ. ಇಲ್ಲಿ ಸತ್ಯದ ಸಾರಭೂತ ಅರ್ಥಕ್ಕೆ ಅವಕಾಶವಿಲ್ಲ. ಹಾಗಾಗಿ ಮಾನವ ಕ್ರಿಯೆಯು, ಸತ್ಯದ ಸಾರ ಮತ್ತು ಅಪಾರ ವಿಸ್ತರಣೆ, ಈ ಎರಡರ ನಡುವಿನ ಸೇತುವೆ ಎಂಬ ಪರಿಕಲ್ಪನೆಯನ್ನು ಅದು ಅಲ್ಲಗಳೆಯುತ್ತದೆ. ಆದುದರಿಂದ ಸತ್ಯ-ತತ್ತ್ವವು ಅದರ ಆಚರಣೆಗೆ ಅಧೀನವಾಗಿದ್ದರೆ ಅದು ಕೇವಲ ನೆಪಮಾತ್ರದ ವಾಸ್ತವ ಸ್ಥಿತಿಯಾಗುತ್ತದೆ. ಈ ಸ್ಥಿತಿಯೇ ವಿದ್ಯೆಯು ಆಸುರೀ ರೂಪವನ್ನು ತಾಳುವ ತಾತ್ತ್ವಿಕ ಸನ್ನಿವೇಶ.

ಮಾನವನ ಆತ್ಮೋತ್ಸರ್ಗದ ಮೂಲಕವೇ ವಿದ್ಯೆ ಪ್ರಧಾನವಾಗಿ ಸೃಷ್ಟಿಯಾಗುತ್ತದೆ. ಆದರೆ ಈ ಆತ್ಮೋತ್ಸರ್ಗವು ತಾತ್ತ್ವಿಕವೂ ಅಲ್ಲ, ಪ್ರಾಯೋಗಿಕವೂ ಅಲ್ಲ. ಮಾನವನ ಕ್ರಿಯೆಯು ಅಂಥ ವಿಭಜನೆಗಳನ್ನು ದಾಟಿ ನವನವೋನ್ಮೇಷಶಾಲಿಯಾಗಿ ಸ್ತ್ರೀ ಪುರುಷರ ತಾತ್ತ್ವಿಕ ಬದುಕನ್ನು ಶ್ರೀಮಂತಗೊಳಿಸುತ್ತಿರುತ್ತದೆ.

ಆದರೆ ಜಗತ್ತಿನ ಮೇಲಿನ ಯುರೋಪಿಯನ್ನರ ದಬ್ಬಾಳಿಕೆಯು ಮಾನವ ಚಟುವಟಿಕೆಯನ್ನು ಖಾಸಗೀಕರಣಗೊಳಿಸಿದೆ. ಆಸುರಿ ಚಟುವಟಿಕೆಯು ಸಾರ್ವಜನಿಕ ಬದುಕಿನ ಮೇಲೆ ದಬ್ಬಾಳಿಕೆ ನಡೆಸಿ, ಸತ್ಯದ ಕಳೆಗುಂದಿಸಿದೆ. ಧರ್ಮ ಮತ್ತು ವಿದ್ಯೆಗಳು ತಮ್ಮ ಸ್ಥಾನವನ್ನು ರಾಜಕಾರಣ ಮತ್ತು ವಿಜ್ಞಾನಗಳಿಗೆ ಮತ್ತು ಆ ಮೂಲಕ ಮಾನವ ಮತ್ತು ಪ್ರಕೃತಿಯ ಮೇಲೆ ಶೋಷಣೆ ಮತ್ತು ದಬ್ಬಾಳಿಕೆಗಳನ್ನು ಸಾಧಿಸುವ ವಿಧಾನಗಳಿಗೆ ಬಿಟ್ಟುಕೊಟ್ಟಿವೆ. ಈ ಬಿಕ್ಕಟ್ಟಿನಲ್ಲಿ ಗಾಂಧಿಯವರ ಪ್ರಯತ್ನ ಮಾನವ ಕ್ರಿಯೆಯನ್ನು ಅದರ ಸರಿ ಸ್ಥಾನದಲ್ಲಿ ಪ್ರತಿಷ್ಠಾಪಿಸುವುದಾಗಿತ್ತು.

**ಅಹಿಂಸೆ**

ಇಂಗ್ಲಿಷ್‌ನ ನಾನ್-ವಾಯಲೆನ್ಸ್ (non-Violence) ಪದವು 'ಅಹಿಂಸೆ' ಎಂಬುದಕ್ಕೆ ಸಂವಾದಿಯಲ್ಲ. ಅಹಿಂಸೆ ಸಂಸ್ಕೃತಿಯಲ್ಲಿ ಬೇರೂರಿದ ಪರಿಕಲ್ಪನೆ. ಹಾಗಾಗಿ ನಾವು

ಇಲ್ಲಿ ಅಹಿಂಸೆ ಎಂಬ ಪದವನ್ನೇ ಬಳಸುತ್ತೇವೆ. ಗಾಂಧಿಯವರ ತತ್ತ್ವಜಿಜ್ಞಾಸೆಯಲ್ಲಿ ಅಹಿಂಸೆಗೆ ಮೂಲಭೂತ ಸ್ಥಾನವಿದೆ. ಅವರು 'ಅಹಿಂಸೆ' ಪದವನ್ನು ಮತ್ತೆ ಮತ್ತೆ 'ಸತ್ಯ' ಪದದ ಜೊತೆಗೂಡಿಸಿಕೊಂಡು ಬಳಸಿದ್ದಾರೆ. ಇದು ಅವರಿಗೆ ಅಹಿಂಸೆ ಸತ್ಯದ ಜೊತೆ ಅಂತರ್ಗತವಾಗದೆಂಬ ಭಾವನೆ ಇದ್ದಿರಬಹುದೆಂಬ ಅಭಿಪ್ರಾಯಕ್ಕೆ ಅವಕಾಶ ಕೊಡುತ್ತದೆ. ಆದರೆ ಗಾಂಧಿ ಸತ್ಯವನ್ನು ಹೊರತುಪಡಿಸಿ ಬೇರೆ ಯಾವ ಅಂಶಕ್ಕೂ ಸ್ವತಂತ್ರ ಸ್ಥಾನವನ್ನು ನೀಡಿರುವುದು ಕಾಣುವುದಿಲ್ಲ. ಅಹಿಂಸೆ ಈ ನಿಲುವಿಗೆ ಹೊರತಲ್ಲ. ಸತ್ಯ ಮತ್ತು ಅಹಿಂಸೆಯನ್ನು ಒಟ್ಟಾಗಿಯೇ ಬಳಸುವುದು ಮತ್ತು ಸತ್ಯಕ್ಕಲ್ಲದೆ ಬೇರಾವುದಕ್ಕೂ ಸ್ವತಂತ್ರ ಸ್ಥಾನ ನೀಡದಿರುವುದು ಈ ಎರಡು ನಿಲುವುಗಳು ಅವಿರೋಧಾತ್ಮಕ ಸ್ವಭಾವವನ್ನು ಮತ್ತು ಈ ಎರಡೂ ಒಟ್ಟೊಟ್ಟಿಗೆ ಸತ್ಯವಾಗಿರಲು ಸಾಧ್ಯವೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ಅರ್ಥೈಸುವಿಕೆಯು ಅಹಿಂಸೆಯನ್ನು ಅರ್ಥ ಮಾಡಿಕೊಳ್ಳಲು ಅಗತ್ಯ.

ಅಹಿಂಸೆ ಮಾನವನ ಕ್ರಿಯೆಯನ್ನು ನಿಯಂತ್ರಿಸುವ ಸಾಧನ. ಹಾಗಾಗಿ ಅದು ಸತ್ಯದ ಹಾದಿಯಿಂದ ಮಾನವ ವಿಮುಖವಾಗದಂತೆ ತಡೆಯುತ್ತದೆ. ಅಹಿಂಸೆ ಪ್ರಧಾನವಾಗಿ ಮಾನವ ಏನೆಲ್ಲ ಮಾಡಬಾರದೆಂಬ ನಿಯಮಗಳ ಪಟ್ಟಿಯಲ್ಲ. ಅದು ಸ್ತ್ರೀ–ಪುರುಷರಿಗೆ ಆಸುರಿ ಕ್ರಿಯೆಗೆ ಆಸ್ಪದವಿಲ್ಲದ ಜೀವನ ತತ್ತ್ವವನ್ನು ಒದಗಿಸುತ್ತದೆ. ಅಹಿಂಸಾ ತತ್ತ್ವವು ಒಂದು ರಾಜಕೀಯ ಮತ್ತು ಆರ್ಥಿಕ ಬದುಕಿನ ಸಂಘಟನೆಗೆ, ವಿಜ್ಞಾನ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿಗೆ ಮತ್ತು ಸಮಸುಖೀ ಸಮಾಜವೊಂದರ ನಿರ್ಮಾಣಕ್ಕಾಗಿ ಅವಶ್ಯವಾದ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳನ್ನು ನೀಡುತ್ತದೆ.

ಅಹಿಂಸೆಯು ಮಾನವನ ನೈಸರ್ಗಿಕ ಬದುಕಿನ ಮೂಲಸಾರ. ಅಹಿಂಸೆ ಎಂದರೆ ಕೇವಲ ಕೊಲ್ಲದಿರುವ, ಆಕ್ರಮಣ ಮಾಡದಿರುವ ಅಥವಾ ಹಿಂಸೆ ನೀಡದಿರುವ ಕಾರ್ಯ ಮಾತ್ರವಲ್ಲ. ಏಕೆಂದರೆ ಸಾವು ಸಹ ಇಂಥದೇ ಕಾರ್ಯಗಳನ್ನು ಮಾಡುತ್ತದೆ. ಅಹಿಂಸೆ ಸಾವಿಗೆ ತೀರಾ ವಿರುದ್ಧವಾದ ಜೀವಂತಿಕೆಯಿಂದ ಪುಟಿಯುವ ಕ್ರಿಯೆಗಳ ಮೂಲ ಮತ್ತು ಸ್ವರೂಪ. ವಾಸ್ತವವಾಗಿ ಅಹಿಂಸೆಯು ಮಾನವನ ಶ್ರೇಷ್ಠ ಕ್ರಿಯೆಗಳನ್ನು ಒಳಗೊಂಡಿದೆ. ಸಾಮಾನ್ಯವಾದ ನೈಸರ್ಗಿಕ ಬದುಕಿಗೆ ಅಹಿಂಸೆಯ ತಿಳುವಳಿಕೆಯ ಸ್ಪರ್ಶವಾದಾಗ ಸ್ತ್ರೀ–ಪುರುಷರು ಸ್ಫೂರ್ತಿಗೊಂಡು ಆತ್ಮೋತ್ಸರ್ಗಕ್ಕೆ ಸಜ್ಜಾಗುತ್ತಾರೆ; ಮಾತ್ರವಲ್ಲ, ಅದಕ್ಕೆ ಬೇಕಾದ ಶಕ್ತಿಯನ್ನೂ ಪಡೆಯುತ್ತಾರೆ. ಇದು ಸತ್ಯದ ಆದೇಶಕ್ಕನುಗುಣವಾಗಿ ಬದುಕನ್ನು ನಿರಂತರವಾಗಿ ಮರುಸೃಷ್ಟಿಸುವ ವಿಧಾನ. ಅಂತಿಮವಾಗಿ ಅಹಿಂಸೆಯು ಸತ್ಯದ 'ಆಳ' ಮತ್ತು 'ವಿಸ್ತಾರ'ಗಳ ನಡುವಿನ ಕಂದಕಕ್ಕೆ ಸೇತುವೆ ನಿರ್ಮಿಸುತ್ತದೆ. ಹಾಗಾಗಿ ಇದು ಮಾನವ ಕ್ರಿಯೆಗೆ ಆದರ್ಶ.

## 'ಸತ್ಯಾಗ್ರಹ', 'ಸ್ವರಾಜ್ಯ' ಮತ್ತು ಸ್ವದೇಶಿ'

ಇವು ಮೂರೂ ಅಹಿಂಸಾ ತತ್ತ್ವದಿಂದ ಪ್ರಕಟಗೊಂಡವುಗಳು. ಸತ್ಯಾಗ್ರಹ ಕೇವಲ ಅಹಿಂಸಾತ್ಮಕ ಪ್ರತಿಭಟನೆಯ ವಿಧಾನವಲ್ಲ. ತನ್ನ ಶಬ್ದದಲ್ಲೇ ಅದು ಸತ್ಯಕ್ಕಾಗಿ ಒತ್ತಾಯಿಸುವ ಅರ್ಥವನ್ನೊಳಗೊಂಡಿದೆ. ಅಂದರೆ ಅದು ಸತ್ಯದ ಹಾದಿಯನ್ನು ಬಿಟ್ಟು

ತಪ್ಪು ದಾರಿ ಹಿಡಿದರೆ ಅದನ್ನು ಸರಿಪಡಿಸುವ ಕ್ರಮ. ಆದ್ದರಿಂದ ಸತ್ಯಾಗ್ರಹವು ವೈಯಕ್ತಿಕವಾಗಿರಲಿ, ಸಾಮೂಹಿಕವಾಗಿರಲಿ, ಅವುಗಳ ಉದ್ದೇಶ ಬೇರೆ ಬೇರೆಯಲ್ಲ. ಅವು ವಿಭಿನ್ನ ಸನ್ನಿವೇಶಗಳ ಅಗತ್ಯಕ್ಕೆ ತಕ್ಕಂತೆ ತಪ್ಪು ದಾರಿಯಿಂದ ಸರಿದಾರಿಗೆ ತರಲು ಬಳಸುವ ಬೇರೆ ಬೇರೆ ಕ್ರಮಗಳು. ಈ ಸರಿದಾರಿಗೆ ತರುವ ಪ್ರಕ್ರಿಯೆಯಲ್ಲಿ ಅಹಿಂಸೆಯು ಪ್ರಮುಖ ನಿಯಂತ್ರಕನಾಗಿ ಕಾರ್ಯನಿರ್ವಹಿಸುತ್ತದೆ. ಗಾಂಧಿಯವರ ಪ್ರಕಾರ ಒಬ್ಬ ಸತ್ಯಾಗ್ರಹಿಯು ಸತ್ಯಾಗ್ರಹದ ಪರಿಕಲ್ಪನೆಯಲ್ಲಿ ಅಹಿಂಸೆಯು ವಹಿಸುವ ಮಹತ್ತ್ವದ ಪಾತ್ರವನ್ನು ಸ್ಪಷ್ಟವಾಗಿ ಗ್ರಹಿಸಿ ಅದನ್ನು ಕರಾರುವಾಕ್ಕಾಗಿ ಆಚರಣೆಗೆ ತರಬೇಕು. ಯಾಕೆಂದರೆ ಅವರಿಗೆ ಗುರಿ ಮತ್ತು ಮಾರ್ಗಗಳು ಬೇರೆ ಬೇರೆಯಲ್ಲ. ಸತ್ಯನಿಷ್ಠ ಸನ್ನಿವೇಶದ ಪ್ರತಿಷ್ಠಾಪನೆಗೆ ಅಲ್ಲಿ ಬಳಸುವ ಮಾರ್ಗಗಳೂ ಅಷ್ಟೇ ಸತ್ಯಪೂರ್ಣವಾಗಿರಬೇಕೆಂದು ಗಾಂಧಿಯವರ ಅಭಿಮತ. ಹಾಗಾಗಿ ಸತ್ಯಾಗ್ರಹದ ಮಾರ್ಗ ಕೇವಲ ಯಾಂತ್ರಿಕ ವಿಧಾನ ಅಥವಾ ತಾತ್ಕಾಲಿಕ ತಂತ್ರವಲ್ಲ ಅಥವಾ ಕೇವಲ ಸದ್ಗುಣ, ನೀತಿ ಇತ್ಯಾದಿಯಲ್ಲ. ಮಾರ್ಗಗಳು ಆಚರಿಸುವವನ ಉದ್ದೇಶವನ್ನೂ ಒಳಗೊಂಡಿರುತ್ತವೆ. ಯಾವುದೇ ದುರುದ್ದೇಶದ ಕ್ರಮದಿಂದ ಒಳಿತನ್ನು ನಿರೀಕ್ಷಿಸಲಾಗದು. ಆದುದರಿಂದ ಒಂದು ದಮನಕಾರಿ ಮತ್ತು ಅನ್ಯಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಸತ್ಯಾಗ್ರಹವು ಒಬ್ಬ ನಿಜವಾದ ವ್ಯಕ್ತಿಯ ಬದುಕಿನ ಮಾರ್ಗ : ಅಂಥ ಸಮಾಜದ ಅತ್ಯಂತ ಗೌರವಾನ್ವಿತ ಚಟುವಟಿಕೆ. ಗಾಂಧಿಯವರ ಒಟ್ಟು ಬದುಕೇ ಒಂದು ದೀರ್ಘ ಸತ್ಯಾಗ್ರಹ. ಆದುದರಿಂದ ಅಹಿಂಸೆ ಎಂಥ ಸಮರ್ಥಶಕ್ತಿ ಎಂಬುದನ್ನು ಸತ್ಯಾಗ್ರಹ ತೋರಿಸುತ್ತದೆ.

**ಸ್ವದೇಶಿ**

ಸ್ವದೇಶಿಯು ಅಹಿಂಸೆಯನ್ನು ಅನುಸರಿಸಿ ಪ್ರಕಟಗೊಳ್ಳುವ ದೈನಂದಿನ ಬದುಕಿನ ಸಾಮಾನ್ಯ ತತ್ತ್ವ. ನಮ್ಮ ಸುತ್ತಮುತ್ತಲಿನ ಸಂಪನ್ಮೂಲಗಳು ಅಂದರೆ ನಮ್ಮ ಕೈಯಳತೆಗೆ ದಕ್ಕುವ, ನಮಗೇ ಸೇರಿದ್ದೆನ್ನಬಹುದಾದ ವಸ್ತುಗಳನ್ನು ಅಳವಡಿಸಿಕೊಂಡು ಬದುಕನ್ನು ರೂಪಿಸುವ ವಿಧಾನ. ಇದೇ ಸಾಮಾನ್ಯವಾಗಿ ಅನಾದಿ ಕಾಲದಿಂದಲೂ ಮಾನವನ ಬದುಕನ್ನು ಸಂಘಟಿಸಿರುವ ಮೂಲತತ್ತ್ವ. ಯಾವಾಗ ಜಗತ್ತಿನಾದ್ಯಂತ ಇರುವ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆದು ಜಗತ್ತಿನ, ಮೂಲೆ ಮೂಲೆಯಲ್ಲಿರುವ ಜನರ ಮೇಲೆ ದಬ್ಬಾಳಿಕೆ ನಡೆಸಿ, ಅವರನ್ನು ದಾಸ್ಯಕ್ಕೀಡುಮಾಡುವ ತತ್ತ್ವದ ಮೇಲೆ ನಿಂತಿರುವ ಸಾಮ್ರಾಜ್ಯಶಾಹೀ ವಿದ್ಯಮಾನ ಆರಂಭವಾಯಿತೋ ಆ ಸಂದರ್ಭದಲ್ಲಿ ಸ್ವದೇಶಿ ತತ್ತ್ವವನ್ನು ಪುನಃ ಸ್ಥಾಪಿಸುವ ಅವಶ್ಯಕತೆ ಬಂತು. ಬಹುದೂರದಲ್ಲಿ ತಯಾರಾದ ಸರಕುಗಳ ಬಳಕೆ ಮತ್ತು ಅಂಥ ಸರಕುಗಳ ಬಳಕೆಗೆ ಅಗತ್ಯವಾದ ಪರಾವಲಂಬೀ ತತ್ತ್ವ ನಿಜಕ್ಕೂ ಪರಾಧೀನತೆಗೆ ಎಡೆಮಾಡಿಕೊಡುತ್ತದೆ. ಇದರಿಂದಾಗಿ ಪರಾಧೀನತೆಯು ನಮ್ಮ ಮತ್ತು ನೆರೆಹೊರೆಯವರ ನಡುವೆ ಮತ್ತು ನಮ್ಮ ಹತ್ತಿರವಿರುವ ಸಂಗತಿಗಳ ಜೊತೆ ಸಾಮರಸ್ಯವು ಸಂಪೂರ್ಣ ಕುಸಿದು ಕೃತಕ ಬದುಕನ್ನು ಸೃಷ್ಟಿಸುತ್ತದೆ. ಇದು ದೈನಂದಿನ ಸ್ವಾಭಾವಿಕ ಬದುಕಿನ ಉಲ್ಲಂಘನೆ ಮತ್ತು ಮಾನವ ಕ್ರಿಯೆಯ ನಿರಾಕರಣೆ, ಸ್ವದೇಶಿಯು ಮಾನವ ಕ್ರಿಯೆಯನ್ನು ಅದರ ಸಾಮರ್ಥ್ಯಕ್ಕೆ ಹೆಚ್ಚಿಸುವ ಕ್ರಮ. ಪರಾಧೀನತೆಯು

ಮಾನವನಿಗೆ ತನ್ನ ಮೂಲಭೂತ ಸಾರವನ್ನೇ ನಿರಾಕರಿಸುತ್ತದೆ. ತಾನು ಏನಾಗಿದ್ದೇನೆಯೋ ಆ ಸ್ಥಿತಿಯನ್ನು ಸಂಪೂರ್ಣ ನಾಶಮಾಡಿ ಆತನನ್ನು ಅಲೆದಾಡುವ ಪ್ರೇತಾತ್ಮದ ಸ್ಥಿತಿಗೆ ತರುತ್ತದೆ. ಮನುಷ್ಯನ ತನ್ನತನವನ್ನು ಸ್ವದೇಶಿಯು ಆತನಿಗೆ ಮತ್ತೆ ಮರಳಿಸುತ್ತದೆ, ಉಳಿಸಿಕೊಡುತ್ತದೆ; ಮತ್ತು ಸಹಜವಾಗಿಯೇ ಸತ್ಯದ ದಾರಿಯಲ್ಲಿ ಆತ್ಮೋತ್ಸರ್ಗದೆಡೆ ಸ್ವಾಭಾವಿಕವಾಗಿ ಸಾಗುವಂತೆ ವ್ಯಕ್ತಿಯ ಸುತ್ತಲಿನ ಸಂಬಂಧಗಳ ಜಾಲವನ್ನು ಮತ್ತೆ ಹೆಣೆಯುತ್ತದೆ. ಆದುದರಿಂದ ಸ್ವದೇಶಿ ತತ್ತ್ವವು ಅಹಿಂಸೆಯ ಸ್ಪಷ್ಟ ಅಭಿವ್ಯಕ್ತಿ ಹಾಗೂ ಅದರ ಅವಿಭಾಜ್ಯ ಘಟಕ.

## ಸ್ವರಾಜ್ಯ

ಸ್ವರಾಜ್ಯ ಅಹಿಂಸಾ ತತ್ತ್ವವನ್ನಾಧರಿಸಿದ ಆಡಳಿತದ ಮಾದರಿ. ಅದು ರಾಜಕಾರಣಕ್ಕೆ ಸದೃಶವಾದ ತತ್ತ್ವವಾದರೂ ರಾಜಕಾರಣದಲ್ಲಿ ಸ್ವರಾಜ್ಯಕ್ಕೆ ಸ್ಥಾನವಿಲ್ಲ. ಅಹಿಂಸಾ ತತ್ತ್ವವನ್ನು ನಿರಾಕರಿಸುವ ಹಾಗೂ ಮಾನವ ಕ್ರಿಯೆಯ ಆಸುರಿ ಸ್ವರೂಪಗಳ ವಿಷಮಾವಸ್ಥೆಯ ಕಾರ್ಯಾಚರಣೆಯನ್ನು ಆಧರಿಸಿದ ಆಧುನಿಕ ಸಮಾಜಗಳ ಆಡಳಿತ ವಿಧಾನವೇ ರಾಜಕಾರಣ. ಆಸುರಿ ಕ್ರಿಯೆಯನ್ನು ರಾಜಕಾರಣ ಮೂರ್ತೀಕರಿಸುತ್ತದೆ; ಮತ್ತು ಗುರಿ ಮತ್ತು ಅದನ್ನು ಸಾಧಿಸುವ ಮಾರ್ಗಗಳನ್ನು ಪ್ರತ್ಯೇಕಿಸುವುದಕ್ಕೆ ಹಾಗೂ ಹಿಂಸೆ ಮತ್ತು ಆಕ್ರಮಣಶೀಲ ಪ್ರವೃತ್ತಿಗೆ ಸಾಮಾಜಿಕ ಮಂಜೂರಾತಿ ದೊರಕಿಸಿಕೊಡುತ್ತದೆ. ಇಂಥ ರಾಜಕಾರಣವನ್ನೇ ಗಾಂಧೀಜಿ ಸ್ವರಾಜ್ಯದ ನೆಲೆಯಲ್ಲಿ ಪ್ರತಿಭಟಿಸಿದ್ದು. ಆದುದರಿಂದ ಸ್ವರಾಜ್ಯವು ಕೇವಲ ವಿದೇಶಿ ಆಳ್ವಿಕೆಯನ್ನು ವಿರೋಧಿಸುವ ತತ್ತ್ವವಲ್ಲ. ಅದು ಪರಾಧೀನತೆಯನ್ನು ಮತ್ತು ಆಸುರಿ ರೂಪದ ಚಟುವಟಿಕೆಯನ್ನು ಪ್ರೋತ್ಸಾಹಿಸುವ ವಿದೇಶೀ ಆಳ್ವಿಕೆಯನ್ನು ಸಂಪೂರ್ಣ ವಿರೋಧಿಸುವ ತತ್ತ್ವ. ಸ್ವರಾಜ್ಯವು ಅಹಿಂಸೆಯ ನಿಯಂತ್ರಣಕ್ಕೊಳಪಟ್ಟ ಮಾನವ ಕ್ರಿಯೆಯನ್ನು ಪ್ರೋತ್ಸಾಹಿಸುವ ಆಡಳಿತ ವ್ಯವಸ್ಥೆ.

## ಅವಲೋಕನ

ಇಲ್ಲಿ ಮಾಡಿರುವ ಚರ್ಚೆಯು ಪರಿಕಲ್ಪನಾ ಸಾಧನ (conceptual apparatus) ಗಳನ್ನು ಸೃಷ್ಟಿಸುವ ಪ್ರಯತ್ನವಲ್ಲ. 'ಅಪ್ಪಟ ಮಾನವ ಕ್ರಿಯೆ'ಯು ತತ್ತ್ವ ಸಿದ್ಧಾಂತಗಳನ್ನು ರೂಪಿಸಿದ ತಕ್ಷಣವೇ ಅವುಗಳ ಚೌಕಟ್ಟನ್ನು ಮೀರಲೂ ಒತ್ತಾಯಿಸುತ್ತದೆ. ಆದುದರಿಂದ ಈ ಅಧ್ಯಾಯದ ಪರಿಕಲ್ಪನೆಗಳನ್ನು ಕೃತಿಯ ಮುಂದಿನ ಭಾಗದಲ್ಲಿ ಬಳಸಲು ಅನುವಾಗುವಂತೆ ರೂಪಿಸಿಲ್ಲ. ಯಾವುದೇ ತಾತ್ಕಾಲಿಕ ಸಾಧನಗಳ ಅಥವಾ ಸಿದ್ಧಾಂತಗಳ ನೆರವಿಲ್ಲದೆಯೇ ಗಾಂಧಿಯವರು ವಾಸ್ತವವನ್ನು ನೇರವಾಗಿ ಎದುರಿಸಿದ ಮಾದರಿಯಲ್ಲೇ ನಾವೂ ವಾಸ್ತವವನ್ನು ಮುಖಾಮುಖಿಯಾಗುವ ಬಗೆಯನ್ನು ಕಲಿಯಬೇಕು.

ಸತ್ಯದಂತೆಯೇ ಪರಿಶುದ್ಧ ತತ್ತ್ವಜ್ಞಾನವು ತಾರ್ಕಿಕ ಚಿಂತನೆಗೆ ತನ್ನನ್ನು ಒಡ್ಡಿಕೊಳ್ಳುವುದಿಲ್ಲ. ಹಾಗಾಗಿ ಈ ಹಿಂದಿನ ಪುಟಗಳ ಚರ್ಚೆಯು 'ವಿಜ್ಞಾನ ಪ್ರಶ್ನೆ'ಯನ್ನು ಎದುರಿಸಲು ನಮ್ಮ ಸಿದ್ಧತೆಗಳಿಗೆ ನೆರವಾಗುವ ಮುನ್ನುಡಿ ಮಾತ್ರ.

●

# ಅಧ್ಯಾಯ ನಾಲ್ಕು

# ನೀತಿತತ್ತ್ವ

((Morality)

ವಿಜ್ಞಾನ ಮತ್ತು ಅದರ ಪ್ರಭಾವ ಮತ್ತು ಪರಿಣಾಮಗಳ ನಡುವಿನ ಸಂಬಂಧಗಳ ಬಗ್ಗೆ ಜಗತ್ತಿನ ವಿದ್ಯಾವಂತ ಜನರಲ್ಲಿ ವಿರೋಧಾಭಾಸದ ಭಾವನೆಯೊಂದು ಘನೀಕೃತಗೊಂಡು ಜನಪ್ರಿಯವಾಗಿದೆ. ಇದು ಒಂದೆಡೆ ವಿಜ್ಞಾನವನ್ನು ಮನಕುಲಕ್ಕೆ ಒದಗಿಬಂದ ಒಂದು ಶ್ರೇಷ್ಠ, ಅಭೂತಪೂರ್ವ ವಿಶಿಷ್ಟ ವರ ಎಂದು ಪರಿಭಾವಿಸುತ್ತದೆ. ಅದು ಸೃಷ್ಟಿಸಿರುವ ವಿಪುಲ ಸಂಪತ್ತು ಮತ್ತು ಅಪಾರ ಜ್ಞಾನವನ್ನು ನೋಡಿದಾಗ ಈ ಅಭಿಪ್ರಾಯ ನಿಜವೆನಿಸುತ್ತದೆ. ವ್ಯೋಮಯಾತ್ರೆ, ಸಂವಹನ ಕ್ರಾಂತಿ ಮತ್ತು ಕಂಪ್ಯೂಟರ್‌ಗಳು ಹಾಗೂ ಜೀವರಕ್ಷಕ ಔಷಧಿಗಳ ತಯಾರಿಕೆ ಈ ಅಭಿಪ್ರಾಯವನ್ನು ಮತ್ತಷ್ಟು ಬಲಪಡಿಸುತ್ತವೆ.

ಆದರೆ ಜೀವಪರಿಸರದ ವಿನಾಶ, ಅಣುಬಾಂಬುಗಳು, ರಾಸಾಯನಿಕ ಅಸ್ತ್ರಗಳು, ಸಂಪನ್ಮೂಲಗಳನ್ನು ಶೋಧಿಸುವ, ಅಣುವಿದ್ಯುತ್ ಸ್ಥಾವರವೇ ಮುಂತಾದ ಬೃಹತ್ ಕೈಗಾರಿಕೆಗಳ ಸ್ಥಾಪನೆ, ಬೃಹತ್ ಆಣೆಕಟ್ಟು ನಿರ್ಮಾಣ ಮುಂತಾದ ಅಸಂಖ್ಯಾತ ಪ್ರಗತಿ ಪ್ರೇರಿತ ಕಾರ್ಯಕ್ರಮಗಳ ಭರದಲ್ಲಿ ಸಮುದಾಯಗಳನ್ನೇ ಬುಡಮೇಲು ಮಾಡುತ್ತಿರುವ ಚಟುವಟಿಕೆಗಳನ್ನು ವಿಜ್ಞಾನದ ಕರಾಳರೂಪ ಎಂದು ಪರಿಗಣಿಸುವುದಿಲ್ಲ. ಹೀಗಿದ್ದರೂ ವಿಜ್ಞಾನ–ಹಲವೊಮ್ಮೆ ತಂತ್ರಜ್ಞಾನವೂ ಕೂಡಿ–ಇಂಥ ಅನರ್ಥ ಮತ್ತು ಮಾನವ ವಿರೋಧಿ ಪರಿಣಾಮಗಳ ಆಪಾದನೆಗಳಿಂದ ಮುಕ್ತಗೊಂಡು ಕಳಂಕರಹಿತ ಪಟ್ಟಹೊತ್ತು ನಿಲ್ಲುತ್ತದೆ. ವಿಜ್ಞಾನದ ಈ ಪರಿಣಾಮಗಳನ್ನು ವಿಜ್ಞಾನ ಮತ್ತು ತಂತ್ರಜ್ಞಾನದ 'ದುರ್ಬಳಕೆ'ಯ ಫಲ ಎನ್ನುತ್ತಾ ಅದರ ಸಂಪೂರ್ಣ ದೋಷವನ್ನು ಬಳಕೆದಾರರು, ಯೋಜಕರು ಮತ್ತು ರಾಜಕೀಯ ವ್ಯಕ್ತಿಗಳ ಮೇಲೆ ಹೊರಿಸಲಾಗುತ್ತದೆ. ಹೀಗೆ ವಿಜ್ಞಾನದ ಆಯ–ವ್ಯಯ ತಃಖ್ತೆ (Balance Sheet) ಯ ಒಂದು ಭಾಗ ಸಂಪೂರ್ಣ ಖಾಲಿಯಾಗಿರುವುದು ಅಸಂಗತವಾಗಿ ಕಾಣುವುದಿಲ್ಲವೆ? ಸತ್ಪರಿಣಾಮಗಳಿಗಾಗಿ ವಿಜ್ಞಾನಕ್ಕೆ ಮಾನ್ಯತೆ, ಗೌರವ ನೀಡಬಹುದಾದರೆ ಅದರ ದುಷ್ಪರಿಣಾಮಗಳಿಗೂ ದೂರಬೇಕಲ್ಲವೇ? ಇಂಥ ಸಂದರ್ಭದಲ್ಲಿ ನೀತಿ ತತ್ತ್ವ ಮತ್ತು ವಿಜ್ಞಾನಗಳ ಸಂಬಂಧದ ಪ್ರಶ್ನೆ ಉದ್ಭವಿಸುತ್ತದೆ.

ಇದೇನೂ ಹೊಸದಾಗಿ ಎತ್ತಿರುವ ಪ್ರಶ್ನೆಯಲ್ಲ. ಯೂರೋಪ್‌ನಲ್ಲಿ ಈ ಬಗ್ಗೆ ದೀರ್ಘಕಾಲದ ಚರ್ಚೆಯಾಗಿದೆ. ಕಾಲಾನಂತರದಲ್ಲಿ ಈ ಚರ್ಚೆಯು ಅಂತಿಮವಾಗಿ ಮೇಲೆ ಹೇಳಿದಂಥ ವಿರೋಧಾಭಾಸದ ಪರವಾದ ನಿಲುವಿನಲ್ಲಿ ಕೊನೆಗೊಂಡಿತು.

ಆದರೆ ಯುರೋಪ್ ಮಾತ್ರವೇ ಸಂಪೂರ್ಣ ಜಗತ್ತಲ್ಲ. ಈ ಪ್ರಶ್ನೆಯು ಯುರೋಪ್‌ನಿಂದ ಹೊರಗೆ, ಜಗತ್ತಿನ ಬೇರೆ ಭಾಗದಲ್ಲಿ ಹೊಸ ಆಯಾಮ ಪಡೆದುಕೊಂಡು ಮತ್ತೆ ಮತ್ತೆ ತಲೆಯೆತ್ತಿದೆ. ಈ ಪರಿಚ್ಛೇದದಲ್ಲಿ ಗಾಂಧಿಯ ತತ್ತ್ವಜ್ಞಾನದ ಹಿನ್ನೆಲೆಯಲ್ಲಿ ಈ ಸಮಗ್ರ ಚರ್ಚೆಯನ್ನು ಮಾಡಲು ಪ್ರಯತ್ನಿಸಲಾಗಿದೆ. ಆದರೆ ಈ ಚರ್ಚೆಯನ್ನು ಪ್ರಾರಂಭಿಸುವ ಮುನ್ನ ಈ ಪ್ರಶ್ನೆಯನ್ನು ಇನ್ನಷ್ಟು ಸೂಕ್ಷ್ಮವಾಗಿ ತಿಳಿದುಕೊಳ್ಳಲು ಯತ್ನಿಸೋಣ.

### ಪ್ರಬಲವಾದ ಪಾಶ್ಚಾತ್ಯ ದೃಷ್ಟಿಕೋನ

ವಿಜ್ಞಾನಕ್ಕೂ ನೀತಿಗೂ ಯಾವುದೇ ಸಂಬಂಧವಿಲ್ಲ ಎಂಬುದು ಇಂದು ಜಗತ್ತಿನಲ್ಲಿ ಪ್ರಬಲವಾಗಿ ಚಾಲ್ತಿಯಲ್ಲಿರುವ ಅಭಿಪ್ರಾಯ. ಜ್ಞಾನದ ಭಂಡಾರವಾಗಿ ಅದು ಮೌಲ್ಯ ವಿಮುಕ್ತವಾದದು ಮತ್ತು ಕಾರ್ಯಕ್ರಮದಲ್ಲಿ ಅದು ನೀತಿಗೆ ಮೀರಿದ್ದು. ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುವ ರೀತಿಯಲ್ಲೇ ನೀತಿಯ ಹಂಗಿಲ್ಲದೇ ವಿಜ್ಞಾನದ ಚರಿತ್ರೆ ರಚನೆಗೊಂಡಿದೆ. ವಿಜ್ಞಾನದ ಮುನ್ನಡೆ ಮೌಲ್ಯಮುಕ್ತಿ ಪ್ರಕ್ರಿಯೆಯೆಂದು ಪರಿಗಣಿಸಲಾಗಿದೆ.

ವಿಜ್ಞಾನವು ಮೌಲ್ಯಮುಕ್ತವಾದುದು ಎಂದಾಕ್ಷಣ ಅದು ಸಾಮಾಜಿಕ ಮೌಲ್ಯ ಮತ್ತು ಸಮಾಜದ ರೀತಿ ರಿವಾಜುಗಳು, ಆಚರಣೆಗಳು ಅದರ ಮೇಲೆ ಯಾವುದೇ ಪರಿಣಾಮ ಮತ್ತು ಪ್ರಭಾವವನ್ನು ಬೀರುವುದಿಲ್ಲ ಎಂದರ್ಥವಲ್ಲ. ವಿಜ್ಞಾನ ಅಂತಿಮವಾಗಿ ಅಂಥ ಪರಿಣಾಮ ಮತ್ತು ಪ್ರಭಾವಗಳನ್ನು ತೊಡೆದುಹಾಕುವುದರಿಂದ ಅದು ಮೌಲ್ಯಮುಕ್ತವಾದಂತೆ ಕಾಣುತ್ತದೆ. ವಿಜ್ಞಾನವು ನೀತಿ ತತ್ತ್ವದೊಡನೆ ಯಾವುದೇ ಅಂತರ್ಗತ ಸಂಬಂಧ ಹೊಂದಿಲ್ಲವೆಂದರೂ ಇದೇ ಅರ್ಥ. ಸಸ್ಯಗಳ ಬೆಳವಣಿಗೆ ಮತ್ತು ರಾಸಾಯನಿಕ ಪ್ರಕ್ರಿಯೆಗಳನ್ನು ನಿಯಂತ್ರಿಸುವ ನಿಯಮಗಳಿಗೂ ಮಾನವೀಯ ಮೌಲ್ಯಗಳಿಗೂ ಯಾವುದೇ ಸಂಬಂಧವಿಲ್ಲ. ಹಾಗೆಯೇ ಸಾಮಾಜಿಕ ಮೌಲ್ಯಗಳಿಗೂ, ಮೆಕ್ಯಾನಿಕ್ಸ್ ಎಲೆಕ್ಟ್ರೋ ಡೈನಾಮಿಕ್ಸ್ ಮತ್ತು ಥರ್ಮೊಡೈನಾಮಿಕ್ಸ್ ನಿಯಮಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ನದಿಯ ಚಲನೆ, ಸಾಗರದ ವರ್ತನೆ, ಅರಣ್ಯಗಳ ಬೆಳವಣಿಗೆ ಮತ್ತು ನಿರ್ವಹಣೆಗೆ ಸಂಬಂಧಿಸಿದ ನಿಯಮಗಳಿಗೂ ಮತ್ತು ಇದು ಒಳ್ಳೆಯದು, ಇದು ಕೆಟ್ಟದು ಅಥವಾ ಇದು ಸೂಕ್ತ, ಇದು ಸೂಕ್ತವಲ್ಲ ಮುಂತಾಗಿ ವಿವೇಚಿಸುವ ಮಾನವನ ಬುದ್ಧಿಗೂ ಯಾವುದೇ ಸಂಬಂಧವಿರುವುದಿಲ್ಲ. ಇದೊಂದು ಮೇಲ್ನೋಟಕ್ಕೆ ಸತ್ಯವೆಂದು ತೋರುವ ಸರಳ ವ್ಯಾಖ್ಯೆ. ಮಾನವನ ಮತ್ತು ಸಾಮಾಜಿಕ ಮೌಲ್ಯಗಳ ವಿವರಣೆ ಮತ್ತು ವಿಜ್ಞಾನದ ನಿಯಮಗಳ ನಡುವೆ ವಿವರಣೆಯ ಮಟ್ಟದಲ್ಲಿ ಯಾವುದೇ ಸಂಬಂಧ ಕಂಡುಬಾರದಿರುವುದು ನಿಜ. ಹಾಗಾಗಿ ವಿಜ್ಞಾನ ಮೌಲ್ಯಮುಕ್ತವಾದುದು ಎಂದು ಮೊದಲೇ ನಿರ್ಣಯಿಸಿರುವವರಿಗೆ ಈ ವಾದವು ಸಮರ್ಪಜಸವಾಗಿಯೇ ಕಾಣುತ್ತದೆ. ವಿಜ್ಞಾನದಿಂದ ಮೌಲ್ಯವನ್ನು ಬೇರ್ಪಡಿಸುವ ಪ್ರಯತ್ನ ಹೇಳಿದ್ದನ್ನೇ ಹೇಳಿ ನಂಬಿಸುವ ಪ್ರಯತ್ನವೆಂಬುದು ಮುಂದೆ ತಿಳಿಯುತ್ತದೆ.

ವಿಜ್ಞಾನ ನೀತಿಮುಕ್ತವಾಗಿ ಕಾಣುವುದಕ್ಕೆ ಕಾರಣ ಪರಸ್ಪರ ಸಂಬಂಧಿಸಿದ ಎರಡು ಪ್ರಮುಖ ಸಂಗತಿಗಳು. ಕಳೆದು ಐದು ಶತಮಾನಗಳಿಂದ ಯೂರೂಪ್‌ನಲ್ಲಿ ವಿಜ್ಞಾನದ

ಭಂಡಾರವು ನಿಧಾನವಾಗಿ, ಏಕಪ್ರಕಾರವಾಗಿ ಬೆಳೆಯುತ್ತ ಬಂದಂತೆ ಅದರಲ್ಲಿ ಅಂತರ್ಗತವಾಗಿರುವ ನೈತಿಕ ಮತ್ತು ಧಾರ್ಮಿಕ ಸ್ವರಗಳನ್ನು ನಿಧಾನವಾಗಿ ಕತ್ತರಿಸಿ ಹಾಕುತ್ತಾ ಬರಲಾಯಿತು. ವಿಜ್ಞಾನವನ್ನು ಈಗ ಕೇವಲ ವಿಶ್ಲೇಷಣಾತ್ಮಕ ನಿಯಮಗಳಿಂದ ಮಾತ್ರ ಗ್ರಹಿಸಬಲ್ಲ ನಿರ್ಜೀವ ವಸ್ತುವಿನಂತೆ ಮಂಡಿಸಲಾಗುತ್ತಿದೆ. ಇದೇ ಅವಧಿಯಲ್ಲಿ ಪರಿಶುದ್ಧ ವಿಶ್ಲೇಷಣಾತ್ಮಕ ತರ್ಕಗಳು ಪ್ರಾಬಲ್ಯ ಗಳಿಸಿಕೊಂಡವು. ಈ ರೀತಿಯ ನೈತಿಕತೆಯ ವಿಮೋಚನೆ ಮತ್ತು ಕೇವಲ ವಿಶ್ಲೇಷಣಾತ್ಮಕ ತರ್ಕದ ಪ್ರಾಬಲ್ಯ, ಈ ಎರಡೂ ಪ್ರಕ್ರಿಯೆಗಳು ವಾಸ್ತವ ಮತ್ತು ಪರಿಕಲ್ಪನೆಯಲ್ಲಿ ಪರಸ್ಪರ ನಿಕಟ ಸಂಬಂಧ ಹೊಂದಿರುವುದರಿಂದ ವಿಜ್ಞಾನವು ಮಾನವನ ಮೌಲ್ಯಯುಕ್ತ ಸಾಹಸಶೀಲತೆಯಿಂದ ಸಂಪೂರ್ಣ ಸ್ವತಂತ್ರವಾಗಿದೆಯೆಂಬ ಭಾವನೆಯನ್ನು ಇವು ಸೃಷ್ಟಿಸಿದವು. ದೇವರ ಉಲ್ಲೇಖವಿಲ್ಲದೇ ತನ್ನ ಚಲನೆಯ ನಿಯಮ (Laws of Mechanics) ಗಳನ್ನು ಸೂತ್ರೀಕರಿಸಲು ನ್ಯೂಟನ್‌ಗೆ ಸಾಧ್ಯವಾಗಲಿಲ್ಲ; ಕ್ರಿಶ್ಚಿಯನ್ ವಿಶ್ವಶಾಸ್ತ್ರ (Cosmology)ದ ನೆರವಿಲ್ಲದೆ ಥರ್ಮೋಡೈನಾಮಿಕ್ಸ್ ನಿಯಮಗಳನ್ನು ನಿರೂಪಿಸಲು ಥಾಮ್‌ಸನ್‌ಗೆ ಸಾಧ್ಯವಾಗಲಿಲ್ಲ ಎಂಬ ಅಂಶಗಳನ್ನು ನಾವಿಲ್ಲಿ ನೆನಪಿನಲ್ಲಿಟ್ಟುಕೊಳ್ಳಬೇಕು. ಆದರೆ ಅದೇ ಅವಧಿಯಲ್ಲಿ ಅದಕ್ಕೆ ಸಮಾನಾಂತರವಾಗಿ ಧರ್ಮ, ದೇವರ ಹಂಗಿಲ್ಲದೆಯೇ ವಿಜ್ಞಾನದ ನಿಯಮಗಳನ್ನು ಯಾಂತ್ರಿಕವಾಗಿ ವಿವರಿಸುವ ಹೆಲ್ಮೋಲ್ಟ್ಸ್‌ನಂಥ ವಿಜ್ಞಾನಿಗಳ ಪ್ರಯತ್ನವೂ ನಡೆಯುತ್ತಿದ್ದವು. ಮೊದಲಿನ ಇಬ್ಬರು ವಿಜ್ಞಾನಿಗಳು ಆಧುನಿಕ ಯುರೋಪ್‌ನ ಒತ್ತಡಗಳಿಗೆ ಮಣಿದು ಧರ್ಮ, ದೇವರ ಪ್ರಸ್ತಾಪವನ್ನು ವಿಜ್ಞಾನದಿಂದ ಕೈಬಿಡಬೇಕಾಯಿತು. ಹೆಲ್ಮೋಲ್ಟ್ಸ್ ಸಮಾಜದಲ್ಲಿ ಯಶಸ್ಸನ್ನು ನೇರವಾಗಿಯೇ ಕಂಡ. ಈ ಬಗ್ಗೆ ಚರ್ಚೆಗೆ ಮುಂದೆ ಬರೋಣ.

ವಿಜ್ಞಾನದಿಂದ ಮೌಲ್ಯದ ಅಂಶವನ್ನು ಸಂಪೂರ್ಣವಾಗಿ ಬೇರ್ಪಡಿಸಿದ ಸಂಗತಿಯು ಒಂದು ನಿರ್ದಿಷ್ಟ ವಾದಕ್ಕೆ ಸಂಬಂಧಿಸಿದೆ ಮತ್ತು ಆ ವಾದವನ್ನು ಆಧರಿಸಿ ನಿಂತಿದೆ. ಇದೇ ಪಾಶ್ಚಾತ್ಯ ತತ್ತ್ವಶಾಸ್ತ್ರ, ಮತ್ತೊಂದು ಇಂದು ಕೊಚ್ಚಿಕೊಳ್ಳುವ 'ಶುದ್ಧ ವೈಚಾರಿಕತೆಯ ಮೇಲೆ ನಿಂತ 'ತಾರ್ಕಿಕ ಅನುಮಾನ ಅಥವಾ ನಿಗಮನ ವಿಧಾನ (Deduction). ವಿಷಯದ ಮಾಹಿತಿಯ ಅಂಶಗಳನ್ನು ತೂರಿ ಸತ್ಯದ ರಾಶಿಯನ್ನು ಒಟ್ಟು ಮಾಡುವ ಈ ನಿಗಮನ ವಿಧಾನವು ಪಾಶ್ಚಾತ್ಯ ತತ್ತ್ವಜ್ಞಾನವನ್ನು ಆಧರಿಸಿದೆ. 'ತಾರ್ಕಿಕ ಅನುಮಾನ'ವು ಡಿಡೆರೋ (Diderot) ತನ್ನ ಪುಸ್ತಕದಲ್ಲಿ ಉಲ್ಲೇಖಿಸಿದ ಡೆ ಆಲಮ್ಬರ್ಟ್ಸ್ ಡ್ರೀಮ್' (d' Alumberts Dream) ಭೌತಿಕ ವಾದಕ್ಕೆ ಹೋಲುವುದಲ್ಲವಾದರೂ, ಒಂದು ವಾದವಾಗಿ ನಿಗಮನ ವಿಧಾನವು ಬಹು ಪ್ರಾಚೀನವಾದುದು. ಆದರೆ ತತ್ತ್ವಜ್ಞಾನಿ ಡೆಕಾರ್ಟೆಯ ನಂತರ ಇದು ತತ್ತ್ವಜಿಜ್ಞಾಸೆಯಲ್ಲಿ ಕೇಂದ್ರಸ್ಥಾನ ಪಡೆಯಲು ಆರಂಭಿಸಿತು.

ಶುದ್ಧ ವೈಚಾರಿಕತೆ ಅಥವಾ ಶುದ್ಧ ತರ್ಕವು ಮೌಲ್ಯ ಭರಿತವೂ ಅಲ್ಲ; ಜಗತ್ತಿಗೆ ಸಂಬಂಧಿಸಿದ ವಾಸ್ತವ ಸಂಗತಿಗಳಿಂದ ತುಂಬಿರುವುದೂ ಅಲ್ಲ. ಶುದ್ಧ ತರ್ಕದ ಬೆಳವಣಿಗೆಗೆ ಮೌಲ್ಯದಿಂದ ವಸ್ತುಸ್ಥಿತಿಯನ್ನು ಪ್ರತ್ಯೇಕಿಸುವುದು ಪೂರ್ವಭಾವಿಯಾಗಿ ಅಗತ್ಯ. ವಾಸ್ತವತೆ ಮತ್ತು ಮೌಲ್ಯಗಳ ಬೇರ್ಪಡಿಸುವಿಕೆಯು ಸೃಷ್ಟಿಸುವ ಬಿರುಕು ಅಥವಾ ಕಂದಕಕ್ಕೆ ವಿಶಿಷ್ಟವಾದ ಕಾರ್ಯಾಚರಣೆಯಿದೆ. ಜನಪ್ರಿಯ ಭಾಷೆಯಲ್ಲಿ ವೈಚಾರಿಕತೆಯೆಂದು

ಕರೆಯುವ ಸಂಗತಿ ಮಾನವ ಸಂತತಿಯಲ್ಲಿ ಡೆಕಾರ್ಟೆಯ ಪ್ರಕಾರ ಸಾರ್ವತ್ರಿಕವಾಗಿ ಕಾಣುವ ವಿಶಿಷ್ಟತೆಯಾಗಿದೆ. ಮಾನವರಲ್ಲಿ ವೈಚಾರಿಕತೆಯನ್ನು ಈ ರೀತಿ ವಿಜೃಂಭಿತವಾಗಿ ಹೇಳಿದ್ದಕ್ಕಾಗಿಯೇ ಡೆಕಾರ್ಟೆ ಆಧುನಿಕ ತತ್ತ್ವಜ್ಞಾನದ ಪಿತಾಮಹ ಎಂದು ಪ್ರಶಂಸೆಗೆ ಪಾತ್ರನಾಗಿದ್ದಾನೆ. ಆದರೆ ಡೆಕಾರ್ಟೆ ತನ್ನ ತತ್ತ್ವಕ್ಕೆ ಆಧಾರವಾಗಿ ದೇವರ ಪರಿಕಲ್ಪನೆಯ ನೆರವಿಲ್ಲದೆ ಸುಸಂಬದ್ಧವಾಗಿ, ಸಮಗ್ರವಾಗಿ ವಾದವನ್ನು ಮಂಡಿಸಲಾಗಲಿಲ್ಲ. ಹಾಗಾಗಿ ಮೌಲ್ಯಗಳನ್ನು ಸಂಪೂರ್ಣ ತೆಗೆದುಹಾಕಿದ ತರ್ಕದ ಮಂಡನೆ ಅವನಿಂದ ದೂರವೇ ಉಳಿಯಿತು. ಆದರೂ ಈ ರೀತಿಯ ಚಿಂತನಧಾರೆಯು ಯೂರೋಪಿನ ಸಮಾಜದಲ್ಲಿ ಇತರೆಲ್ಲ ಬೆಳವಣಿಗೆಗಳಿಗೆ ಮೇಳೈಸಿಕೊಂಡು ಮತ್ತಷ್ಟು ಬೆಳೆಯಲು ಅನುವಾಯಿತು. ಉದಾಹರಣೆಗೆ ವಿಜ್ಞಾನ ಮತ್ತು ವಾಣಿಜ್ಯ ಚಟುವಟಿಕೆಯ ಬೆಳವಣಿಗೆಯು ಮೌಲ್ಯವಿಮುಕ್ತ ತರ್ಕದ ಬೆಳವಣಿಗೆಗೆ ಸಹಾಯ ಮಾಡಿತು. ಇದು ಡೇವಿಡ್ ಹ್ಯೂಮ್‌ನ ತತ್ತ್ವಜ್ಞಾನದಲ್ಲಿ ಇನ್ನೂ ನಿಖರ ಹಾಗೂ ಸಂಸ್ಕಾರಗೊಂಡು ಅಭಿವ್ಯಕ್ತಿ ಕಂಡುಕೊಂಡಿತು.

'ವಸ್ತು ವಿಷಯಗಳು' (Matter facts) ಮತ್ತು 'ವಿಚಾರಗಳ ಸಂಬಂಧಗಳು' – (Relations of ideas) ಇವೆರಡರ ನಡುವಿನ ಭಿನ್ನ ಲಕ್ಷಣಗಳನ್ನು ಗುರುತಿಸಿ ಹ್ಯೂಮ್ ಈ ವಿಶ್ಲೇಷಣಾ ವಿಧಾನಕ್ಕೆ ಭದ್ರ ಅಡಿಪಾಯ ಒದಗಿಸುತ್ತಾನೆ. ಇದು ಆತ ಮಾಡುವ 'ಸಂಶ್ಲೇಷಣೆ' (synthetic) ಮತ್ತು 'ವಿಶ್ಲೇಷಣೆ' (analysis) ನಡುವಿನ ವ್ಯತ್ಯಾಸದತ್ತ ಕರೆದೊಯ್ಯುತ್ತದೆ. ಆದುದರಿಂದ ಈ ಚಿಂತನೆಗಳ ಚೌಕಟ್ಟಿನಲ್ಲಿ ವಿಜ್ಞಾನದ ಒಂದು ವಿಧಾನವಾಗಿ 'ಅನುಗಮನ' (Induction) ವನ್ನು ಅರ್ಥಮಾಡಿಕೊಳ್ಳಲು ಹ್ಯೂಮ್ ಪ್ರಯತ್ನಿಸಿದಾಗ ವಿರೋಧಾಭಾಸಗಳನ್ನು ಆತ ಎದುರಿಸಿದ. ಇದೇ ಅವನ ಜನಪ್ರಿಯ 'ಅನುಗಮನದ ವಿರೋಧಾಭಾಸ' ತತ್ತ್ವ (Paradox of Induction). ಆತ ತರ್ಕದ ನಿಗಮನ ಸ್ವರೂಪಗಳ ಮೂಲಕವೇ 'ಅನುಗಮನವನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ್ದರಿಂದ ಅಂಥ ವಿರೋಧಾಭಾಸ ಆತನಿಗೆ ಎದುರಾಗುವುದು ಅನಿವಾರ್ಯವಾಗಿತ್ತು.

ಈ ವಿರೋಧಾಭಾಸವನ್ನು ಅರ್ಥಮಾಡಿಕೊಂಡ ತತ್ತ್ವಜ್ಞಾನಿ ಇಮ್ಮಾನ್ಯುಯೆಲ್ ಕ್ಯಾಂಟ್, 'ಬುದ್ಧಿರೂಢ ಸಂಶ್ಲೇಷಣಾ' (Synthetic-a priori) ವಿಧಾನಗಳನ್ನು ಆಶ್ರಯಿಸಿದ. ತನ್ನ ಬಗ್ಗೆ ಹಾಗೂ ಜಗತ್ತಿನ ಬಗ್ಗೆ ಮನುಷ್ಯನ ಅನುಭವವು ನಿಜಕ್ಕೂ ಮೂರ್ತಗೊಳ್ಳಬೇಕಾದರೆ, ಮನುಷ್ಯನ ಅನುಭವವು ಇದುವರೆಗೂ ನಿರಾಕರಿಸದಿರುವ ಗಣಿತಶಾಸ್ತ್ರ ಮತ್ತು ವಿಶ್ವನಿಯಮಗಳ ಅಂತರ್ಗತವಾದ ಕಾರ್ಯಕಾರಣ (Causality) ದಂಥ ಸತ್ಯಗಳು ತೃಪ್ತಿಪಡಿಸಲೇಬೇಕಾದ ಷರತ್ತುಗಳನ್ನು ಒಡ್ಡುತ್ತವೆ ಎಂದು ಹ್ಯೂಮ್ ತೋರಿಸಿದ. ಇದು ಒಂದು ಮಟ್ಟದಲ್ಲಿ ಹ್ಯೂಮ್‌ನ ಅನುಗಮನವಾದದ ವಿರೋಧಾಭಾಸವನ್ನು ಪರಿಹರಿಸಿದರೆ, ಮತ್ತೊಂದು ಹಂತದಲ್ಲಿ ಸಾಮಾನ್ಯವಾದ ಘನ ಸಮಸ್ಯೆಯನ್ನೊಂದನ್ನು ಹುಟ್ಟುಹಾಕುತ್ತದೆ. ಕ್ಯಾಂಟ್‌ನ ಜ್ಞಾನಶಾಸ್ತ್ರ ಅಜ್ಞೇಯತಾ ವಾದದ (Agnosticism) ಲಕ್ಷಣಗಳನ್ನು ಹೊಂದಿದೆ. ಪ್ರತಿ ಸಂಗತಿಯೂ ತನ್ನೊಳಗೇ ಸ್ವಯಂಪೂರ್ಣ (Thing in itself) ಎಂಬ ಮಿಡಿತವನ್ನು ಆತ ಅನಿವಾರ್ಯವಾಗಿ ಆಧಾರವಾಗಿಟ್ಟುಕೊಂಡಿದ್ದ. ಇಂದ್ರಿಯ ಗೋಚರವಾಗದ ಯಾವುದೇ ತತ್ತ್ವವನ್ನು

ನಂಬದ ಮತ್ತು ಜಡ ಪ್ರಪಂಚದ ಹೊರತು ಸೃಷ್ಟಿಕರ್ತನ ಹಸ್ತಕ್ಷೇಪದಲ್ಲಿ ಶ್ರದ್ಧೆಯಿರುವ ವಾದವೇ ಆಜ್ಞೇಯತಾವಾದ. ದೇವರ ಅಸ್ತಿತ್ವವನ್ನು ಅದು ಮಾನ್ಯ ಮಾಡದು. ಹಾಗಾಗಿ ಕ್ಯಾಂಟ್ ಸುತ್ತಲಿನ ಸಂಬಂಧಗಳನ್ನು ಗಣನೆಗೆ ತೆಗೆದುಕೊಳ್ಳುವ ವಸ್ತುವನ್ನು ಅದರ ಇರುವಿನ ರೂಪದಲ್ಲಿಯೇ ಹೇಳುವ ಚಿಂತನೆಗಳಿಗೆ ಅಂಟಿಕೊಂಡ. ಇದರಿಂದ ಅವನ ಸತ್ಯದ ಪರಿಕಲ್ಪನೆಯೂ ಆಜ್ಞೇಯತಾವಾದಕ್ಕೆ ಮತ್ತು ವಾಸ್ತವ ಮತ್ತು ಮೌಲ್ಯಗಳ ಬೇರ್ಪಡಿಸುವಿಕೆಗೆ ಎಡೆಮಾಡಿಕೊಟ್ಟಿತು; ಮತ್ತು ಇದು ಆತ್ಯಂತಿಕವಾಗಿ ಸ್ವಯಂಚಾಲಿತ ಜಗತ್ತಿನ ಪರಿಕಲ್ಪನೆಗೂ ಮತ್ತು ಅದಕ್ಕೆ ಸಂಬಂಧಿಸಿದ ಮನುಷ್ಯನ ಇಚ್ಛಾಸ್ವಾತಂತ್ರ್ಯ (free will) ಕ್ಕೆ ಎಡೆಮಾಡಿಕೊಟ್ಟಿತು. ಕ್ಯಾಂಟ್ ಪರಿಶುದ್ಧ ಕಾರಣ (pure reason) ಸಿದ್ಧಾಂತವನ್ನು ಜನಪ್ರಿಯಗೊಳಿಸಿದ ಮತ್ತು ಅಂಥ ಪರಿಕಲ್ಪನೆಗಳಲ್ಲಿದ್ದ ಕ್ಲಿಷ್ಟಕರ ಸಮಸ್ಯೆಗಳನ್ನು ಬಿಚ್ಚಿಟ್ಟ.

ಆದರೆ ನಮಗೆಲ್ಲ ತಿಳಿದಂತೆ ವಿಜ್ಞಾನದ ಪ್ರಗತಿಯು ಮೌಲ್ಯಗಳ ಜೊತೆಗಿನ ಬಾಹ್ಯ ಸಂಬಂಧಗಳನ್ನು ನಿರಂತರವಾಗಿ ಕಳೆದುಕೊಳ್ಳುತ್ತಾ ಮುಂದುವರೆಯಿತು; ಮಾತ್ರವಲ್ಲ ಈ ಶುದ್ಧ ತರ್ಕ ಪರಿಕಲ್ಪನೆ (pure reason) ಯು ಆಧುನಿಕ ತರ್ಕಶಾಸ್ತ್ರದ ಸೂತ್ರರೂಪಗಳಲ್ಲಿ ತನ್ನ ಆತ್ಯಂತಿಕ ಅಭಿವ್ಯಕ್ತಿಯನ್ನು ಕಂಡುಕೊಂಡಿತು. ಈ ರೀತಿಯ ತರ್ಕದ ಸ್ವರೂಪವು ಕೊನೆಗೆ ಸತ್ಯದ ಜೊತೆ ಸೈದ್ಧಾಂತಿಕವಾಗಿಯೂ ಯಾವುದೇ ಸಂಬಂಧವಿಲ್ಲದಂತಹ ವಿಲಕ್ಷಣ ಧ್ಯೇಯವೊಂದನ್ನು ಸೃಷ್ಟಿಸಿತು. ಆಧುನಿಕ ವಿಜ್ಞಾನದಲ್ಲಿ ವಾದದ ಸ್ವರೂಪವನ್ನು ಗರ್ಭೀಕರಿಸಿಕೊಂಡಿರುವುದೇ ಈ ತರ್ಕ. ವಿಜ್ಞಾನವು ನೀತಿಯ ಜೊತೆ ಯಾವ ರೀತಿಯ ಸಂಬಂಧ ಹೊಂದಿದೆ ಎಂಬುದನ್ನು ನಿರ್ಧರಿಸಲು ಈ ಬಗೆಯ ತರ್ಕವನ್ನು ಉಪಯೋಗಿಸುವುದಾದರೆ, ಉತ್ತರ ಮೊದಲೇ ನಿರ್ಣಯ ವಾಗಿರುತ್ತದೆ. ಅಲ್ಲಿ ಸಿಗುವ ಉತ್ತರವೆಂದರೆ, ವಿಜ್ಞಾನಕ್ಕೆ ಮಾನವನ ಅಥವಾ ಸಾಮಾಜಿಕ ಮೌಲ್ಯಗಳೊಡನೆ ಯಾವುದೇ ಸ್ವಭಾವಸಿದ್ಧ ಸಂಬಂಧವಿರುವುದಿಲ್ಲ ಎಂದು.

ಈ ಬಗೆಯ ವಾದವು ಅಂದರೆ ಮೌಲ್ಯದಿಂದ ವಾಸ್ತವಾಂಶವನ್ನು ಪ್ರತ್ಯೇಕಿಸುವ ಈ ಬಗೆಯ ವೈಚಾರಿಕ ಪರಿಕಲ್ಪನೆಯು ಸಕಲರಿಗೂ ಸುಪರಿಚಿತವಾದ 'ಸ್ವಾತಂತ್ರ್ಯ'ದ ಪರಿಕಲ್ಪನೆಯ ಸೃಷ್ಟಿಗೆ ಎಡೆಮಾಡಿಕೊಡುತ್ತದೆ. ಈ ಸ್ವಾತಂತ್ರ್ಯದ ಪರಿಕಲ್ಪನೆಯು ವೈಜ್ಞಾನಿಕ ಉದ್ಯಮಶೀಲತೆ ಮತ್ತು ಸಾಮಾಜಿಕ ನಿಯಂತ್ರಣದ ನಡುವೆ ತಾತ್ವಿಕ ಪ್ರತ್ಯೇಕತೆಯನ್ನುಂಟು ಮಾಡುತ್ತದೆ. ಆದುದರಿಂದ ಪ್ರಧಾನವಾದ ಪಾಶ್ಚಾತ್ಯ ಚಿಂತನಾಕ್ರಮಗಳು ವೈಚಾರಿಕತೆ (ತರ್ಕ) ಮತ್ತು ಸ್ವಾತಂತ್ರ್ಯ ಎಂಬ ಜೋಡಿ ಪರಿಕಲ್ಪನೆಗಳ ಮೇಲೆ ಮತ್ತು ಬಾಹ್ಯ ಹಾಗೂ ಆಂತರಿಕ ನೈತಿಕ ನಿರ್ಬಂಧಗಳಿಲ್ಲದ ವಿಜ್ಞಾನದ ಆಧಾರದ ಮೇಲೆ ನಿಂತಿದೆ. ಆದರೆ ಈ ಹಿಂದೆ ಪ್ರಸ್ತಾಪಿಸಿದಂತೆ ಈ ವಾದವು ತನ್ನ ತೀರ್ಮಾನವನ್ನು ಮೊದಲೇ ಸಿದ್ಧಪಡಿಸಿಟ್ಟುಕೊಂಡಿದೆ. ವಿಜ್ಞಾನಕ್ಕೂ ಮತ್ತು ನೀತಿ ಮೌಲ್ಯಗಳಿಗೆ ಸಂಬಂಧವಿರುವುದಿಲ್ಲ ವೆಂಬುದೇ ಆ ತೀರ್ಮಾನ. ಇದು ಪ್ರಶ್ನಾರ್ಹವಾಗಿದೆ. ಆಧುನಿಕ ವಿಜ್ಞಾನವೂ ಸೇರಿದಂತೆ ಯಾವುದೇ ವಿಜ್ಞಾನವು ನೀತಿ ಅಲಿಪ್ತವಾಗಿರಲು ಸಾಧ್ಯವಿಲ್ಲವೆಂಬುದನ್ನು ಈ ಅಧ್ಯಾಯದ ಮುಂದಿನ ಭಾಗಗಳಲ್ಲಿ ಕಾಣಲಿದ್ದೇವೆ.

## ಬಾಹ್ಯ ಮತ್ತು ಆಂತರಿಕ ಮೌಲ್ಯಗಳು

ವಿಜ್ಞಾನದ ಬಗೆಗಿನ ಸಮಕಾಲೀನ ಚರ್ಚೆ ಮತ್ತು ನೈತಿಕತೆಯು ಬಾಹ್ಯ ಮತ್ತು ಆಂತರಿಕ ಮೌಲ್ಯಗಳ ನಡುವಿನ ವ್ಯತ್ಯಾಸವನ್ನು ಗುರುತಿಸುತ್ತವೆ. ವಿಜ್ಞಾನಕ್ಕೆ ಸಂಬಂಧಿಸಿದ ಬಾಹ್ಯ ಮೌಲ್ಯಗಳ ಪ್ರಶ್ನೆಯು ವಿಜ್ಞಾನದ ಮೇಲೆ ಸಾಮಾಜಿಕ ಮತ್ತು ನೈತಿಕ ನಿಯಂತ್ರಣದ ಪ್ರಶ್ನೆಯನ್ನು ಒಳಗೊಳ್ಳುತ್ತದೆ. ಆಂತರಿಕ ಮೌಲ್ಯಗಳ ಪ್ರಶ್ನೆಯು ವಿಜ್ಞಾನ ಜ್ಞಾನರಾಶಿಯ ಅವಿಭಾಜ್ಯ ಅಂಗವಾಗುವ ಸಾಧ್ಯತೆ ಅಥವಾ ಅಸಾಧ್ಯತೆಗೆ ಸಂಬಂಧಿಸಿದೆ. ಆದರೆ ಗಾಂಧಿ ಇಂಥ ವ್ಯತ್ಯಾಸವನ್ನು ಅಂಗೀಕರಿಸುತ್ತಿದ್ದರೇ ಎಂಬುದು ಅನುಮಾನಾಸ್ಪದವಾಗಿದೆ. ಆದರೆ ವೈಜ್ಞಾನಿಕ ವಿಮರ್ಶೆಯಲ್ಲಿ ಅಂಥ ವ್ಯತ್ಯಾಸಗಳನ್ನು ಗುರುತಿಸುವುದು ಸಾಮಾನ್ಯವಾದ್ದರಿಂದ ಈ ಚರ್ಚೆಯಿಂದಲೇ ಆರಂಭಿಸೋಣ. ಈಗಾಗಲೇ ನಾವು ನೋಡಿರುವಂತೆ ವಿಜ್ಞಾನವು ನೀತಿಯ ಅಥವಾ ಸಮಾಜದ ನಿಯಮಗಳ ನಿಯಂತ್ರಣಕ್ಕೆ ಒಳಪಡಬಾರದು; ವಿಜ್ಞಾನದ ಜ್ಞಾನರಾಶಿಯು ಎಲ್ಲಾ ಮೌಲ್ಯಗಳಿಂದ ಮುಕ್ತವಾಗಿರಬೇಕು ಮತ್ತು ಮುಕ್ತವಾಗಿದೆ ಎಂಬುದು ಪ್ರಚಲಿತ ನಿಲುವು. ಈ ನಿಲುವು ಸ್ವಾತಂತ್ರ್ಯ ಮತ್ತು ವೈಚಾರಿಕತೆ (ತರ್ಕ) ಎಂಬ ಮೂಲಭೂತ ಪರಿಕಲ್ಪನೆಗಳ ಮೇಲೆ ನಿಂತಿದೆ.

ಆದರೆ ಇದು ಗಾಂಧಿಯವರ ಸಕಲ ನೀತಿತತ್ತ್ವ (Pan-Moralism)ದ ನಿಲುವಿಗೆ ಸಂಪೂರ್ಣ ವ್ಯತಿರಿಕ್ತವಾಗಿದೆ. ಅದರ ಪ್ರಕಾರ ಸಕಲ ನೀತಿ ತತ್ತ್ವವು 'ಸಂಭವನೀಯ' ಮತ್ತು 'ಸಂಭವಿಸುತ್ತಿರುವ' ಎರಡೂ ವಲಯಗಳನ್ನು ವ್ಯಾಪಿಸಿಕೊಂಡಿರುತ್ತದೆ. ವಿಜ್ಞಾನವು ಸಾಮಾಜಿಕ ಉದ್ಯಮವಾದುದರಿಂದ ಅದು ಸಮಾಜದ ನಿಯಂತ್ರಣಕ್ಕೊಳಪಡಲೇಬೇಕು. ಮಾನವನ ಪ್ರತಿಯೊಂದು ಉದ್ಯಮವೂ ಅದು ಧಾರ್ಮಿಕ, ಆರ್ಥಿಕ, ರಾಜಕೀಯ ಅಥವಾ ವೈಜ್ಞಾನಿಕವಾಗಿರಲಿ–ಸಮಾಜದ ಹತೋಟಿಯಲ್ಲಿರಬೇಕು. ಜನ ಕಲ್ಯಾಣದ ಸಾಮಾನ್ಯ ಸನ್ನಿವೇಶದಲ್ಲಿ ಅಂಥ ಪ್ರತಿಯೊಂದು ಉದ್ಯಮ (ವಿಜ್ಞಾನವೂ ಸೇರಿದಂತೆ)ಕ್ಕೂ ತನ್ನದೇ ಆದ ಹಕ್ಕು ಮತ್ತು ಕರ್ತವ್ಯಗಳಿವೆ. ಈ ಹಕ್ಕು–ಕರ್ತವ್ಯಗಳು ಒಟ್ಟಾಗಿ ಆ ಉದ್ಯಮ ಹೊಂದಿರುವ ಸ್ವಾಯತ್ತತೆಯ ಸ್ವರೂಪವನ್ನು ನಿರ್ಧರಿಸುತ್ತವೆ. ವಿಜ್ಞಾನಕ್ಕೆ ಇತರ ಉದ್ಯಮಗಳಿಗಿಂತ ಹೆಚ್ಚಿನ ಸ್ವಾಯತ್ತತೆ ಇದೆ ಎಂದು ತೋರಿಕೆಗೆ ಕಾಣಬಹುದು. ಆದರೆ ಈ ನಿಲುವೇ ಪ್ರಶ್ನಾರ್ಹ. ಈ ನಿಲುವು ನಿಜವಾಗಿದ್ದರೂ, ಸ್ವಾಯತ್ತತೆಯ ಪ್ರಮಾಣದಲ್ಲಿ ಹೆಚ್ಚು–ಕಡಿಮೆ ಇರಬಹುದೇ ಹೊರತು ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯವಿರದು. ಆಧುನಿಕ ಕೈಗಾರಿಕಾ ವ್ಯವಸ್ಥೆಯೊಡನೆ ಹುಟ್ಟಿದ ಮುಕ್ತ ಉದ್ಯಮದ ಪರಿಕಲ್ಪನೆಗಳು ಯಾವುದೇ ನಿಯಂತ್ರಕಗಳ ಕಟ್ಟುಪಾಡಿಗೆ ಅಧೀನವಾಗದ ಚಿತ್ರಣವನ್ನು ನೀಡುತ್ತವೆ. ಮಾನವನನ್ನು ಒಳಗೊಳ್ಳದೆ ನೈಸರ್ಗಿಕ ಸಂಬಂಧಗಳನ್ನು ಸ್ವತಂತ್ರವಾಗಿ ಅನ್ವೇಷಿಸುತ್ತಿರುವುದಾಗಿ ತಾನೇ ಹೇಳಿಕೊಳ್ಳುವ ವಿಜ್ಞಾನ ಅಂಥ ಸ್ವಾತಂತ್ರ್ಯಕ್ಕಾಗಿ ಅರ್ಜಿ ಗುಜರಾಯಿಸಿದ ಮೊದಲ ಅಭ್ಯರ್ಥಿ. ಆದರೆ ಇದೊಂದು ಸಂಪೂರ್ಣ ಸುಳ್ಳು ಪ್ರತಿಪಾದನೆ. ಯಾವುದೂ ಈ ಬಗೆಯಲ್ಲಿ ಸ್ವತಂತ್ರವಾಗಿರುವುದು ಸಾಧ್ಯವೇ ಇಲ್ಲ; ವಿಜ್ಞಾನಕ್ಕೂ ಅದು ಅನ್ವಯಿಸುತ್ತದೆ. ಅದು ಸದಾ ಸಮಾಜದ ನಿಯಂತ್ರಕ್ಕೊಳಪಟ್ಟಿದೆ. ಆದರೆ,

ಆಯಾ ಕಾಲ, ಸಂದರ್ಭಗಳಿಗೆ ತಕ್ಕಂತೆ ವಿವಿಧ ಪ್ರಮಾಣದ ಸ್ವಾಯತ್ತತೆಯನ್ನು ಅನುಭವಿಸುತ್ತಿರುತ್ತದೆ.

ಸಾಮಾಜಿಕ ನಿಯಂತ್ರಣದ ಪ್ರಶ್ನೆಯು ಒಂದು ಚರ್ಚಾರ್ಹ ಪ್ರಶ್ನೆಯಾಗಿ ಉದ್ಭವಗೊಳ್ಳುತ್ತದೆ. ಏಕೆಂದರೆ ವಿಜ್ಞಾನ ಮತ್ತು ತಂತ್ರಜ್ಞಾನದ ಹೆಸರಿನಲ್ಲಿ ಬಹುಸಂಖ್ಯಾತ ಜನಸಾಮಾನ್ಯರ ಮೇಲೆ ಏನೇನೆಲ್ಲ ಹೇರಲಾಗುತ್ತಿದೆ. ಆದರೆ ಅದರ ಮೇಲೆ ಈ ಜನಸ್ತೋಮಕ್ಕೆ ನಿಯಂತ್ರಣವಿಲ್ಲ. ಅವರ ಅಪೇಕ್ಷೆಗಳನ್ನು ಅದು ಆಧರಿಸಿಲ್ಲ. ತೃತೀಯ ಜಗತ್ತಿನ ರಾಷ್ಟ್ರಗಳ ಸರ್ಕಾರಗಳೂ ಸಹ ವಿಜ್ಞಾನದ ಮೇಲೆ ಯಾವ ಅಂಕುಶವನ್ನೂ ಪ್ರಯೋಗಿಸುತ್ತಿಲ್ಲ. ಈ ಕಾರ್ಯವೆಸಗಲು ಅವು ತೀರಾ ದುರ್ಬಲವಾಗಿವೆ. ಅಂಥ ನಿಯಂತ್ರಣವನ್ನು ವಾಸ್ತವವಾಗಿ ವಿಶ್ವದ ಆಡಳಿತರೂಢ ಪ್ರಭುವರ್ಗವಾದ ಯೂರೂಪ್-ಅಮೆರಿಕನ್ ರಾಷ್ಟ್ರಗಳು ಪ್ರಯೋಗಿಸುತ್ತಿವೆ. ಅವು ತಮ್ಮ ಹಿತಾಸಕ್ತಿಯ ಸಂರಕ್ಷಣೆಗಾಗಿಯೇ ವಿಜ್ಞಾನವನ್ನು ಯಾರೂ ನಿಯಂತ್ರಿಸಲಾರರು ಎಂದು ಪ್ರತಿಪಾದಿಸುತ್ತಾ ತಾವೂ ಆ ಬಗ್ಗೆ ಅಸಮರ್ಥರೆಂದು ತೋರಿಸಿಕೊಳ್ಳುತ್ತಿವೆ. ಆ ಮೂಲಕ ಒಂದು ಹಂತದಲ್ಲಿ ಈ ಪ್ರಭುಶಕ್ತಿಗಳು ವಿಜ್ಞಾನದ ಘೋರ ಪರಿಣಾಮಗಳಿಂದ ಮುಕ್ತಿ ಪಡೆಯುತ್ತಿವೆ. ಹಾಗಾಗಿ ವಿಜ್ಞಾನದ ಜನವಿರೋಧಿ ಪರಿಣಾಮಗಳು ಅನಿವಾರ್ಯ; ಮತ್ತು ಇದು ಪ್ರಗತಿಗೆ ತೆರಬೇಕಾದ ಬೆಲೆ ಎಂಬಂತೆ ತೋರುತ್ತದೆ. ಗಾಂಧಿಯವರ ಬರಹಗಳಲ್ಲಿ ಸಮಾಜದ ಪ್ರತಿಯೊಂದು ಸಂಗತಿಯೂ ವಿಸ್ತಾರವಾಗಿ ಸಾಮಾಜಿಕ ನಿಯಂತ್ರಣಕ್ಕೊಳಪಡಬೇಕೆಂದು ಕರೆನೀಡುವ ಒಳನೋಟಗಳಿಂದ ಸಮೃದ್ಧವಾಗಿವೆ. ನೈತಿಕತೆ ಮತ್ತು ವಿಜ್ಞಾನದ ಸಂಬಂಧದ ಬಗ್ಗೆ ಗಾಂಧಿಯವರು 'ಹಿಂದ್ ಸ್ವರಾಜ್'ನಲ್ಲಿ ಕುತೂಹಲಪೂರ್ಣ ಸಮೀಕ್ಷೆಯೊಂದನ್ನು ಮಾಡಿದ್ದಾರೆ. ಅದರಲ್ಲಿ ಸಾಮಾಜಿಕ ನಿಯಂತ್ರಣದ ಸರ್ವಸಾಮಾನ್ಯ ವಿಧಾನವೊಂದನ್ನು ವ್ಯಕ್ತಪಡಿಸಿದ್ದಾರೆ. ನಾಗರಿಕತೆಯ ಬಗ್ಗೆ ವಿವರಿಸುತ್ತಾ ಗಾಂಧಿ ನಮ್ಮ ಪೂರ್ವಿಕರಿಗೂ ಯಂತ್ರಗಳನ್ನು ಆವಿಷ್ಕರಿಸುವ ವಿಧಾನ ತಿಳಿದಿತ್ತು; ಆದರೆ ಯಂತ್ರಗಳು ಮನುಷ್ಯನನ್ನೇ ಅಡಿಯಾಳು ಮಾಡಿಕೊಂಡು ಸಮಾಜದ ನೀತಿ ತಂತ್ರವನ್ನೇ ನಾಶಪಡಿಸಿ ಬಿಡಬಹುದಾದ ಆತಂಕವಿದ್ದುದರಿಂದಲೇ ಅವರು ಯಂತ್ರಗಳನ್ನು ಆವಿಷ್ಕರಿಸಲಿಲ್ಲವೆಂದು ಸಮರ್ಥನೆ ನೀಡುತ್ತಾರೆ. ಇದು ರೋಗಚಿಕಿತ್ಸೆಗಾಗಿ ದೇಹಚ್ಛೇದನೆಯನ್ನು ಬೇಷರತ್ತಾಗಿ ನಿರಾಕರಿಸಿದ ಅವರ ತೀರ್ಮಾನದಂತೆಯೇ ಇದೆ. ಈ ಬಗೆಯ ದೇಹಚ್ಛೇದನೆ ಮನುಕುಲಕ್ಕೆ ಒಳಿತಿಗಿಂತ ಹೆಚ್ಚು ಕೆಡುಕನ್ನೇ ಮಾಡುತ್ತದೆಂಬ ನಿಲುವು ಅವರದಾಗಿತ್ತು. ಆದರೆ ಬದುಕಿನ ಆಸಕ್ತಿಗಳು ಕೇವಲ ಆರ್ಥಿಕ ಲಾಭಕ್ಕಷ್ಟೇ ಸಂಕುಚಿತಗೊಂಡ ಆಧುನಿಕ ಸಮಾಜದಲ್ಲಿ ಇಂಥ ವಿಷಯಗಳನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ತನ್ನ ತೆರಿಗೆ ಹಣಕ್ಕಾಗಿ ಮದ್ಯ ಸೇವನೆಯನ್ನು ಜನಪ್ರಿಯಗೊಳಿಸುವ ಕಾಯಕ ಹಿಡಿದಿರುವ ಸರ್ಕಾರಗಳಿಂದ ಏನು ತಾನೆ ನಿರೀಕ್ಷಿಸಲು ಸಾಧ್ಯ? ಆದರೆ ವೈಚಾರಿಕತೆಯಂಥ ಬಿಕ್ಕಟ್ಟಿನ ನಡುವೆ ಪ್ರತಿಯೊಂದು ಸಂಗತಿಯಂತೆ ವಿಜ್ಞಾನವೂ ಸಮಾಜದ ನೈತಿಕತೆಯ ಎಳೆಯೊಡನೆ ಬಿಡಿಸಲಾಗದಂತೆ ಹೆಣೆದುಕೊಂಡಿದೆ ಎಂಬ ವಾಸ್ತವ ಪ್ರಜ್ಞೆಯನ್ನು ಕಳಕೊಳ್ಳಬಾರದು. ಹಾಗಾಗಿ, ವಿಜ್ಞಾನದ ಬೆಳವಣಿಗೆಯೂ ಸಹ ನೈತಿಕ ಗುಣಮಟ್ಟ ಮತ್ತು ನಿಯಮಗಳ

ನಿಯಂತ್ರಣಕ್ಕೊಳಪಡಬೇಕು. ಇದು ವಿಜ್ಞಾನದ ಬಾಹ್ಯ ಮೌಲ್ಯಗಳ ಪ್ರಶ್ನೆಗೆ ಸಂಬಂಧಿಸಿದುದು ಮಾತ್ರವಲ್ಲ. ಅದು ಆಂತರಿಕವಾಗಿ ವಿಜ್ಞಾನದಲ್ಲೂ ಪ್ರತಿಬಿಂಬವಾಗುತ್ತದೆ. ವಿಜ್ಞಾನವನ್ನು ಅದರ ಬಳಕೆಗಳಿಂದ ಕಟ್ಟುನಿಟ್ಟಾಗಿ ಪ್ರತ್ಯೇಕಿಸಿದರೆ ಅದು ಮೌಲ್ಯದಿಂದ ಮುಕ್ತವಾಗುತ್ತದೆ. ಇದು ತತ್ತ್ವಶಾಸ್ತ್ರವನ್ನು ಪರಿಶುದ್ಧ ತರ್ಕ ಮತ್ತು ವಿಶ್ಲೇಷಣೆಯ ಕಸರತ್ತನ್ನಾಗಿ ಪರಿವರ್ತಿಸಿದ ಪಾಂಡಿತ್ಯ ಮತ್ತು ಬೌದ್ಧಿಕ ಧೋರಣೆಗೆ ಅನುರೂಪವಾಗಿದೆ. ಈ ಧೋರಣೆಗೆ ಒಬ್ಬ ನೀತಿಶಾಸ್ತ್ರದ ತತ್ತ್ವಜ್ಞಾನಿ ನೀತಿವಂತ ಮನುಷ್ಯನಾಗಿರಬೇಕೆಂದೇನೂ ಇಲ್ಲ ಎಂಬ ಹೇಳಿಕೆ ಉತ್ತಮ ದೃಷ್ಟಾಂತ : (ಆಧುನಿಕ ನೀತಿಶಾಸ್ತ್ರದ ಪದವಿ ಕೋರ್ಸು ಈ ಉಪದೇಶದಿಂದಲೇ ಆರಂಭವಾಗುತ್ತದೆ) ಇದೇ ಧೋರಣೆ ಉಪಯೋಗಿಸುತ್ತಾ ಮೌಲ್ಯದಿಂದ ವಿನಿಮಯದ ಮೌಲ್ಯವನ್ನು, ಮತ್ತು ಜನ ಕಲ್ಯಾಣಕ್ಕೇ ಸಂಬಂಧಿಸಿದ ಪ್ರಶ್ನೆಗಳಿಂದ ಎಲ್ಲಾ ರಾಜಕೀಯ ಮತ್ತು ಸಾಮಾಜಿಕ ಸಿದ್ಧಾಂತಗಳನ್ನು ಪ್ರತ್ಯೇಕಿಸುತ್ತದೆ. ಇದೇ ಧೋರಣೆಯು ವಿಜ್ಞಾನಕ್ಕೂ ಅದರ ಉಪಯೋಗಗಳ ಸಂಗತಿಗೂ ಯಾವುದೇ ಸಂಬಂಧವಿಲ್ಲದಂತೆ ಮಾಡಿ ವಿಜ್ಞಾನವು ಕೇವಲ ಸ್ವಯಂ ತೃಪ್ತಿ ಅಥವಾ ಕೇವಲ ಅದರ ಆತ್ಮರತಿಯ ಕಸರತ್ತೆನ್ನುವಂತೆ ರೂಪಿಸಿದೆ.

ಆದರೆ ಗಾಂಧಿಯುವರ ಪ್ರಕಾರ ಮೌಲ್ಯಗಳು ವಿಜ್ಞಾನದೊಳಗೆ ಅಂತರ್ಗತವಾಗಿರಬೇಕು. ನೀತಿವಂತ ಸ್ತ್ರೀ ಪುರುಷರು ಮೌಲ್ಯಧಾರಿತ ವಿಜ್ಞಾನದ ಬಗ್ಗೆ ಕಾಳಜಿಯುಳ್ಳವರಾದರೆ ಸಾಲದು. ಸ್ವತಃ ವಿಜ್ಞಾನವೇ ನೀತಿಯುಕ್ತವಾಗಿರಬೇಕು.

ನೀತಿಶಾಸ್ತ್ರದ ಅನುಷ್ಠಾನಕ್ಕೆ, ಪರಿಶುದ್ಧ ವೈಚಾರಿಕತೆ (ತರ್ಕ)ಯು ಮಾನವ ತರ್ಕಕ್ಕೆ ಸ್ಥಳ ತೆರವು ಮಾಡಿಕೊಡಬೇಕು. ಆಗ ನೀತಿಶಾಸ್ತ್ರ ಅರ್ಥಪೂರ್ಣವಾಗುತ್ತದೆ. ಪರಿಶುದ್ಧ ತರ್ಕಕ್ಕೆ ಸಂಬಂಧಿಸಿದಂತೆ ಅದಕ್ಕೆ ಅನುರೂಪವಾದ ವೈಜ್ಞಾನಿಕ ಮನೋಭಾವ ಎಂಬ ಪರಿಕಲ್ಪನೆಯೊಂದಿದೆ. ವೈಜ್ಞಾನಿಕ ಮನೋಭಾವವು ಒಳಿತು ಅಥವಾ ಕೆಡುಕಿನ ಗುಣಗಳನ್ನು ವಸ್ತು–ಸಂಗತಿಗಳಿಗೆ ಆರೋಪಿಸದೆ ನೋಡುವ ವಿಧಾನ. ಅದು ಅವ್ಯಕ್ತ ಚಿಂತನೆಯನ್ನು ಕಡೆಗಣಿಸಿ ಮುಂದುವರಿಯುತ್ತದೆ. ವೈಜ್ಞಾನಿಕ ಚಿಂತನೆಯ ಅಭಾವವೇ ಅವ್ಯಕ್ತ ಕಲ್ಪನೆಗೆ ಕಾರಣವೆಂದು ಈ ಪರಿಯ ತಾರ್ಕಿಕ ಚಿಂತನೆ ತಿಳಿಯುತ್ತದೆ. ಈ ಪರಿಕಲ್ಪನೆಯು ಇವೆಲ್ಲವುಗಳ ಬಗ್ಗೆ ಅಖೈರಾಗಿ ತೀರ್ಮಾನ ಮಾಡುವ ಮಾನದಂಡವೂ ವಿಜ್ಞಾನೀ ಸಮುದಾಯದಲ್ಲೇ ಇದೆ. ವಿಜ್ಞಾನಕ್ಕೂ ಮಾನವೀಯ ವಿಚಾರಗಳಿಗೂ ಸಂಬಂಧವಿಲ್ಲವೆಂಬ ತತ್ತ್ವವು ವಿಜ್ಞಾನಿಗಳ ಮನದಲ್ಲಿ ಒಂದು ಶ್ರದ್ಧೆಯಾಗಿ ಬೇರೂರಿದೆ. ಇಂಥ ಶ್ರದ್ಧೆಗೆ ಆಸುರಿ ಧ್ವನಿಗಳಿವೆ. ಶುದ್ಧಕಾರಣದ ಸ್ಥಾನದಲ್ಲಿ ಮಾನವೀಯ ಕಾರಣ ಬರಬೇಕಾದರೆ ವೈಜ್ಞಾನಿಕ ಮನೋಭಾವದ ಸ್ಥಾನದಲ್ಲಿ ಮಾನವೀಯ ಮನೋಭಾವ ಪ್ರತಿಷ್ಠಾಪನೆಯಾಗಬೇಕು. ಆಗ ವಿಜ್ಞಾನದ ಪ್ರಮಾಣಗಳು ವಿಜ್ಞಾನದಲ್ಲೇ ಅಂತರ್ಗತವಾಗಿರುವುದಿಲ್ಲ; ಮಾತ್ರವಲ್ಲದೆ ಆಗ ಪರಿಶುದ್ಧ ತರ್ಕವು ಸತ್ಯ ಪ್ರಮಾಣಗಳಿಗೆ ಎಡೆಮಾಡಿಕೊಡುತ್ತದೆ. ಇದು ನೀತಿಶಾಸ್ತ್ರವನ್ನು ಅರ್ಥಮಾಡಿಕೊಳ್ಳುವ ಒಂದು ವಿಧಾನ.

ವಾಸ್ತವವಾಗಿ ಅಂಥ ವಿಜ್ಞಾನವು ಈ ರಾಷ್ಟ್ರದಲ್ಲಿ ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿತ್ತು. ಸಾಂಪ್ರದಾಯಿಕ ಭಾರತೀಯ ವಿಜ್ಞಾನಗಳೆಲ್ಲವೂ ಈ ವರ್ಗಕ್ಕೆ ಸೇರುತ್ತದೆ.

ಆದರೆ ಅವೆಲ್ಲವೂ ಸಾಮ್ರಾಜ್ಯಶಾಹಿ ವಿಸ್ತರಣೆ ಮತ್ತು ವಸಾಹತುಶಾಹಿಯ ದಾಸ್ಯದ ಅವಧಿಯಲ್ಲಿ ದಮನಕ್ಕೆ, ನಿಗ್ರಹಕ್ಕೊಳಗಾಗಿ ಅಂಚಿಗೆ ತಳ್ಳಲ್ಪಟ್ಟವು; ಅವಜ್ಞೆಗೆ ಗುರಿಯಾದವು. ಆಧುನಿಕ ವಿಜ್ಞಾನಿ ಸಮೂಹಕ್ಕೆ ಅಂಥ ಪ್ರಾಚೀನ ಜ್ಞಾನದ ಬಗ್ಗೆ ಯಾವುದೇ ತಿಳಿವಳಿಕೆಯಿಲ್ಲ. ಒಂದೆರಡು ದೃಷ್ಟಾಂತಗಳು ಈ ಅಂಶವನ್ನು ಸಾದರಪಡಿಸಬಹುದು. ಜ್ಯೋತಿಷ್ಯ ವಿಜ್ಞಾನವು ಆಕಾಶಕಾಯಗಳ ಚಲನ ನಿಯಮಗಳನ್ನು ಮತ್ತು ಮಾನವ ಜಗತ್ತಿನಲ್ಲಿ ಈ ಆಕಾಶಕಾಯಗಳ ಆಯಾಮಗಳನ್ನು ಒಳಗೊಂಡ ಜ್ಞಾನ ಶಾಖೆ. ಮಾನವರು ಸ್ವಭಾವತಃ ಪ್ರಾಕೃತಿಕ ಜೀವಿಗಳು; ಮತ್ತು ಅವರ ಬದುಕಿನ ಚಟುವಟಿಕೆಗಳ ಸಾಂಗತ್ಯ ಸ್ವಭಾವಸಿದ್ಧವಾಗಿ ಆಕಾಶಕಾಯಗಳ ಚಲನೆಯ ಜೊತೆ ಸಂಬಂಧ ಹೊಂದಿದೆ ಎಂಬ ಪರಿಕಲ್ಪನೆಯನ್ನು ಆ ಶಾಸ್ತ್ರ ಆಧರಿಸಿದೆ. ವಿವಿಧ ಆಕಾಶಕಾಯಗಳು ವಿವಿಧ ಕಾಲದಲ್ಲಿ ವಿಭಿನ್ನ ಸ್ಥಾನಗಳನ್ನು ಆಕ್ರಮಿಸಿಕೊಳ್ಳುವ ಬಗ್ಗೆ ಆಧುನಿಕ ಖಗೋಳವಿಜ್ಞಾನ ನಿರ್ಣಯಿಸುವಷ್ಟೆ ಸಮರ್ಥವಾಗಿ ಜ್ಯೋತಿಷ್ಯ ವಿಜ್ಞಾನವೂ ನಿರ್ಣಯಿಸುತ್ತದೆ. ಅನೇಕ ವಿಧದಲ್ಲಿ ಮಾನವನ ಕಲ್ಯಾಣವನ್ನು ಬಯಸುವ ಜ್ಞಾನದ ಮೂಲವಾಗಿಯೂ ಅದು ಕಾರ್ಯನಿರ್ವಹಿಸಿದೆ. ಮತ್ತೊಂದು ದೃಷ್ಟಾಂತ ಕೃಷಿಗೆ ಸಂಬಂಧಿಸಿದ್ದು. ಉದಾಹರಣೆಗೆ ಮಣ್ಣನ್ನೆ ನೋಡಿ; ಆಧುನಿಕ ವಿಜ್ಞಾನವು ಮಣ್ಣನ್ನು ಕೇವಲ ರಾಸಾಯನಿಕ ಘಟಕಗಳನ್ನಾಗಿ ವಿಭಜಿಸಿ ಗ್ರಹಿಸುತ್ತದೆ. ಅದರ ಪಾಲಿಗೆ ಕೃಷಿ ಒಂದು ರಾಸಾಯನಿಕ ಪ್ರಕ್ರಿಯೆಗಳ ಮೊತ್ತ. ಆದರೆ ಮಣ್ಣಿನ ಬಗೆಗಿನ ಸಾಂಪ್ರದಾಯಿಕ ವಿವರಗಳು ಮಣ್ಣಿಗೆ ಸ್ವಭಾವಸಿದ್ಧವಾಗಿ ಬಂದಿರುವ ರಾಸಾಯನಿಕ ಗುಣಗಳನ್ನು ಕುರಿತು ಹೇಳುವುದಿಲ್ಲ. ಅದು ಹವಾಮಾನದ ವೈವಿಧ್ಯಕ್ಕೆ ತಕ್ಕಂತೆ ಮಣ್ಣು ತೋರುವ ವಿಶಿಷ್ಟ ಸಾಮರ್ಥ್ಯದಂಥ ಗುಣಗಳನ್ನು ಕುರಿತು ವಿವರಿಸುತ್ತದೆ. ಸಾಂಪ್ರದಾಯಿಕ ಕೃಷಿಯನ್ನು ಮಾಡುವ ಕೃಷಿಕರು ಪರಿಶುದ್ಧ ರಾಸಾಯನಿಕ ವಿವರಣೆಗಳನ್ನು ವೈಜ್ಞಾನಿಕವೆಂದು ಒಪ್ಪುವುದಿಲ್ಲ. ಅದೇ ರೀತಿ ಲೋಹವಿಜ್ಞಾನಿಗಳೂ ಕೇವಲ ರಾಸಾಯನಿಕ ಪ್ರಕ್ರಿಯೆಗಳ ವಿಶ್ಲೇಷಣೆಯನ್ನು ವೈಜ್ಞಾನಿಕವೆಂದು ಒಪ್ಪುವುದಿಲ್ಲ.

ಮೌಲ್ಯಗಳು ಸ್ವಭಾವಸಿದ್ಧವಾಗಿರುವಂಥ ವೈಜ್ಞಾನಿಕ ಕಾರ್ಯಗಳ ಉದಾಹರಣೆಗಳನ್ನು ಮಾತ್ರ ಸಾಂಪ್ರದಾಯಿಕ ವಿಜ್ಞಾನಗಳು ನೀಡುತ್ತವೆ. ಈ ರೀತಿ ಹೇಳುವುದು, ವೈಜ್ಞಾನಿಕ ಪ್ರಕ್ರಿಯೆಗಳು ಈ ಸಾಂಪ್ರದಾಯಿಕ ವಿವರಣೆಯಂತೆಯೇ ನಡೆಯಲು ಸಾಧ್ಯವೆಂದು ಸೂಚಿಸುವ ಉದ್ದೇಶವಲ್ಲ. ಬದಲಿಗೆ ಇದು ವಿಜ್ಞಾನ ಸ್ವಭಾವಸಿದ್ಧವಾಗಿಯೇ ಮೌಲ್ಯಭರಿತವಾಗಿರುವುದು ಅಸಂಗತವಲ್ಲ ಎಂದು ಪ್ರತಿಪಾದಿಸುವ ಪ್ರಯತ್ನ ಮಾತ್ರ (ಏಕೆಂದರೆ ಆಧುನಿಕ ವೈಜ್ಞಾನಿಕ ಮನೋಭಾವ ಮತ್ತು ಶುದ್ಧ ತರ್ಕ (ಕಾರಣ)ಗಳ ದೃಷ್ಟಿಯಲ್ಲಿ ಈ ಅಪಕಲ್ಪನೆಗೆ ಅವಕಾಶವಿದೆ)

## ಪ್ರಕೃತಿಯ ಅಂತರ್ಲಯ ಮತ್ತು ಮೌಲ್ಯಗಳು (Values and Rythm of Nature)

ವಿಜ್ಞಾನಕ್ಕೂ ನಿಸರ್ಗದ ಲಯಕ್ಕೂ ಇರುವ ಸಂಬಂಧದ ಮೂಲಕ ನೈತಿಕತೆ ವಿಜ್ಞಾನದ ಜೊತೆ ಬೇರ್ಪಡಿಸಲಾಗದಷ್ಟು ನಿಕಟವಾಗಿ ಹೆಣೆದುಕೊಂಡಿದೆ. ಮಾನವರು ಮತ್ತು ಅವರ ಚಟುವಟಿಕೆಗಳನ್ನು ಒಳಗೊಂಡ ನಿಸರ್ಗದ ಎಲ್ಲಾ ಸಂಗತಿಗಳು ಮತ್ತು

ಪ್ರಕ್ರಿಯೆಗಳು ಒಂದು ಯುಕ್ತ ಪ್ರಮಾಣದಲ್ಲಿ ಪರಸ್ಪರ ಸಂಬಂಧಗಳಾಗಿ ಹೆಣೆದುಕೊಂಡಿವೆ. ಸಂಬಂಧಗಳ ಈ ಯುಕ್ತ ಜಾಲದ ಚಾಲನಶಕ್ತಿಯೇ ನಿಸರ್ಗದ ಅಂತರ್ಲಯವಾಗಿದೆ. ಆಕಾಶಕಾಯಗಳ ಚಲನೆ, ದಿನನಿತ್ಯ ಸಂಭವಿಸುವ ಸೂರ್ಯಾಸ್ತ, ಸೂರ್ಯೋದಯ, ಸಸ್ಯಗಳ ಬೆಳವಣಿಗೆ ಮತ್ತು ಕೊಳೆಯುವಿಕೆ, ನದಿಯ ಚಲನೆ, ವನ್ಯಜೀವಿಗಳ ಬದುಕು, ರಾಜ್ಯ ಮತ್ತು ಸಮಾಜದ ರಚನೆ, ಮಾನವನ ಸೃಜನಶೀಲ ಕ್ರಿಯೆಗಳಾದ ಸಂಗೀತ, ಕೃಷಿ, ಕೈಗಾರಿಕೆ ಇತ್ಯಾದಿಗಳೆಲ್ಲವಕ್ಕೂ ತಮ್ಮದೇ ಆದ ಲಯಗಳಿದ್ದು ಅವು ನಿಸರ್ಗದ ಅಖಂಡ ಲಯದ ಜೊತೆ ಮೇಳೈಸಿಕೊಂಡಿವೆ. ಈ ಅಂತರ್ ಲಯಗಳ ಅಖಂಡತ್ವಕ್ಕೆ ಸತ್ಯಂ, ಶಿವಂ, ಸುಂದರಂ ಎಂದು ಕರೆಯಬಹುದು. ಅಂದರೆ, ಈ ಲಯ, ಸತ್ಯಕ್ಕೆ ಅನುಗುಣವಾಗಿಯೇ ಚಲಿಸುವ ಲಯಗತಿ. ಅದು ಶ್ರೇಷ್ಠ ನೀತಿ ತತ್ತ್ವವನ್ನು ಒಳಗೊಂಡಿದ್ದು ಸೌಂದರ್ಯದ ಅತ್ಯಂತ ವಿಶಾಲವಾದ ನಿಕಷವನ್ನು ಪಡೆದುಕೊಂಡಿದೆ.

ನಿಸರ್ಗದ ಹರವು ಮತ್ತು ಅದರ ನಿತ್ಯ ಪರಿವರ್ತನಶೀಲ ವಾಸ್ತವಗಳು ಅನಂತ ಆಯಾಮವನ್ನೊಳಗೊಂಡಿವೆ. ನಿಗಮನ (Deduction) ಪ್ರಧಾನವಾದ ತರ್ಕವು ಸೃಷ್ಟಿಸುವ ಸವಕಳಿಯಾದ ಜಡವಾದಕ್ಕೆ ವಿರುದ್ಧವಾಗಿ ನಿಸರ್ಗದ ಅನಂತ ಸಾಧ್ಯತೆಗಳಲ್ಲಿ ಶ್ರೀಮಂತಿಕೆಯಿದೆ; ಜೀವ ಸಮೃದ್ಧಿಯಿದೆ. ಈ ಜೀವ ಶ್ರೀಮಂತಿಕೆಯನ್ನು ಅತಿಯಾದ ವಾದ ಅಥವಾ ವಿಶ್ಲೇಷಣೆಗಳ ಮೂಲಕ ಗ್ರಹಿಸಲಾಗದು. ಅದಕ್ಕೆ ಜೀವಂತಿಕೆಯ ಪರಸ್ಪರ ಕ್ರಿಯೆ-ಸಂವಾದದ ಮಾರ್ಗ ಅಗತ್ಯ. ಈ ರೀತಿಯ ಪ್ರಕ್ರಿಯೆ-ಸಂವಾದಗಳ ಮತ್ತು ಅದರಿಂದ ಪಡೆಯುವ ತಿಳಿವಳಿಕೆಯು ನಾವು ಬದುಕುವ ಸಮಾಜದ ಹುಡುಕಾಟ (Seekings of Society) ದ ನೆಲೆಯ ಮೇಲೆ ನಿರ್ಧಾರವಾಗುತ್ತದೆ.

'ಸಮಾಜದ ಹುಟುಕಾಟಗಳು' ಎಂಬ ನುಡಿಗಟ್ಟನ್ನು ಸಮಾಜವು ಸಾಮಾನ್ಯವಾಗಿ ಒಪ್ಪಿಕೊಳ್ಳುವ ಗುರಿಗಳು ಮತ್ತು ಅದನ್ನು ಸಾಧಿಸಲು ಬಳಸುವ ವಿಧಾನಗಳು ಎಂದು ಅರ್ಥಮಾಡಿಕೊಳ್ಳಬೇಕು. ಇದು ದೈನಂದಿನ ಬದುಕಿನಲ್ಲಿ ವ್ಯಕ್ತಿಗಳ ನೈತಿಕಮಟ್ಟ ಮತ್ತು ತತ್ತ್ವಗಳಿಗೆ ಸಂಬಂಧಿಸಿದೆ. ಅಂದರೆ ಇದರರ್ಥ ಒಂದು ಸಮಾಜದ ಹುಡುಕಾಟವೇನು ಎಂಬುದನ್ನು ಖಡಾಖಂಡಿತವಾಗಿ ಗುರುತಿಸಲು ಸಾಧ್ಯ ಎಂದಲ್ಲ. ಅಥವಾ ಪ್ರತಿನಿತ್ಯದ ಬದುಕಿನಲ್ಲಿ ಅನುಸರಿಸುವ ನೀತಿ ಮತ್ತು ತತ್ತ್ವಗಳಲ್ಲಿ ಯಾವುದೇ ವಿರೋಧಾಭಾಸ ಅಥವಾ ದ್ವಂದ್ವ ಇರುವುದೇ ಇಲ್ಲ ಎಂದೂ ಅಲ್ಲ. ಬದಲಿಗೆ ಸಮಾಜದ ಹುಡುಕಾಟ ಎಂಬ ಮಾತಿಗೆ ಸಾಮಾನ್ಯವಾಗಿ ಎಲ್ಲ ಸಮಾಜಗಳು ಕೆಲವೊಂದು ತಾತ್ತ್ವಿಕ ನೆಲೆಗಳ (Premise) ವಿಶಾಲ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತವೆ. ದೈನಂದಿನ ಬದುಕಿನಲ್ಲಿ ಜನರ ವರ್ತನೆಗಳು ಎಷ್ಟೇ ವಿಭಿನ್ನವಾಗಿದ್ದರೂ ರಾಜ್ಯದ ಕಾರ್ಯಭಾರಗಳು ಎಷ್ಟೇ ಚರ್ಚಾಸ್ಪದವಾಗಿದ್ದರೂ ಅವು ಈ ವಿಶಾಲ ಚೌಕಟ್ಟನ್ನು ಮೀರಿ ಹೋಗುವುದಿಲ್ಲ. ಉದಾಹರಣೆಗೆ ಆಧುನಿಕ ಸಮಾಜಗಳ ಹುಡುಕಾಟವಾದ ವೈಯಕ್ತಿಕ ಸ್ವಾತಂತ್ರ್ಯ ಮತ್ತು ನಿಸರ್ಗದ ಮೇಲೆ ಮಾನವನ ವಿಜಯ ಮತ್ತು ಪ್ರಭುತ್ವದ ಪರಿಕಲ್ಪನೆಗಳನ್ನು ನೋಡಬಹುದು: ಆದರೆ ಇಂಥ ಹುಡುಕಾಟದ ಗುರಿಗಳಿಲ್ಲದಿರುವ ಸಮಾಜಗಳೇ ಇಂದು ಇಲ್ಲ ಎನ್ನಲು ಸಾಧ್ಯವಿಲ್ಲ. ಉದಾಹರಣೆಗೆ ಬ್ರಿಟಿಷ್ ಆಳ್ವಿಕೆಯ ಪೂರ್ವದ ಭಾರತೀಯ ಸಮಾಜಕ್ಕೆ

ಇಂಥ ಗುರಿಗಳಿರಲಿಲ್ಲ. ಒಬ್ಬ ಪಾಣಿನಿ ಮತ್ತು ಒಬ್ಬ ಆರ್ಯಭಟನನ್ನು ಕೊಟ್ಟ ಸಮಾಜದ ಹುಡುಕಾಟ ಖಂಡಿತವಾಗಿಯೂ ಬೇರೆಯೇ ಆಗಿದ್ದಿರಬೇಕು. ಅದು ವಿಶ್ವದ ಅಖಂಡ ವ್ಯವಸ್ಥೆಯ ಜೊತೆ ಒಂದಾಗುವ ಹುಡುಕಾಟವಿರಬಹುದು ಅಥವಾ ಸಮಾನತಾ ಸಮಾಜದ ಹುಡುಕಾಟವಾಗಿರುವಂಥದ್ದು ಅಥವಾ ನಿಸರ್ಗದ ಲಯದೊಡನೆ ಅಥವಾ ಇನ್ನೇನೋ ಅತೀತದೊಡನೆ ಬದುಕಿನ ಸಾಮರಸ್ಯದ ಹುಡಕಾಟವಿರಬಹುದು.

ಇಂಥ ಹುಡುಕಾಟಗಳು ಮತ್ತು ಅವುಗಳೊಡನೆ ಹಾಜರಿರುವ ಸಾಮಾಜಿಕ ಮೌಲ್ಯಗಳು ನಿಸರ್ಗದ ಲಯದ ನಡುವೆ ಪರಸ್ಪರ ಅಂತರ್‌ಕ್ರಿಯೆ ನಡೆಯಲು ಸುಲಭನೆಲೆ ಒದಗಿಸುತ್ತವೆ. ನಿಸರ್ಗದ ವ್ಯಾಪ್ತಿಯನ್ನು ಮತ್ತು ಅದರಲ್ಲಿ ಅಂತರ್ಗತವಾಗಿರುವ ಲಯವನ್ನು ಗ್ರಹಿಸಲು ಜನ ಇಂಥ ಹುಡುಕಾಟ ಮತ್ತು ಮೌಲ್ಯಗಳ ಚೌಕಟ್ಟನ್ನು ಆಯ್ಕೆ ಮಾಡುತ್ತಾರೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ಈ ಅಂತರ್ ಕ್ರಿಯೆ ಮತ್ತು ಇದರ ಗ್ರಹಿಕೆಗೆ ಮಿತಿಯಿದ್ದರೂ ಕೂಡ ಈ ಮಿತಿಯ ನಿರ್ಮಿತಿಯಲ್ಲೇ ನಿಸರ್ಗದ ಅನಂತ ಆಯಾಮಗಳಿರುವ ಲಯವನ್ನು ಹಿಡಿಯುತ್ತದೆ.

ಈ ರೀತಿ ಗ್ರಹಿಸಿದ ಪರಿಮಿತ ಜ್ಞಾನವನ್ನೇ ವಿಜ್ಞಾನವೆಂದು ಕರೆಯುವುದರಿಂದ ವಿಜ್ಞಾನದ ಸ್ವರೂಪವನ್ನು ನಿರ್ಧರಿಸುವುದೇ ಸಮಾಜದ ಹುಡುಕಾಟ ಮತ್ತು ಅದರ ಸಹಾನುವರ್ತಿಯಾದ ಸಮಾಜದ ಮೌಲ್ಯಗಳು. ಹಾಗಾಗಿ ವಿಜ್ಞಾನದ ಮೇಲೆ ನೈತಿಕತೆಯು ಎರಡು ನಿರ್ದಿಷ್ಟ ವಿಧಾನಗಳಲ್ಲಿ ಪ್ರಭಾವ ಬೀರುತ್ತದೆ. ಮೊದಲನೆಯದು ನಿಸರ್ಗದ ಲಯವು ಒಂದು ನೈತಿಕ ತತ್ತ್ವವನ್ನೊಳಗೊಂಡಿದೆ. ಪ್ರಕೃತಿಯ ಈ ಅಂತರ್ಗತ ಸಾಮಾನ್ಯ ನೀತಿತತ್ತ್ವ ಮಾನವ ಸಂತತಿಯನ್ನು ಮೀರಿರುವಂಥದು. ಹಾಗಾಗಿ, ಇದು ಮಾನವನ ಪರಿಭಾಷೆಯಲ್ಲಿ ವಿವರಿಸಲಾಗದ ಒಂದು ನೈತಿಕತೆಯ ಪರಿಕಲ್ಪನೆಗೆ ರೂಪ ನೀಡುತ್ತದೆ. ಈ ನೈತಿಕತೆಯ ವಿಚಾರವು ನಮಗೆ ವಿಚಿತ್ರವೆಂದು ಕಂಡರೂ ಗಾಂಧಿಯವರ ಸತ್ಯದ ಪರಿಕಲ್ಪನೆಯ ನೇರ ಪರಿಣಾಮವಾಗಿದೆ.

ಹೀಗಾಗಿ, ಎರಡು ಸ್ಪಷ್ಟ ರೀತಿಗಳಲ್ಲಿ ವಿಜ್ಞಾನದ ಮೇಲೆ ನೈತಿಕತೆಯ ಸಂಬಂಧ, ಹಿಡಿತಗಳಿವೆ. ಮೊದಲನೆಯದಾಗಿ ಮಾನವ ಜನಾಂಗವನ್ನೂ ಮೀರಿದ, ಸಾಮಾನ್ಯವಾದ ನೈತಿಕ ತತ್ತ್ವಗಳು ಪ್ರಕೃತಿಯಲ್ಲಿ ಅಂತರ್ಗತವಾಗಿವೆ ಮತ್ತು ಇವು ಮನುಷ್ಯ ನೆಲೆಯಲ್ಲಿ ವ್ಯಾಖ್ಯಾನಿಸಲಾರದ, ನೈತಿಕ ಪರಿಕಲ್ಪನೆಗೆ ಒಂದು ರೂಪ ಕೊಡುತ್ತದೆ. ಈ ನೈತಿಕ ಪರಿಕಲ್ಪನೆಯು ವಿಶೇಷವಾಗಿ ಗಾಂಧಿಯ ಸತ್ಯದ ಪರಿಕಲ್ಪನೆಯ ನೇರ ಪರಿಣಾಮವಾಗಿದೆ. ಎರಡನೆಯದಾಗಿ ಸಮಾಜದ ತಾತ್ತ್ವಿಕ ಹುಡುಕಾಟಗಳು ಮತ್ತು ಅವುಗಳ ಸಹಾನುವರ್ತಿ ಮೌಲ್ಯಗಳು ವಿಜ್ಞಾನದ ಬಾಹ್ಯ ನಿಯಂತ್ರಕಗಳಾಗಿ ಕಾರ್ಯನಿರ್ವಹಿಸುತ್ತವೆ ಮತ್ತು ಅದೇ ವೇಳೆ ಅವು ವಿಜ್ಞಾನದ ಅಂತರಂಗಕ್ಕೆ ದಾರಿಯನ್ನು ಕಂಡುಕೊಳ್ಳುತ್ತವೆ. ಆದುದರಿಂದ ನಿಸರ್ಗದ ಲಯದೊಳಗೆ ಅಂತರ್ಗತವಾದ ಮೌಲ್ಯಗಳು ಮತ್ತು ಸಮಾಜದ ಹುಡುಕಾಟಗಳು ಮತ್ತು ಸಹಾನುವರ್ತಿ ಮೌಲ್ಯಗಳೆರಡೂ ಎಲ್ಲ ಕಾಲದಲ್ಲಿಯೂ ಎಲ್ಲಾ ವಿಜ್ಞಾನ ಶಾಖೆಯೊಳಗೆ ಎಂದೂ ಅಲ್ಲಗಳೆಯಲಾಗದ ಸಂಕೀರ್ಣ ಅಸ್ತಿತ್ವವನ್ನು ಪಡೆದಿವೆ.

**ಆಸುರಿ ವಿಜ್ಞಾನ**

ನಿಸರ್ಗದ ಲಯವನ್ನು ಉಲ್ಲಂಘಿಸುವ ವಿಜ್ಞಾನಗಳೆಲ್ಲ ಆಸುರಿ ವಿಜ್ಞಾನಗಳು. ಇವು ಮಾನವನ ಉದ್ಯಮಶೀಲ ಬದುಕನ್ನು ಪ್ರಮುಖವಾಗಿ ನಿಯಂತ್ರಿಸುವ ಅಹಿಂಸೆಯನ್ನು ನಿರಾಕರಿಸುತ್ತವೆ. ಈ ರೀತಿ ಅಹಿಂಸೆಯ ಹಳಿತಪ್ಪಿಸುವುದು ಮತ್ತು ನಿಸರ್ಗದ ಲಯವನ್ನು ಭಂಗಪಡಿಸುವುದು ನಿಜಕ್ಕೂ ಸತ್ಯದ ಉಲ್ಲಂಘನೆಗೆ ಸಮ. ಈ ಅರ್ಥದಲ್ಲಿ ಆಧುನಿಕ ವಿಜ್ಞಾನವು ಆಸುರಿ ಹಾಗೂ ಸ್ವಾಭಾವಿಕವಾಗಿಯೇ ಹುಸಿಯಾದದ್ದು.

ಆಧುನಿಕ ವಿಜ್ಞಾನವು ಆಸುರಿ ಎಂಬುದನ್ನು ಎರಡು ನಿರ್ದಿಷ್ಟ ವಿಧಾನಗಳಲ್ಲಿ ತಿಳಿಯಬಹುದು. ಮೊದಲನೆಯದಾಗಿ ಆಧುನಿಕ ವಿಜ್ಞಾನವು ವಸ್ತುಗಳ ಕಾರ್ಯ ಪ್ರಮಾಣಗಳಲ್ಲಿ ಮತ್ತು ನಿಸರ್ಗದ ಪ್ರಕ್ರಿಯೆಗಳಲ್ಲಿ ನೈತಿಕತೆಗೆ ಅವಕಾಶವನ್ನು ನಿರಾಕರಿಸುವ ತತ್ತ್ವದ ಮೇಲೆ ನಿಂತಿದೆ. ಎರಡನೆಯದಾಗಿ ವಿಜ್ಞಾನದ ತವರಾದ ಆಧುನಿಕ ಯೂರೋಪಿಯನ್ ಸಮಾಜದಿಂದ ಸೃಷ್ಟಿಯಾಗುವ ಜ್ಞಾನವು ನಿಸರ್ಗದ ಲಯಗಳನ್ನು ಛಿದ್ರಗೊಳಿಸುವಂಥ ಮತ್ತು ಪ್ರಕೃತಿ ಲಯವನ್ನು ಭಂಗಗೊಳಿಸುವ ಕಾರ್ಯ ವಸ್ತುಗಳ ಪ್ರಮಾಣ ಮತ್ತು ಪ್ರಕ್ರಿಯೆಗಳ ಸಂಗತಿಗೆ ಮತ್ತು ಅವುಗಳಿಂದ ಪ್ರಕಟಗೊಳ್ಳುವ ಜ್ಞಾನದ ತುಣುಕುಗಳನ್ನು ಮಾತ್ರ ಗುರುತಿಸುವಂತೆ ಮಾನವರನ್ನು ರೂಪಿಸುತ್ತದೆ. ಅವುಗಳನ್ನೀಗ ಒಂದೊಂದಾಗಿ ಪರಿಶೀಲಿಸೋಣ.

ಆಧುನಿಕ ಯೂರೋಪಿಯನ್ ಅಂಟಾಲಜಿ (ontology) ಅಥವಾ ಜ್ಞಾನಸ್ವರೂಪದ ಬಗೆಗಿನ ತತ್ತ್ವಶಾಸ್ತ್ರವು ನೂರಾರು ವರ್ಷ ಆ ನಿಟ್ಟಿನಲ್ಲಿ ಮಾಡಿರುವ ಸುದೀರ್ಘ ಚರ್ಚೆಯ ಫಲಶ್ರುತಿ. ಕಾರ್ಟಿಸಿಯನ್ ಅಂಟಾಲಜಿಯು, ವೈಚಾರಿಕವಾಗಿದ್ದರೂ ದೇವರ ಕಲ್ಪನೆಯಿಂದ ಅದಕ್ಕೆ ಬಿಡಿಸಿಕೊಳ್ಳಲು ಸಾಧ್ಯವಾಗದಿರುವ ಸಂಗತಿ ನಮಗೆ ಗೊತ್ತಿದೆ. ವಾಸ್ತವ (fact) ಮತ್ತು ಮೌಲ್ಯ (value) ಇವೆರಡರ ವಲಯವನ್ನು ನಿರ್ದಿಷ್ಟವಾಗಿ ಬೇರ್ಪಡಿಸುವ ಮೂಲಕ ಕ್ಯಾಂಟ್‌ನ ತತ್ತ್ವಜ್ಞಾನ ಅವುಗಳ ನಡುವಿನ ಸಂಬಂಧಗಳ ಸಂಕೀರ್ಣ ಸಮಸ್ಯೆಯನ್ನು ಬಿಡಿಸಿತು. ಮಾರ್ಕ್ಸ್‌ಗೆ ಮುನ್ನ ಈ ಸಂಬಂಧವನ್ನು ಎನ್‌ಲೈಟನ್‌ಮೆಂಟ್ (enlightenment–ಜ್ಞಾನೋದಯ) ಪಂಥವು ವಸ್ತು (matter)ವಿನ ಪರ ನಿರ್ಣಯಿಸಿದರೆ, ಹೆಗೆಲ್ ಅದನ್ನು ಐಡಿಯಾ ಅಥವಾ ವಿಚಾರ (idea) ದ ಪರ ನಿರ್ಣಯಿಸಿದ. ಮಾರ್ಕ್ಸ್ ಇದನ್ನು ವಸ್ತುವಾದಿ–ಆದರ್ಶವಾದಿ ನಡುವಿನ ವಿವಾದವನ್ನಾಗಿ ಗ್ರಹಿಸಿದ. ಅಲ್ಲದೆ ಆತ ಈ ಎರಡೂ ನಿಲುವುಗಳನ್ನು ಒಗ್ಗೂಡಿಸಿ ಪರಿಹಾರವೊಂದನ್ನು ಕಂಡುಹಿಡಿಯಲು ಯತ್ನಿಸಿದ. ಆದರೂ ಮಾರ್ಕ್ಸ್ ಈ ನಿಲುವನ್ನು 'ವೈಜ್ಞಾನಿಕ' ಎಂದು ಕರೆದ. ಆದರೆ ಈ ಸಮಸ್ಯೆ ಬಗೆಗಿನ ಇಂದಿನ ನಿಲುವು ಮಾರ್ಕ್ಸ್‌ನ ನಿಲುವಿನ ಕಡೆಗೂ ಇಲ್ಲ; ಕ್ಯಾಂಟ್‌ನ ನಿಲುವಿನ ಕಡೆಗೂ ಇಲ್ಲ. ಇವರಿಬ್ಬರ ನಡುವಿನ ಮಧ್ಯಮಾರ್ಗವನ್ನು ಅನುಸರಿಸಿದಂತೆ ಕಾಣುತ್ತದೆ. ಈ ವಾದವನ್ನು ಈ ರೀತಿ ಸಂಕ್ಷಿಪ್ತಗೊಳಿಸಬಹುದು. ವಸ್ತುವಿಗೆ ಸ್ವತಂತ್ರವಾದ ಅಸ್ತಿತ್ವವಿದೆ; ಮತ್ತು ಅದನ್ನು ಒಂದು ಐಡಿಯಾ (Idea) ವಾಗಿ ಸಂಕುಚಿತಗೊಳಿಸಲು ಸಾಧ್ಯವಿಲ್ಲ. ಆದರೆ ಈ ಅಭಿಪ್ರಾಯವು ಐಡಿಯಾಕ್ಕೆ ಅನ್ವಯವಾಗದು.

ಅದರ ಸ್ವಾತಂತ್ರ್ಯ ಮತ್ತು ವಸ್ತುವಾಗಿ ಸಂಕುಚಿತಗೊಳ್ಳುವ ಕ್ರಿಯೆ ನಿಜಕ್ಕೂ ಪ್ರಶ್ನಾರ್ಹವಾಗಿದೆ. ಈ ಆಂಟಾಲಜಿಯಲ್ಲಿ ಮಾನವೀಯ ಮೌಲ್ಯ ಅಥವಾ ಐಡಿಯಾಸ್‌ಗಳ ಸೋಂಕಿಲ್ಲದ, ಅವುಗಳಿಂದ ಕಲುಷಿತಗೊಳ್ಳದ, ಕೇವಲ ವಸ್ತು ವಿಷಯ ಮತ್ತು ಪ್ರಕ್ರಿಯೆಗಳು ನಿರ್ದಿಷ್ಟ ಪ್ರಮಾಣದಲ್ಲಿ ಸೇರಿ ನಿರ್ಮಾಣಗೊಂಡ ಸ್ವಾಭಾವಿಕ ಪ್ರಪಂಚವೆಂಬ ಬಾಹ್ಯ ಜಗತ್ತೊಂದಿದೆ. ಈ ಹಣೆಪಟ್ಟಿಯ ಆಧುನಿಕ ಯುರೋಪಿಯನ್ ಅಂಟಾಲಜಿಗೆ, ನೈತಿಕ ಸ್ವಭಾವದ ಕಲ್ಪನೆ ಸಂಪೂರ್ಣ ಅಪರಿಚಿತ. ಈ ಆಂಟಾಲಜಿಯು ತನ್ನ ಸಿದ್ಧಾಂತದಲ್ಲಿ ವಿಜ್ಞಾನವನ್ನು ಮೌಲ್ಯ ನಿರ್ಲಿಪ್ತವನ್ನಾಗಿ ಮಾಡಿದೆ. ನಮ್ಮಲ್ಲಿ ವಿಜ್ಞಾನದ ಮೌಲ್ಯ ನಿರ್ಲಿಪ್ತತೆ ಎನ್ನುವುದು ವಸ್ತುಶಃ ಸುಳ್ಳು ಸಿದ್ಧಾಂತವಾಗಿದೆ.

ಎರಡನೆ ಅಂಶವು ಆಧುನಿಕ ಯುರೋಪಿಯನ್ ಸಮಾಜದ ಹುಡುಕಾಟಗಳು ಮತ್ತು ವಿಜ್ಞಾನದ ಮೇಲೆ ಅದು ಬೀರುವ ಪರಿಣಾಮಗಳಿಗೆ ಸಂಬಂಧಿಸಿದುದಾಗಿದೆ. ಈ ಸಮಾಜದ ಹುಡುಕಾಟಗಳೆಲ್ಲವೂ ಉಪಯುಕ್ತತೆ, ಸ್ವಾರ್ಥ, ಸಾಮ್ರಾಜ್ಯ ವಿಸ್ತಾರದ ದುರಾಸೆ ಮತ್ತು ಸಂಪತ್ತಿನ ಮೋಹವನ್ನಾಧರಿಸಿವೆ. ಇಂಥ ಹುಡುಕಾಟಗಳೇ ಗಾಂಧಿಗೆ ಆಧುನಿಕ ವಿಜ್ಞಾನವನ್ನು ಪೈಶಾಚಿಕ (Satanic) ಎಂದು ಕರೆಯುವಂತೆ ಪ್ರೇರೇಪಿಸಿತು. ಈ ರೀತಿಯ ಹುಡುಕಾಟವು ಮನುಷ್ಯನನ್ನು ಪ್ರಕೃತಿಯಲ್ಲಿ ಅಂತರ್ಗತವಾಗಿರುವ ಕೆಲವು ನಿರ್ದಿಷ್ಟ ಸಂಗತಿಗಳನ್ನು ಮಾತ್ರ ಗ್ರಹಿಸುವಂತೆ ಪೂರ್ವಾಗ್ರಹ ಪೀಡಿತನನ್ನಾಗಿ ಮಾಡುತ್ತದೆ. ಇದು ನಿಸರ್ಗವನ್ನು ಉಲ್ಲಂಘಿಸುವ ವಿಜ್ಞಾನದ ಬೆಳವಣಿಗೆಗಳತ್ತ ಕೊಂಡೊಯ್ಯುತ್ತದೆ. ಈ ವಾದವು ನ್ಯೂಟನ್ನಿನ ಚಲನ ನಿಯಮಗಳು ಸುಳ್ಳೆಂದು ಸಾಬೀತುಪಡಿಸುವ ವಾದವಲ್ಲ. ನ್ಯಾಯ–ವೈಶೇಷಿಕ ದರ್ಶನದಲ್ಲಿ ಇಂಥ ನಿಯಮಗಳಿವೆ. ಆದರೆ ನ್ಯೂಟನ್‌ನ ನಿಯಮಗಳು ಕಾಲಾನಂತರದಲ್ಲಿ ಜಗತ್ತಿನ ಸಕಲ ವಸ್ತುವನ್ನು ಯಾಂತ್ರಿಕವಾಗಿ ವಿವರಿಸುವ ಕಾರ್ಯಕ್ರಮಗಳಿಗೆ ಆಧಾರವಾದವು. ವೈಶೇಷಿಕ ಸಿದ್ಧಾಂತವು ಹಾಗೆ ಮಾಡುವುದಿಲ್ಲ.

ನಿಸರ್ಗದ ಲಯವನ್ನು ಉಲ್ಲಂಘಿಸುವ ಎರಡು ಸ್ಪಷ್ಟ ಮಾದರಿ ಉದಾಹರಣೆಗಳೆಂದರೆ ಗನ್ ಪೌಡರ್ ಮತ್ತು ಅದರ ಕೊನೆಯ ರೂಪವಾದ ಪರಮಾಣು ಬಾಂಬು. ಈ ಪ್ರವೃತ್ತಿ ಆಧುನಿಕ ವಿಜ್ಞಾನವನ್ನು ಆಸುರಿಯಾಗಿಸಿದೆ. ಕೈಗಾರಿಕಾ ಕಚ್ಚಾವಸ್ತುಗಳಿಗಾಗಿ ದೊಡ್ಡ ಮಟ್ಟದಲ್ಲಿ ಅರಣ್ಯಗಳ ನಾಶ, ಕಲ್ಲಿದ್ದಲು, ಕಲ್ಲೆಣ್ಣೆಗಾಗಿ ಆಳದವರೆಗೆ ಭೂಗರ್ಭ ಅಗೆತ, ದೊಡ್ಡ ಅಣೆಕಟ್ಟು ನಿರ್ಮಿಸಿ ನದಿಯ ಸ್ವಾಭಾವಿಕ ಹರಿಯುವಿಕೆಯನ್ನು ತಡೆಯಲು ಭಾರೀ ಅಣೆಕಟ್ಟುಗಳ ನಿರ್ಮಾಣ ಮುಂತಾದವುಗಳು ಈ ಆಸುರಿ ವಿಜ್ಞಾನ ಎಂಥ ಸಾಧ್ಯತೆಗಳಿಗೆಲ್ಲ ದಾರಿ ಮಾಡಿಕೊಡಬಲ್ಲದೆಂಬುದಕ್ಕೆ ಕೆಲವು ಗಮನ ಸೆಳೆಯುವ ಉದಾಹರಣೆಗಳಷ್ಟೆ. ವಿಜ್ಞಾನವು ಅನಂತ ಪ್ರಾಕೃತಿಕ ವಿದ್ಯಮಾನಗಳ ಪೈಕಿ, ನಿಸರ್ಗದ ವಿರುದ್ಧವೇ ನಿಸರ್ಗವನ್ನು ತಿರುಗಿಸಿ, ನಾಶ ಮಾಡಬಲ್ಲಂಥ ನೈಸರ್ಗಿಕ ಪ್ರಕ್ರಿಯೆಗಳನ್ನು ಮಾತ್ರ ಗುರುತಿಸುವಲ್ಲಿ ಯಶಸ್ಸನ್ನು ಸಾಧಿಸಿದೆ. ಭೂಕಂಪ ಮತ್ತು ಜ್ವಾಲಾಮುಖಿಗಳು ಪ್ರಾಕೃತಿಕ ವಿಪತ್ತುಗಳಾದರೂ ಅವುಗಳ ಕಾರ್ಯ ಭಾರೀ ನೈಸರ್ಗಿಕ ವಿನಾಶವನ್ನು ತಡೆಯುವುದೇ ಆಗಿದೆ. ಅವು ನಿಸರ್ಗದ ಲಯವು ತೀವ್ರವಾಗಿ

ಭಂಗಗೊಳ್ಳದಂತೆ ಕಾಪಾಡುವ ಉಪಾಯಗಳು. ಆದರೆ ಆಧುನಿಕ ವಿಜ್ಞಾನದ ಸಾಮಗ್ರಿಗಳು, ಅದರ ಫಲಿತಗಳು ಇದಕ್ಕೆ ವ್ಯತಿರಿಕ್ತವಾದ್ದನ್ನೇ ಮಾಡುತ್ತವೆ. ಭೂಗರ್ಭದಲ್ಲಿರುವ ತೈಲ ಇಂಧನವನ್ನು ಸತತವಾಗಿ ಉಪಯೋಗಿಸುವುದು, ಅಸಾಧಾರಣ ವೇಗದಲ್ಲಿ ಸಂಚರಿಸುವುದು, ಕೃಷಿಯಲ್ಲಿ ರಾಸಾಯನಿಕಗಳನ್ನು ಬಳಸುವುದು ಇವೆಲ್ಲವೂ ಖಂಡಿತವಾಗಿಯೂ ವಿನಾಶಕ್ಕೆ ದಾರಿ; ಮತ್ತು ನಿಸರ್ಗದ ಲಯವನ್ನು ಭಂಗಗೊಳಿಸುವ ಕಾರ್ಯ.

ಆದುದರಿಂದ ಆಧುನಿಕ ಯೂರೋಪಿಯನ್ ಸಮಾಜದ ಹುಡುಕಾಟವು ನಿಲ್ಲಿಸಲು ಅಸಾಧ್ಯವೆನಿಸುವ ರೀತಿಯಲ್ಲಿ ಎಡೆಬಿಡದೆ ನಿಸರ್ಗದ ಲಯವನ್ನು ಭಂಗಪಡಿಸುವ ವಿಜ್ಞಾನಕ್ಕೆ ಜನ್ಮ ನೀಡಿ ಅದನ್ನು ಗಟ್ಟಿಗೊಳಿಸಿದೆ. ಒಂದು ಅನೈತಿಕ ಅಂಟಾಲಜಿ ಮತ್ತು ಸಮಾಜದ ನೀತಿ ನಿರ್ಲಿಪ್ತವಾದ ಮತ್ತು ಖಂಡನೆಗರ್ಹವಾದ ಗುರಿಗಳು ಆಧುನಿಕ ವಿಜ್ಞಾನವನ್ನು ಮಾನವ ಚರಿತ್ರೆಯಲ್ಲೇ ಎಂದೂ ಇರದ ರೀತಿಯಲ್ಲಿ ಆಸುರಿಯಾಗಿ ಮಾಡಿದೆ.

**ವಿಜ್ಞಾನ ಮತ್ತು ಆತ್ಮೋತ್ಸರ್ಗ (Self-transcedence)**

ಸತ್ಯವನ್ನು ಹುಡುಕುವ ಮತ್ತು ಅಹಿಂಸಾ ತತ್ತ್ವದಿಂದ ರೂಪುಗೊಂಡ ಸಮಾಜಗಳು ವಾಸ್ತವವನ್ನು ಅದರ ಎಲ್ಲಾ ಸಮೃದ್ಧಿಯೊಡನೆ ಗ್ರಹಿಸುವಂತೆ ಮಾನವನನ್ನು ಅಣಿಗೊಳಿಸುತ್ತವೆ. ಅಂಥ ಸಮಾಜಗಳು ಮಾತ್ರ ನಿಸರ್ಗದಲ್ಲಿ ಅಂತರ್ಗತವಾಗಿರುವ ನೀತಿತತ್ತ್ವವನ್ನು ಗ್ರಹಿಸಲು ಮಾನವರಿಗೆ ನೆರವಾಗುತ್ತವೆ. ಈ ರೀತಿ ರೂಪುಗೊಂಡ ವಿಜ್ಞಾನಗಳು ಎರಡು ಬಗೆಯ ಫಲಿತಾಂಶವನ್ನೊದಗಿಸುತ್ತವೆ. ಒಂದು, ನಿಸರ್ಗದ ಲಯವನ್ನು ಬಲಪಡಿಸಿ, ಅದನ್ನು ಉತ್ತಮಗೊಳಿಸುವ ಅರಿವನ್ನು ಇವು ಸೃಷ್ಟಿಸುತ್ತಿವೆ; ಎರಡು, ಆತ್ಮೋತ್ಸರ್ಗದ ಲಕ್ಷಣವನ್ನೊಳಗೊಂಡ ಮಾನವ ಚಟುವಟಿಕೆಗಳನ್ನು ಅವು ಉತ್ತೇಜಿಸುತ್ತವೆ. ವಾಸ್ತವದಲ್ಲಿ ಈ ಎರಡೂ ಪ್ರಕ್ರಿಯೆಗಳು ಒಂದನ್ನೊಂದು ಬೇರ್ಪಡಿಸ ಲಾಗದವುಗಳು. ಇದನ್ನು ವಿವರವಾಗಿ ತಿಳಿಯಲು ವಿಜ್ಞಾನದ ಕೆಲವು ಕ್ಷೇತ್ರಗಳನ್ನು ಪರಿಶೀಲಿಸೋಣ.

ಲೋಹ ಮತ್ತು ವಸ್ತು ಕುರಿತ ವಿಜ್ಞಾನವನ್ನೇ ತೆಗೆದುಕೊಳ್ಳೋಣ. ಇಂದು ಈ ಕ್ಷೇತ್ರವನ್ನು ಲೋಹ ವಿಜ್ಞಾನ ಮತ್ತು ಅದರ ಸಂಬಂಧೀ ವಿಜ್ಞಾನ ಶಾಸ್ತ್ರಗಳು ಒಳಗೊಂಡಿವೆ. ಇದರಲ್ಲಿ ಪ್ರಮುಖವಾದ ಸಾಂಗತ್ಯ ಎಂದರೆ ಕಬ್ಬಿಣಕ್ಕೆ ಸಂಬಂಧಪಟ್ಟದ್ದು. ಇಂದು ಕಬ್ಬಿಣ ಮತ್ತು ಕಲ್ಲಿದ್ದಲಿನ ಅಪಾರ ನಿಕ್ಷೇಪಗಳನ್ನು ಸೂರೆ ಮಾಡಿ ಅವುಗಳನ್ನು ಲೋಹ ಕರಗಿಸುವ ಬೃಹತ್ ಕುಲುಮೆಗಳಿಗೆ ಸಾಗಿಸುತ್ತಾರೆ. ಇದು ಭೂಮಾತೆ ಮತ್ತು ಪರಿಸರದ ಮೇಲೆ ಎಸಗುವ ಘೋರ ಅತ್ಯಾಚಾರ. ಹಿಂದೆ ಭೂಮಿಯ ಮೇಲ್ಮೈನಲ್ಲಿ ಎಲ್ಲೆಲ್ಲಿಯೂ ಸಿಗುತ್ತಿದ್ದ ಕಡಿಮೆ ದರ್ಜೆಯ ಕಬ್ಬಿಣದ ಅದಿರನ್ನು ಸ್ಥಳೀಯವಾಗಿ ಲಭ್ಯವಿರುವ ಕಟ್ಟಿಗೆ ಮತ್ತು ಕಲ್ಲಿದ್ದಲಿನ ಉರುವಲನ್ನು ಬಳಸಿ ಸಣ್ಣ ಕುಲುಮೆಗಳಲ್ಲಿ ಕರಗಿಸಲಾಗುತ್ತಿತ್ತು. ನಮ್ಮ ಅನುಭವದಂತೆ ಅಲ್ಲಿ ಉತ್ಪತ್ತಿಯಾಗುತ್ತಿದ್ದ ಕಬ್ಬಿಣ ಈಗಿನ

ಆಧುನಿಕ ವಿಧಾನದಲ್ಲಿ ಉತ್ಪಾದಿಸುವ ಕಬ್ಬಿಣಕ್ಕಿಂತಲೂ ಅನೇಕ ವಿಧದಲ್ಲಿ ಶ್ರೇಷ್ಠ ದರ್ಜೆಯದಾಗಿತ್ತು. ಅಂದರೆ ನಿಸರ್ಗದ ಲಯಗಳನ್ನು ಉಲ್ಲಂಘಿಸದೆಯೇ ಉತ್ಕೃಷ್ಟ ದರ್ಜೆಯ ಕಬ್ಬಿಣವನ್ನು ಉತ್ಪಾದಿಸಲು ಸಾಧ್ಯ. ಆ ಜ್ಞಾನ ಖಂಡಿತವಾಗಿಯೂ ಈಗಿನ ವಿಜ್ಞಾನಕ್ಕಿಂತಲೂ ಬಹು ಸೂಕ್ಷ್ಮ ಮತ್ತು ಶ್ರೇಷ್ಠವಾದುದಾಗಿರಬೇಕು. ಆದರೆ ಅದು ಅಂದಿನ ಸಮಾಜದ ಅಗತ್ಯಗಳಿಗೆ ತಕ್ಕಂತೆ ರೂಪುಗೊಂಡು ಕಾರ್ಯನಿರ್ವಹಿಸುತ್ತಿತ್ತೇ ಹೊರತು ತನ್ನ ಹಿರಿಮೆಯನ್ನು ತಾನೇ ಹೇಳಿಕೊಳ್ಳುತ್ತಿರಲಿಲ್ಲ. ನಮ್ಮ ಇಂದಿನ ವಿಜ್ಞಾನಿಗಳಂತೆ ಅಂದು ಈ ವಿಧಾನವನ್ನು ರೂಪಿಸಿದವರು ತಾವು ಶ್ರೇಷ್ಠ ತಂತ್ರಜ್ಞಾನಿಗಳೆಂದು ತಿಳಿದುಕೊಂಡಿರಲಿಲ್ಲ. ಮಾತ್ರವಲ್ಲ ! ಅವರು ತಮ್ಮ ಕೆಲಸ ತಮ್ಮ ಸ್ವ-ಧರ್ಮದ ಒಂದು ಭಾಗವೆಂದು ತಿಳಿದಿದ್ದರು.

ಕೃಷಿಯ ಉದಾಹರಣೆಯನ್ನು ತೆಗೆದುಕೊಳ್ಳಿ. ಆಧುನಿಕ ಕೃಷಿ ವಿಜ್ಞಾನವು ಮಣ್ಣು, ಬೀಜ, ಗೊಬ್ಬರ, ನೀರು, ವಾಯು ಮುಂತಾಗಿ ಕೃಷಿಗೆ ಸಂಬಂಧಿಸಿದ ಸಕಲವನ್ನೂ ಕೇವಲ ರಾಸಾಯನಿಕ ಸಂಯೋಜನೆಯೆಂಬಂತೆ ಕಾಣುತ್ತದೆ ಮತ್ತು ತಾಂತ್ರಿಕವಾಗಿ ಕೇವಲ ಇಳುವರಿಯ ಪ್ರಮಾಣವನ್ನು ಆರ್ಥಿಕ ಲಾಭದ ದೃಷ್ಟಿಯಿಂದ ಪರಿಗ್ರಹಿಸುತ್ತದೆ. ಆದರೆ, ಇತ್ತೀಚಿನವರೆಗೂ ಕೃಷಿಯನ್ನು ನೋಡುತ್ತಿದ್ದ ದೃಷ್ಟಿಕೋನ ಇದಕ್ಕೆ ಸಂಪೂರ್ಣ ಭಿನ್ನವಾಗಿತ್ತು ಎಂಬುದಾಗಿ ಎಲ್ಲರಿಗೂ ತಿಳಿದಿರುವ ವಿಚಾರ. ಕೃಷಿಯೆಂಬುದು ಜನರ ಬದುಕಿನ ಕ್ರಮವಾಗಿತ್ತು. ಕೃಷಿಯನ್ನು ಚೆನ್ನಾಗಿ ಮಾಡುವ ಕಲೆ ಅವರನ್ನು ಚೆನ್ನಾದ ಮನುಷ್ಯರನ್ನಾಗಿ ಮಾಡುತ್ತಿತ್ತು. ಕೃಷಿಯು ನಿಸರ್ಗದ ಅಂತರ್ಲಯವನ್ನು ಸೂಕ್ತವಾಗಿ ಗ್ರಹಿಸಿ ಅದನ್ನು ಸಂವರ್ಧನೆಗೊಳಿಸುವ ಕಾಯಕವಾಗಿತ್ತು. ಆ ಕಾಲದಲ್ಲಿ ಕೃಷಿ ವಿಜ್ಞಾನಕ್ಕೆ ಬೇರೆಯೇ ಆಯಾಮವಿತ್ತು. ಅದು ಪ್ರಕೃತಿಯ ಪ್ರಮಾಣ ಮತ್ತು ಪ್ರಕ್ರಿಯೆಗಳನ್ನು ಒಂದನ್ನೊಂದು ಪ್ರತ್ಯೇಕಿಸಲಾಗದಂತಹ ಸಮಗ್ರವಾದ ತುಂಬು ಚಟುವಟಿಕೆಯಾಗಿ ಗ್ರಹಿಸಲ್ಪಟ್ಟಿತ್ತೇ ವಿನಾ ಕೇವಲ ರಾಸಾಯನಿಕ ಕ್ರಿಯೆಯೆಂದು ಭಾವಿಸಲ್ಪಟ್ಟಿರಲಿಲ್ಲ. ಅದು ವ್ಯಕ್ತವಾಗಿ ನೀತಿ ಸಂಹಿತೆಯ ಜೊತೆಗೆ ಕೃಷಿಕನ ಧರ್ಮವನ್ನೂ ಒಳಗೊಂಡಿತ್ತು.

ಇದೇ ವಿಚಾರವನ್ನು ವೈದ್ಯ ವಿಜ್ಞಾನವೂ ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಅಲೋಪತಿ ವಿಜ್ಞಾನವು ಮಾನವನ ದೇಹವನ್ನು ಕೇವಲ ವಸ್ತು ಮತ್ತು ರಾಸಾಯನಿಕ ಕ್ರಿಯೆಗಳ ಸಂಕೀರ್ಣ ವ್ಯವಸ್ಥೆಯೇ ಅಲ್ಲದೆ ಮತ್ತೇನಲ್ಲ ಎಂದು ನೋಡುತ್ತದೆ. ಆದುದರಿಂದ ಅದು ದೇಹಚ್ಛೇದನೆಯ ಪರಿಕಲ್ಪನೆಯನ್ನು ವಿಶೇಷವಾಗಿ ಆಧರಿಸಿ ನಿಂತಿದೆ. ಆದರೆ ಆಯುರ್ವೇದ ಪದ್ಧತಿ ಇದಕ್ಕಿಂತ ತೀರಾ ಭಿನ್ನ. ಅದು ದೇಹಕ್ಕೆ ತಗಲುವ ರೋಗ ಹೊರಗಿನ ದಾಳಿಯ ಫಲವೆಂದು ಪರಿಭಾವಿಸುವುದಿಲ್ಲ ; ಬದಲು, ನಿಸರ್ಗದ ಒಂದು ಭಾಗವಾದ ದೇಹದ ಸ್ವಾಭಾವಿಕ ಕ್ರಿಯೆಯು ಹಾದಿ ತಪ್ಪಿದರೆ ಅದು ರೋಗಬಾಧೆಗೆ ಈಡಾಗುತ್ತದೆಂದು ತರ್ಕಿಸುತ್ತದೆ. ಆಯುರ್ವೇದ ವೈದ್ಯ ವಿಜ್ಞಾನವು ಮಾನವನ ದೇಹವು ನಿಸರ್ಗದ ವಿಸ್ತೃತರೂಪವೆಂದು ಕಾಣುತ್ತಾ ಸ್ತ್ರೀ ಪುರುಷರು ನಿಸರ್ಗದ ಲಯಗಳೊಡನೆ ಒಂದಾಗುವ ಆ ಲಯವನ್ನು ಸಂವರ್ಧಿಸುವ ವಿಧಾನಗಳನ್ನು ತಿಳಿಸುತ್ತದೆ. ಸ್ವಯಂ ಮೀರುವಿಕೆಗೆ ಸೂಕ್ತ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ.

ವಾಸ್ತುಶಾಸ್ತ್ರ, ಜವಳಿ, ಚರ್ಮೋದ್ಯಮ, ಕಾಗದ ತಯಾರಿಕೆ ಮತ್ತು ಖಗೋಳ ವಿಜ್ಞಾನ ಹಾಗೂ ತರ್ಕಶಾಸ್ತ್ರದಂಥ ಅಮೂರ್ತ ವಿಜ್ಞಾನ ಹೀಗೆ ಯಾವುದೇ ಜ್ಞಾನಶಾಖೆಯನ್ನು ತೆಗೆದುಕೊಂಡರೂ ಅಲ್ಲಿ ಮೇಲಿನ ತತ್ತ್ವಗಳಿಗೆ, ಅಂದರೆ, ನಿಸರ್ಗದ ಲಯಗಳಿಗೆ ಅನುಗುಣವಾದ ದೃಷ್ಟಾಂತಗಳು ದೊರೆಯುತ್ತವೆ.

ಗಾಂಧಿಯವರ ಅಭಿಪ್ರಾಯದ ಪ್ರಕಾರ ಹಿಂದಿನ ಭಾರತೀಯ ಸಮಾಜವು ಬೆಳೆಸಿದ ವಿಜ್ಞಾನರಾಶಿಯು ನೈಜವೂ, ವಾಸ್ತವವೂ ಆಗುವ ಅರ್ಹತೆಯನ್ನು ಪಡೆದಿತ್ತು. ಮಾತ್ರವಲ್ಲ, ನೈಜವೂ ವಾಸ್ತವವೂ ಆಗಿತ್ತು. ಕಾರಣ, ಆಯಾಯಾ ಕ್ಷೇತ್ರದಲ್ಲಿ ವೃತ್ತಿ ನಿರತರಿಗೆ ತಮ್ಮ ತಮ್ಮ ವೃತ್ತಿಕ್ರಿಯೆಯಲ್ಲೇ ಪ್ರಕೃತಿಯ ಲಯವನ್ನು ವೃದ್ಧಿಸುವ ಮತ್ತು ಆ ಪ್ರಕ್ರಿಯೆಯಲ್ಲೇ ತಾವು ಸ್ವಯಂ – ಮೀರುವಿಕೆಯ ಆನಂದವನ್ನು ಅನುಭವಿಸುವ ಅವಕಾಶವನ್ನು ಒದಗಿಸುತ್ತಿತ್ತು.

ನಮ್ಮ ಸಮಾಜದ ಹುಡುಕಾಟಗಳೂ ಇಂದು ಬದಲಾಗಿವೆ. ಅವು ಹೆಚ್ಚು ಕಡಿಮೆ ಯೂರೋಪಿಯನ್ ಸಮಾಜದ ಹುಡುಕಾಟವನ್ನೇ ಹೋಲುವ ಮೂಲಕ ನಿಸರ್ಗದ ಜೊತೆ ನಮ್ಮ ಸಂಬಂಧಗಳನ್ನು ನಿರೂಪಿಸುವಲ್ಲಿ ಆಧುನಿಕ ವಿಜ್ಞಾನವೇ ನಮಗೂ ಮಾದರಿಯಾಗಿದೆ. ಆದರೂ ಇದು ತೋರಿಕೆಯ ಮಟ್ಟದಲ್ಲಷ್ಟೇ ಇದ್ದ ಹಾಗೆ ಕಾಣುತ್ತದೆ. ಅಥವಾ ಸ್ವಲ್ಪ ರಕ್ತವನ್ನು ಚೆಲ್ಲುವ ಮಟ್ಟಿಗೆ ಸ್ವಲ್ಪ ಆಳಕ್ಕೆ ಇಳಿದಿರಬಹುದು. ನಾವು ನಿಧಾನವಾಗಿ ವಸಾಹತುಶಾಹಿ ವಿಸ್ಮೃತಿಯ ಗುಂಗಿನಿಂದ ಹೊರಬರುತ್ತಿದ್ದೇವೆ. ಯೂರೋಪಿಯನ್ ಚಿಂತನೆಗಳನ್ನು ಬಿಟ್ಟು ಜಗತ್ತು ತನ್ನ ಸ್ವಂತಿಕೆಯನ್ನು ಗುರುತಿಸಿಕೊಂಡು ತನ್ನ ಶಕ್ತಿಯ ನಿಜಸೆಲೆಗಳನ್ನು ಹೊಸದಾಗಿ ಅನ್ವೇಷಿಸಿದರೆ ಅದು ಖಂಡಿತವಾಗಿಯೂ ತನ್ನ ಗುರಿಗಳನ್ನು ಮರು ವ್ಯಾಖ್ಯಾನಿಸಿಕೊಳ್ಳುತ್ತದೆ. ಗಾಂಧಿಯು ನಮ್ಮ ತತ್ತ್ವಜ್ಞಾನಿಯಾದರೆ ಖಂಡಿತವಾಗಿಯೂ ಸತ್ಯ ಮತ್ತು ಅಹಿಂಸೆ ನಮ್ಮ ಗುರಿಗಳನ್ನು ಮುನ್ನಡೆಸುತ್ತವೆ. ಈ ನಿಟ್ಟಿನಲ್ಲಿ ಮುಂದುವರಿಯಲು ನಮ್ಮ ಬಹುದೊಡ್ಡ ಪರಂಪರೆಯಿಂದ ಸಾಕಷ್ಟು ಪಡೆಯುಬಹುದು. ಹೊಸ ಗುರಿಗಳು ನಿಸರ್ಗದ ಲಯಗಳನ್ನು ಸಶಕ್ತಗೊಳಿಸಿ ನೂತನ ಕುಲವನ್ನು ಸ್ವಯಂ–ಮೀರುವಿಕೆಗೆ ಅಣಿಗೊಳಿಸುವಂಥ ನೀತಿಸಮೃದ್ಧ ಹೊಸ ವಿಜ್ಞಾನದತ್ತ ನಮ್ಮನ್ನು ಮುನ್ನಡೆಸಬಹುದು.

●

## ಅಧ್ಯಾಯ ಐದು

# ಯಂತ್ರ

## (Machine)

ಯಾವುದು ಸಮಾಜದಲ್ಲಿ ಸ್ವೀಕೃತವಾಗಿ ಸ್ಥಿರವಾಗುತ್ತದೋ ಅದು ತನ್ನ ಬಗೆಗಿನ ಚರ್ಚೆಯನ್ನು ವಿರೋಧಿಸುತ್ತದೆ. ಇದು ಯಂತ್ರಕ್ಕೂ ಅನ್ವಯಿಸುತ್ತದೆ. ಅದು ಚರ್ಚೆಗೆ ಅವಕಾಶವಿಲ್ಲದ ಸಿದ್ಧ ಸ್ವೀಕೃತ ಸಂಗತಿಯಾಗಿ ಬೆಳೆದು ಅದರ ಬಗ್ಗೆ ಏನನ್ನೂ ಮಾಡಲು ಸಾಧ್ಯವಿಲ್ಲದ ಸ್ಥಿತಿಗೆ ತಲುಪಿದೆ. ಮಾನವರು ಅದಕ್ಕೆ ಹೊಂದಿಕೊಳ್ಳಬೇಕು. ಅಷ್ಟೆ ಅಲ್ಲದೆ ಅದರಲ್ಲಿಯೇ ಆನಂದದ ಮೂಲವನ್ನು ಕಂಡುಕೊಂಡು ಅದರಲ್ಲಿ ಸಂತಸದಿಂದ ಕಾರ್ಯ ನಿರತರಾಗಿರಬೇಕು. ಯಂತ್ರ ಆಗಮನವಾದ ಪ್ರಾರಂಭದಲ್ಲಿ ಅದು ಅನ್ಯತೆಯ (alientaion), ಬುದ್ಧಿ ವಿಕಲ್ಪದ ಪ್ರಧಾನ ಮೂಲ ಎಂದು ಕಾಣಲಾಗಿತ್ತು. ಈಗ ಅದು ಮಾನವ ಕ್ರಿಯೆಯ ಮೂಲಾಧಾರವಾಗಿದೆ. ಶೋಷಣೆ, ವಿನಾಶ, ವಿಧ್ವಂಸ ಮತ್ತು ಅಮಾನವೀಕರಣ ತುಂಬಿದ ಕಥೆಯೊಂದು, ಇಂದು ಮನುಕುಲದ ವಿಶಿಷ್ಟ ಹಾಗೂ ಅಭೂತಪೂರ್ವ ಯಶಸ್ಸಿನ ಸಂಕೇತವಾಗಿ ಪರಿಗಣಿಸಲ್ಪಟ್ಟಿದೆ. ಉಗಿಯಂತ್ರದಿಂದ ಕಂಪ್ಯೂಟರ್‌ವರೆಗೆ ಸಾಗಿಬಂದ ಸ್ಪಷ್ಟವಾಗಿ ಗೋಚರಿಸುವ ಆಧುನಿಕ ವಿಜ್ಞಾನದ ಫಲವು 'ಯಂತ್ರಯುಗ'ವೆಂದು ವ್ಯಾಖ್ಯಾನಗೊಂಡಿದೆ.

ಗಾಂಧಿಯವರು ಈ ಯಂತ್ರಕ್ಕೆ ಸಂಪೂರ್ಣ ವಿರುದ್ಧವಾಗಿ ನಿಂತರು. ಅವರ ಬದುಕೇ ಈ ವಿರೋಧದ ಮೂರ್ತರೂಪ. ಅವರ ಬರಹಗಳು ಈ ಯಂತ್ರದ ಬಗೆಗಿನ ವಿಸ್ತಾರವೂ ಮತ್ತು ಸರ್ವತೋಮುಖವೂ ಆದ ಟೀಕೆಗಳಿಂದ ತುಂಬಿವೆ. ಯಂತ್ರವು ಮಾನವನನ್ನು ಭೌತಿಕವಾಗಿ ಮತ್ತು ಅಧ್ಯಾತ್ಮಿಕವಾಗಿ ಹೇಗೆ ನಿರ್ವೀರ್ಯಗೊಳಿಸುತ್ತದೆ ಎಂಬ ಬಗ್ಗೆ ಅವರು ಸುದೀರ್ಘವಾಗಿ ವಾದ ಮಾಡಿದ್ದಾರೆ. ನಿಜಕ್ಕೂ ಅವರು ಚರಕದ ಸುತ್ತ ಸಾಮ್ರಾಜ್ಯಶಾಹಿಗೆ ಸವಾಲೊಂದನ್ನು ನಿರ್ಮಿಸಲು ಯತ್ನಿಸಿದ್ದರು. ಯಂತ್ರಕ್ಕೆ ಗಾಂಧಿಯ ವಿರೋಧ ಎಷ್ಟು ಪರಿಪೂರ್ಣ ಮಟ್ಟದಲ್ಲಿತ್ತೆಂದರೆ, ಅವರ ಯಂತ್ರ ವಿರೋಧವು, ಆಧುನಿಕ ವಿಜ್ಞಾನಕ್ಕೆ ಮತ್ತು ತಾನು ಸಾರ್ವತ್ರಿಕ ಸತ್ಯತೆ, ಶ್ರೇಷ್ಠ ತಿಳಿವಳಿಕೆ ಮತ್ತು ಭೌತಿಕ ಕಲ್ಯಾಣದ ಸಾಧನೆ ಎಂದು ಹೇಳಿಕೊಳ್ಳುವ ಅದರ ವಿಚಾರಧಾರೆಗೆ ಪ್ರಬಲ ಸವಾಲಿನಂತೆ ಕಾಣುತ್ತಿತ್ತು. ಈ ಅಧ್ಯಾಯದ ಗುರಿ ಆಧುನಿಕ ಯಂತ್ರದ ಬಗೆಗಿನ ವಿಮರ್ಶೆಯ ಮೂಲಕ ಗಾಂಧಿಯವರ ಈ ಸವಾಲನ್ನು ಪುನಾರಚಿಸುವ ಪ್ರಯತ್ನವಾಗಿದೆ.

'ಯಂತ್ರ' ಪದದ ಸಾಮಾನ್ಯ ಅರ್ಥ – ತಂತ್ರಜ್ಞಾನ ಮತ್ತು ಅದರ ಮೂಲಕ ಮೂರ್ತ ರೂಪ ಪಡೆದ ರಚನೆಗಳು. ಸಂಸ್ಕರಣವಿಧಾನ ಮತ್ತು ಸಾಫ್ಟ್‌ವೇರ್‌ಗಳು ಇದರಲ್ಲೇ ಸೇರಿವೆ. ಮಾಹಿತಿಯನ್ನು ಸಂಸ್ಕರಿಸುವ ತಾತ್ಕಾಲಿಕ ಸಾಧನಗಳೂ ಅದರಲ್ಲಿ ಅಡಕವಾಗಿವೆ. ಉಗಿಯಂತ್ರದಿಂದ ಕಂಪ್ಯೂಟರ್‌ವರೆಗಿನ ಬೆಳವಣಿಗೆಗಳು, ಅವರೆಡೂ ಕಾಲದಿಂದ ಪ್ರತ್ಯೇಕಗೊಂಡಿದ್ದರೂ, ಹೇಗೆ ಏಕತೆಯ ಅಂಶವೇ ಆಗಿದೆ ಎಂಬುದು ಕ್ರಮೇಣ ಈ ಅಧ್ಯಾಯದಲ್ಲಿ ಅನಾವರಣಗೊಳ್ಳುತ್ತದೆ. 'ಯಂತ್ರ' ಎಂದು ಕರೆಯುವುದು ಈ ಏಕತೆಯನ್ನೇ. ಮಾನವನಿಗೆ ಮತ್ತು ನಿಸರ್ಗಕ್ಕೆ ಯಂತ್ರ ಏನು ಮಾಡಿದೆ ಎಂಬುದನ್ನು ಯಂತ್ರದ ಪರಿಣಾಮ ಮತ್ತು ಬಾಹ್ಯ ಪರಿಣಾಮಗಳಿಗೆ ಸಂಬಂಧಿಸಿದ 'ಸಂಕೇತಾರ್ಥ' (denotation) ಎಂಬ ಉಪಶೀರ್ಷಿಕೆಯಡಿ ಚರ್ಚಿಸಲಾಗಿದೆ. ಇದು ಯಂತ್ರಶಕ್ತಿ ಮತ್ತು ಅದಕ್ಕೆ ಸಂಬಂಧಿಸಿದ ವಿಜ್ಞಾನದ ಪರಿಕಲ್ಪನೆ ಹಾಗೂ ಯಂತ್ರವು ಮಾನವನ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಕ್ರಿಯೆ ಹೇಗೆ 'ಯಂತ್ರ'ದ ಅರ್ಥದ ಭಾಗವೇ ಆಗಿಬಿಡುತ್ತದೆಂಬ ಚರ್ಚೆಯನ್ನು ಒಳಗೊಂಡಿದೆ. ಯಂತ್ರ ತನ್ನದೆಂದು ಹೇಳಿಕೊಳ್ಳುವ ಸಾಧನೆಗಳ ಹಿನ್ನೆಲೆಯಲ್ಲಿ ಎಷ್ಟು ಅಸಂಬದ್ಧತೆ ಮತ್ತು ಮಿಥ್ಯೆಗಳಿವೆ ಎಂಬ ಬಗ್ಗೆ ಚರ್ಚೆಯನ್ನು ಮೂರನೇ ಭಾಗ ವಿವರಿಸುತ್ತದೆ. ಅಧ್ಯಾಯದ ಕೊನೆಯಲ್ಲಿ ಭಾರತದ ವಿದ್ಯಮಾನವಾದ ಚರಕ, ಕುಂಬಾರಿಕೆ ಮತ್ತು ಚಕ್ರದಂಥ ಆಧುನಿಕವಲ್ಲದ ಯಂತ್ರಗಳು ಮತ್ತು ಮನುಕುಲಕ್ಕೆ ಅವುಗಳಿಂದಾಗಿರುವ ತಾತ್ವಿಕ ಮತ್ತು ಪ್ರಾಯೋಗಿಕ ಪರಿಣಾಮಗಳನ್ನು ಕುರಿತ ಚರ್ಚೆಯಿದೆ.

## ಸಂಕೇತಾರ್ಥ (Denotation)

ಸ್ಪಷ್ಟವಾದ ಪರಿಣಾಮಗಳು ಯಾವಾಗಲೂ ಸಂಕೇತಾರ್ಥವನ್ನು ಒಳಗೊಂಡಿರುತ್ತವೆ. ಅಪಾರ ಲಾಭವನ್ನು ತರುವ ಮತ್ತು ಬಿರುಸಿನ ಕಾರ್ಯದಲ್ಲಿ ಮಗ್ನರಾಗಿರುವ ಮ್ಯಾನೇಜರುಗಳ ವರ್ಗದ ಮೇಲೆ ಯಂತ್ರದ ಪರಿಣಾಮವಿದೆ. ಅದರಂತೆಯೇ ಮಿಲಿಯಾಂತರ ನಿರುದ್ಯೋಗಿಗಳು ಮತ್ತು ಅವರ ಕಡು ದಾರಿದ್ರ್ಯ ಕೂಡ ಯಂತ್ರದ ಪರಿಣಾಮವೇ ಆಗಿದೆ. ಅದು ಸಮಾಜಗಳ ಸುವ್ಯವಸ್ಥೆಯನ್ನು ಛಿದ್ರಗೊಳಿಸುತ್ತದೆ. ಜೊತೆಗೆ ಲಕ್ಷಾಂತರ ಜನರ ಬಲವಂತದ ವಲಸೆಗೆ ಕಾರಣವಾಗುತ್ತದೆ. ಅರಣ್ಯಗಳು ಬೋಳಾಗುತ್ತಿರುವುದು, ಅತ್ಯಂತ ಸಂಕೀರ್ಣವೂ, ಸುವ್ಯವಸ್ಥಿತವೂ ಆದ ಕಂಪ್ಯೂಟರ್‌ಗಳ ಜೋಡಣೆ ಮತ್ತು ಸಂವಹನ ವ್ಯವಸ್ಥೆಯೂ ಯಂತ್ರದ ಪರಿಣಾಮಗಳೇ ಆಗಿವೆ. ಯಂತ್ರವು ಅದರ ಜೊತೆ ಕೆಲಸ ಮಾಡದವನಿಗೆ ಯಂತ್ರ ಕಾರ್ಮಿಕನಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಪರಾಧೀನತೆಯನ್ನು ತರುತ್ತದೆ. ಈ ಪರಾಧೀನತೆಯು ಕಲೆ, ವಿಜ್ಞಾನ ಸೇರಿದಂತೆ ಮಾನವನಿಗೆ ಸಂಬಂಧಿಸಿದ ಸಮಸ್ತ ಕ್ಷೇತ್ರಗಳಲ್ಲೂ ಆಗುವ ದೊಡ್ಡ ಪರಿವರ್ತನೆಗಳಿಗೆ ಮೂಲ. ಯಂತ್ರದಿಂದ ಸಂಭವಿಸುವ ಆರ್ಥಿಕ, ಭೌತಿಕ ಮತ್ತು ಮಾನವ ಸಂಬಂಧೀ ಪರಿಣಾಮಗಳನ್ನು ಎಲ್ಲೆಡೆ ಕಾಣಬಹುದು. ಮೂರನೇ ವಿಶ್ವ ಈ ಪರಿಣಾಮಗಳ ಪ್ರದರ್ಶನಕ್ಕೆ ದೊಡ್ಡ ವೇದಿಕೆಯಾಗಿದೆ. ವಿಸ್ತಾರವಾದ ಕಥನವು ಇದನ್ನು ಮನದಟ್ಟು ಮಾಡುತ್ತದೆ. ಆದರೆ ಇಲ್ಲಿ ನಮ್ಮ ಕಾಳಜಿಗಳು ಬೇರೆ ರೀತಿಯಿದ್ದು ನಮಗೆ ಪರಿಣಾಮಗಳಿಗಿಂತ ಯಂತ್ರದ ಹಿಂದಿನ ತರ್ಕ ಮುಖ್ಯ. ಹಾಗಾಗಿ

ಯಂತ್ರದ ಪ್ರಭಾವಗಳನ್ನು ಪಟ್ಟಿಮಾಡುವ ಪ್ರಯತ್ನ ನನ್ನದಲ್ಲ. ಯಂತ್ರ ಮೂಲಭೂತವಾಗಿ ಪ್ರತಿನಿಧಿಸುವ ತತ್ತ್ವದ ಗ್ರಹಿಕೆಯ ಪ್ರಯತ್ನ ನನ್ನದು. ಹಾಗಾಗಿ ಈ ಅಧ್ಯಾಯದ ಚರ್ಚೆಯನ್ನು ನಾವು ಗುರುತಿಸಬಹುದಾದ ದುಡಿಮೆ, ಬಂಡವಾಳ, ತಂತ್ರಜ್ಞಾನ ಮತ್ತು ಕಾಲ ಎಂಬ ನಾಲ್ಕು ಮುಖ್ಯ ಪರಿಕಲ್ಪನೆಗಳಲ್ಲಿ ವಿಂಗಡಿಸಿದ್ದೇನೆ.

## ಕೂಲಿ – ದುಡಿಮೆ (Labour)

ಬಹುಶಃ ಯಂತ್ರದ ಅತ್ಯಂತ ದೂರಗಾಮೀ ಪರಿಣಾಮವೆಂದರೆ ಕೂಲಿ–ದುಡಿಮೆ ಎಂಬ ಹೊಸ ಪ್ರಕಾರದ ಸೃಷ್ಟಿ. ಕೂಲಿ ದುಡಿಮೆಯಾಗಿ ಪರಿವರ್ತಿತವಾದ ಮಾನವನ ಶ್ರಮ ಅವನಿಗೆ ಸೇರಿದ್ದಲ್ಲ. ಅದು ಅವನು ಕೆಲಸ ಮಾಡುವ ಆಸ್ತಿಯ ಮಾಲೀಕರಿಗೆ ಸೇರಿರುತ್ತದೆ. ಕಾರ್ಲ್ ಮಾರ್ಕ್ಸ್ ತನ್ನ "ದಿ ಎಕನಾಮಿಕ್ ಅಂಡ್ ಫಿಲಾಸಫಿಕ್ ಮ್ಯಾನುಸ್ಕ್ರಿಪ್ಟ್ಸ್ ಆಫ್ 1844" (1844ರ ಆರ್ಥಿಕ ಮತ್ತು ತಾತ್ತ್ವಿಕ ಹಸ್ತಪ್ರತಿಗಳು) ಕೃತಿಯಲ್ಲಿ ಈ ಕೂಲಿ–ದುಡಿಮೆ ಪ್ರಕ್ರಿಯೆಯ ಬಗ್ಗೆ ಮಾಡಿದ ವಿಶ್ಲೇಷಣೆ ಇಂದಿಗೂ ಅತ್ಯಂತ ಶ್ರೇಷ್ಠ ಚಿಂತನೆಯಾಗಿ ಉಳಿದಿದೆ. ಖಾಸಗಿ ಆಸ್ತಿ ಮತ್ತು ಆಧುನಿಕ ರಾಜಕೀಯ ಆರ್ಥಿಕತೆಯ ಇತರೆಲ್ಲ ಪ್ರಚಾರಗಳು ಅಂತಿಮವಾಗಿ ಮನುಷ್ಯ ಮತ್ತು ಆತನನ್ನು ಬೇರ್ಪಡಿಸುವ ವಿಧಾನವನ್ನು ಮಾರ್ಕ್ಸ್, ಹೃದಯವನ್ನು ತಟ್ಟುವ ಸಮರ್ಥ ಕಲಾಕೃತಿಯಂತೆ ಬಿಡಿಸಿದ್ದಾನೆ. ಯಂತ್ರದ ಆಗಮನ ಮಾನವನನ್ನು ಹಿಂದೆಂದೂ ಕಾಣದ ಪ್ರಮಾಣದಲ್ಲಿ ಕುಬ್ಜಗೊಳಿಸಿತು. ಮಾರ್ಕ್ಸ್‌ನ ಸಾಧನೆಯ ಮಹತ್ತ್ವ ಅಡಗಿರುವುದು ಆಧುನಿಕ ಯಂತ್ರವು ಮಾನವನ ಅವನತಿಯ ಪ್ರಾರಂಭಕ್ಕೆ ನಾಂದಿಹಾಡಿದ ಬಗೆಯನ್ನು ತೋರಿರುವ ಆತನ ಸಂವೇದನಾಶೀಲತೆಯಲ್ಲಿ. ಈ ಬಗ್ಗೆ ಅಂದಿನಿಂದ ಇಂದಿನವರೆಗೆ ಬಹಳಷ್ಟು ಬರಹಗಳು, ತಿಳುವಳಿಕೆಗಳು ಹರಿದುಬಂದಿವೆ. ನಾನು ಇಲ್ಲಿ ಯಂತ್ರದ ಜೊತೆ ಕೆಲಸಮಾಡದ ಜನರ ದುಡಿಮೆಯ ಬಗ್ಗೆ ಗಮನ ಸೆಳೆಯಲು ಇಚ್ಛಿಸುತ್ತೇನೆ.

ದಾದಾಬಾಯಿ ನವರೋಜಿಯವರ ಸೂತ್ರಗಳ ತರುವಾಯ ಬಂದ 'ಆರ್ಥಿಕ ಸೋರುವಿಕೆ'ಯ ಬಗ್ಗೆ ಪ್ರಸ್ತಾಪಿಸುತ್ತಾ ಮಹಾತ್ಮಾ ಗಾಂಧಿಯವರು 'ನಾವು ಸೋಮಾರಿಗಳ ರಾಷ್ಟ್ರವಾಗಿ ಪರಿವರ್ತಿತರಾಗುತ್ತಿರುವುದೇ ಅತ್ಯಂತ ದೊಡ್ಡ ಸೋರಿಕೆ' ಎಂದು ಹೇಳಿದರು. ಸೋಮಾರಿತನವನ್ನು ನಿರುದ್ಯೋಗದ ಜೊತೆ ತಳುಕು ಹಾಕಬಾರದು. ಅವೆರಡೂ ಸಂಪೂರ್ಣ ವಿಭಿನ್ನ ಸಂಗತಿಗಳು. ಒಂದೆಡೆ ಮನುಷ್ಯನನ್ನೇ ಯಂತ್ರವಾಗಿ ಪರಿವರ್ತಿಸುವ ಹೊಸ ಬಗೆಯ ವೇಗ ಮತ್ತು ಯಂತ್ರಾಗಾರ (Assembly line) ಇದ್ದರೆ ಇನ್ನೊಂದೆಡೆ ಕಾಲದ ಪರಿಕಲ್ಪನೆಯನ್ನೆ ಅಸಂಗತಗೊಳಿಸುವ ಸೋಮಾರಿತನವಿದೆ.

ಬದುಕಿನಲ್ಲಿ ಸೋಮಾರಿಯ ಸ್ಥಿತಿಯನ್ನು ಚಿತ್ರವೊಂದರಲ್ಲಿ ಪಡಿಮೂಡಿಸಲು ಸಾಧ್ಯವಿಲ್ಲ. ಅದನ್ನು ಕಣ್ಣಾರೆ ಕಾಣಬೇಕು. ಈ ತಥಾಕಥಿತ ಸೋಮಾರಿ ಕೂಲಿ ದುಡಿಮೆಗಾರನೂ ಅಲ್ಲ. ಆತ ಬದುಕಲು ಕೆಲಸ ಮಾಡಬೇಕು. ಆದರೆ ಅವನು ತನ್ನ ದುಡಿಮೆಗೆ ಕೂಲಿ ಪಡೆಯಲಾರ. ಹಾಗಾಗಿ ಆತ ಏನನ್ನೂ ತಿನ್ನದೆಯೇ ಬದುಕುತ್ತಾನೆ. ಅವನು ತನ್ನ ಯಜಮಾನನಿಗಾಗಿ ಹೋರಾಡುವುದಿಲ್ಲ. ಹಾಗೂ ಆತ ಗುಲಾಮನೂ

ಅಲ್ಲ. ಸಂಘರ್ಷದಲ್ಲಿ ಪಾಲ್ಗೊಳ್ಳುವುದೇ ಇಲ್ಲ. ಅವನು ಮಾನವ ಸಮುದಾಯದಲ್ಲಿ ಲೆಕ್ಕಕ್ಕಿಲ್ಲದವ. ಅವನು ಯಾರು ಅಲ್ಲ. ಆದರೂ ಅವನು ಎಲ್ಲೆಲ್ಲಿಯೂ ಇದ್ದಾನೆ. ವಿಚಿತ್ರವೆಂದರೆ ಆತ ಈ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಜೀವಂತವಾಗಿ ಸಂರಕ್ಷಿಸುತ್ತಾನೆ. ಈ ಸೋಮಾರಿಯೇ ಯಂತ್ರದ ವಿಸ್ತರಣೆಯಿಂದ ನಿರಂತರವಾಗಿ ಹೊಡೆತ ತಿಂದಿರುವವನು. ಹೋರಾಡುವುದಕ್ಕೆ ಮೊದಲೇ ಎಲ್ಲ ಯುದ್ಧಗಳಲ್ಲೂ ಸೋತಿರುವುದರಿಂದ ಅವನು ಹೋರಾಟಕ್ಕಿಳಿಯುವುದಿಲ್ಲ. ಗಾಂಧಿಯವರು ಬದಲಾಯಿಸುವವರೆಗೆ ಇದು ಆತನ ಚಿತ್ರಣವಾಗಿತ್ತು.

ಈ ಸೋಮಾರಿಯು ಸಮುದ್ರದಲ್ಲಿ ತೇಲುವ ಮಂಜುಗಡ್ಡೆಯ ರಾಶಿಯಂತೆ. ಕಣ್ಣಿಗೆ ಕಾಣುವ ಮಂಜುಗಡ್ಡೆ ಅದರ ಒಟ್ಟು ಮೊತ್ತದ ಅಲ್ಪಪ್ರಮಾಣ ಮಾತ್ರ. ಹಾಗೆಯೇ ನಮಗೆ ಗೋಚರಿಸುವ ಸೋಮಾರಿಯ ಚಿತ್ರ ಆತನ ಒಟ್ಟು ಮೊತ್ತದ ಚಿಕ್ಕಭಾಗ ಮಾತ್ರ. ಆತನ ಸುತ್ತಲಿರುವ ಮನುಷ್ಯರು ಮತ್ತು ಬೇರೆಲ್ಲ ಸಂಗತಿಗಳು ಅವನನ್ನು ಮುಚ್ಚಿಹಾಕಿವೆ. ಪ್ರಕೃತಿ ಮತ್ತು ಅದರ ಸೂಕ್ಷ್ಮ ವಿದ್ಯಮಾನಗಳ ಬಗೆಗಿನ ಆತನ ಜ್ಞಾನವನ್ನು ಗಮನಿಸಿದರೆ, ಅಥವಾ ಆತನಲ್ಲಿರುವ ಕಲೆ ಹಾಗೂ ಕರಕೌಶಲ್ಯಗಳ ವಿಸ್ತಾರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಮಂಜುಗಡ್ಡೆಯ ಕಾಣುವ ತುದಿಯಂತೆ ಕೇವಲ ಹತ್ತರಲ್ಲಿ ಒಂದರಷ್ಟು ಕಾಣುವ ಅವನ ಪ್ರಕಟ (ಯಂತ್ರನಿಷ್ಠ) ರೂಪದ ಅಡಿಯಲ್ಲಿರುವ ಆತನ ಅನಂತ ಜ್ಞಾನಭಂಡಾರವನ್ನು ಯಂತ್ರದ ಚಟುವಟಿಕೆಗಳು ಮುಚ್ಚಿಹಾಕಿವೆ ಎಂಬುದು ಅರಿವಾಗುತ್ತದೆ. ಈ ವಿಪುಲ ದೇಶೀಜ್ಞಾನ ಭಂಡಾರವು ಕೇವಲ ಶೇಕಡಾ ಹತ್ತರಷ್ಟಿರುವ ಯಂತ್ರ ಸಂಬಂಧಿ ಮಾನವರ ಜ್ಞಾನಕ್ಕೆ ಅಸಂಗತವೆನ್ನಿಸಿಬಿಟ್ಟಿದೆ. ಹಾಗಾಗಿ ಈ ಯಂತ್ರಸಂಬಂಧಿ ಜ್ಞಾನಸಂಪತ್ತು ಅತಿ ವಿಮರ್ಶೆ, ವಿಶ್ಲೇಷಣೆಗೊಳಪಟ್ಟಿದೆ. ರಾಷ್ಟ್ರದ ಉದ್ದಗಲಕ್ಕೂ ಹರಡಿರುವ ರೈತರು, ಕುಶಲಕರ್ಮಿಗಳು ಮತ್ತು ಬುಡಕಟ್ಟು ಜನಾಂಗದವರು ಮತ್ತು ಹೆಂಗಸರು ಹೆಚ್ಚು ಜ್ಞಾನ ಸಂಪನ್ನರು ಮತ್ತು ಹೆಚ್ಚು ವೈಜ್ಞಾನಿಕವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸಬಲ್ಲ ಸಾಮರ್ಥ್ಯವುಳ್ಳವರು; ಆದರೆ ಅವರು ಯಂತ್ರಗಳೊಡನೆ ಸಂಬಂಧವಿಲ್ಲದವರು. ಯಂತ್ರವು ಜನರನ್ನು ನಾಶಗೊಳಿಸುವ, ಮನುಷ್ಯನನ್ನು ಕೇವಲ ಕೂಲಿಕಾರ್ಮಿಕನನ್ನಾಗಿ ಪರಿವರ್ತಿಸುವ, ಮಾನವನ ಕ್ರಿಯೆಯನ್ನು 'ಅನ್ಯ'ರಿಗೆ ದುಡಿಮೆಯನ್ನಾಗಿ ಪರಿವರ್ತಿಸುವ, ಆತ್ಮೋತ್ಸರ್ಗವನ್ನು ಕೇವಲ ಸ್ವಾರ್ಥ ದುರಾಸೆಯನ್ನಾಗಿ ಮಾಡುವ, ಸಮುದಾಯ ಭ್ರಾತೃತ್ವವನ್ನು ಛಿದ್ರಗೊಳಿಸಿ ಕೇವಲ ಆರ್ಥಿಕವರ್ಗವನ್ನು ಸೃಷ್ಟಿಸುವ ಸಾಧನ. ಯಂತ್ರದ ಯಶಸ್ಸು ಮತ್ತು ಸಾಧನೆಗಳೆಲ್ಲವೂ ಏನನ್ನೂ ಒಳಗೊಳ್ಳದ ಯಶೋಗಾಥೆಯಾಗಿದೆ. ಮತ್ತು ಇದು ಸೋಮಾರಿಗಳೆಂದೆನಿಸಿರುವ ಶೇಕಡಾ 90ರಷ್ಟು ಜನರು ಮಂಜುಗಡ್ಡೆಯಂತೆ ಮುಳುಗಿರುವವರೆಗೆ ಮುಂದುವರಿಯುತ್ತದೆ.

ಯಂತ್ರದ ವಿರುದ್ಧ ಗಾಂಧಿಯವರ ಸವಾಲು ನೀರಿನಲ್ಲಿ ಮುಳುಗಿರುವ ಜನರು ಮೇಲೆ ಬರಲು ಹಾದಿಗಳನ್ನು ತೆರೆಯುವ ಮೊದಲು ಪ್ರಯತ್ನ.

**ಬಂಡವಾಳ (Capital)**

ಯಂತ್ರ ಬಹಳ ದುಬಾರಿಯಾದ ವ್ಯವಹಾರ. ಅದಕ್ಕೆ ದೂರದೂರಗಳ ಕಚ್ಚಾಮಾಲು ಅಗತ್ಯ. ಮತ್ತು ಅದು ಜಗತ್ತಿನಾದ್ಯಂತ ಮಾರುಕಟ್ಟೆಗಳನ್ನು ಹುಡುಕುತ್ತಿರುತ್ತದೆ. ಈ ವ್ಯವಹಾರದ ಸೇವೆಗಾಗಿ ಸನ್ನದ್ಧವಾಗಿರುವ ಲೂಟಿ, ಶೋಷಣೆ, ಕೂಡಿಡುವಿಕೆ, ಜನಾಂಗೀಯ ಹತ್ಯೆ ಮತ್ತು ಯುದ್ಧಗಳ ಕತೆಗಳನ್ನು ಮತ್ತೆ ಮತ್ತೆ ಹೇಳಲಾಗುತ್ತಿದೆ. ಈ ಚಾರಿತ್ರಿಕ ಗತಿಯನ್ನು ನಿರೂಪಿಸುವ ರೀತಿಯಲ್ಲಿ ಇವೆಲ್ಲವೂ ಎಂದೂ ನಿಲ್ಲಿಸಲಾಗದ ಘಟನೆಗಳ ಸರಣಿಯಂತೆ ಕಾಣುತ್ತದೆ. ಈ ಶಕ್ತಿಗಳ ಅಗತ್ಯ ಹಾಗೂ ಅನಿವಾರ್ಯತೆಗೆ ಯಂತ್ರದ ಆಗಮನದ ಜೊತೆ ಕಾಣಿಸಿಕೊಂಡ ಮತ್ತೊಂದು ಸಂಗತಿ : ಅದೇ ಬಂಡವಾಳ.

ಯಂತ್ರವು ಎಂದೂ ಮನುಷ್ಯನಿಗೆ ಬದಲಿಯಾಗಬಾರದು ; ಅದು ಮನುಷ್ಯರಿಗೆ ಕೇವಲ ನೆರವಾಗಬೇಕು, ಅಂದರೆ ಮಾನವನ ಕೈಯಲ್ಲಿ ಸಾಧನವಾಗಬೇಕು ಎಂದು ಗಾಂಧಿಯವರು ಪದೇ ಪದೇ ಹೇಳುತ್ತಿದ್ದರು. ಮಾನವನಿಗೆ ಬದಲಿಯಾಗಿ ರೂಪುಗೊಂಡಿರುವ ಆಧುನಿಕ ಯಂತ್ರದ ವಿಶಿಷ್ಟತೆಯಿಂದಾಗಿ ಸಮಾಜದಲ್ಲಿ ಅದು ಮಾನವನಿಗೆ ಹೊರತಾದ ಶಕ್ತಿಗೆ ಜನ್ಮ ನೀಡಿದೆ. ಈ ಶಕ್ತಿಯೇ ಬಂಡವಾಳ. ಇದರ ಜೊತೆಗೆ ವಸ್ತು ನಿಷ್ಠತೆ, ಸಾರ್ವತ್ರಿಕತ್ವ ಮತ್ತು ಮೌಲ್ಯ ಮುಕ್ತತೆ ಮುಂತಾದ ಪರಿಕಲ್ಪನೆ ನ್ಯಾಯಸಮ್ಮತ ಗುಣಗಳನ್ನು ಪಡೆದುಕೊಂಡು ಬಿಟ್ಟಿವೆ. ಮನುಷ್ಯನ ವೈಚಾರಿಕ ತರ್ಕವು ಅವನಿಂದ ಹೊರನಿಂತು ಆಧುನಿಕ ವಿಜ್ಞಾನ ಮತ್ತು ಆಧುನಿಕ ಪ್ರಭುತ್ವದ ರೂಪದಲ್ಲಿ ಆತನಿಗೆ ಮುಖಾಮುಖಿಯಾಗಿ ನಿಲ್ಲುತ್ತದೆ.

ಯಂತ್ರವು ಬಂಡವಾಳವಾಗಿ ಈಗಾಗಲೇ ಪಾಶ್ಚಾತ್ಯ ಪ್ರಜೆಯನ್ನು ಗುಲಾಮನನ್ನಾಗಿ ಮಾಡಿಕೊಂಡಿದೆ. ಈ ದಾಸ್ಯವನ್ನು ಸಾಧಿಸಲು ಅದು ಹಲವಾರು ಶತಮಾನಗಳನ್ನೇ ತೆಗೆದುಕೊಂಡಿದೆ. ಅದೇ ಶಕ್ತಿಗಳಿಂದ ವಸಾಹತು ರಾಷ್ಟ್ರಗಳು ದಾಸ್ಯಕ್ಕೆ ಒಳಪಟ್ಟಿದ್ದರೂ, ಅಂಥ ಗುಲಾಮಗಿರಿಯ ಅಗ್ನಿದಿವ್ಯದಿಂದ ಅವು ಮುಕ್ತವಾಗಿವೆ. ಆದುದರಿಂದ ತಮ್ಮನ್ನು ಎಷ್ಟೇ ಶೋಷಣೆಗೆ ಒಳಪಡಿಸಿ ದಮನ ಮಾಡಿದ್ದರೂ, ವಸಾಹತು ರಾಷ್ಟ್ರಗಳು ವಿಜ್ಞಾನ ಅಥವಾ ಆಧುನಿಕ ಪ್ರಭುತ್ವಕ್ಕೆ ನ್ಯಾಯ ಸಮ್ಮತಿಯನ್ನು ನೀಡುವುದಿಲ್ಲ. ಹಾಗಾಗಿ ರೈತರು, ಕುಶಲ ಕರ್ಮಿಗಳು ವಸ್ತುನಿಷ್ಠವಲ್ಲದ ಸಾರ್ವತ್ರಿಕವಲ್ಲದ ಮತ್ತು ಮೌಲ್ಯಮುಕ್ತವಲ್ಲದ ಜ್ಞಾನ ಪರಂಪರೆಗಳನ್ನು ಜೀವಂತವಾಗಿಡುತ್ತಾರೆ. ಹಾಗೆಯೇ ತನ್ನಿಂದ ಹೊರನಿಂತು, ಮನುಷ್ಯ ತನಗೆ ತಾನೇ ಎದುರಾಗುವ ಸತ್ಯಾಗ್ರಹದಂತಹ ಶಕ್ತಿಯ ರೂಪಗಳನ್ನು ಜೀವಂತವಾಗಿ ಸಂರಕ್ಷಿಸುತ್ತಾನೆ.

ಯಂತ್ರವನ್ನು ಹೊಂದದೆ ಅಥವಾ ದಾಸ್ಯಕ್ಕೂ ಒಳಗಾಗದೆ ರೈತರು ಮತ್ತು ಕುಶಲ ಕರ್ಮಿಗಳು ಬಂಡವಾಳ ಪ್ರಬಲವಾಗಿರುವ ಈ ಯಂತ್ರಯುಗದಲ್ಲಿ ಜೀವನದೂಡುತ್ತಿದ್ದಾರೆ. ಅವರು ಏನು ಮಾಡಬೇಕಾದರೂ ಹಣ ಅವಶ್ಯಕ. ಈ ಅವಶ್ಯಕತೆಯು ಅವರ ಸಾಮಾಜಿಕ ಸಂರಚನೆಗಳನ್ನು ಹಣಕಾಸು ಚಲಾವಣೆಯ ರೂಪಕ್ಕೆ ತೆರೆಯುತ್ತದೆ. ಒಂದು ಕಡೆ ಅವರಲ್ಲಿ ಹಣವಿಲ್ಲ ; ಮತ್ತೊಂದೆಡೆ ಹಣಕಾಸು

ವ್ಯವಹಾರವನ್ನು ನಿರ್ವಹಿಸುವ ಜ್ಞಾನವೂ ಇಲ್ಲ. ಏಕೆಂದರೆ ಯಂತ್ರ ಮತ್ತು ಮಾರುಕಟ್ಟೆಯ ವ್ಯವಹಾರ ತರ್ಕವೆಂದರೆ ಬಂಡವಾಳದ ತರ್ಕವೇ ಆಗಿದೆ; ಮತ್ತು ಅವರಿಂದ ಹೊರಗಿನ ಮತ್ತು ವಸ್ತುನಿಷ್ಠ ಶಕ್ತಿ ಮೂಲವಾದ್ದರಿಂದ ಅವರು ಅದನ್ನು ಅಂತರಂಗೀಕರಿಸಿಕೊಂಡಿಲ್ಲ. ಆದುದರಿಂದ ಬಂಡವಾಳ ಮುಕ್ತ ವಿಶ್ವವು ಯಂತ್ರ ಮುಕ್ತ ವಿಶ್ವವಾಗಲು ಸಾಧ್ಯ. ಇಂಥ ಜಗತ್ತನ್ನು ಹೊಸದಾಗಿ ಪುನರ್ನಿರ್ಮಿಸಲು ಇನ್ನೂ ಯಂತ್ರ ತನ್ನ ಅಡಿಯಾಳಾಗಿ ಮಾಡಿಕೊಳ್ಳದ ಜನರಿಂದ ಮಾತ್ರ ಸಾಧ್ಯ.

**ತಂತ್ರಜ್ಞಾನ (Technology)**

ಯಂತ್ರವು ಆಧುನಿಕ ವಿಜ್ಞಾನದ ಭಾಗವೆನಿಸಿದ ತಂತ್ರಜ್ಞಾನವನ್ನು ಒಳಗೊಂಡಿದೆ. ಮೊದಲ ನೋಟಕ್ಕೆ ಗೋಚರಿಸುವ ಅದರ ಲಕ್ಷಣಗಳೆಂದರೆ ವೇಗ, ಅಳತೆ, (scale), ಶಬ್ದ (noise) ಮತ್ತು ಥಳಥಳಿಸುವ ಹೊಳಪು (glitter). ಯಂತ್ರವು ಮಾನವರನ್ನು, ಸಾಮಗ್ರಿಗಳನ್ನು, ಶಕ್ತಿ ಮತ್ತು ಮಾಹಿತಿಯನ್ನು ಹಿಂದೆಂದೂ ಗೊತ್ತಿರದ ಅಗಾಧ ಪ್ರಮಾಣದಲ್ಲಿ ಮತ್ತು ಸತತ ವೃದ್ಧಿಸುವ ವೇಗದಲ್ಲಿ ವ್ಯವಸ್ಥೆಗೊಳಪಡಿಸುತ್ತದೆ. ಅದೇ ವೇಗದಲ್ಲಿ ಮತ್ತು ಅದೇ ಬೃಹತ್ ಪ್ರಮಾಣದಲ್ಲಿ ಅದು ಸಮಾಜಗಳ ಜ್ಞಾನಭಂಡಾರದ ಆಧಾರಗಳನ್ನೇ ನಾಶಗೊಳಿಸುತ್ತದೆ. ಅದು ಕೆಲವರಿಗಷ್ಟೇ ಸಮೃದ್ಧಿ ಮತ್ತು ವೈಭವವನ್ನು ಉತ್ಪಾದಿಸುತ್ತದೆ. ಬಹುತೇಕ ಜನರನ್ನು ದಾರಿದ್ರ್ಯ, ಕತ್ತಲು ಮತ್ತು ಗದ್ದಲದ ಸಪ್ಪಳದ ಆಳಕ್ಕೆ ದೂಡುತ್ತದೆ. ಆಧುನಿಕ ತಂತ್ರಜ್ಞಾನ ಮಾಡುವ ಸೃಷ್ಟಿ ಮತ್ತು ನಾಶ ಹಾಗೂ ವ್ಯವಸ್ಥೆ ಮತ್ತು ಅವ್ಯವಸ್ಥೆಯ ಹಿನ್ನೆಲೆಯಲ್ಲಿ ಈ ತಂತ್ರಜ್ಞಾನದ ಸಾಮಾನ್ಯ ಲಕ್ಷಣವಿದೆ : ಅದೇ ಹಿಂಸೆ. ಯಾವ ಸಂದರ್ಭದಲ್ಲೂ ರಾಜಿಗೆ ಸಿದ್ಧವಿಲ್ಲದ ಯಂತ್ರದ ಈ ಹಿಂಸಾ ಸ್ವರೂಪವೇ ಗಾಂಧಿಯವರು ಅಹಿಂಸಾ ತತ್ತ್ವದ ನಿಲುವಿಗೆ ಅಂಟಿಕೊಳ್ಳಲು ತತ್‌ಕ್ಷಣದ ಕಾರಣವಿರಬಹುದು.

ಒಂದು ರಾಷ್ಟ್ರ ಶಕ್ತಿಯನ್ನು ಅದು ಹೊಂದಿರುವ ಪ್ರಮುಖ ಯುದ್ಧತಂತ್ರದ ಶಸ್ತ್ರಾಸ್ತ್ರಗಳ ಪ್ರಮಾಣದಿಂದ ಇಂದು ಅಳೆಯಲಾಗುತ್ತದೆ. ರಾಷ್ಟ್ರದ ಪ್ರಗತಿಯನ್ನು ಅದು ಉತ್ಪಾದಿಸುವ ಉಕ್ಕು, ವಿದ್ಯುತ್ ಮತ್ತು ರಸಗೊಬ್ಬರಗಳು ಮತ್ತು ಕಂಪ್ಯೂಟರ್‌ಗಳು ಮತ್ತು ದೂರಸಂಪರ್ಕ ಸಾಧನಗಳು ಸೇರಿದಂತೆ ಆಧುನಿಕ ತಂತ್ರ ಸಾಧನಗಳ ಆಧಾರದ ಮೇಲೆ ನಿರ್ಣಯ ಮಾಡಲಾಗುತ್ತಿದೆ. ಜನರಿಗೆ ದೊರೆಯುವ ಆಹಾರ, ವಸತಿ ಮತ್ತು ಬಟ್ಟೆಬರೆಯನ್ನು ಆ ಸಮಾಜದ ಭೌತಿಕ ಪ್ರಗತಿಯ ಸಾಧನೆಗೆ ಮಾನದಂಡವಾಗಿ ಲೆಕ್ಕಕ್ಕೇ ತೆಗೆದುಕೊಳ್ಳುವುದಿಲ್ಲ. ತಂತ್ರಜ್ಞಾನವು ಸಕಲ ಪ್ರಗತಿಯ ಮಟ್ಟವನ್ನು ಅಳೆಯುವ ಒರೆಗಲ್ಲಾಗಿದೆ. ಇತ್ತೀಚಿನ ಅತ್ಯಾಧುನಿಕ ಉಪಕರಣಗಳಿದ್ದರೆ ಮಾತ್ರ ಅದು ಉತ್ತಮ ಆಸ್ಪತ್ರೆ : ಅತ್ಯುತ್ತಮ ಪ್ರಯೋಗಾಲಯವಿದ್ದರೆ ಮಾತ್ರ ಅದೊಂದು ಒಳ್ಳೆಯ ಶಾಲೆ; ಅತ್ಯಾಧುನಿಕ ಮೂಲ ಸೌಲಭ್ಯಗಳಿದ್ದರೆ ಮಾತ್ರ ಲಲಿತಕಲಾ ಶಾಲೆಗೆ ಮಾನ್ಯತೆ. ಕುಟುಂಬ ವ್ಯವಸ್ಥೆಯೂ ಈ ನಿಯಮಕ್ಕೆ ಹೊರತಲ್ಲ. ಒಂದು ಕಾಲದಲ್ಲಿ ಮನೆಯ ಸುಖದ ಕಲ್ಪನೆಯು ನಿಸರ್ಗದ ಲಯದೊಡನೆ ತಾದಾತ್ಮ್ಯದಿಂದ ಪಡೆದ ಮುಷ್ಯನ ಸೌಂದರ್ಯಾನುಭೂತಿಯ ಮೇಲೆ ನಿಂತಿತ್ತು. ಇಂದು ವಿದ್ಯುತ್ ಸಾಧನಗಳ, ಇಲೆಕ್ಟ್ರಾನಿಕ್

ಉಪಕರಣಗಳ ಆಡಂಬರದ ಪ್ರದರ್ಶನವಿದ್ದರೆ ಅದೊಂದು ಉತ್ತಮ ಮನೆ. ಇವುಗಳನ್ನು ಪಡೆಯುವ ಹಿಂದೆ ಅರಣ್ಯ, ಖನಿಜಗಳು ಮತ್ತು ಕೃಷಿಯನ್ನೊಳಗೊಂಡಂತೆ ಅಪಾರ ಪ್ರಮಾಣದ ನಿಸರ್ಗದ ನಾಶ ಮತ್ತು ಜಗತ್ತಿನಾದ್ಯಂತ ಅಗಾಧ ಪ್ರಮಾಣದ ಮಾನವ ಸಮುದಾಯಗಳ ಧ್ವಂಸದ ಚರಿತ್ರೆಯಿದೆ. ತಂತ್ರಜ್ಞಾನ, ಆ ಮೂಲಕ ಹಿಂಸೆಯು ನಮ್ಮ ಬಗೆಗಿನ ನಮ್ಮ ಕಲ್ಪನೆಯ ಆಳಕ್ಕೇ ಇಳಿದುಬಿಟ್ಟಿದೆ. ಬಲ, ಆಕ್ರಮಣ ಮತ್ತು ಅಧಿಕಾರದ ಪರಿಕಲ್ಪನೆಗಳು ಆಧುನಿಕ ಮಾನವ ಸಮಾಜ ಚರಿತ್ರೆ ಮುಂತಾದ ಸಕಲ ಪರಿಕಲ್ಪನೆಯಲ್ಲೂ ಕೇಂದ್ರ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ನೀತಿ ಮತ್ತು ಸೌಂದರ್ಯದ ಆರಾಧನೆಗಳು ಮಾನವನ ಯಾಂತ್ರಿಕ ಮತ್ತು ಭೋಗಸುಖದ ಕ್ರಿಯೆಗಳಿಗೆ ಜಾಗ ತೆರವು ಮಾಡಿವೆ. ಇದನ್ನು ಕಂಡೇ ಗಾಂಧೀಜಿ ಹಿಂದ್ ಸ್ವರಾಜ್‌ನಲ್ಲಿ "ಮ್ಯಾಂಚೆಸ್ಟರ್‌ನಲ್ಲಿ ತಯಾರಾದ ಬಟ್ಟೆಗಳನ್ನು ಕೊಂಡಾಗ ಅದಕ್ಕೆ ಹಣದ ರೂಪದಲ್ಲಿ ಬೆಲೆ ತೆರುತ್ತಿರುತ್ತೇವೆ. ನಮ್ಮ ನೆಲದಲ್ಲೇ ಯಂತ್ರಗಳು ಸ್ಥಾಪನೆ ಮಾಡಿದರೆ ನಾವು ನಮ್ಮ ರಕ್ತದ ರೂಪದಲ್ಲಿ ಬೆಲೆ ತೆರಬೇಕಾದೀತೆಂದು" ಹೇಳಿದ್ದಾರೆ.

ಆದರೆ, ಭಾರತದಲ್ಲಿ ಮತ್ತು ಇತರ ಯೂರೋಪೇತರ ರಾಷ್ಟ್ರಗಳಲ್ಲಿ ಹಿಂಸಾಪ್ರವೃತ್ತಿ ಇಲ್ಲದ ಮತ್ತು ಆಕ್ರಮಣಶೀಲತೆಯಿಲ್ಲದ ಜನರು ಇನ್ನೂ ಇದ್ದಾರೆ. ಅಸ್ತಿತ್ವದ ಪ್ರಧಾನ ಅಸ್ತ್ರವಾಗಿ ಬಲವನ್ನು ಬಳಸುವುದರಲ್ಲಿ ಅವರಿಗೆ ನಂಬಿಕೆಯಿಲ್ಲ. ಆ ಮಂದಿಯ ಬದುಕನ್ನು ಅವರ ಸಮಾಜ ರಚನೆಯನ್ನು ಸಂಪೂರ್ಣ ಅಸ್ತವ್ಯಸ್ತಗೊಳಿಸುವ ಮೂಲಕ ಪಶುಪ್ರಾಯವಾಗಿ ಮಾಡಲಾಗಿದೆ. ಈ ಮಂದಿಯಲ್ಲಿ ರೈತರು, ಕುಶಲಕರ್ಮಿಗಳು, ಬುಡಕಟ್ಟು ಜನಾಂಗ ಮತ್ತು ಮಹಿಳೆಯರಿದ್ದಾರೆ. ಅವರ ಅನುಭವಜನ್ಯ ಜ್ಞಾನಪರಂಪರೆ, ಕಾರ್ಯವಿಧಾನ, ಉತ್ಪಾದನಾ ವ್ಯವಸ್ಥೆ, ಕಾಯಕನೀತಿ, ಸಾಮಾಜಿಕ ಮತ್ತು ನೈತಿಕ ಮೌಲ್ಯಗಳೆಲ್ಲವೂ ಅವಮಾನಕ್ಕೀಡಾಗಿವೆ. ಆಧುನಿಕ ತಂತ್ರಜ್ಞಾನ ಮತ್ತು ಅಭಿವೃದ್ಧಿಯ ಸಿದ್ಧಾಂತದ ಮೂಲಕ ಅವರ ಜ್ಞಾನ ಮತ್ತು ತಾಂತ್ರಿಕ ಪರಂಪರೆಗಳನ್ನು ಐಡಿಯಾಲಜಿ, ಆಧುನಿಕ ತಂತ್ರಜ್ಞಾನ ಬಳಕೆ ಮತ್ತು ಅಭಿವೃದ್ಧಿ ಕಲ್ಪನೆಗಳ ಮೂಲಕ ಅಪವಿತ್ರಗೊಳಿಸುವ ಕಾರ್ಯ ಮುಂದುವರೆದಿದೆ. ಇಷ್ಟಾದರೂ ಈ ಜನರು ತಮ್ಮ ಅಸ್ತಿತ್ವದ ಬಲದಿಂದಲೇ ಆಧುನಿಕ ತಂತ್ರಜ್ಞಾನವಿಲ್ಲದ ಭವಿಷ್ಯ ಸಮಾಜ ನಿರ್ಮಾಣ ಸಾಧ್ಯತೆಯ ಕನಸನ್ನು ಜೀವಂತವಾಗಿಸಿದ್ದಾರೆ.

ಸಾಂಪ್ರದಾಯಿಕ ತಂತ್ರಜ್ಞಾನಗಳಿಗಿಂತಲೂ ಆಧುನಿಕ ತಂತ್ರಜ್ಞಾನ ಉತ್ಕೃಷ್ಟ, ಹೆಚ್ಚು ದಕ್ಷ ಮತ್ತು ಸ್ಪರ್ಧಾತ್ಮಕವಾಗಿ ಆಕರ್ಷಕವಾದದ್ದು ಎಂಬ ಮಿಥ್ಯೆಯನ್ನು ಪ್ರಚುರಪಡಿಸಿದ್ದು ಆಧುನಿಕ ಶಿಕ್ಷಣ ಮತ್ತು ಪ್ರಭುತ್ವ. ಆಧುನಿಕ ವಿಜ್ಞಾನ ಅಥವಾ ಆಧುನಿಕ ತಂತ್ರಜ್ಞಾನ ಬೇರಾವುದೇ ಜ್ಞಾನಕ್ಷೇತ್ರದ ಜೊತೆಗಾಗಲೀ, ಬೇರಾವುದೇ ರೀತಿಯಲ್ಲಿ ಕಲಿತ ಅಥವಾ ಉತ್ಪಾದನೆ ಮಾಡುವ ವಿಧಾನದ ಜೊತೆಗಾಗಲೀ ಸ್ಪರ್ಧೆಗಿಳಿಯಲೇ ಇಲ್ಲ. ಸೇವಾಬಲದ ಬೆಂಬಲದಿಂದ ಪ್ರಭುತ್ವವು ತನ್ನ ಆರ್ಥಿಕ, ರಾಜನೈತಿಕ ಮತ್ತು ಕಾನೂನು ಪ್ರಕ್ರಿಯೆಗಳನ್ನು ಛೂಬಿಟ್ಟು ಸಾಂಪ್ರದಾಯಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಸಮರ್ಥವೆಂದು ಮೂಲೋತ್ಪಾಟನೆ ಮಾಡಿದವು. ಈ ರೀತಿಯಲ್ಲಿ ಅವು ತೆರವುಗೊಳಿಸಿದ ಜಾಗದಲ್ಲಿ

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರವೇಶ ಪಡೆಯಿತು. ಈ ಪ್ರಕ್ರಿಯೆ ಈಗಲೂ ಮುಂದುವರೆಯುತ್ತಿದೆ ಮತ್ತು ಇತ್ತೀಚಿನ ಅತ್ಯಾಧುನಿಕ ತಂತ್ರಜ್ಞಾನಗಳು ಸಾಮ್ರಾಜ್ಯಶಾಹಿಯ ಬಲದ ಬೆಂಬಲದಿಂದ ಯಶಸ್ವಿಯಾಗುತ್ತಿವೆ. ಅಂದರೆ ಇದರರ್ಥ ಈ ಯಶಸ್ಸಿಗೆ ತಂತ್ರಜ್ಞಾನವು ಬಲ ಮತ್ತು ಹಿಂಸೆಯ ತರ್ಕವನ್ನೊಳಗೊಂಡಿರಬೇಕು.

ಹಾಗಾಗಿ ತಂತ್ರಜ್ಞಾನ ಮಾನವನ ಕ್ರಿಯಾತ್ಮಕ ಬದುಕನ್ನೇ ಕೊಳ್ಳೆ ಹೊಡೆಯುತ್ತದೆ. ನಿಜವಾದ ಮಾನವನ ಕ್ರಿಯೆಗೆ ಹಿಂಸೆ ಗೊತ್ತಿಲ್ಲ. ಆದುದರಿಂದ ಆಧುನಿಕ ತಂತ್ರಜ್ಞಾನದ ಮೊದಲ ಬಲಿಗಳೆಂದರೆ ರಾಜಕಾರಣಿಗಳು, ವಿಜ್ಞಾನಿಗಳು ಮತ್ತು ಬಂಡವಾಳಿಗರು. ಅದು ಅವರನ್ನು ಆಯ್ಕೆಯ ಸ್ವಾತಂತ್ರ್ಯವೇ ಇಲ್ಲದ ಒಂದು ಪರಿಸ್ಥಿತಿಯಿಂದ ಮತ್ತೊಂದು ಪರಿಸ್ಥಿತಿಗೆ ಒಯ್ಯುತ್ತಾ, ಅವರ ಜೊತೆ ಇಡೀ ಸಮಾಜವನ್ನೇ ಕೊಂಡೊಯ್ಯುತ್ತದೆ. ಆದ್ದರಿಂದ ರೈತರು ಮತ್ತು ಕುಶಲಕರ್ಮಿಗಳು ಈ ಯಂತ್ರ ಹೂಡಿದ ಸಮರದಲ್ಲಿ ಆತ್ಯಂತಿಕವಾಗಿ ನಗುತ್ತಾ ಜಯಶಾಲಿಗಳಾಗುವಂತೆ ಕಾಣುತ್ತಾರೆ. ಗಾಂಧಿಯವರ ಯಂತ್ರವಿರೋಧಿ ಧೋರಣೆಗೆ ಅನುಗುಣವಾಗಿ ಆಧುನಿಕ ತಂತ್ರಜ್ಞಾನಕ್ಕೆ ತೋರುವ ವಿರೋಧಕ್ಕೆ ತಾತ್ತ್ವಿಕವಾಗಿ ಹಾಗೂ ಪ್ರಾಯೋಗಿಕವಾಗಿ ಬಹಳಷ್ಟು ಮಹತ್ತ್ವವಿದೆ. ಆದರೆ ಈ ವಿರೋಧವು ನಿಜವಾಗಿರುವ ಅಹಿಂಸೆಯಲ್ಲೇ ಬೇರೂರಬೇಕಾಗಿರುವ ಆವಶ್ಯಕತೆಯಿದೆ.

### ಕಾಲ (Time)

ಯಂತ್ರವು ಮಾನವನ ಬಿಡುವಿನ ವೇಳೆಯನ್ನು ಕಸಿದುಕೊಂಡಿದೆ. ಇದು ಬದುಕಿನ ಮಟ್ಟವನ್ನು ಭ್ರಷ್ಟಗೊಳಿಸಿರುವುದು ಮಾತ್ರವಲ್ಲ, ವಾಸ್ತವವಾಗಿ ಅವನಿಂದ ಬದುಕನ್ನೆ ಕಿತ್ತುಕೊಂಡು ಎಂದೆಂದಿಗೂ ಗುರಿಯಿಲ್ಲದೆ ಅಲೆದಾಡುವಂತೆ ಮಾಡಿದೆ. ಈ ಯಂತ್ರಯುಗವು ಮಾನವನಿಗೆ ಹಿಂದೆಂದೂ ಗೊತ್ತಿರದ ಸಮಯದ ಪರಿಕಲ್ಪನೆಯೊಂದನ್ನು ಸೃಷ್ಟಿಸಿದೆ.

ಯಂತ್ರವು ಜಗತ್ತಿನೆಲ್ಲೆಡೆ, ಹಗಲೂ ಇರುಳು, ಇಡೀ ವರ್ಷ ಟಿಕ್ ಟಿಕ್ ಎಂದು ಸತತವಾಗಿ ಕಾಲವನ್ನು ಅಳೆಯುತ್ತಾ ಜಗತ್ತಿನಾದ್ಯಂತ ಮುಂದುವರೆಯುತ್ತಿದೆ. ಸಮಯದ ಈ ಪರಿಕಲ್ಪನೆಯನ್ನು ಸಂವೇದನೆಯಿಲ್ಲದ, ವರ್ಣವೈವಿಧ್ಯವಿಲ್ಲದ, ಋತುಮಾನಗಳ ಸ್ಪರ್ಶವಿಲ್ಲದ ಗಡಿಯಾರವೊಂದರಲ್ಲಿ ಪ್ರತಿಫಲಿಸುತ್ತ, ಸೂರ್ಯನ ಸುತ್ತ ಭೂಮಿಯ ಪರಿಭ್ರಮಣದ ಅವಧಿಯ ಸಾಂಗತ್ಯಕ್ಕೆ ತಕ್ಕಂತೆ ಯಾಂತ್ರಿಕವಾಗಿ ಕಾಲವನ್ನು ಗಡಿಯಾರ ಮತ್ತು ಕ್ಯಾಲೆಂಡರ್‌ಗಳಲ್ಲಿ ವಿಭಜಿಸಿ ತೋರಿಸಲಾಗಿದೆ. ಈ ಕಾಲವು ಲೋಕಾತೀತ (Supra-terrestrial) ಮತ್ತು ಭೂಮಿಯ ಮೇಲೆ ಮನುಷ್ಯನೂ ಬದುಕುವುದರಿಂದ ಅದು ಮಾನವಾತೀತ (Supra-human). ಭೂಮಿಗೆ ಸಂಬಂಧ ಪಡದ ಈ 'ಕಾಲ' ಮಾನವನಿಗೆ ಅಪರಿಚಿತ. ನಾವು ಅದನ್ನು ಸದಾ ಅಳೆಯುತ್ತೇವೆ. ಆದರೂ ಅದನ್ನು ಅರ್ಥ ಮಾಡಿಕೊಳ್ಳಲು ವಿಫಲರಾಗಿದ್ದೇವೆ. ಆಧುನಿಕ ಯಂತ್ರ ಸಿದ್ಧಾಂತವು ಕಾಲದ ಮೇಲೆ ಸೀಮಿತ ಸ್ಥಿತಿ ಹೇರಲು ಪ್ರಯತ್ನಿಸಿದೆ. ಅದೇ ಕಾಲದ ಏಕತಾನತೆ.

ಯಂತ್ರದ ಕಾಲವು ಲೋಕಾತೀತವಾದರೂ, ನಮ್ಮ ಅರಿವಿಗೆ ಅದು ಸಿಗದಿದ್ದರೂ (ಸಾಪೇಕ್ಷ ಸಿದ್ಧಾಂತದ ಹೊರತು) ಅದು ಏಕತಾನತೆಯಿಂದ ಕೂಡಿದೆ ಎಂಬುದು ನಮಗೆ ತಿಳಿದಿದೆ. ಅದು ಬಣ್ಣ, ಋತುಮಾನ ಪ್ರಕ್ರಿಯೆ ಮತ್ತು ಭೂಮಿಯ ಮೇಲಿನ ಘಟನಾವಳಿಗಳ ಹಂಗಿಲ್ಲದೆ ಒಂದೇ ಸ್ವರದಿಂದ ಮುಂದುವರೆಯುತ್ತದೆ. ಒಬ್ಬ ಪಾತಕಿಗೆ ಬಿಡುಗಡೆಯ ಸಂಭವವಿಲ್ಲದಿದ್ದರೆ, ಆತ ಪಾತಕ ಸಂದರ್ಭವನ್ನು ಪುನರಾವಲೋಕಿಸುವ, ವಿಮರ್ಶಿಸುವ ಅವಕಾಶವನ್ನು ನಿರಾಕರಿಸುತ್ತಾನೆ. ಹಾಗೆಯೇ ಒಂದು ಯಂತ್ರ ಜನಿಸಿ, ಬದುಕಿ ಉಳಿಯಬೇಕಾದರೆ ಜಗತ್ತಿನಾದ್ಯಂತ ಮಿಲಿಯ-ಮಿಲಿಯ ಜನರನ್ನು ಕೊಲ್ಲಲೇಬೇಕು. ಆದ್ದರಿಂದಲೇ ಯಂತ್ರ ಬಾಳಿದೆ. ಯಂತ್ರ ಸಿದ್ಧಾಂತವು, ಈ ಘೋರ ಪಾತಕಗಳು ನಡೆದ ಸ್ಥಳ-ಕಾಲ-ದೇಶ ಮರ್ಯಾದಿತ ಪ್ರದೇಶಗಳ ಪುನಾರವಲೋಕನಕ್ಕೆ ಸಿದ್ಧವಾಗದು. ಹಾಗೊಂದು ವೇಳೆ ಆ ಸಿದ್ಧಾಂತವು ವಿಮರ್ಶೆಯನ್ನು ಬಯಸಿದರೆ ಅದೊಂದು ಅಚ್ಚರಿಯ ವಿಷಯ.

ಯಂತ್ರ ಯುಗದಲ್ಲಿ ಸಾಯದೆ ಬದುಕುಳಿದಿರುವವರು ಭೌತಿಕವಾಗಿ ಬಿಡುವಿನ ವೇಳೆಯಿಂದ ವಂಚಿತರಾಗಿದ್ದಾರೆ. ಇಂದು ಸೋಮಾರಿತನಕ್ಕೂ ಬಿಡುವಿನ ವೇಳೆಗೂ ವ್ಯತ್ಯಾಸ ಕಾಣುತ್ತಿಲ್ಲ. ಕೆಲಸ ಮಾಡದವರನ್ನೆಲ್ಲಾ ಒಂದೇ ಗುಂಪಾಗಿ ಗುರುತಿಸಲಾಗುತ್ತಿದೆ. ವಿರಾಮ ಕಾಲವು ಸೃಜನಶೀಲತೆ, ಶ್ರೇಷ್ಠತೆ, ಸೊಗಸು ಮತ್ತು ಸಂವೇದನೆಯನ್ನು ಪೋಷಿಸುವ ಮಾನವಕ್ರಿಯೆಯ ರೂಪವಾಗಿದೆ. ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ಭಾರತದ ಶ್ರೇಷ್ಠತೆಯ ಪರಂಪರೆಯು ಬಿಡುವಿನ ವೇಳೆಗೆ ಋಣಿಯಾಗಿದೆ. ಎಷ್ಟೆಂದರೆ ಒಬ್ಬ ಕುಶಲಕರ್ಮಿಯು ತನ್ನ ಬಿಡುವಿನ ವೇಳೆಗೆ ಋಣಿಯಾಗಿರುವಷ್ಟು. ಮನುಷ್ಯ ಬಿಡುವಿನ ವೇಳೆಯಲ್ಲಿ ಚಿಂತಿಸುತ್ತಾ, ಕಲ್ಪನಾ ಲಹರಿಯಲ್ಲಿ ತೇಲುತ್ತಾ, ತನ್ನ ಜೊತೆಯಲ್ಲೇ ತಾನು ಆಟವಾಡುತ್ತಾ, ಕನಸನ್ನು ಕಾಣುತ್ತ ಪರರ ಹಿತಚಿಂತನೆ ಮಾಡುತ್ತಾ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬದುಕುತ್ತಾನೆ. ಯಂತ್ರದ ಜೊತೆ ಕೆಲಸ ಮಾಡದವನು, ಅರ್ಥಾತ್ ಆಧುನಿಕ ಸಮಾಜದ ರಚನೆಯಲ್ಲಿ ಪೊಲೀಸ್, ಗುಮಾಸ್ತ ಅಥವಾ ಶಿಕ್ಷಕ ಇತ್ಯಾದಿ ಯಂತ್ರ ಕಾರ್ಮಿಕನಾಗದವನಿಗೆ ಬಿಡುವಿನ ವೇಳೆಯ ಮಹತ್ತ್ವದ ಬಗೆ ಒಂದು ಕಲ್ಪನೆಯಿರಬಹುದಲ್ಲಾ ! ಅಂಥವರೇ ಒಂದು ಕಾಲದಲ್ಲಿ ಅಮೂಲ್ಯ ಆಸ್ತಿಯೆನಿಸಿದ್ದ ಬಿಡುವಿನ ವೇಳೆಯನ್ನು ಮನುಕುಲಕ್ಕೆ ಮರಳಿ ಗಳಿಸಿಕೊಡಬಹುದು.

**ಅಂತರಾರ್ಥ (Connotation)**

'ಯಂತ್ರ' ಎಂದಾಗ ಹೊಳೆಯುವ ಅರ್ಥ, ಮಾನವನ ಕಾರ್ಯಗಳನ್ನು ಸುಲಭವಾಗಿ, ಕ್ಷಿಪ್ರವಾಗಿ ಮಾಡಲು ವಿನ್ಯಾಸಗೊಳಿಸಿದ ಸಾಧನ. ಅವುಗಳ ವಿನ್ಯಾಸ ವಿಶಿಷ್ಟವಾಗಿರುತ್ತದೆ. ಬೇರೆ ಯಾವುದೇ ರೀತಿಯಲ್ಲಿ ಮಾಡಲಸಾಧ್ಯವಾದ ಕಾರ್ಯಗಳನ್ನು ಮಾಡಲು ಯಂತ್ರವನ್ನು ಹೆಚ್ಚಾಗಿ ಬಳಸಲಾಗುತ್ತದೆ. ಉದಾಹರಣೆಗೆ ಬೈಸಿಕಲ್ ಯಂತ್ರವು ಕಡಿಮೆ ಅಂತರದ ಮಾನವನ ಸಂಚಾರವನ್ನು ಸುಲಭ ಹಾಗೂ ವೇಗಗೊಳಿಸುತ್ತದೆ. ಅದೇ ರೀತಿ ಹೊಲಿಗೆಯನ್ನು ಕ್ಷಿಪ್ರ ಮತ್ತು ಸುಗಮ ಗತಿಯಲ್ಲಿ ಹೊಲಿಗೆಯಂತ್ರ ನಿರ್ವಹಿಸುತ್ತದೆ.

ಬೇರೆ ರೀತಿಯಲ್ಲಿ ಕಡಿಯಲು ಕಷ್ಟಸಾಧ್ಯವಾದ ಮರದ ದಿಮ್ಮಿಗಳನ್ನು ಕಡಿಯಲು ಕೊಡಲಿ ನೆರವಾಗುತ್ತದೆ. ಹಾಗೆಯೇ ಒಂದು ಕುಲುಮೆ ಬೇರೆ ರೀತಿಯಲ್ಲಿ ಕರಗಿಸಲು ಕಷ್ಟವಾದ ಲೋಹಗಳನ್ನು ಕರಗಿಸುತ್ತದೆ. ಹಾರೆ, ಸನಿಕೆಯಿಂದ ಅಥವಾ ಇತರ ಸಲಕರಣೆಗಳಿಂದ ಸುಲಭವಾಗಿ ಕೃಷಿಗೆ ಸಿದ್ಧಪಡಿಸಲಾಗದ ಭೂಮಿಯನ್ನು ನೇಗಿಲು ಸುಲಭವಾಗಿ ಉಳುಮೆ ಮಾಡುತ್ತದೆ. ಹೀಗೆಯೇ ಸನ್ನೆ ಮತ್ತು ರಾಟೆಯ ವ್ಯವಸ್ಥೆಯ ಬಳಕೆಯನ್ನೊಳಗೊಂಡ ಬೇರೊಂದು ಬಗೆಯ ಸಾಧನಗಳ ಗುಂಪು ಇವೆ. ಒಂದು ಸನ್ನೆ ಕಡಿಮೆ ಬಲಪ್ರಯೋಗದ ಮೂಲಕ ಭಾರದ ವಸ್ತುಗಳನ್ನು ಎತ್ತಲು ಸಹಾಯ ಮಾಡುತ್ತದೆ. ತುಂಬಾ ಭಾರದ ವಸ್ತುಗಳನ್ನು ಎತ್ತಲು ಸರಪಳಿ–ರಾಟೆ ಬಳಸುವ ಕ್ರಮ ಎಲ್ಲರಿಗೂ ಚಿರಪರಿಚಿತ. ಇವೆಲ್ಲವೂ ಮಾನವನ ಕೆಲಸವನ್ನು ಸುಲಭವಾಗಿ ಮತ್ತು ಕ್ಷಿಪ್ರವಾಗಿ ಮಾಡುವ ಉಪಕರಣಗಳ ಅಥವಾ ಯಂತ್ರಗಳಿಗೆ ಉದಾಹರಣೆಗಳು. ಇವೇ ಯಂತ್ರದ ಅರ್ಥವಾಗಿದ್ದರೆ, ಮತ್ತು ಯಂತ್ರಕ್ಕೆ ಉದಾಹರಣೆಗಳಾಗಿದ್ದರೆ ಗಾಂಧಿಯವರು ಅಂಥ ಯಂತ್ರಗಳ ವಿರೋಧಿಯಲ್ಲ. ಗಾಂಧಿಯವರು ವಿರೋಧಿಸಿದ್ದು ಕಾಲಾನುಕ್ರಮದಲ್ಲಿ ಬೇರೆಯೇ ಅರ್ಥ ಪಡೆದುಕೊಂಡ ಆಧುನಿಕ ಯಂತ್ರಗಳನ್ನು.

ಯಂತ್ರ ವಾಸ್ತವವಾಗಿ ಇಂದು ಬಂಡವಾಳದ ಒಂದು ರೂಪ. ಅದು ಬೀರಿದ ದೊಡ್ಡ ಪ್ರಭಾವವೆಂದರೆ ಕೂಲಿ–ದುಡಿಮೆಯ ಸೃಷ್ಟಿ. ಆದರೆ 'ಬಂಡವಾಳ'ವಾಗಲೀ 'ದುಡಿಮೆ'ಯಾಗಲೀ 'ಯಂತ್ರ' ಅರ್ಥಕ್ಕೆ ಸಂಬಂಧಪಟ್ಟಿಲ್ಲ. ಇವು ಆನುಷಂಗಿಕ ಸಂಗತಿಗಳು. ವಿಭಿನ್ನ ಸಮಾಜಗಳಲ್ಲಿ ಅವು ಯಂತ್ರದ ಸಹವರ್ತಿಗಳಾಗಿರಬಹುದು ಅಥವಾ ಆಗಿಲ್ಲದಿರಬಹುದು. ಸಮಾಜವಾದಿಗಳು ಬಂಡವಾಳ ಮತ್ತು ದುಡಿಮೆ–ಕೂಲಿರಹಿತವಾದ ಭವಿಷ್ಯದ ಸಮಾಜವನ್ನು ಊಹಿಸುತ್ತಾರೆ. ಆದರೆ ಅಲ್ಲಿ ಯಂತ್ರದ ಅಸ್ತಿತ್ವವನ್ನು ಒಪ್ಪಿಕೊಳ್ಳುತ್ತಾರೆ. ಸಮಾಜದ ಸ್ತ್ರೀ ಪುರುಷರಿಗೆ ಶ್ರೇಷ್ಠ ಗುರಿಗಳನ್ನು ಕಂಡುಕೊಳ್ಳಲು ನೆರವಾಗುವ ಬಿಡುವಿನ ವೇಳೆ ದೊರೆಯುವಂಥ ಸಮಾಜದ ಪ್ರತಿಮೆಯೊಂದನ್ನು ಅವರು ಸೃಷ್ಟಿಸಿದ್ದಾರೆ. ತಂತ್ರಜ್ಞಾನ ನಿರಂತರವಾಗಿ ಬದಲಾಗುತ್ತದೆ. ಯಾವುದೇ ನಿರ್ದಿಷ್ಟ ತಂತ್ರಜ್ಞಾನವು 'ಯಂತ್ರ' ಪದದ ಅರ್ಥದ ಭಾಗವಾಗುವುದಿಲ್ಲ. ನಾವು 'ಸಂಕೇತಾರ್ಥ' (Denotation) ದ ಶೀರ್ಷಿಕೆಯಡಿಯಲ್ಲಿ ಚರ್ಚಿಸಿದ ಅಂಶಗಳೆಲ್ಲವೂ ಏನೆಲ್ಲ ಆಧುನಿಕ ಯಂತ್ರದ ಬೆಳವಣಿಗೆಯ ಜೊತೆಯಲ್ಲಿ ತೋರಿಕೆಯ ಅರ್ಥ ಬದಲಾವಣೆಯಾಗಿದೆಯೋ ಅದರ ಜೊತೆಯಲ್ಲಿ ಹೆಣೆದುಕೊಂಡಿರಬಹುದು. ಆದರೂ ಅದು 'ಯಂತ್ರ' ಪದದ ಅರ್ಥದ ಭಾಗವಲ್ಲ. ಇವೆಲ್ಲವುಗಳ ಪರಿಣಾಮವಾಗಿ ಯಂತ್ರವು ಹೊಸ ಅರ್ಥವನ್ನು ಗಳಿಸಿಕೊಂಡಿರುವುದು ನಿಜವಿರಬಹುದಾದರೂ, ಈ ಹೊಸ ಅರ್ಥ ಯಂತ್ರವನ್ನು ಅವಲಂಬಿಸಿಲ್ಲ.

ಮಾನವನ ಕಾರ್ಯವನ್ನು ಸುಲಭಗೊಳಿಸಲು ರೂಪುತಳೆದ ಯಂತ್ರ ಇಂದು ಮಾನವನಿಗೇ ಬದಲಿ ಸಾಧನವಾಗಿದೆ. ಕೆಲಸವನ್ನು ಕ್ಷಿಪ್ರವಾಗಿ ಮಾಡುವ ಹಿಂದಿನ ಸ್ಥಾನಮಾನದಿಂದ ಯಂತ್ರವು ಇಂದಿನ ಜಗತ್ತಿನಲ್ಲಿ 'ಅಧಿಕಾರ' ಎಂಬ ಅರ್ಥ ಪಡೆದಿದೆ. ಇದರ ಮೂಲ ಕಾರಣಗಳು ಸಾಮಾಜಿಕ ರಚನೆ, ಆಸ್ತಿ ಸಂಬಂಧಗಳು, ರಾಜಕೀಯ

ಅಧಿಕಾರ ವ್ಯವಸ್ಥೆಯ ಸ್ವರೂಪ ಮತ್ತು ಆಧುನಿಕ ವಿಜ್ಞಾನದಲ್ಲಿವೆ. ನಮಗೆ ಇಲ್ಲಿ ಸಂಬಂಧಿಸಿದ್ದು ವಿಜ್ಞಾನ ವಹಿಸುವ ಪಾತ್ರ ಮಾತ್ರ. ಯಂತ್ರದ ಅರ್ಥ ಬದಲಾವಣೆ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ ವಿಜ್ಞಾನದ ಪಾತ್ರವನ್ನು ಚರ್ಚಿಸೋಣ.

## ಯಂತ್ರದಿಂದ ಮಾನವನ ಉಚ್ಚಾಟನೆ

ಮಹಾನಗರಗಳಿಂದ ಹೊರಗಿರುವ ಯಾರನ್ನೇ ಪ್ರಶ್ನಿಸಿ, ಅವರು ಯಂತ್ರ ತಮ್ಮ ದುಡಿಮೆಯನ್ನು ಕಸಿದುಕೊಂಡ ಕತೆಯನ್ನು ಹೇಳುತ್ತಾರೆ. ಕುಂಬಾರರು, ನೇಕಾರರು, ಕಮ್ಮಾರರು, ಬಡಗಿಗಳು ಇವರೆಲ್ಲರನ್ನು ಯಂತ್ರ ಅವರ ಕೆಲಸದಿಂದ ಉಚ್ಚಾಟಿಸಿ ಅವರ ಸ್ಥಾನದಲ್ಲಿ ತಾನು ಬದಲಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಮಹಿಳೆಯರ ಕೆಲಸವನ್ನೂ ಎಲ್ಲ ಕಡೆಯಲ್ಲೂ ಯಂತ್ರ ಕಸಿದುಕೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಸುಮ್ಮನಿರುವ ಲಕ್ಷಾಂತರ ಮಂದಿ ಕೆಲಸವನ್ನು ಕಳೆದುಕೊಂಡಿದ್ದಾರೆ. ನಗರದ ಜನತೆ ಸಹ ತಮ್ಮ ಕೆಲಸವನ್ನು ಕಳೆದುಕೊಂಡಿದ್ದಾರೆ. ಆದರೆ ಅವರು ಆ ಬಗ್ಗೆ ದೂರುವುದಿಲ್ಲ. ಏಕೆಂದರೆ ಅವರ ಪರಾವಲಂಬಿ ಜೀವಿತಕ್ಕೆ ಕೂಲಿ ಸಂದಾಯವಾಗುತ್ತದೆ. ಮಹಾನಗರಗಳಲ್ಲಿ ಸೇವಾ ಕ್ಷೇತ್ರಗಳ ಕ್ಷಿಪ್ರ ಬೆಳವಣಿಗೆಗೆ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಹರಡಿಕೊಳ್ಳುತ್ತಿರುವ ನಿರುದ್ಯೋಗ ಇವು ಎರಡೂ ಒಂದೇ ನಾಣ್ಯದ ಎರಡು ಮುಖಗಳು. ಮನುಷ್ಯ ಎಲ್ಲೇ ಇರಲಿ, ಆಧುನಿಕ ಯಂತ್ರ ಅವನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿದೆ.

ಇದು ನೂಲಿಗಾಗಿ ತಕಲಿಯಿಂದ ಚರಕಕ್ಕೆ, ಬಟ್ಟೆಗಾಗಿ ಮಗ್ಗದಿಂದ ಗಿರಣಿಗೆ, ಬೈಸಿಕಲ್‌ನಿಂದ ಮೋಟಾರ್ ಕಾರ್‌ಗೆ ಮತ್ತು ಸೌದೆ ಒಲೆಯಿಂದ ಗ್ಯಾಸ್ ಅಥವಾ ವಿದ್ಯುತ್ ಒಲೆಗೆ ಬದಲಾದ ಕತೆ. ಮನುಷ್ಯನು ತನಗೆ ಉಪಯುಕ್ತವಾದ ಸಾಧನಗಳನ್ನು ತಯಾರಿಸುವವನೆಂದು ಭಾವಿಸಲಾಗುತ್ತಿತ್ತು. ಅವನು ಈ ಮೊದಲು ತನ್ನ ಹಾಗೂ ಸಹವರ್ತಿಗಳ ಅಪೇಕ್ಷೆಗನುಗುಣವಾಗಿ ಉಪಕರಣಗಳನ್ನು ತಯಾರಿಸಿ ಬಳಸುತ್ತಿದ್ದ. ಆದರೆ ಈಗ ಯಂತ್ರಗಳೇ ಉಪಕರಣಗಳನ್ನು ಎರಕಕ್ಕೆ ಹಾಕಿ ಅಚ್ಚು ಹಾಕುತ್ತವೆ. ಇಷ್ಟೇ ಅಲ್ಲ ಅಕ್ಷರಶಃ ಮನುಷ್ಯನ ಸ್ಥಾನಕ್ಕೆ ಬದಲಿಯಾಗುವ ಯಂತ್ರಗಳು ಮಾನವನ ಸ್ವಾಭಾವಿಕ ಬದುಕನ್ನೇ ಮೂಲಭೂತವಾಗಿ ಉಲ್ಲಂಘಿಸುತ್ತವೆ. ಮನುಷ್ಯ ಈಗ ಮನುಷ್ಯನಾಗಿ ಉಳಿದಿಲ್ಲ. ಇದು ಕೇವಲ ಆರ್ಥಿಕ ವಿದ್ಯಮಾನವಲ್ಲ ಅಥವಾ ಸಾಂಸ್ಕೃತಿಕ ಆಘಾತ ಮಾತ್ರವಲ್ಲ. ಇದು ಮಾರಣಾಂತಿಕ ಹೊಡೆತ. ಮಾನವನ ಸ್ಥಾನಕ್ಕೆ ಯಂತ್ರಗಳು ಬಂದ ಪ್ರಾರಂಭದಿಂದ ಇಂದಿನವರೆಗೆ ಲಕ್ಷಾಂತರ ಜನರು ಸತ್ತಿದ್ದಾರೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದ ಬೆಳವಣಿಗೆಗಳು ಈ ಬದಲಿಕೆಯ ಅರ್ಥವನ್ನು ಇನ್ನಷ್ಟು ಗಾಢ ಮಾಡಿವೆ. ಕಂಪ್ಯೂಟರ್ ಮತ್ತು ದೂರಸಂಪರ್ಕ ಕ್ಷೇತ್ರಗಳಲ್ಲಾದ ಸಾಧನೆಗಳು ಮಾಹಿತಿಯ ಸಂಗ್ರಹ, ವ್ಯವಸ್ಥೆ, ಸಂಸ್ಕರಣ ಮತ್ತು ದೂರದ ಪ್ರದೇಶಗಳಿಗೆ ಮಾಹಿತಿಯನ್ನು ವರ್ಗಾವಣೆ ಮಾಡುವ ವಿಧಾನಗಳಿಗೆ ಹೊಸ ಅರ್ಥವನ್ನೇ ಕಲ್ಪಿಸಿವೆ. ಇವು ಅಸಾಂಪ್ರದಾಯಿಕ ಆಧುನಿಕ ಯಂತ್ರಗಳು. ಏಕೆಂದರೆ ಇವುಗಳ ಕಾರ್ಯನಿರ್ವಹಣೆಯು

ಹೆಚ್ಚು ವಿದ್ಯುತ್ ಅಥವಾ ಶಕ್ತಿಯನ್ನು ವ್ಯಯಿಸುವುದಿಲ್ಲ. ಹಾಗೆಯೇ ಪರಿಸರಕ್ಕೆ ಅವು ಹಾನಿ ಮಾಡುವುದೂ ಇಲ್ಲ. ಅಂಥ ಸಂಗತಿಗಳನ್ನು ಈ ಯಂತ್ರಗಳ ಪ್ರಕ್ರಿಯೆಯು ಒಳಗೊಂಡಿದೆ. ಆದರೆ ಈ ಯಂತ್ರಗಳು ಸಾಮಾನ್ಯವಾಗಿ ಯಾವಾಗಲೂ ನೇಪಥ್ಯದಲ್ಲೇ ಇರುವುದರಿಂದ ಮಾನಸಿಕವಾಗಿ ಪ್ರಭಾವ ಬೀರುವುದಿಲ್ಲ. ಆದರೆ ಪರಿಸ್ಥಿತಿ ಈಗ ತೀರಾ ಕೆಟ್ಟಿದೆ. ಇಂಥ ಯಂತ್ರಗಳು ಮಾನವನಿಗೆ ಬದಲಿಯಾಗುವಲ್ಲಿ ಇದ್ದ ಅಡಚಣೆಗಳನ್ನು ತೆಗೆದುಹಾಕುತ್ತವೆ. ಆದರೆ ಈ ಯಂತ್ರಗಳು ಮಾನವನಿಗೆ ಬದಲಿಯಾದರೆ ಅತ್ಯಂತ ಕರಾಳವಾಗಿರುತ್ತವೆ. ಏಕೆಂದರೆ ಈ ಯಂತ್ರಗಳು ಮಾನವನ 'ಮಿದುಳು' ಮಾಡುವ ಕಾರ್ಯವನ್ನು ಮಾಡಬಲ್ಲವೆಂಬ ಹೆಗ್ಗಳಿಕೆಯನ್ನು ವ್ಯವಸ್ಥಿತವಾಗಿ ಹೇಳಿಕೊಳ್ಳುತ್ತವೆ. ಈಗ 'ಕಂಪ್ಯೂಟರ್ ಪ್ರಜ್ಞೆ' (Computer Intelligence) ಎಂಬ ಸಂಶೋಧನಾ ಕ್ಷೇತ್ರವೇ ಇದೆ. ಹಾಗಾಗಿ ಈಗ ಮಾನವನಿಗೆ ಬದಲಾಗಿ ಯಂತ್ರಗಳು ಕಾರ್ಯನಿರ್ವಹಿಸಬಲ್ಲವೆಂಬ ಸಿದ್ಧಾಂತವನ್ನು ಖಡಾಖಂಡಿತವಾದ ವೈಜ್ಞಾನಿಕ ಪರಿಭಾಷೆಯಲ್ಲಿ ಸಮರ್ಥಿಸುವ ಪ್ರಯತ್ನಗಳು ನಡೆಯುತ್ತಿವೆ. ಇದು 'ಮಾನವನಿಗೆ ಬದಲಿಕೆ' ಎಂಬುದರ ಅರ್ಥವನ್ನೇ ಇನ್ನಷ್ಟು ಗಾಢಗೊಳಿಸುತ್ತದೆ.

ಸತ್ಯದ ಉಲ್ಲಂಘನೆ ಕೇವಲ ಈ ಬದಲಿಕೆಯ (Substitution) ಪರಿಣಾಮವಲ್ಲ. ಅದು ಆ ಬದಲಿಕೆಯು ಹೊರಡಿಸುವ ಅರ್ಥದ ಭಾಗವೇ ಆಗಿದೆ. ಆದುದರಿಂದ ಸತ್ಯದ ಉಲ್ಲಂಘನೆಯೂ 'ಯಂತ್ರ' ಪದದ ಅಂತರಾರ್ಥದ ಭಾಗವೇ ಆಗಿದೆ. ಆದುದರಿಂದ ಮನುಷ್ಯನಿಗೆ ಬದಲಾಗಿ ಬರುವ ಯಂತ್ರಗಳ ಮಹಾನಗರಗಳಲ್ಲಿ ಮೂಲಭೂತವಾದ ಒಂದು ಸುಳ್ಳಿನ ಮೊತ್ತದಿಂದ ಕೂಡಿದ ವಿಜ್ಞಾನ ಬೆಳೆಯುತ್ತದೆ. ಮಾನವನ ಸ್ಥಾನವನ್ನು ಯಂತ್ರಗಳು ಪಲ್ಲಟಗೊಳಿಸುವ ಮಹಾನಗರಗಳ ಹಿತ್ತಲ ನಾಡಿ (hinterland) ನಲ್ಲಿ ನಿಜವಾದ ಜ್ಞಾನಧಾರೆಗಳ ಪರಂಪರೆಯು ನಿರಂತರವಾಗಿ ಸುಳ್ಳೆಂದು ಸಾಬೀತಾಗುತ್ತಾ ಅವುಗಳ ಮೂಲನೆಲೆಯೇ ಸವೆದುಹೋಗುತ್ತಾ, ಮನುಷ್ಯನ ಬದುಕೇ ಛಿದ್ರಗೊಳ್ಳುತ್ತದೆ. ಹಾಗಾಗಿ ವಿದ್ಯೆಯ ವಲಯದಲ್ಲಿ ಮನುಷ್ಯನಿಗೆ ಬದಲಿಕೆಯಾಗಿ ಬರುವ ಯಂತ್ರಗಳು ಎರಡು ಜಗತ್ತುಗಳ ಸೃಷ್ಟಿಗೆ ಕಾರಣವಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಕ್ರಮಬದ್ಧವಾಗಿ ಬೋಧಿಸಿ ಬೆಳೆಸಿದ ಜ್ಞಾನ ವ್ಯವಸ್ಥೆಯು 'ಲೋಕವಿದ್ಯೆ'ಯ ಹೆಸರಿನಲ್ಲಿ ಬದುಕಿರುವ ಅದರ ಸೋದರ ಸಂಬಂಧಿಯಾದ ಅಸಂಘಟಿತ ಜ್ಞಾನಧಾರೆಗಳನ್ನು ನುಂಗಿಹಾಕುತ್ತದೆ.

ಲೋಕವಿದ್ಯೆ ನಮಗೆ ತಿಳಿದಿರುವಂತೆ ಧರ್ಮದ ಜೊತೆ ಬಿಡಿಸಲಾಗದ ರೀತಿಯಲ್ಲಿ ಹೆಣೆದುಕೊಂಡಿವೆ. ಆದುದರಿಂದ ಯಂತ್ರದ ದಾಳಿಯಲ್ಲಿ ಸಾಮಾನ್ಯ ಮನುಷ್ಯನ ಜೀವನ ಧರ್ಮ ಸಹ ತೀವ್ರ ಆಘಾತಕೀಡಾಗುತ್ತದೆ. ಯಂತ್ರವು ಎಸಗುವ ಸತ್ಯದ ಉಲ್ಲಂಘನೆಯು ಬದುಕನ್ನು ನಿಸರ್ಗದ ಲಯದೊಡನೆ ಮೇಳೈಸುವ ಸತ್ಯದ ಮೂಲ ಕರ್ತವ್ಯವನ್ನೇ ಕಸಿದುಕೊಳ್ಳುತ್ತದೆ. ಆದುರಿಂದ ಧರ್ಮದ ಶಕ್ತಿಯು ಕಳೆಗುಂದುತ್ತದೆ; ಮತ್ತು ಈ ಶಕ್ತಿಯನ್ನು ಯಂತ್ರವು ಸೈತಾನನ ಅವತಾರಕ್ಕೆ ದಾರಿಮಾಡಿಕೊಡಲಿಕ್ಕಾಗಿಯೋ ಎಂಬಂತೆ ಸ್ವಾಧೀನಪಡಿಸಿಕೊಳ್ಳುತ್ತದೆ.

## ಶಕ್ತಿ (Power ವಿದ್ಯುಚ್ಛಕ್ತಿ ಮುಂತಾದವು)

ಆಧುನಿಕ ಯಂತ್ರದ ರಕ್ತವೇ ಇಂಧನ ಅಥವಾ ಶಕ್ತಿ. ಈ ಶಕ್ತಿಯನ್ನು ಉತ್ಪಾದಿಸುವ ಕೈಗಾರಿಕೆ ಯಂತ್ರ ಜಗತ್ತಿನ ಹೃದಯ. ವಿದ್ಯುತ್ತನ್ನು ಉತ್ಪಾದಿಸುವ ಯಂತ್ರಗಳಿಗೆ ಮತ್ತು ತಂತ್ರಜ್ಞಾನಕ್ಕೆ ಮಹತ್ತ್ವ ದೊರೆಯುವುದು ಇದರಿಂದಾಗಿಯೇ. ವಿದ್ಯುಚ್ಛಕ್ತಿಗೆ ನಾವು ಎಷ್ಟು ಶರಣಾಗಿದ್ದೇವೆಂದರೆ ವಿದ್ಯುತ್ ಉತ್ಪಾದಿಸುವ ನೆಲೆಯನ್ನು ಸರಳವಾಗಿ ಶಕ್ತಿಸ್ಥಾವರ ಎಂದು ಕರೆಯುತ್ತೇನೆ. 'ಶಕ್ತಿ' ಪದವನ್ನು 'ವಿದ್ಯುಚ್ಛಕ್ತಿ' ಪದಕ್ಕೆ ಸಂವಾದಿಯಾಗಿ ಬಳಸುತ್ತೇವೆ. ಆಧುನಿಕ ಯಂತ್ರಗಳನ್ನು ಶಕ್ತಿಯಿಲ್ಲದೆ ಕಲ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಹಾಗಾದರೆ ಈ 'ಶಕ್ತಿ' ಎಂದರೇನು?

ವಿಜ್ಞಾನದಲ್ಲಿ ಶಕ್ತಿಯನ್ನು ಒಂದು ಕೆಲಸ (Work) ವನ್ನು ಮಾಡುವ ಕಾಲ ಪ್ರಮಾಣವೆಂದು ವ್ಯಾಖ್ಯಾನಿಸುತ್ತೇನೆ. ಆದುದರಿಂದ ಶಕ್ತಿಯು ನಿರ್ದಿಷ್ಟ ಕಾಲದ ಘಟಕದಲ್ಲಿ ಸಂಭವಿಸುವ ಕಾರ್ಯಕ್ಕೆ ಸಮ. 'ಕೆಲಸ' ಎಂಬ ಪದಕ್ಕೆ ಸೂಕ್ತವಾದ ತಾಂತ್ರಿಕ ವ್ಯಾಖ್ಯಾನವೂ ಇದೆ. ಕೆಲಸ ಎಂದರೆ ಭೌತವಿಜ್ಞಾನ ವಿವರಣೆಯ ಪ್ರಕಾರ ವಸ್ತುಗಳನ್ನು ಚಲಿಸುವಂತೆ ಮಾಡಲು ಬಳಸುವ ಬಲ. ಅಂದರೆ ಒಂದು ನಿರ್ದಿಷ್ಟ ಬಲವನ್ನು ಬಳಸಿಕೊಂಡೇ ಆ ಬಲದ ಉತ್ಪನ್ನ ಮತ್ತು ಆ ಬಲದ ಅನ್ವಯದಿಂದ ವಸ್ತುವೊಂದು ಚಲಿಸುವ ದೂರಕ್ಕೆ ಆ ಕೆಲಸ ಸಮವಾಗಿರುತ್ತದೆ. ಹಾಗಾಗಿ ಕೆಲಸವು ಚಲನೆಯ (Motion) ಸಂಘಟನೆಯನ್ನು ಪ್ರತಿನಿಧಿಸುತ್ತದೆ. ಅಡ್ಡಾದಿಡ್ಡಿ ಚಲನೆಯು ಸಂಘಟಿತ ಚಲನೆಯಲ್ಲ: ಹಾಗಾಗಿ ಅದು ಕೆಲಸಕ್ಕೆ ಸಮವೇ ಅಲ್ಲ. ಏಕೆಂದರೆ ಆಗ ಅದರ ಸ್ಥಾನಪಲ್ಲಟ ಪರಿಮಾಣವು (Displacement Vector) ಶೂನ್ಯವಾಗಿರುತ್ತದೆ. ಚಲನೆಯು ಹೆಚ್ಚು ಸಂಘಟಿತವಾದಂತೆ ಹೆಚ್ಚೆಚ್ಚಿನ ಕಾರ್ಯ ಸಂಭವಕ್ಕೆ ದಾರಿಯಾಗುತ್ತದೆ. ಆದುದರಿಂದ ಚಲನೆಯ ಸಂಘಟನೆಯ ಪ್ರಮಾಣವೇ ಕಾರ್ಯ್ದ ಪ್ರಮಾಣವೆಂದು ತರ್ಕಿಸಬಹುದು. ಅಲ್ಲಿಗೆ ಶಕ್ತಿಯು ಚಲನೆಯ ಸಂಘಟನೆಯ ಪ್ರಮಾಣ ಎಂದಾಯಿತು. ಇದು ಶಕ್ತಿಯನ್ನು ಸಂಘಟಿಸುವ ಇಲ್ಲವೇ ವಿಲೇವಾರಿ ಮಾಡುವ ಪ್ರಮಾಣಕ್ಕೆ ಸಮ.

ಸಾಂಪ್ರದಾಯಿಕ ಶಕ್ತಿ ರೂಪಗಳಿಂದ ಆಧುನಿಕ ಶಕ್ತಿರೂಪಗಳನ್ನು ಪ್ರತ್ಯೇಕಿಸಲು ಬಳಸುವ ಪ್ರಾಥಮಿಕ ತಿಳುವಳಿಕೆಯ ಮಾನದಂಡ ಎಂದರೆ ಮೇಲಿನ ವಿವರಣೆ. ಸ್ತ್ರೀ–ಪುರುಷರು, ಎತ್ತುಗಳು, ಕುದುರೆಗಳು, ಸೌದೆ (ಇಂಧನವಾಗಿ) ಸಾಂಪ್ರದಾಯಿಕ ಶಕ್ತಿ ಮೂಲಗಳಾದರೆ ಆಧುನಿಕ ಶಕ್ತಿ ಮೂಲಗಳು ಪ್ರಧಾನವಾಗಿ ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್, ನ್ಯಾಫ್ತಾ ಇತ್ಯಾದಿ. ಆಧುನಿಕ ಸ್ವಯಂ ಚಾಲಿತ ಗಾಡಿಗಳ ಯಂತ್ರಗಳಲ್ಲಿ ಬಳಸುವುದು ಎರಡನೆಯ ವರ್ಗದ ಶಕ್ತಿ ಮೂಲಗಳನ್ನು. ಇದೇ ಇಂಧನಗಳನ್ನು ವಿದ್ಯುತ್ ಉತ್ಪಾದಿಸಲು ಉರಿಸಲಾಗುತ್ತದೆ. ಇಲ್ಲಿ ಮೂಲಭೂತವಾಗಿ ಇಂಧನಗಳನ್ನು ಉರಿಸಿ ಗಳಿಸಿದ ಉಷ್ಣಶಕ್ತಿಯನ್ನು ಪಿಸ್ಟನ್‌ನ ಚಲನೆಯಾಗಿ ಪರಿವರ್ತಿಸಲಾಗುತ್ತದೆ. ಹಾಗೆ ಉತ್ಪಾದನೆಯಾದ ಚಲನೆಯನ್ನು ಯಂತ್ರದ ರೋಟರ್ ವೃತ್ತಾಕಾರ ಚಲನೆಯಾಗಿ ವರ್ಗಾಯಿಸುತ್ತವೆ. ಭೌತವಿಜ್ಞಾನದ ಥರ್ಮೋಡೈನಾಮಿಕ್ಸ್ (ಉಷ್ಣಚೈತನ್ಯ) ಶಾಖೆಯು

ಈ ಶಕ್ತಿ ಪರಿವರ್ತನಾ ಪ್ರಕ್ರಿಯೆಯ ಅಧ್ಯಯನವಾಗಿದೆ. ರೋಟರ್ ಅನ್ನು ಯಂತ್ರದ ಚಲನ ಅಥವಾ ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತದೆ. ಇಂಧನಗಳ ಉಷ್ಣವನ್ನು ಅತ್ಯಧಿಕ ಪ್ರಮಾಣದಲ್ಲಿ ಸಂಘಟಿತ ಚಲನೆಯನ್ನಾಗಿ ಪರಿವರ್ತಿಸಲು ಸಾಧ್ಯವಿರುವುದರಿಂದ ಈ ಭೂಗರ್ಭದ ಇಂಧನಗಳು ಆಧುನಿಕ ಶಕ್ತಿಯ ಮೂಲಗಳೆನಿಸಿವೆ. ಅಂದರೆ ಈ ಇಂಧನಗಳೇ ಶಕ್ತಿಯ ಮೂಲಗಳು.

ಈ ಶಕ್ತಿಯು ಕಡಿಮೆ ಅವಧಿಯಲ್ಲಿ ಅತ್ಯಧಿಕ ಪ್ರಮಾಣದ ಕಾರ್ಯವನ್ನು ಮಾಡುವ ಆಧುನಿಕ ಯಂತ್ರಗಳ ದಕ್ಷತೆಗೆ ಮೂಲ. ಇಷ್ಟೇ ಅಲ್ಲ, ಸಾಂಪ್ರದಾಯಿಕ ಶಕ್ತಿ ಮೂಲಗಳನ್ನೇ ಅವಲಂಬಿಸಿ ಮಾಡುವ ಕಾರ್ಯಕ್ಕೆ ಹೋಲಿಸಿದರೆ, ಈ ಶಕ್ತಿಯ ಕಾರ್ಯ ದಕ್ಷತೆಯ ಪ್ರಮಾಣ ಊಹಿಸಲೂ ಅಸಾಧ್ಯ. ನಮ್ಮ ಕಣ್ಣಿಗೆ ದೃಗ್ಗೋಚರಿಸುವ ಇಂಥ ಅಗಾಧ ದಕ್ಷತೆಯ ಯಂತ್ರಗಳಿಗೆ ಸ್ಪಷ್ಟ ಉದಾಹರಣೆಯೆಂದರೆ ವಿಮಾನ, ರೈಲ್ವೆ ಮತ್ತು ಬೃಹತ್ ಸ್ಥಾವರಗಳು. ಅಂಥ ನೂರಾರು ರೀತಿಯ ಯಂತ್ರಗಳು ನಮ್ಮ ಸುತ್ತಲೂ ತುಂಬಿಕೊಂಡಿವೆ. ಆಧುನಿಕ ಯಂತ್ರವು ಶಕ್ತಿಯ ಮೂರ್ತರೂಪ. ಹಾಗಾಗಿ ಬೃಹತ್ ಫ್ಯಾಕ್ಟರಿಗಳನ್ನು, ಜಲಾಶಯಗಳನ್ನು ಮತ್ತು ದೊಡ್ಡ ಶಕ್ತಿ ಸ್ಥಾವರಗಳನ್ನು ಒಂದು ಕಾಲದಲ್ಲಿ ಆಧುನಿಕ ಭಾರತದ 'ದೇವಾಲಯಗಳು' ಎಂದು ಕರೆದಿದ್ದರಲ್ಲಿ ಅಚ್ಚರಿಯೇನೂ ಇಲ್ಲ. ಅದು 'ಸರ್ವಶಕ್ತ'ವಾಗಿವೆ. ಎಂಬುವ ಭಾವನೆಯ ಘೋಷಣೆಯಷ್ಟೆ. ಆದರೆ 'ಸರ್ವಜ್ಞ'ತೆಯ ಕಡೆಗಿನ ಪ್ರಗತಿಯ ಪಯಣ ಕುತೂಹಲಕಾರಿಯಾಗಿದೆ.

ಕಂಪ್ಯೂಟರ್‌ಗಳು ಮತ್ತು ದೂರಸಂಪರ್ಕ ಸಾಧನಗಳು ಸರ್ವಜ್ಞತೆಯ ಆಯಾಮವನ್ನು ಪ್ರತಿನಿಧಿಸುತ್ತವೆ. ಬಹಳ ಹಿಂದೆ ಫ್ರಾನ್ಸಿಸ್ ಬೇಕನ್ ಅವರು ಜ್ಞಾನವೇ ಶಕ್ತಿ ಎಂದು ಘೋಷಿಸಿದಾಗ, ಆ ನುಡಿಗಟ್ಟು, ಇಂದು ಮಾಹಿತಿಯ ಸಂಘಟನೆಯ ಪ್ರಮಾಣ, ಈ ಕಾಲದಲ್ಲಿ ಪಡೆದುಕೊಂಡಿರುವ ಅರ್ಥವನ್ನು ಆತನಿಗೆ ಊಹಿಸಲೂ ಸಾಧ್ಯವಿರಲಿಲ್ಲ. ಯಂತ್ರವು ಮಾನವನಿಗೆ ಬದಲಿಯಾದಾಗ, ಜ್ಞಾನವು ಮಾಹಿತಿಯಾಗಿ ಪರಿವರ್ತನೆಯಾಗುತ್ತದೆ. ಹಾಗಾಗಿ ಕೆಲಸದ ಪ್ರಮಾಣವು ಮಾಹಿತಿ ಸಂಘಟನೆಯ ಪ್ರಮಾಣದ ಕಾರ್ಯ ಮಾಡುತ್ತದೆ.

ಕಂಪ್ಯೂಟರ್, ದೂರವಾಣಿ, ಇ–ಮೇಲ್ ಮುಂತಾದವುಗಳ ಬೆಳವಣಿಗೆಯ ಮೂಲಕ ಮಾಹಿತಿಗಳ ವಿದ್ಯುತ್ ಚಾಲಿತ ಯಾಂತ್ರಿಕ ಸಂಘಟನೆಯು ಸಾಮ್ರಾಜ್ಯಶಾಹಿಯ–ಸಾಮಾಜಿಕ ನೆಲೆ ನಿರಂತರವಾಗಿ ಕುಗ್ಗುತ್ತಿರುವ ಹಿನ್ನೆಲೆಯಲ್ಲಿ–ಅದರ ಮುಂದುವರಿಕೆಗೆ ಅಗತ್ಯ ನೆರವು ನೀಡುತ್ತಿದೆ. ಜಗತ್ತಿನ ಕೆಲವೇ ಜನರು ಹಣಕಾಸು, ತಂತ್ರಜ್ಞಾನ, ಮಾರುಕಟ್ಟೆ, ಜನ ಹಾಗೂ ಸಕಲವನ್ನೂ ನಿಯಂತ್ರಿಸಲು ಬಯಸಿದರೆ, ಅವರಿಗೆ ಮಾಹಿತಿಯನ್ನು ಸಂಸ್ಕರಿಸುವ, ಸಂಗ್ರಹಿಸುವ ಮತ್ತು ದೂರದ ಸ್ಥಳಗಳಿಗೆ ಅತಿ ವೇಗದಲ್ಲಿ ರವಾನಿಸುವ ವಿಧಾನಗಳು ಅವರ ಸ್ವಾಧೀನದಲ್ಲಿರಬೇಕಾಗುತ್ತದೆ. ಮಾಹಿತಿ ತಂತ್ರಜ್ಞಾನವು ಆಧುನಿಕ ಯಂತ್ರಗಳ ಸೇವೆಯಲ್ಲಿ ನಿರತವಾಗಿರುವುದರ ಬಗ್ಗೆಯೂ ಸಂದೇಹ ಬೇಡ. ಏಕೆಂದರೆ ಇದು ಅಂತಿಮವಾಗಿ ಸಾಮ್ರಾಜ್ಯಶಾಹಿಯ ಅವಶ್ಯಕತೆಗಳಿಗೆ ಬೇಕಾದ ಸರಕು

ಸರಂಜಾಮುಗಳನ್ನು ಸರಬರಾಜು ಮಾಡುವಂಥದು; ಮತ್ತು ಇದರ ರಕ್ತವೇ 'ಶಕ್ತಿ'ಯಾಗಿದೆ. ಹಾಗಾಗಿ 'ಶಕ್ತಿ'ಯ ಸ್ವರೂಪ ಮತ್ತು ಕಾರ್ಯವನ್ನು ಇದುವರೆಗೆ ಸ್ವಲ್ಪಮಟ್ಟಿಗೆ ಅವಲೋಕಿಸಿರುವುದರಿಂದ ಈ 'ಶಕ್ತಿ'ಯ ವಿಜ್ಞಾನದ ಬಗೆಗೆ ನಮಗೆ ಸ್ವಲ್ಪ ತಿಳಿವಳಿಕೆ ಬಂದಿದೆ.

## ಶಕ್ತಿವಿಜ್ಞಾನ

ಕಡಿಮೆ ಕಾಲಾವಧಿಯಲ್ಲಿ ಅಪಾರ ಸಾಮರ್ಥ್ಯಗಳನ್ನು ಕ್ರೋಢೀಕರಿಸುವ ವಿಜ್ಞಾನವೇ ಶಕ್ತಿವಿಜ್ಞಾನ. ಉಗಿಯಂತ್ರ, ಕಾರಿನಯಂತ್ರ, ಉಷ್ಣ ವಿದ್ಯುತ್ ಸ್ಥಾವರ, ಜಲವಿದ್ಯುತ್ ಸ್ಥಾವರ, ಅಣು ವಿದ್ಯುತ್ ಕೇಂದ್ರಗಳು ಇವೆಲ್ಲವೂ ಕಡಿಮೆ ಅವಧಿಯಲ್ಲಿ ಅಗಾಧ ಸಾಮರ್ಥ್ಯಗಳನ್ನು ಕ್ರೋಢೀಕರಿಸುವ ತತ್ತ್ವವನ್ನೇ ಆಧರಿಸಿವೆ.

ಉಗಿ ಯಂತ್ರಗಳು ಮತ್ತು ಉಷ್ಣ ವಿದ್ಯುತ್ ಸ್ಥಾವರಗಳು ಕಲ್ಲಿದ್ದಲಿನಲ್ಲಿರುವ ಉಷ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತವೆ. ಕಲ್ಲಿದ್ದಲು ಉರಿದಾಗ ಅಪಾರ ಪ್ರಮಾಣದ ಉಷ್ಣ ಬಿಡುಗಡೆಯಾಗುತ್ತದೆ. ಈ ರೀತಿ ಬಿಡುಗಡೆಯಾದ ಉಷ್ಣವನ್ನು ದೊಡ್ಡ ಬಾಯ್ಲರ್‌ಗಳನ್ನು ಕಾಯಿಸಲು ಉಪಯೋಗಿಸಿ ಇನ್ನೂ ಅಧಿಕ ಉಷ್ಣವಿರುವ ಉಗಿಯನ್ನು ಪಡೆಯಲಾಗುವುದು. ಈ ರೀತಿ ಉತ್ಪತ್ತಿಯಾದ ಉಗಿಧಾರೆಯನ್ನು ಕೊಂತ (ಪ್ರಿಸ್ಟನ್)ವನ್ನು ತಳ್ಳಲು ಅಥವಾ ಟರ್ಬೈನ್ ಚಕ್ರ ತಿರುಗಿಸಲು ಬಳಸಲಾಗುವುದು. ಈ ರೀತಿ ಉಗಿಯ ಮೂಲಕ ನಮಗೆ ಯಂತ್ರ ಚಲನೆ ಅಥವಾ ವಿದ್ಯುತ್ ಉತ್ಪಾದನೆಗೆ ಅಗತ್ಯವಾದ ಅಪಾರ ಪ್ರಮಾಣದ ಸಂಘಟಿತ ಚಲನೆ ನಮ್ಮ ನಿಯಂತ್ರಣಕ್ಕೆ ದಕ್ಕುತ್ತದೆ. ಇದೇ ಪರಿಣಾಮವನ್ನು ಉಂಟುಮಾಡಲು ಅಣು ರಿಯಾಕ್ಟರ್‌ಗಳು ·ಆಣುಶಕ್ತಿಯನ್ನು ಬಳಸಿಕೊಳ್ಳುತ್ತವೆ.

ಸ್ವಯಂಚಾಲನೆ (Automobile) ಯಂತ್ರಗಳು ಭೂಗರ್ಭದ ಇಂಧನಗಳ ರಾಸಾಯನಿಕ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತವೆ. ಪೆಟ್ರೋಲ್, ಡೀಸೆಲ್, ಸೀಮೆಯೆಣ್ಣೆ ಮುಂತಾದವು ಇಂಗಾಲ ಮತ್ತು ಜಲಜನಕಗಳ ದೊಡ್ಡ ಅಣುಗಳ ಸರಣಿಯಿಂದ ಕೂಡಿದ ಹೈಡ್ರೋಕಾರ್ಬನ್ ಸಂಯುಕ್ತ ವಸ್ತುಗಳು. ಇವು ಅತ್ಯಂತ ಸುಲಭವಾಗಿ ಹೊತ್ತಿ ಉರಿಯುವ ವಸ್ತುಗಳಾದ್ದರಿಂದ ಅಪಾರ ಪ್ರಮಾಣದಲ್ಲಿ ಉಷ್ಣವನ್ನು ಬಿಡುಗಡೆ ಮಾಡುವುದರ ಜೊತೆಗೆ ಅಪಾರವಾಗಿ ಹಿಗ್ಗುತ್ತವೆ. ಈ ರೀತಿ ತಕ್ಷಣವೇ ಹಿಗ್ಗುವ ಅಂತರ್ದಹನ ಇಂಜಿನ್ನುಗಳಲ್ಲಿ ಕೊಂತ (piston) ಚಲನೆಗೆ ಮತ್ತು ಆ ಮೂಲಕ ರೋಟಾರಿನ ಚಲನೆಗೆ ಈ ಇಂಧನಗಳನ್ನು ಬಳಸಲಾಗುತ್ತದೆ. ಯಂತ್ರದ ಅಂತರ್ದಹನ ಭಾಗದಲ್ಲಿ ಈ ಇಂಧನಗಳನ್ನು ಉರಿಸುವುದರಿಂದ ತಕ್ಷಣವೇ ಬಿಡುಗಡೆಯಾಗುವ ಉಷ್ಣ ಮತ್ತು ಆ ಮೂಲಕ ಹಿಗ್ಗುವಿಕೆಯಿಂದಾಗುವ ಒತ್ತಡ ಕೊಂತವನ್ನು ರಭಸದಿಂದ ತಳ್ಳುತ್ತದೆ. ಆ ರೀತಿ ತಳ್ಳಲ್ಪಟ್ಟ ಕೊಂತದ ಚಲನೆಯು ರೋಟರ್‌ನ್ನು ತಿರುಗಿಸುತ್ತದೆ. ಅನಿಲಗಳ ಈ ರೀತಿಯ ತಕ್ಷಣದಲ್ಲಿ ಹಿಗ್ಗುವಿಕೆ ಮತ್ತು ಉಷ್ಣದ ಏರಿಕೆಯ ಪ್ರಕ್ರಿಯೆಯು ಪರಸ್ಪರ ಸಂಬಂಧವಿರುವಂಥದು. ಆದುದರಿಂದ ಇಲ್ಲಿ ಪೆಟ್ರೋಲಿನ ರಾಸಾಯನಿಕ

ಸಾಮರ್ಥ್ಯದ ಜೊತೆಗೆ ಉಷ್ಣ ವಿಕಿರಣ ಸಾಮರ್ಥ್ಯವನ್ನೂ ಈ ಯಂತ್ರಗಳು ಬಳಸುತ್ತವೆ ಎಂದೂ ಹೇಳಬಹುದು.

ಮುಖ್ಯವಾದ ವಿಷಯವೆಂದರೆ ಅಪಾರವಾದ ಉಷ್ಣ ಅಥವಾ ರಾಸಾಯನಿಕ ಸಾಮರ್ಥ್ಯವನ್ನು ಒಮ್ಮೆಲೇ ವ್ಯವಸ್ಥಿತ ಚಲನೆಯನ್ನಾಗಿ ಇಲ್ಲಿ ರೂಪಾಂತರಿಸಲಾಗಿದೆ. ಮಿಲಿಯಾಂತರ ವರ್ಷಗಳ ನಿರಂತರ ಪ್ರಕ್ರಿಯೆಯಲ್ಲಿ ಸಂಚಯನವಾದ ರಾಸಾಯನಿಕ ಅಥವಾ ಉಷ್ಣಶಕ್ತಿಯನ್ನು ಅತ್ಯಂತ ಸುಸಂಘಟಿತ ಚಲನೆಯ ಉತ್ಪಾದನೆಗೆ ಅಲ್ಪ ಅವಧಿಯಲ್ಲಿ ಬಳಸಲಾಗಿದೆ. ಅಂದರೆ ಅಪಾರ ಪ್ರಮಾಣದ ವಿಭವಶಕ್ತಿ (Potential energy) ಯನ್ನು ಒಂದು ಯಂತ್ರಘಟಕದ ಮೂಲಕ ಅಲ್ಪ ಕಾಲದಲ್ಲಿ ಅಪಾರ ಬಗೆಯ ಉಪಯುಕ್ತ ಕಾರ್ಯವನ್ನಾಗಿ ಪರಿವರ್ತಿಸಲಾಗಿದೆ. ಅದು ಯಾವುದೇ ಬಗೆಯ ವಿಭವ ಸಾಮರ್ಥ್ಯವಾಗಿರಬಹುದು. ಉದಾಹರಣೆಗೆ ಗುರುತ್ವ ಶಕ್ತಿಯನ್ನು ಇದೇ ಮಾದರಿಯಲ್ಲಿ ಬಳಸಲಾಗಿದೆ. ಜಲವಿದ್ಯುತ್ ಸ್ಥಾವರಗಳು ಬಳಸುವುದು ಇದೇ ಬಗೆಯ ಶಕ್ತಿಯನ್ನು. ನದಿಗಳಿಗೆ ಅಣೆಕಟ್ಟು ನಿರ್ಮಿಸಿ ಜಲಾಶಯದ ನೀರಿನ ಮಟ್ಟವನ್ನು ಎತ್ತರಕ್ಕೇರಿಸಿ ಎತ್ತರದಿಂದ ನೀರು ಕೆಳಗಿರುವ ಜಲಚಕ್ರಗಳ ರೆಕ್ಕೆಗಳ ಮೇಲೆ ಬೀಳುವಂತೆ ಮಾಡಲಾಗುವುದು. ಇಲ್ಲಿ ನೀರಿನ ಗುರುತ್ವ ಸಾಮರ್ಥ್ಯವನ್ನು ಮೊದಲು ಚಲನಶಕ್ತಿಯನ್ನಾಗಿ ಪರಿವರ್ತಿಸಿ ನಂತರ ಟರ್ಬೈನ್‌ನ ರೆಕ್ಕೆಗಳು ಸುತ್ತುವಂತೆ ಮಾಡಲಾಗುವುದು. ಮುಂದೆ ಇದನ್ನು ಕಾಂತ ಕ್ಷೇತ್ರದಲ್ಲಿ ಮೇಲೆ ಇಟ್ಟಾಗ ಇದು ವಿದ್ಯುತ್ ಉತ್ಪಾದನೆ ಮಾಡುತ್ತದೆ.

ವಿದ್ಯುತ್ ಉತ್ಪಾದಿಸುವ ಕೈಗಾರಿಕೆಗಳನ್ನು ಶಕ್ತಿಸ್ಥಾವರಗಳೆನ್ನುತ್ತಾರೆ. ಹಿಂದಿನ ಭಾಗದಲ್ಲಿ ಹೇಳಿದಂತೆ ಶಕ್ತಿ ಎನ್ನುವುದು ಚಲನೆಯನ್ನು ಸುವ್ಯವಸ್ಥೆಗೊಳಿಸುವ ಪ್ರಮಾಣ. ಅಂದರೆ, ಉಪಯುಕ್ತ ಕಾರ್ಯ ನಿರ್ವಹಿಸಲ್ಪಟ್ಟ ಪ್ರಮಾಣ. ಆದುದರಿಂದ ಈ ಶಕ್ತಿಯನ್ನು ತತ್‌ಕ್ಷಣ ಅಪಾರ ಪ್ರಮಾಣದಲ್ಲಿ ವರ್ಗಾಯಿಸುವ ವಿಧಾನವೆಂದರೆ ವಿದ್ಯುತ್. ವಿದ್ಯುತ್ ಶಕ್ತಿಯನ್ನು ಕಾಯಿಸಲು, ಬೆಳಗಿಸಲು ಮತ್ತು ಯಂತ್ರಗಳನ್ನು ಚಲಿಸಲು ಬಳಸಲಾಗುತ್ತದೆ. ಆದರೆ ವಿದ್ಯುತ್ ಸ್ಥಾವರದಲ್ಲಿ ಇದಕ್ಕೆ ವ್ಯತಿರಿಕ್ತವಾದ ಕ್ರಿಯೆ ಜರುಗುತ್ತದೆ. ಅಲ್ಲಿ ಸುವ್ಯವಸ್ಥಿತ ಚಲನೆಯನ್ನು ಉತ್ಪಾದಿಸಲು ಉಷ್ಣ, ರಾಸಾಯನಿಕ ಅಥವಾ ಗುರುತ್ವದ ವಿಭವಶಕ್ತಿಯನ್ನು ಬಳಸಲಾಗುತ್ತದೆ; ಮತ್ತು ಈ ಸುವ್ಯವಸ್ಥಿತ ಚಲನೆಯು ವಿದ್ಯುತ್ತನ್ನು ಉತ್ಪಾದಿಸುತ್ತದೆ. ಗ್ರಾಹಕರ ನೆಲೆಯಲ್ಲಿ ಇದಕ್ಕೆ ವಿರುದ್ಧವಾದ ಕ್ರಿಯೆ ಜರುಗುತ್ತದೆ. ವಿದ್ಯುತ್ತನ್ನು ಗ್ರಾಹಕರು ಯಂತ್ರಗಳಲ್ಲಿ ಚಲನೆಯನ್ನು, ವಿದ್ಯುತ್ ಒಲೆ ಮತ್ತು ಹಾಟ್ ಪ್ಲೇಟ್‌ಗಳಲ್ಲಿ ಉಷ್ಣವನ್ನು ಉತ್ಪಾದಿಸಲು ಮತ್ತು ಟಂಗ್‌ಸ್ಟನ್ ತಂತಿಯಲ್ಲಿ ಬೆಳಕನ್ನು ಉತ್ಪಾದಿಸಲು ಬಳಸುತ್ತಾರೆ. ಈ ಹಿನ್ನೆಲೆಯಲ್ಲಿ ಒಂದು ಕಡೆ ಶಕ್ತಿಯನ್ನು ಉತ್ಪಾದಿಸಿ ದೂರದೆಡೆಯಲ್ಲಿ ಅದನ್ನು ಬಳಸುವ ಉಭಯ ಪಾತ್ರಗಳನ್ನು ವಹಿಸುವ ವಿದ್ಯುತ್ತಿಗೆ ಸಮಾಜದಲ್ಲಿ ಮಹತ್ವವಾದ ಸ್ಥಾನವಿದೆ.

ಆದರೆ ಅಲ್ಪಾವಧಿಯಲ್ಲೇ ಅಪಾರ ಸಾಮರ್ಥ್ಯವನ್ನು ಉತ್ಪಾದಿಸುವ ಅಥವಾ ಬಳಸುವ ಚಟುವಟಿಕೆಗಳೆಲ್ಲವೂ ತೀರಾ ಅಸ್ವಾಭಾವಿಕ. ನಿಸರ್ಗದಲ್ಲಿ ಅಪಾರ ಪ್ರಮಾಣದ ತಾಪಮಾನ ಏರಿಳಿತಗಳು ಕಂಡು ಬರುವುದಿಲ್ಲ ಅಥವಾ ನೀರು ಯಾವುದೇ ಅಡೆ

ತಡೆಯಿಲ್ಲದೆ ನೂರಾರು ಅಡಿ ಎತ್ತರದಿಂದ ಧುಮ್ಮಿಕ್ಕುವುದಿಲ್ಲ; ಇಲ್ಲವೇ ಇದ್ದಕ್ಕಿದ್ದಂತೆ ಅಪಾರ ಶಕ್ತಿಯನ್ನು ಒಮ್ಮೆಲೇ ಉತ್ಪಾದಿಸಲು ದ್ರವ್ಯರಾಶಿಯ ಕಣಗಳನ್ನು ನಾಶಗೊಳಿಸುವ ಕ್ರಿಯೆಯೂ ಕಂಡುಬರುವುದಿಲ್ಲ. ಸಾಮಾನ್ಯವಾಗಿ ಸಣ್ಣ ಪ್ರಮಾಣದ ಏರಿಳಿತಗಳ ಪರಿಮಿತಿಯೊಳಗೆ ಕೆಲಸ ಮಾಡುತ್ತಿರುತ್ತದೆ. ಜೀವ ಜಗತ್ತಿನ ಬಹುತೇಕ ಚಟುವಟಿಕೆಗಳು ಸಂಭವಿಸುವುದು ಸಹಜ ತಾಪಮಾನದ ಪರಿಸ್ಥಿತಿಯಲ್ಲಿ. ನೈಸರ್ಗಿಕ ಪ್ರಕ್ರಿಯೆಗಳಲ್ಲಿ ಶಕ್ತಿಯು ಒಂದು ರೂಪದಿಂದ ಮತ್ತೊಂದು ರೂಪಕ್ಕೆ ಪರಿವರ್ತನೆಯಾಗುತ್ತದೆ. ಶಕ್ತಿ ವ್ಯರ್ಥವಾಗದಷ್ಟೇ ವೇಗ ಪ್ರಮಾಣದಲ್ಲಿ ಅಲ್ಲಿ ಕಾರ್ಯ ನಡೆಯುತ್ತದೆ. ಶಕ್ತಿಯ ರೂಪಾಂತರದ ದಕ್ಷತೆ ಸಹ ಅತ್ಯುತ್ತಮವಾಗಿರುತ್ತದೆ. ವೈಜ್ಞಾನಿಕ ಲೆಕ್ಕಾಚಾರ ಪ್ರಕಾರವೂ ಪರಿವರ್ತನಾ ದಕ್ಷತೆಯ ಮಟ್ಟ ಒಂದಕ್ಕೆ ಹತ್ತಿರವಿರುತ್ತದೆ. ಇದಕ್ಕೆ ಸಂಪೂರ್ಣ ವಿರುದ್ಧವೆನಿಸುವ ರೀತಿಯಲ್ಲಿ ಅತ್ಯಂತ ಕಡಿಮೆ ದಕ್ಷತೆ ಮತ್ತು ಹೆಚ್ಚು ವ್ಯರ್ಥವಾಗುವ ರೀತಿಯಲ್ಲಿ ಶಕ್ತಿಯ ವಿಜ್ಞಾನವು ಇಂಧನಗಳನ್ನು ಕಾರ್ಖಾನೆಯಲ್ಲಿ ಉರಿಸುತ್ತದೆ.

ತ್ಯಾಜ್ಯ (waste) ದ ಪರಿಕಲ್ಪನೆಯು ಆಧುನಿಕ ಕೈಗಾರಿಕೆಯ ಜೊತೆಯಲ್ಲಿ ಜನ್ಮ ತಾಳಿತು. ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಹಾರುಬೂದಿ, ಉಕ್ಕಿನ ಸ್ಥಾವರಗಳಲ್ಲಿ ಕಿಟ್ಟ, ರಾಸಾಯನಿಕ ಕೈಗಾರಿಕೆಗಳಲ್ಲಿ ತ್ಯಾಜ್ಯದ ಹೊರ ಹರಿವು ಮತ್ತು ಬಳಕೆಯಾಗದ ಪ್ಲಾಸ್ಟಿಕ್–ಇವೆಲ್ಲ ಆಧುನಿಕ ಕೈಗಾರಿಕೆಯ ಅನಿವಾರ್ಯ ತ್ಯಾಜ್ಯಗಳು. ನ್ಯೂಕ್ಲಿಯರ್ ಕೇಂದ್ರದಲ್ಲಿ ಉತ್ಪತ್ತಿಯಾಗುವ ಮಾರಣಾಂತಿಕ ತ್ಯಾಜ್ಯದ ಬಗ್ಗೆ ಪ್ರಸ್ತಾಪಿಸದಿರುವುದೇ ಉಚಿತ. ಅಪಾರ ಪ್ರಮಾಣದ ವ್ಯವಸ್ಥಿತ ಚಲನೆಯನ್ನು ಉತ್ಪಾದಿಸಲು ಎಲ್ಲವನ್ನೂ ದೊಡ್ಡ ಪ್ರಮಾಣದಲ್ಲಿ ಬಳಸುವ ಕ್ರಿಯೆಯ ಜೊತೆಗೇ ಅದಕ್ಷತೆ ಮತ್ತು ಪೋಲಾಗುವಿಕೆ ಹಾಸುಹೊಕ್ಕಾಗಿದೆ.

ಆದರೆ ವ್ಯರ್ಥ ಅಥವಾ ತ್ಯಾಜ್ಯ ಪದಾರ್ಥವನ್ನು ಕೇವಲ ನಿಸರ್ಗದ ಮೇಲೆ ಬೀಳುವ ನಿರ್ಜೀವ ಪದಾರ್ಥವೆಂದು ಭಾವಿಸಬಾರದು. ಕೈಗಾರಿಕೆಯು ಹೆಚ್ಚು ಹೆಚ್ಚು ಮಾಲಿನ್ಯಕಾರಕವಾದಷ್ಟು ಪರಿಸರದ ಗುಣಮಟ್ಟ ಹೆಚ್ಚು ಹೆಚ್ಚು ಕಲುಷಿತಗೊಳಿಸುತ್ತದೆ. ಹೆಣಗಳು ಮಣ್ಣಿಗೆ ಮರಳದಿದ್ದರೆ, ಅವು ಪ್ರೇತಗಳಾಗುತ್ತವೆ. ಹಾರುಬೂದಿ, ಕಿಟ್ಟ, ವಿಷಾನಿಲಗಳು, ರಾಸಾಯನಿಕ ಕಾರ್ಖಾನೆಯಿಂದ ವ್ಯರ್ಥವಾಗಿ ಹರಿದು ಬರುವ ಕೊಳೆ ಮತ್ತು ಪ್ಲಾಸ್ಟಿಕ್ ಮುಂತಾದವನ್ನು ನಿಸರ್ಗ ಅಂಗೀಕರಿಸುವುದಿಲ್ಲ. ನಿಸರ್ಗದ ವ್ಯವಸ್ಥೆ ಅದನ್ನು ಜೀರ್ಣಿಸಿಕೊಳ್ಳಲಾರದು. ಇವು ಅನಾರೋಗ್ಯ (ಜಡಸ್ಥಿತಿ)ಕ್ಕೆ ಸಂವಾದಿಯಾಗಿ ಆಧುನಿಕ ಯಂತ್ರಗಳು ಅನುಷಂಗಿಕವಾಗಿ ಉತ್ಪತ್ತಿ ಮಾಡುವ ಅನಿಷ್ಟಗಳು. ವಾತಾವರಣದ ಅನಿಲಗಳಲ್ಲಿರುವ ವಿಷ, ಕುಡಿಯುವ ನೀರಿನಲ್ಲಿರುವ ಅಪಾಯಕಾರಿ ಬ್ಯಾಕ್ಟೀರಿಯಾ ಮತ್ತು ಸೂಕ್ಷ್ಮಜೀವಿಗಳು, ಕೃಷಿಗೆ ಬಳಸಿದ ರಾಸಾಯನಿಕಗಳಿಂದಾಗಿ ತಿನ್ನುವ ಆಹಾರದಲ್ಲಿರುವ ವಿಷ, ನಗರದ ಶಬ್ದಮಾಲಿನ್ಯ ಕೇವಲ ಜೀವಪರಿಸರವನ್ನು ಮಾತ್ರ ಕಂಗೆಡಿಸುವುದಿಲ್ಲ. ಬದುಕಿನಲ್ಲಿ ಅಂತರ್ಗತವಾಗಿರುವ ಪ್ರಾಣತತ್ತ್ವವನ್ನೇ ಉಲ್ಲಂಘಿಸುತ್ತವೆ. ಆಧುನಕ ವಿಜ್ಞಾನ ಮತ್ತು ಶಕ್ತಿ ವಿಜ್ಞಾನ (Science of Power) ಮಾನವನ ಪಾವಿತ್ರ್ಯವನ್ನೇ ಭಂಗಪಡಿಸುವುದು ಇಲ್ಲಿಯೆ. ಪಾವಿತ್ರ್ಯ, ಸರಳತೆ ಪರಿಶುದ್ಧತೆ

ಮತ್ತು ನೈತಿಕತೆ ಸಾರ್ವಜನಿಕ ಬದುಕಿನ ಪ್ರಮಾಣಗಳಾಗಿ ಇಂದು ಉಳಿದಿಲ್ಲ. ಜಗತ್ತು ಮತ್ತು ಅದರಲ್ಲಿರುವ ಸಕಲವೂ ಅಧಿಕಾರ ಅಥವಾ ಶಕ್ತಿಯನ್ನಾಧರಿಸಿ 'ಯೂರೋಪ್' ಮತ್ತು 'ಇತರ' (Other) ಆಗಿ ವಿಭಜನೆಗೊಂಡಿದೆ. ಹಾಗಾಗಿ ಯಂತ್ರ ಮತ್ತು ಯಂತ್ರಸಿದ್ಧಾಂತಗಳು ಇದಕ್ಕೆ ಹೊರತಲ್ಲ.

## ಯುರೂಪ್ ಕೇಂದ್ರಿತ ಸಿದ್ಧಾಂತ (Eurocentric Theory)

ಯಂತ್ರದ ಆಗಮನದ ನಂತರ ಜಗತ್ತು ಎಂದೂ ಅರಿಯದ ವಿಭಜನೆಗೆ ಒಳಗಾಗಿದೆ. ಅದು ವ್ಯಾಪಕ ರೂಪದಲ್ಲಿ ಸಮಾಜ ಅಥವಾ ಮಾನವ ಜಗತ್ತನ್ನು ಮತ್ತು ಅಂತರಂಗಿಕವಾಗಿ ಮನುಷ್ಯ ಮತ್ತು ಆತನ ಮೂಲಸ್ವಭಾವವನ್ನ ಬೇರ್ಪಡಿಸುತ್ತದೆ. ಹತ್ತೊಂಬತ್ತನೆಯ ಶತಮಾನದ ನಂತರ ಜಗತ್ತು ಅಧಿಕಾರವನ್ನು ಚಲಾಯಿಸುವ ವರ್ಗ ಮತ್ತು ಅಧಿಕಾರ ಚಲಾವಣೆಯ ಹೇರಿಕೆಯಿಂದ ಶೋಷಣೆಗೆ ಒಳಪಡುವ ನಿಮ್ನವರ್ಗ – ಹೀಗೆ ಎರಡು ಭಾಗಗಳಾಗಿ ಹೋಳಾಯಿತು. ಒಂದು ಕಡೆ ಬಂಡವಾಳ ಹೊಂದಿದವರಿದ್ದಾರೆ. ಮತ್ತೊಂದೆಡೆ ಯಂತ್ರವನ್ನೇ ನೋಡದವರಿದ್ದಾರೆ. ಒಂದೆಡೆ ಬೇರೆಯವರನ್ನು ಕೆಲಸಕ್ಕೆ ನೇಮಿಸಿಕೊಳ್ಳುವವರಿದ್ದಾರೆ. ಮತ್ತೊಂದೆಡೆ ಯಾವುದೇ ಉದ್ಯೋಗವಿಲ್ಲದೆ ಹಸಿವಿನಿಂದ ಕಂಗೆಟ್ಟ ಮಿಲಿಯಾಂತರ ಜನರಿದ್ದಾರೆ. ಆಧುನಿಕ ವಿಜ್ಞಾನದ ಅಥವಾ ಮಾರುಕಟ್ಟೆಯ ತರ್ಕವನ್ನೂ ಗ್ರಹಿಸಲಾಗದ, ಜನರತ್ತ ಕಣ್ಣೆತ್ತಿಯೂ ನೋಡದೆ ಪ್ರತ್ಯೇಕವಾಗಿ ನಿಂತ ಆಧುನಿಕ ತಂತ್ರಜ್ಞಾನದ ಯಜಮಾನರಿದ್ದಾರೆ. ಹಾಗಾಗಿ ಜೀವನಪೂರ್ತಿ ಕಾರ್ಯನಿರತರಾದ ಜನರೊಂದೆಡೆಯಿದ್ದರೆ ಮತ್ತೊಂದೆಡೆ ತಮ್ಮ ಬದುಕನ್ನೆ ಬಲವಂತದ ಉದ್ಯೋಗ ಹೀನತೆಯಲ್ಲಿ ಕಳೆಯಬೇಕಾದ ಅನಿವಾರ್ಯ ಸ್ಥಿತಿಗೆ ತಳ್ಳಲ್ಪಟ್ಟ ಜನರಿದ್ದಾರೆ.

ಸಮಾಜದ ಈ ವಿಭಜನೆಗೆ ಪರ್ಯಾಯವಾಗಿ ಮತ್ತು ಅದರ ಜೊತೆ ಏಕತ್ರವಾಗಿ ಇದ್ದಂತೆಯೇ ಮಾನವನ ಮೂಲಸ್ವಭಾವ ಪರಸ್ಪರ ವಿರೋಧಿಸುವ ಎರಡು ಭಾಗಗಳಾಗಿ ಒಡೆದು ಹೋಗಿರುವುದು ಕಾಣುತ್ತದೆ. ಈ ವಿಭಜನೆ ಅನೇಕಾನೇಕ ರೀತಿಗಳಲ್ಲಿ ವ್ಯಕ್ತಗೊಳ್ಳುತ್ತದೆ. ಕಾರ್ಲ್‌ಮಾರ್ಕ್ಸ್ ತನ್ನ 'ಎಕನಾಮಿಕ್ ಅಂಡ್ ಫಿಲಾಸಫಿಕ್ ಮ್ಯಾನಸ್ಕ್ರಿಪ್ಟ್ಸ್ ಆಫ್ 1844' ಕೃತಿಯಲ್ಲಿ ವಿಶ್ವಾಸ ಕಳಕೊಂಡು ಪರಕೀಯವಾದ ನಿರ್ಜೀವ ದುಡಿಮೆಯ ಬಗ್ಗೆ ಪ್ರಸ್ತಾಪಿಸುವ ಸಂದರ್ಭದಲ್ಲಿ ಈ ಒಡಕಿನ ಸ್ಪಷ್ಟ ಸ್ವರೂಪ ನೀಡಿದ್ದಾನೆ. ಈ ನಿರ್ಜೀವ ದುಡಿಮೆಯನ್ನು ಹೋಗಲಾಡಿಸಲು ಮಾರ್ಕ್ಸ್ ಸಂವೇದನಾಪೂರ್ಣ ಮಾನವ ಕ್ರಿಯೆಯ ಪರಿಕಲ್ಪನೆಯನ್ನು ತನ್ನ 'ಫಸ್ಟ್ ಥೀಸಿಸ್ ಆಫ್ ಫ್ಯೂರ್ಬಾ' (Feurbach) ದಲ್ಲಿ ರೂಪಿಸುತ್ತಾನೆ. ಇದೇ ಒಡಕು ಅಸಂಗತವಾದ ಕ್ರಿಯೆಯಲ್ಲಿ ಬಲವಂತದ ಸೋಮಾರಿಯು ನಿರತವಾಗುವಂತೆ ಮಾಡಿದೆ. ಆತನಿಗೆ ಜಗತ್ತಿನಲ್ಲಿ ಲಭ್ಯವಿರುವ ಎಲ್ಲ ಸಮಯವನ್ನು ಕೊಟ್ಟು ಬಿಡುವಿಲ್ಲದೆ ದುಡಿಯುವಂತೆ ಮಾಡುತ್ತದೆ.

ಈ ವಿಭಜನೆಯಲ್ಲಿ ಮತ್ತು ಅದರ ಮೂಲಕ ಯಂತ್ರ ಮತ್ತು ಯಂತ್ರ–ಮಾನವ ಅಕ್ಷರಶಃ ಸಕಲವನ್ನೂ ಸ್ವಾಧೀನಪಡಿಸಿಕೊಳ್ಳುತ್ತವೆ. ಕೊಪರ್ನಿಕಸ್ ಪೂರ್ವದಲ್ಲಿ ಸಕಲಜಗತ್ತು ಸಾಧನೆಗಳ ಹೆಮ್ಮೆಯಿಂದ ಖುಷಿಪಡುತ್ತಿದ್ದಾಗ ಯೂರೋಪ್ ಸ್ಥಾನಭ್ರಷ್ಟವಾಗಿತ್ತು. ಆ

ನಷ್ಟವನ್ನು ತುಂಬಿಕೊಳ್ಳಲೋ ಎಂಬ ರೀತಿಯಲ್ಲಿ ಇಂದು ಇಡೀ ಜಗತ್ತು ಯೂರೋಪ್ ಕೇಂದ್ರಿತವಾಗಿದೆ. ಕ್ರಿಶ್ಚಿಯನ್ ಸಂಪ್ರದಾಯದ ಮನುಷ್ಯತ್ವಾರೋಪಣೆಯೇ (Anthropomorphism ಭಗವಂತನನ್ನು ಮಾನವ ರೂಪು ಮತ್ತು ಗುಣಗಳುಳ್ಳಂತೆ ಭಾವಿಸುವ ತತ್ತ್ವ) ಯೂರೋಪ್‌ನ ಪ್ರಾಬಲ್ಯದಲ್ಲಿ ಯೂರೋಪ್ ಕೇಂದ್ರಿತ ಪರಿಕಲ್ಪನೆಯಾಗಿ ಪರಿವರ್ತನೆಗೊಂಡಿದೆ. ಅಂದರೆ ಎಲ್ಲಕ್ಕೂ ಯೂರೋಪ್ ಆದರ್ಶ. ಇಲ್ಲಿಯ ಸಂಸ್ಕೃತಿಯು ಯೂರೋಪಿನ ಆಳುವ ವರ್ಗದ ದಾಸಿ; ಯೂರೋಪ್‌ನ ಚರಿತ್ರೆ ಜಗತ್ತಿನ ಚರಿತ್ರೆ; ಯೂರೋಪಿಯನ್ ವಿಜ್ಞಾನ ಮಾತ್ರವೇ ಜಗತ್ತಿನ ಏಕೈಕ ವಿಜ್ಞಾನ; ಆಧುನಿಕ ಯೂರೋಪಿಯನ್ ಪ್ರಭುತ್ವ ಮತ್ತು ಸಮಾಜ, ಮಾನವ ಪ್ರಗತಿಯ ಅತ್ಯುನ್ನತ ಶಿಖರವೆಂದು ಪ್ರತಿಬಿಂಬಿಸಲಾರಂಭವಾಯಿತು, ಮತ್ತು ಜಗತ್ತಿನ ಉಳಿದೆಲ್ಲ ಸಮಾಜಗಳು ಮತ್ತು ಜನರು ಆ ಶಿಖರದತ್ತ ಚಲಿಸಬೇಕು. ಈ ಎಲ್ಲ ಪರಿಕಲ್ಪನೆಗಳಿಂದಾಗಿ ಯಂತ್ರಕ್ಕೆ ಸಂಬಂಧಿಸಿದ ಯೂರೋಪಿಯನ್ ಸಿದ್ಧಾಂತವು ಪರಸ್ಪರ ವೈರುಧ್ಯಗಳುಳ್ಳ ಅಸಂಬದ್ಧತೆಯ ಮತ್ತು ಸುಳ್ಳುಗಳ ಕಂತೆಯಾಗಿದೆ. ಈ ಬಗೆಗಿನ ಚರ್ಚೆಯತ್ತ ನಮ್ಮೆಲ್ಲ ಗಮನವನ್ನು ಹರಿಸೋಣ.

ನಿಜಕ್ಕೂ ಹೇಳಬೇಕಾದರೆ ಯಂತ್ರಸಿದ್ಧಾಂತವನ್ನು ಹತ್ತೊಂಬತ್ತನೇ ಶತಮಾನದಲ್ಲಿ ಯೂರೋಪ್‌ನಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ವಿಜ್ಞಾನದಿಂದ ಬೇರ್ಪಡಿಸಲು ಸಾಧ್ಯವಿರಲಿಲ್ಲ. ಹಾಗೆಯೇ ಈ ವಿಜ್ಞಾನವನ್ನು ಅಂದಿನ ಯುಗದಲ್ಲಿ ಬೆಳೆಯುತ್ತಿದ್ದ ಸಾಮಾಜಿಕ, ಜೀವ ವೈಜ್ಞಾನಿಕ ಮತ್ತು ಗಣಿತ ಇತ್ಯಾದಿಗಳಿಗೆ ಸಂಬಂಧಿಸಿದ ಸಾಮಾನ್ಯ ಸಿದ್ಧಾಂತಗಳಿಂದಲೂ ಪ್ರತ್ಯೇಕಿಸಲು ಆಗುತ್ತಿರಲಿಲ್ಲ. ಅವುಗಳ ಬಗೆಗಿನ ಕೇವಲ ಸ್ಥೂಲನೋಟ, ಅವುಗಳ ಹಿಂದಿನ ಮಾದರಿಗಳು, ವಿಭಾಗಗಳು, ಬಗೆಗಳು, ತರ್ಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪಕ್ಷಪಾತ ಇತ್ಯಾದಿಗಳೆಲ್ಲವನ್ನೂ ಅನಾವರಣಗೊಳಿಸುತ್ತದೆ. ಆದರೆ, ನಮ್ಮ ಕಾಳಜಿ ಹೆಚ್ಚು ಇರುವುದು ಯಂತ್ರಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ: ಮುಖ್ಯವಾಗಿ ಯಂತ್ರ ಸಂಬಂಧಿತ ವಿಜ್ಞಾನ, ಅದರಲ್ಲೂ ವಿಶೇಷವಾಗಿ ಉಷ್ಣಗತಿ ವಿಜ್ಞಾನ (Thermo dynamics)ದ ಬಗ್ಗೆ ಆಸಕ್ತಿ ಹೆಚ್ಚು. ಉಷ್ಣಗತಿ ವಿಜ್ಞಾನವು ಉಷ್ಣಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುವ ಅಥವಾ ಸರಳವಾಗಿ ಹೇಳುವುದಾದರೆ ಉಷ್ಣವನ್ನು ಉಪಯುಕ್ತ ಕಾರ್ಯವನ್ನಾಗಿ ಮಾರ್ಪಡಿಸುವ ಸಿದ್ಧಾಂತ. ಮುಂದಿನ ಭಾಗದಲ್ಲಿ ಈ ಸಿದ್ಧಾಂತದ ಎರಡು ಪ್ರಮುಖ ಪರಿಕಲ್ಪನೆಗಳ ಬಗ್ಗೆ ಚರ್ಚಿಸೋಣ. ಆ ಎರಡು ಪರಿಕಲ್ಪನೆಗಳೆಂದರೆ ಉಪಯುಕ್ತ ಕಾರ್ಯ ಮತ್ತು ಪ್ರತ್ಯೇಕ ಪ್ರತ್ಯೇಕವಾಗಿರುವ ವ್ಯವಸ್ಥೆಗಳು. ಮುಂದಿನ ಭಾಗದಲ್ಲಿ ಈ ಪರಿಕಲ್ಪನೆಗಳಲ್ಲಿರುವ ಯೂರೋಪ್ ಕೇಂದ್ರಿತ ಲಕ್ಷಣಗಳನ್ನು ಅರಿಯೋಣ.

### ಉಪಯುಕ್ತ ಕಾರ್ಯ

ಯಂತ್ರ ಸಿದ್ಧಾಂತದ ಕೇಂದ್ರ ಬಿಂದುವೆಂದರೆ ಉಪಯುಕ್ತ ಕೆಲಸದ ಪರಿಕಲ್ಪನೆ. ನೈಸರ್ಗಿಕ ವಿಜ್ಞಾನವು ಮೊಟ್ಟಮೊದಲ ಬಾರಿಗೆ ಒಂದು ಸ್ಪಷ್ಟ 'ಮನುಷ್ಯತ್ವಾರೋಪಣೆ'ಗೆ

ಮುಖಾಮುಖಿಯಾಯಿತು. ಕ್ರೈಸ್ತರ ಪ್ರಕಾರ ಜಗತ್ತಿನ ಸಮಸ್ತವನ್ನೂ ದೇವರು ಮಾನವನ ಉಪಯುಕ್ತತೆಗಾಗಿ ಸೃಷ್ಟಿಸಿದ್ದಾನೆ. ವಿಜ್ಞಾನವು ಇಂಥ ಕ್ರೈಸ್ತ ಮನುಷ್ಯತ್ವಾರೋಪಣೆಯಿಂದ ತಾನು ಬಿಡುಗಡೆಗೊಂಡಿರುವುದಾಗಿ ಭಾವಿಸಿತು. ಹಾಗಾಗಿ ಅದು ಉಪಯುಕ್ತ ಕಾರ್ಯದ ರೂಪದಲ್ಲಿ ಉಷ್ಣಗತಿ ವಿಜ್ಞಾನದಲ್ಲಿ ಮರಳಿ ಬಂದಾಗ ಅದರ ಅಂಗೀಕಾರಕ್ಕೆ ತೀವ್ರ ವಿರೋಧವಿತ್ತು. ವಿಜ್ಞಾನವು ಮಾನವೀಯ ಸ್ಪರ್ಶವನ್ನು ಉಳಿಸಿಕೊಂಡಿದ್ದರೆ, ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಮನುಷ್ಯತ್ವಾರೋಪಣೆಯ ಅರ್ಥವನ್ನು ಪುನಾರಚಿಸಿ ಆ ಪರಿಕಲ್ಪನೆಯನ್ನು ಉಳಿಸಿಕೊಳ್ಳಬಹುದಿತ್ತು. ಆದರೆ ಹಾಗಾಗಲಿಲ್ಲ. ಅದಕ್ಕೆ ಬದಲು ಉಪಯುಕ್ತ ಕಾರ್ಯವನ್ನು ಸಾರ್ವತ್ರಿಕ ಪರಿಕಲ್ಪನೆಯಾಗಿ ಸೂತ್ರೀಕರಿಸುವ ಪ್ರಯತ್ನ ನಡೆಯಿತು. ಉಷ್ಣಕ್ಕೆ ಸಂಬಂಧಿಸಿದಲ್ಲೆಲ್ಲಾ ವ್ಯವಸ್ಥಿತ ಚಲನೆಯನ್ನು ಅಡ್ಡಾದಿಡ್ಡಿ ಚಲನೆಗಿಂತಲೂ ಭಿನ್ನವೆಂದು ತೋರಿಸಲಾಯಿತು. ಉಪಯುಕ್ತತೆಯ ಪರಿಕಲ್ಪನೆಯ ಸ್ಥಾನದಲ್ಲಿ ವ್ಯವಸ್ಥಿತ ಪರಿಕಲ್ಪನೆಯನ್ನು ಬದಲಿಸಲಾಯಿತು; ಮತ್ತು ಅದು ಮಾನವನ ಅಗತ್ಯ ಮತ್ತು ಸಂದರ್ಭದಿಂದ ಸಂಪೂರ್ಣ ಸ್ವತಂತ್ರವಾಗಿ ತೋರುವಂತೆ ಮಾಡಲಾಯಿತು.

ಗಾಂಧಿಯವರು ಹಿಂದ್ ಸ್ವರಾಜ್‌ನಲ್ಲಿ ಕಟುವಿಮರ್ಶೆಗೊಳಪಡಿಸಿದ ರೈಲು ಉದ್ಯಮದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಕಲ್ಲಿದ್ದಲಿನಲ್ಲಿ ಲಭ್ಯವಿರುವ ಶಕ್ತಿಯನ್ನು ಉಗಿಬಂಡಿಯು ಅಪಾರ ಉಪಯುಕ್ತ ಕಾರ್ಯವನ್ನು ಮಾಡುವ ವೇಗದ ರೈಲುಗಳ ಚಲನೆಯಾಗಿ ಪರಿವರ್ತಿಸಿರುವುದು ನಮ್ಮಲ್ಲಿ ಬಹುತೇಕ ಜನರಿಗೆ ಸುಸ್ಪಷ್ಟವಾಗಿ ಕಾಣಬಹುದು. ರೈಲು ದೂರದೂರದ ಪ್ರದೇಶಗಳಿಗೆ ಕಲ್ಲಿದ್ದಲು, ಖನಿಜ ಮತ್ತು ಮರಮಟ್ಟುಗಳನ್ನು ಸಾಗಿಸಿತು. ದೂರ ಪ್ರದೇಶಗಳಿಗೆ ವೇಗವಾಗಿ ಸೈನಿಕರನ್ನು ಕರೆದೊಯ್ದಿತು. ಅಲ್ಪ ಅವಧಿಯಲ್ಲೇ ಸಿದ್ಧವಸ್ತುಗಳನ್ನು ದೂರದ ಮಾರುಕಟ್ಟೆಗಳಿಗೆ ಸಾಗಿಸಿತು. ಜನರು ಕ್ಷಿಪ್ರದಲ್ಲೇ ದೂರದ ಊರುಗಳಿಗೆ ತಲುಪಲು ಅದು ಸಾಧನವಾಯಿತು. ರೈಲ್ವೆಯ ಅಂಥ ಸೇವೆಗಳು ಆಧುನಿಕ ಕೈಗಾರಿಕೆಗಳಿಗೆ ರಾಷ್ಟ್ರೀಯ ರಕ್ಷಣೆ, ಸಾಮ್ರಾಜ್ಯಶಾಹಿ ಆಡಳಿತ, ಲಾಭದಾಯಕ ವ್ಯಾಪಾರ, ಉದ್ಯೋಗ ಇತ್ಯಾದಿಗಳಿಗೆ ಅಗತ್ಯ ಹಾಗೂ ಉಪಯುಕ್ತ ಎಂದು ನಾವು ಭಾವಿಸಬಹುದು. ಈ ಅಭಿಪ್ರಾಯವು ಬ್ರಿಟಿಷರು ಆಳುತ್ತಿರುವಾಗ ಮತ್ತು ಮುಂದೆಯೂ ಇಂಗ್ಲಿಷ್ ಪ್ರಜೆ ಭಾರತದ ಬಗ್ಗೆ ತಳೆದಿದ್ದಿರಬಹುದಾದ ಅಭಿಪ್ರಾಯಕ್ಕಿಂತ ಭಿನ್ನವಾಗಿಲ್ಲ. ಉಗಿಯಂತ್ರದ ನೆರವಿನಿಂದ ಆಗಿರುವ ಪ್ರತಿಯೊಂದು ಉಪಯುಕ್ತ ಕ್ರಿಯೆಗೂ ಖಂಡಿತವಾಗಿ ಮತ್ತೊಂದು ಮುಖವೂ ಇದೆ. ಕಚ್ಚಾವಸ್ತು ಮತ್ತು ಸಂಪನ್ಮೂಲಗಳನ್ನು ಒಂದು ಪ್ರದೇಶದಿಂದ ಅಪಾರ ಪ್ರಮಾಣದಲ್ಲಿ ಬೇರೊಂದು ಸ್ಥಳಕ್ಕೆ ಕೊಂಡೊಯ್ದಾಗ, ಆ ಪ್ರದೇಶದ ಸುತ್ತಮುತ್ತಲಿನ ಬದುಕು ಸಂಪೂರ್ಣ ಅಸ್ತವ್ಯಸ್ತಗೊಳ್ಳುತ್ತದೆ. ಬುಡಕಟ್ಟು ಜನಾಂಗದವರ ಬದುಕನ್ನೇ ನೋಡಿ. ರೈಲ್ವೆ ಸೇವೆಯ ಚಲನೆ ಒಂದು ಕಾಲಕ್ಕೆ ಸಾಮ್ರಾಜ್ಯಶಾಹಿ ಆಡಳಿತದ ಸಾಧನವಾಗಿತ್ತಷ್ಟೆ. ಆದರೆ, ಅದು ಈಗಾಗಲೇ ರಾಷ್ಟ್ರದ ಸಮಗ್ರತೆ ಅಥವಾ ರಾಷ್ಟ್ರ ರಕ್ಷಣೆಯ ಹಣೆಪಟ್ಟಿ ಹೊತ್ತಿದ್ದರೂ ಸಾಮ್ರಾಜ್ಯಶಾಹಿಯ ಸಾಧನವಾಗಿಯೇ ಉಳಿದಿದೆ. ಸೇನೆಯ ಕಾರ್ಯ ಬದಲಾಗಿಲ್ಲ. ಹೆಸರು ಮಾತ್ರ ಬದಲಾಗಿದೆ. ಸರಕುಗಳನ್ನು ಅದರ ಉತ್ಪನ್ನದ ಪ್ರದೇಶದಿಂದ

ಬಹುದೂರದ ಮಾರುಕಟ್ಟೆಯಲ್ಲಿ ಬಿಕರಿ ಮಾಡಿದಾಗ ವ್ಯಾಪಾರ ಬೆಳೆಯುತ್ತದೆ. ಆದರೆ, ಅದರ ಜೊತೆಯಲ್ಲಿ ತೀವ್ರ ದುಡಿಮೆಯಾಧಾರಿತ ಕ್ಷೇತ್ರಗಳು ಅಧೋಗತಿಗಿಳಿಯುತ್ತವೆ. ಇದರ ಜೊತೆಜೊತೆಯೇ ಬಂಡವಾಳ ಕೇಂದ್ರಿತ ಕ್ಷೇತ್ರಗಳು ಮತ್ತು ಸೇನಾ ಕ್ಷೇತ್ರಗಳ (ಸರಕು ಸಾಮಗ್ರಿಗಳ ಉತ್ಪನ್ನ ಕ್ಷೇತ್ರದ ಬದಲು ಸೇನೆಯನ್ನು ನಿರ್ವಹಿಸುವ ವಲಯ) ಹಣಕಾಸು ಶಕ್ತಿಯೂ ಬೆಳೆಯುತ್ತದೆ. ಕೈಗಾರಿಕೆಯ ಎದುರು ಕೃಷಿಯನ್ನಿಟ್ಟು ಅದರ ಪರಿಸ್ಥಿತಿಯನ್ನು ಅವಲೋಕಿಸಿ. ಬಂಡವಾಳ ವಲಯದ ಆರ್ಥಿಕಶಕ್ತಿ ವೃದ್ಧಿಯಾಗುತ್ತದೆ. ಹಾಗೆಯೇ ಜೊತೆಯಲ್ಲಿ ಅಸಂಘಟಿತ ವಲಯದ ಕೌಟುಂಬಿಕ ಬಜೆಟ್‌ನ್ನು ನಗರ ಪ್ರದೇಶದ ಶ್ರೀಮಂತ ವರ್ಗದವರಿಗೆ ಉಕ್ಕಿ ಹರಿಯುವ ಸಂಪತ್ತನ್ನು ಜೊತೆಗೆ ಇಟ್ಟು ಪರಿಶೀಲಿಸಿದಾಗ ಸತ್ಯ ಹೆಚ್ಚು ಸ್ಫುಟವಾಗುತ್ತದೆ.

ಉಗಿ ಯಂತ್ರದಿಂದ ಆರಂಭಿಸಿ ವಿಮಾನ, ಮೋಟರ್ ಕಾರ್, ವಿದ್ಯುತ್ ಶಕ್ತಿ ಮತ್ತು ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನದವರೆಗೆ ಉಪಯುಕ್ತ ಕಾರ್ಯ ಎಂಬ ಪದಕ್ಕೆ 'ಯಾರಿಗೆ ಉಪಯುಕ್ತ' ಎಂಬ ಹಿನ್ನೆಲೆಯಲ್ಲಿ ಸ್ಪಷ್ಟವಾದ ಅರ್ಥವಿದೆ. ಉಪಯುಕ್ತ ಕಾರ್ಯವನ್ನು ಮಾಡುವ ಈ ಯಂತ್ರಗಳು ಯೂರೂಪ್ ಜನರಿಗೆ ಮತ್ತು ಬೇರೆಡೆ ಇರುವ ಅವರ ಮಿತ್ರರಿಗೆ ಮಾತ್ರ ಉಪಯುಕ್ತ. ವಿಮಾನದಲ್ಲಿ ಓಡಾಡುವವರು, ಕಾರಿನ ಮಾಲೀಕ, ವಿದ್ಯುತ್, ಕಂಪ್ಯೂಟರ್, ಟೆಲಿಫೋನ್, ಇ-ಮೇಲ್ ಇತ್ಯಾದಿ ಉಪಯೋಗಿಸುವವರು ಯಾರು ಎಂಬುದನ್ನು ಪರಿಶೀಲಿಸಿ. ಈ ಸರಕು-ಸೇವೆಗಳನ್ನು ಉಪಯೋಗಿಸುವವರನ್ನು ಬಳಕೆಮಾಪಕದ ಮೂಲಕ ಅಳೆದರೆ ಭಾರತೀಯ ಬಡಸಮುದಾಯ ಕೇವಲ ಒಂದೆಂದು ಪರಿಗಣಿಸಿದರೆ, ಮುಂದೆ ದೆಹಲಿಯಂಥ ಮಹಾನಗರಗಳಲ್ಲಿರುವವರು ಒಂದು ಸಾವಿರದ ಹತ್ತಿರ ಇರಬಹುದು; ಮತ್ತು ಯೂರೋಪಿಯನ್ ಮತ್ತು ಅಮೆರಿಕನ್ನರು ಮಿಲಿಯನ್ ಗೆರೆ ದಾಟಬಹುದು.

ಮನುಷ್ಯತ್ವದ ಗುಣವುಳ್ಳ 'ಉಪಯುಕ್ತ ಕಾರ್ಯ' ಒಂದು ಅರ್ಥಪೂರ್ಣ ಪರಿಕಲ್ಪನೆಯಾಗಿದೆ. ಆಹಾರವನ್ನು ಬೇಯಿಸಿದಾಗ ಅಗಾಧ ಪ್ರಮಾಣದ ಉಪಯುಕ್ತ ಕ್ರಿಯೆ ಜರುಗುತ್ತದೆ. ಮೋಡ ಗರಿಗಟ್ಟುವುದರಲ್ಲಿ, ಮಳೆ ಸುರಿಯುವುದರಲ್ಲಿ ಸಂಭವಿಸುವ ಉಪಯುಕ್ತ ಕ್ರಿಯೆಗೆ ಎಣೆಯೇ ಇಲ್ಲ. ಸೂರ್ಯನ ಕಿರಣಗಳು ಪ್ರತಿದಿನ ಮಾಡುವ ಉಪಯುಕ್ತ ಕ್ರಿಯೆಯು ಇದುವರೆವಿಗೂ ಸಮಸ್ತ ಆಧುನಿಕ ಕೈಗಾರಿಕೆ ಒಟ್ಟಾಗಿ ಮಾಡಿದ ಕೆಲಸಗಳಿಗೆ ಹೋಲಿಸಲು ಸಾಧ್ಯವೇ ಆಗದಷ್ಟು ಹೆಚ್ಚಿನದು. ಉಪಯುಕ್ತ ಕ್ರಿಯೆಯನ್ನು 'ವ್ಯವಸ್ಥಿತ ಚಲನೆ'ಯನ್ನಾಗಿ ಪರಿವರ್ತಿಸುವ ಪ್ರಯತ್ನ ನಡೆದಾಗ ಸಂಕುಚಿತ ಪ್ರಾದೇಶಿಕ ಭಾವನೆ ಮತ್ತು ಅಸಂಗತಿಗಳು ನುಸುಳಿಕೊಳ್ಳುತ್ತವೆ. ಉಪಯುಕ್ತ ಕ್ರಿಯೆಯ ಸಾರ್ವತ್ರಿಕತೆಯ ತೋರ್ಪಡಿಕೆಯು, ಒಟ್ಟು ಆಧುನಿಕ ವಿದ್ಯಮಾನದಲ್ಲಿರುವ ಯೂರೋಪ್ ಕೇಂದ್ರಿತ ಪಕ್ಷಪಾತವನ್ನು ಹೊಣೆಯ ತೆರೆಯ ಹಿಂದೆ ಬಚ್ಚಿಡುವ ಪ್ರಯತ್ನ ಮಾತ್ರ. ವಾಸ್ತವವಾಗಿ ಯೂರೋಪಿಯನ್ನರಲ್ಲದವರ ಅನಾದರ ಕಚ್ಚಾವಸ್ತು ಸರಬರಾಜುದಾರರು, ಇಂಧನವಾಗುವ ಕ್ರಿಯೆ, ಆಧುನಿಕ ಕೈಗಾರಿಕೆಯ ತರುವ ವಿನಾಶ ಇತ್ಯಾದಿಗಳ ಅನಾದರ, ಇವೆಲ್ಲವೂ ಹತ್ತೊಂಬತ್ತನೇ ಶತಮಾನದ ಯೂರೋಪಿಯನ್ ಸಿದ್ಧಾಂತದ ಒಂದು

ನಿರ್ದಿಷ್ಟ ಒಲವಿನಲ್ಲಿ ಬೇರೂರಿದೆ. "ಬಿಡಿ ಅಥವಾ ಖಂಡ ವ್ಯವಸ್ಥೆಗಳು" ಎಂಬ ಕಲ್ಪನೆಯ ಬಗೆಗಿನ ಚರ್ಚೆಯ ಮೂಲಕ ಆ ಪ್ರವೃತ್ತಿ ಸ್ಪಷ್ಟವಾಗಲಿದೆ.

**ಬಿಡಿ ವ್ಯವಸ್ಥೆ ಅಥವಾ ಖಂಡ ವ್ಯವಸ್ಥೆ (Isolated Systems)**

ಉಷ್ಣವಿದ್ಯುತ್ ಸ್ಥಾವರದ ತಂತ್ರವಿಧಾನ ಮತ್ತು ಆರ್ಥಿಕತೆಯ ಬಗ್ಗೆ ಚರ್ಚಿಸುವಾಗ ಕಲ್ಲಿದ್ದಲು ರೂಪುಗೊಳ್ಳುವ ಪ್ರಕ್ರಿಯೆಯ ಬಗ್ಗೆ ನಾವು ಚರ್ಚಿಸುವುದಿಲ್ಲ. ನೂಲಿನ ಗಿರಣಿ ಬಗ್ಗೆ ಚರ್ಚಿಸುವಾಗ ಹತ್ತಿ ಬೆಳೆಗಾರರು, ಕೆಲಸ ಕಳೆದುಕೊಂಡ ಸಾಂಪ್ರದಾಯಿಕವಾಗಿ ನೂಲುವವರು, ಅಥವಾ ವಿದ್ಯುತ್ ಉತ್ಪಾದನಾ ವಿಧಾನಗಳು ಚರ್ಚೆಗೆ ಯೋಗ್ಯವಾದ ವಿಷಯಗಳೆಂದು ನೋಡುವುದಿಲ್ಲ. ಉಕ್ಕು ಕಾರ್ಖಾನೆಯ ಕಾರ್ಯದಕ್ಷತೆಯು ಬೃಹತ್ ಪ್ರಮಾಣದ ಗಣಿಗಾರಿಕೆಯು ಎಸಗುವ ಅವ್ಯವಸ್ಥೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಒಟ್ಟು ಕೈಗಾರಿಕಾ ಪ್ರಕ್ರಿಯೆಯ ಅಧ್ಯಯನವು ಸಾಮಾನ್ಯವಾಗಿ ಪ್ರಕೃತಿ ಮತ್ತು ಮನುಷ್ಯನ ಮೇಲೆ ಮಾಡುವ ವಿನಾಶದ ಪರಿಣಾಮಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಇದು ಇಂದು ಪ್ರಬಲವಾಗಿರುವ ಪ್ರವೃತ್ತಿ. ಯಂತ್ರದ ತಂತ್ರವಿಧಾನ ಮತ್ತು ಆರ್ಥಿಕತೆಯು ಕಚ್ಚಾವಸ್ತುಗಳ ವಲಯದ ಪರಿಸ್ಥಿತಿ ಅಥವಾ ಯಂತ್ರದ ಪ್ರಕ್ರಿಯೆಗಳಿಂದಾಗುವ ಪರಿಣಾಮಗಳ ಕುರಿತು ಯೋಚಿಸುವುದಿಲ್ಲ. ಯಾವಾಗಲೂ ಯಂತ್ರವನ್ನು ಒಂದು ಪ್ರತ್ಯೇಕ ಘಟಕವೆಂದೇ ಪರಿಗಣಿಸಲಾಗಿದೆ. ಅಂತಿಮವಾಗಿ ಇದರ ತಾತ್ತ್ವಿಕ ತಳಹದಿಯಿರುವುದು ಯಂತ್ರ ಕುರಿತ ಸಿದ್ಧಾಂತವಾದ ಉಷ್ಣಗತಿ ವಿಜ್ಞಾನದ ಎರಡನೇ ನಿಯಮದಲ್ಲಿ (Second Law of Themodynamics) ಉಷ್ಣಗತಿ ವಿಜ್ಞಾನದ ಎರಡನೇ ನಿಯಮವು (Second Law of Thermodynamics) ಉಪಯುಕ್ತ ಕ್ರಿಯೆ, ಜಡೋಷ್ಣ (Enlropy), ಲಭ್ಯ ಮತ್ತು ಅಲಭ್ಯ ಚಾಲಕಶಕ್ತಿ (Energy) ಕಾರ್ಯ ಸಾಮರ್ಥ್ಯ (Efficiency) ಚಾಲಕಶಕ್ತಿಯ ಗುಣಮಟ್ಟ (Energy quality) ಇತ್ಯಾದಿ ಪರಿಕಲ್ಪನೆಗಳನ್ನು ಸೂತ್ರೀಕರಿಸುತ್ತದೆ. ಇದು ಚಾಲಕಶಕ್ತಿ ವಿಜ್ಞಾನ (Energetics) ಮತ್ತು ಯಂತ್ರಗಳ ತತ್ತ್ವ (Theory of Machines) ಗಳ ಮೇಲಿನ ಪರಿಕಲ್ಪನೆಗಳನ್ನು ಆಧರಿಸಿದೆ. ಎರಡನೇ ನಿಯಮದ ಸೂತ್ರವು ಖಂಡ ಅಥವಾ ಬಿಡಿ ವ್ಯವಸ್ಥೆಯ ಪರಿಕಲ್ಪನೆಯನ್ನೇ ಬಳಸಿಕೊಳ್ಳುತ್ತದೆ. ಒಂದು ಖಂಡ ವ್ಯವಸ್ಥೆಯೆಂದರೆ ತನ್ನ ಸುತ್ತಮುತ್ತಲ ಪರಿಸರದಿಂದ ಏನನ್ನೂ ಪಡೆಯದ ಮತ್ತು ತನ್ನ ಆವರಣಕ್ಕೆ ಏನನ್ನೂ ನೀಡದ ಒಂದು ಅಲಿಪ್ತ ವ್ಯವಸ್ಥೆ. ಜಡೋಷ್ಣವೆಂದರೆ ಈಗಾಗಲೇ ವಿವರಿಸಿರುವಂತೆ, ಒಂದು ವ್ಯೂಹದಲ್ಲಿಯ ಉಷ್ಣಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಮಾರ್ಪಡಿಸುವ ಕ್ರಿಯೆಗೆ ಒದಗದ ಶಕ್ತಿಯ ಪರಿಮಾಣ. ಎರಡನೇ ನಿಯಮದ ಪ್ರಕಾರ ಜಡೋಷ್ಣವು ಒಂದು ಬಿಡಿ ಅಥವಾ ಖಂಡ ವ್ಯವಸ್ಥೆ. ಅದು ಎಂದಿಗೂ ಕ್ಷಯವಾಗುವುದಿಲ್ಲ. ಅಂಥ ವ್ಯವಸ್ಥೆಯ ಆಧಾರವಾಗಿರಿಸಿಕೊಂಡೇ ಯಂತ್ರದ ಚಾಲಕಶಕ್ತಿಯ ಪ್ರಮಾಣವನ್ನು ಕಂಡುಹಿಡಿಯಲಾಗುತ್ತದೆ. ಉದಾಹರಣೆಗೆ ಒಂದು ಪೆಟ್ರೋಲ್ ಯಂತ್ರದ ಕಾರ್ಯಸಾಮರ್ಥ್ಯದ ಲೆಕ್ಕಾಚಾರ ಮಾಡುವಾಗ ಅದನ್ನೊಂದು ಖಂಡವ್ಯವಸ್ಥೆಯಲ್ಲೇ ಕಂಡುಹಿಡಿಯಲಾಗುತ್ತದೆ. ಆ ಕಾರ್ಯ ಸಾಮರ್ಥ್ಯದ ಲೆಕ್ಕಾಚಾರಕ್ಕೂ ತೈಲವನ್ನು ಸಂಸ್ಕರಿಸುವ ಕಾರ್ಯಕ್ಕೂ ಸಂಬಂಧವಿರದು. ಅಥವಾ ಆ ಲೆಕ್ಕಾಚಾರವು

ಪೆಟ್ರೋಲ್ ಯಂತ್ರದ ಹೊಗೆಯಿಂದಾಗುವ ವಾಯುಮಾಲಿನ್ಯದ ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗೆಯೇ ಹೊರಬರುವ ಹೊಗೆಯನ್ನು ಆಹಾರ ತಯಾರಿಕೆಗೆ ಸಸ್ಯಗಳು ಬಳಸಿಕೊಳ್ಳುವ ರೀತಿ ಮತ್ತು ಪ್ರಮಾಣಕ್ಕೂ ಪೆಟ್ರೋಲ್ ಯಂತ್ರದ ಕಾರ್ಯಸಾಮರ್ಥ್ಯಕ್ಕೂ ಸಂಬಂಧ ಕಲ್ಪಿಸುವುದಿಲ್ಲ. ಇದೇ ರೀತಿಯಲ್ಲಿ ಒಂದು ವಿದ್ಯುತ್ ಒಲೆ ಮತ್ತು ಸೌದೆ ಒಲೆಯ ಕಾರ್ಯ ಸಾಮರ್ಥ್ಯವನ್ನು ತುಲನೆ ಮಾಡುವಾಗ ಅವುಗಳಿಗಾಗುವ ಸಾಮಾಜಿಕ ಮತ್ತು ಆರ್ಥಿಕ ವೆಚ್ಚ ಮತ್ತು ಶ್ರಮ ಹಾಗೂ ಆ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಶಕ್ತಿ ಕಾರ್ಯಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಅವೆರಡೂ ಪರಸ್ಪರ ಸಂಬಂಧ ಕಲ್ಪಿಸಿಕೊಳ್ಳದ ಅಲಿಪ್ತ ವ್ಯವಸ್ಥೆಗಳು.

ಆದರೆ ಬಿಡಿ ಅಥವಾ ಖಂಡ ವ್ಯವಸ್ಥೆಯೆಂಬುದೊಂದು ಮಿಥ್ಯೆ. ಆಚರಣೆಯಲ್ಲಿ ಅಂಥದೊಂದು ವ್ಯವಸ್ಥೆ ಅಸ್ತಿತ್ವದಲ್ಲಿ ಇಲ್ಲದಿರುವುದು ಸ್ಪಷ್ಟ. ಒಂದು ಖಂಡ ವ್ಯವಸ್ಥೆ ಸಾಕಾರಗೊಳ್ಳುವುದು ಅಸಾಧ್ಯವಾದುದರಿಂದ ಚಾಲಕಶಕ್ತಿಯ ತತ್ತ್ವ ಹುಸಿಯಿರಬಹುದೆಂಬ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. ಖಂಡವ್ಯವಸ್ಥೆಯನ್ನು ಒಂದು ಆದರ್ಶದ ಅಥವಾ ಸೀಮಿತಾರ್ಥದ ವ್ಯವಸ್ಥೆಯಾಗಿ ಮಾತ್ರ ನೋಡಬಹುದು. ಆದರೆ, ಇಂಥ ಆದರ್ಶವೇ ಅಥವಾ ಸೀಮಿತಾರ್ಥ ವ್ಯವಸ್ಥೆಯೇ ದೋಷದಿಂದ ಕೂಡಿದ್ದರೆ ಮಾಡುವುದೇನನ್ನು ? ಆಲೋಚನೆಯ ಮಟ್ಟದಲ್ಲಿ ಅಥವಾ ತಾತ್ತ್ವಿಕವಾಗಿ ಒಂದು ಖಂಡ ವ್ಯವಸ್ಥೆ ಮತ್ತು ಅದರ ಸುತ್ತಲಿರುವ ಸಂಗತಿಗಳ ಮಧ್ಯೆ ವಿನಿಮಯವೇ ಇಲ್ಲವೆಂದು ತಿಳಿದುಕೊಂಡರೆ, ಅದೊಂದು ಆದರ್ಶದ ಹಂತ. ಆಗ ವಾಸ್ತವಿಕ ವ್ಯವಸ್ಥೆಗಳು ಕ್ರಮಬದ್ಧವಾಗಿ ರೂಪುಗೊಂಡ ಸರಣಿಯೊಂದರ ಸೀಮಿತ ವ್ಯವಸ್ಥೆ ಆಗಿರುವುದಿಲ್ಲ. ಇಂಥ ಅನುಮಾನಗಳೇ ಚಾಲಕಶಕ್ತಿ ತತ್ತ್ವವು ಮಿಥ್ಯೆಯಾಗಿರಬಹುದೆಂಬ ಸಂದೇಹಕ್ಕೆ ಪುಷ್ಟಿ ನೀಡುತ್ತದೆ. ಏಕೆಂದರೆ ಇಂಥ ತತ್ತ್ವಸಿದ್ಧಾಂತಗಳು ಯೂರೋಪ್ ರಾಷ್ಟ್ರಗಳು ಲಾಭ ಗಳಿಸಲು ನೆರವಾಗಿವೆ. ಆದರೆ ಸತ್ಯ ಅಷ್ಟೊಂದು ಗದ್ದಲ ಮಾಡುತ್ತ ಲಾಭದ ಮತ್ತು ಯೂರೋಪಿನ ಪರ ನಿಲ್ಲಲು ಸಾಧ್ಯ ಎಂದು ನಂಬಲು ಕಷ್ಟವಾಗುತ್ತದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಯೂರೋಪಿನಲ್ಲಾದ ಅಭೂತಪೂರ್ವ ಕೈಗಾರಿಕಾ ಕ್ರಾಂತಿಯ ಕಾಲದಲ್ಲಿ ಉಷ್ಣಗತಿ ವಿಜ್ಞಾನವು ಸೂತ್ರರೂಪ ಪಡೆಯಿತು. ಅಲ್ಲಿಂದ ಸಮಕಾಲೀನ ಯೂರೋಪಿಯನ್ ತತ್ತ್ವದಲ್ಲಿ ಖಂಡವ್ಯವಸ್ಥೆಯ ಲಕ್ಷಣವು ಮಾದರೀ ರೂಪದಲ್ಲಿ ಬಂಧಿಯಾಯಿತೆಂದು ಕಾಣುತ್ತದೆ. ಆರ್ಥಿಕ ಪ್ರಗತಿಯ ತತ್ತ್ವಗಳಲ್ಲಿ ಅದು ಸ್ಪಷ್ಟವಾಗಿ ವಿಶದಗೊಂಡಿದೆ. ಕೈಗಾರಿಕಾ ಕ್ರಾಂತಿಯ ಜೊತೆಯಲ್ಲೇ ಯುರೋಪ್ ರಾಷ್ಟ್ರಗಳು ಸಂಪತ್ತಿನ ಹೇರಳ ಉತ್ಪತ್ತಿಯನ್ನು ಕಂಡವು. ಈ ಸಂಪತ್ತಿನ ಮೂಲವನ್ನು ಯೂರೋಪಿಯನ್ ತತ್ತ್ವವು ವಿಜ್ಞಾನ ಮತ್ತು ಕೈಗಾರಿಕೆಗಳಿಗೆ ಅಥವಾ ಕೂಲಿಕಾರನ ದುಡಿಮೆಗೆ ಆರೋಪಿಸಿತು. (ಅಂತೂ ಸಂಪತ್ತಿನ ಮೂಲವನ್ನು ಆಯಾ ತತ್ತ್ವಗಳ ಬಗೆಗಿನ ಒಲವು ನಿರ್ಧರಿಸುತ್ತಿತ್ತು). ಬೂರ್ಜ್ವಾ ಮತ್ತು ಸಮಾಜವಾದೀ – ಈ ಉಭಯ ತತ್ತ್ವ ಪ್ರತಿಪಾದಕರೂ ಈ ಸಂಪತ್ತಿನ ಮೂಲವನ್ನು ಯೂರೋಪ್‌ನಲ್ಲಿ ಅಂದರೆ ಯೂರೋಪಿನ ವಿಜ್ಞಾನ ಅಥವಾ ಅಲ್ಲಿಯ ಕೂಲಿಕಾರನ ದುಡಿಮೆಯಲ್ಲಿ

ಗುರುತಿಸಿದರು. ವಸಾಹತು ರಾಷ್ಟ್ರಗಳಿಂದ ಹರಿದುಬಂದ ಸಕಲ ವಸ್ತುಗಳ ಒಳಹರಿವು ಯೂರೋಪ್ ಸಂಪತ್ತಿನ ಪ್ರಧಾನ ಮೂಲದ ಒಂದು ಸಣ್ಣ ಅಂಶವಾಗಿರಬಹುದೆಂದು ಪರಿಗಣಿಸಲಿಲ್ಲ. ಮ್ಯಾಂಚೆಸ್ಟರ್ ಗಿರಣಿಯ ಕಾರ್ಯಸಾಮರ್ಥ್ಯ ಮತ್ತು ಭಾರತದ ಜಮೀನುದಾರಿ ಪದ್ಧತಿಯ ನಡುವಿನ ಸಂಬಂಧದ ಬಗೆಗೆ ಎಲ್ಲಿ ಚರ್ಚೆಯಾಗಿದೆ? ಯೂರೋಪ್ ಒಂದು ಖಂಡವ್ಯವಸ್ಥೆಯಾಗಿ ಒಂಟಿಯಾಗಿ, ಆಲಿಪ್ತವಾಗಿ ಉಳಿಯಿತು. ಅಮೆರಿಕ, ಆಫ್ರಿಕಾ, ಏಷ್ಯಾ, ಆಸ್ಟ್ರೇಲಿಯಾ ಮುಂತಾದ ಅದರ ಹೊರಗಿನ ಪ್ರಪಂಚದ ನಡುವೆ ಸಂಬಂಧಗಳು ಯೂರೋಪ್ ಕೇಂದ್ರಿತ ಪ್ರಕ್ರಿಯೆಯ ಸುತ್ತ ಸುತ್ತುವ ಗೌಣಕ್ರಿಯೆಗಳಾದವು. ಖಂಡವಾದ ವ್ಯವಸ್ಥೆಯೊಂದು ಅಸ್ತಿತ್ವದ ಸಾಧ್ಯತೆಯ ಮೇಲೆ ನಿಂತಿದೆ ಎಂಬ ತಿಳುವಳಿಕೆಯು ಹೇಗೆ ಮಿಥ್ಯೆಯೋ ಹಾಗೇ ಯೂರೋಪ್ ಕೂಡ ಪ್ರತ್ಯೇಕ ವ್ಯವಸ್ಥೆಯಾಗಿ ಜಗತ್ತಿನ ಸಂಬಂಧಗಳಿಂದ ಹೊರಗುಳಿಯಲಾರದು. ಇದು ಸತ್ಯವೆಂಬುದು ನಮಗೀಗ ತಿಳಿದಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಯೂರೋಪ್ ಕೇಂದ್ರಿತ ಸಾಮಾಜಿಕ ಆರ್ಥಿಕ ಮಾದರಿಗಳಲ್ಲೇ ಯಂತ್ರಗಳ ತತ್ತ್ವವೂ ಹೊಂದಿಕೊಂಡಿದೆ. ಆದರೆ, ಈ ರೂಪವು ಯಂತ್ರ ತತ್ತ್ವವನ್ನು ಸುಳ್ಳೆಂದು ನಿರೂಪಿಸಬಲ್ಲುದೆ ಎಂಬುದು ಚರ್ಚಾರ್ಹ. ಆದರೆ ಅದು ಮುಖ್ಯವಲ್ಲ. ಆದರೆ ಇದರಿಂದ ತಿಳಿದುಬರುವ ಅಂಶವೆಂದರೆ, ಯಂತ್ರಗಳು ಮತ್ತು ಯಂತ್ರ ಸಿದ್ಧಾಂತಗಳು ಒಂದೇ ಬಗೆಯ ಜನವರ್ಗಕ್ಕೆ ಸೇವೆ ಸಲ್ಲಿಸುತ್ತವೆ ಎಂಬುದು. ಆದರೆ ಈ ರೀತಿ ಹೇಳುವುದು ಕ್ಷುದ್ರ ಸಂಗತಿಯಾಗದೇ ?

**ಪರ್ಯಾಯವಾಗಿ ಸ್ವದೇಶಿ**

ಯಂತ್ರದ ಜೊತೆಯಲ್ಲಿ ಕೆಲಸ ಮಾಡದ ಜನರು ಜಗತ್ತಿನಾದ್ಯಂತ ಇದ್ದಾರೆ. ಆದರೆ ಅವರು ಸಾರ್ವಜನಿಕವಾಗಿ ಕಾರ್ಯನಿರತವಾಗಿರುವ ವ್ಯವಸ್ಥೆಗೆ ಸೇರುವುದಿಲ್ಲ. ಅವರು ಬದುಕುತ್ತಿರುವಂಥ ಕುಗ್ಗಿದ ಹೀನಸ್ಥಿತಿ, ಪರಾಧೀನತೆ ಮತ್ತು ಶೋಷಿತ ಪರಕೀಯ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆದರೆ, ಅವರಲ್ಲಿರುವ ಸಾಮರ್ಥ್ಯಗಳ ಬಗ್ಗೆ ಮಾತನಾಡಲು ಇದು ಸಕಾಲ. ನೇಕಾರರು, ಬಟ್ಟೆ ನೂಲುವವರು, ಮುದ್ರಕರು, ಕುಂಬಾರರು, ಕಮ್ಮಾರರು, ಲೋಹಕರ್ಮಿಗಳು, ಬಡಗಿಗಳು ಹೀಗೆ ನೂರಾರು ಸಣ್ಣ ಮತ್ತು ಸ್ಥಳೀಯ ಕಸುಬುದಾರರ ಸಮುದಾಯಗಳು ಅನಂತ ಬಗೆಯ ಕೈಗಾರಿಕಾ ಕಲೆಗಳನ್ನು ಕರಗತ ಮಾಡಿಕೊಂಡ ಜನಾಂಗಗಳು. ಈ ಕೈಗಾರಿಕಾ ಕಲೆಗಳ ಸರ್ವೋತ್ತಮ ಸಂಪ್ರದಾಯಗಳ ಬಗ್ಗೆ ಸಾಹಿತ್ಯದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆದರೆ, ಅವರ ಪ್ರಸ್ತುತ ಪರಿಸ್ಥಿತಿ ಮತ್ತು ಅದರ ಅನಂತ ಸಾಧ್ಯತೆಗಳ ಬಗ್ಗೆ ಹೆಚ್ಚಿನ ಚರ್ಚೆಯಾಗಿಲ್ಲ. ಇಂದು ಅವರಿರುವ ದಾರುಣ ಹಾಗೂ ಛಿದ್ರಸ್ಥಿತಿಯನ್ನು ಒಪ್ಪದಿರಲು ಸಾಧ್ಯವಿಲ್ಲ. ಆದರೆ ಈ ಎಲ್ಲ ಸಂಕಷ್ಟಗಳ ನಡುವೆಯೂ ಉಳಿದಿದ್ದ ಅವರ ಪರಂಪರೆಯ ಜೀವಂತ ಅಂಶವೇ ಅಂದು ಗಾಂಧೀಜಿ ಆರಂಭಿಸಿದ ಗುಡಿಕೈಗಾರಿಕೆ ಅಂದೋಲನಕ್ಕೆ ಅಡಿಪಾಯ ವಾಗಿತ್ತೆಂಬುದನ್ನು ನೆನೆಯಬಹುದು. ಈ ಗುಡಿ ಕೈಗಾರಿಕೆಗಳು ಆಧುನಿಕ

ಯಂತ್ರ ತತ್ತ್ವದಂತೆ ತಮ್ಮ ಶಕ್ತಿಯನ್ನು ಬಂಡವಾಳ ಅಥವಾ ಕೂಲಿ-ದುಡಿಮೆಯಿಂದ ಪಡೆಯುವುದಿಲ್ಲ. ಅವು ಈ ವಿಷಯದಲ್ಲಿ ಆಧುನಿಕ ಯಂತ್ರಗಳಿಗೆ ಸಂಪೂರ್ಣ ವಿಭಿನ್ನವಾಗಿವೆ. ಬಂಡವಾಳ, ಕೂಲಿ ದುಡಿಮೆಯ ಆಧಾರವಿಲ್ಲದಿದ್ದರೂ ಅವು ಇಂದಿಗೂ ಒಂದು ಸ್ವದೇಶಿ ಪರ್ಯಾಯವನ್ನು ರೂಪಿಸಲು ಸಾಧ್ಯವಿರುವಷ್ಟು ವ್ಯಾಪಕವಾದ ಅಸ್ತಿತ್ವವನ್ನು ಪಡೆದಿವೆ.

ಯಂತ್ರದ ಸಂದರ್ಭದಲ್ಲಿ ಸ್ವದೇಶಿ ಎಂದರೆ ಸ್ಥಳೀಯ ಕಚ್ಚಾವಸ್ತುಗಳ ಬಳಕೆ, ಸ್ಥಳೀಯ ಮಾರಕಟ್ಟೆಯಲ್ಲೇ ವ್ಯಾಪಾರ-ವಿನಿಮಯ ಹಾಗೂ ಸ್ಥಳೀಯ ಉತ್ಪನ್ನ ಪ್ರದೇಶದ ಮತ್ತು ಸ್ಥಳೀಯ ಸಾಮಾಜಿಕ ಸಮುದಾಯದ ನಿಯಂತ್ರಣ ಎಂದೇ ಅರ್ಥ. ಅವುಗಳ ಜ್ಞಾನದ ತಳಪಾಯವು ಸ್ಥಳೀಯವಾಗಿರತಕ್ಕದ್ದು. ಅಂದರೆ ಲೋಕವಿದ್ಯೆಗೆ ವ್ಯವಸ್ಥಿತ ಸಾರ್ವತ್ರಿಕ ಜ್ಞಾನ ವ್ಯವಸ್ಥೆಗಳಿಗಿಂತ ಹೆಚ್ಚು ಪ್ರಾಶಸ್ತ್ಯವಿರಬೇಕು. ಈ ಲೋಕವಿದ್ಯೆಯ ತಾಂತ್ರಿಕ ಆಚರಣೆ ಮತ್ತು ಪರಿಕಲ್ಪನೆ ಒಂದು ಲೋಕದೃಷ್ಟಿಗೆ ಸೇರಿರುತ್ತದೆ. ಮತ್ತು ಆ ಲೋಕದೃಷ್ಟಿಯು ಕುಶಲಕರ್ಮಿಗಳ ಪಾರಂಪರಿಕ ಆಚರಣೆಗಳಿಗೆ ಆರಾಧನಾ ಸ್ವರೂಪಗಳಿಗೆ, ಇವನ್ನೆಲ್ಲ ಆಚರಿಸುತ್ತಿರುವ ಸಮುದಾಯಗಳ ನಂಬಿಕೆಗಳಿಗೆ, ತಾನು ಸೇರಿರುವ ದೊಡ್ಡ ಜಗತ್ತಿಗೆ ಬೇರ್ಪಡಿಸಲಾರದ ರೀತಿಯಲ್ಲಿ ಬೆಸೆದುಕೊಂಡಿದೆ. ಇವೆಲ್ಲವೂ ಮತ್ತು ಇನ್ನೂ ಹೆಚ್ಚಿನವು, ಪರಸ್ಪರ ಪ್ರಭಾವ ಬೀರುವ ಕ್ರಿಯೆಗಳ ಸಾರ್ವಜನಿಕ ಜಗತ್ತೊಂದನ್ನು ಒಳಗೊಂಡಿರುತ್ತದೆ. ಈ ನೆಲೆಯೇ ಸಾಂಪ್ರದಾಯಿಕ ಆಚರಣೆಗಳಲ್ಲಿರುವ ನ್ಯೂನತೆಯ ತಿದ್ದುಪಡಿ, ಸುಧಾರಣೆ, ಹೊಸ ಆವಿಷ್ಕಾರ ಅಥವಾ ಕಳಪೆಯ ತಿರಸ್ಕಾರಗಳಿಗೆಲ್ಲ ಆಧಾರವಾಗುತ್ತದೆ. ಸ್ವದೇಶಿ ಆಂದೋಲನವು ಕೇವಲ ತಾಂತ್ರಿಕ ಪರ್ಯಾಯ ಮಾತ್ರವಲ್ಲ, ಸತ್ಯ ಮತ್ತು ಅಹಿಂಸೆಗಳೇ ಅಂತಿಮವಾಗಿ ಜಯಶಾಲಿಗಳೆಂಬ ನಂಬಿಕೆಯನ್ನು ಅದು ಒಳಗೊಂಡಿರುತ್ತದೆ. ಅದು ದೂರದ ಗುರಿಯೊಂದರ ನಂಬಿಕೆಯಲ್ಲ. ಅದೊಂದು ನಿಯಮದ, ಕಟ್ಟುಪಾಡಿನ ಮೇಲಿನ ಶ್ರದ್ಧೆ. ಇದು ವಿಜ್ಞಾನದ ಸಿದ್ಧಾಂತಕ್ಕೆ ಮತ್ತು ಅದು ತಾಂತ್ರಿಕ ಆಚರಣೆಗಳಿಗೆ ಮಾನವೀಯ ಮೌಲ್ಯಗಳ ಅಳವಡಿಕೆಗೆ ಆಧಾರವಾಗಿದೆ. ಅನಿರ್ಬಂಧಿತ ಯೋಚನಾ ಲಹರಿಯನ್ನೊಳಗೊಂಡ ಈ ಚರ್ಚೆಯನ್ನು ನಿಲ್ಲಿಸಿ, ಕೆಲವು ಮುಖ್ಯ ಉದಾಹರಣೆಗಳ ಮೂಲಕ ಅರ್ಥಪೂರ್ಣ ಚರ್ಚೆಯತ್ತ ಸರಿಯೋಣ.

### ಚರಕ

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಶಕ್ತಿಚಾಲಿತ ಯಂತ್ರದ ವಿರೋಧಕ್ಕೆ ಚರಕ ಅಥವಾ ನೂಲುವ ರಾಟೆ ಸಂಕೇತವಾಯಿತು. ಗಾಂಧಿಯವರ ಪಾಲಿಗೆ ಚರಕದ ಪುನರಾಗಮನವೆಂದರೆ ಭಾರತದ ಜನರ ಕ್ರಿಯಾಶಕ್ತಿಯ ಪುನರಾಗಮನವಾಗಿತ್ತು. ಗಾಂಧಿಯವರು ಚರಕದ ಬಗ್ಗೆ ಮಾತನಾಡಿದರು, ಬರೆದರು ಮತ್ತು ಇಪ್ಪತ್ತು ವರ್ಷ ಅದರ ಸುತ್ತ ಸಂಘಟಿಸಿದರು. ಚರಕವು ತಮ್ಮ ಜನರ ಆರ್ಥಿಕ ಬದುಕನ್ನು ಊರ್ಜಿತಗೊಳಿಸುವ ಸಾಧನ ಮತ್ತು ಆಧ್ಯಾತ್ಮಿಕ ಬದುಕಿನ ಪುನರುತ್ಥಾನದ ಮೂಲವೆಂದು

ಅವರು ಗ್ರಹಿಸಿದ್ದರು. ಅವರ ಸಂದೇಶ ಸರಳವಾಗಿತ್ತು. ಅದೆಂದರೆ : ಒಂದು ಯಂತ್ರ ಮಾನವನ ಭೌತಿಕ ಬದುಕಿನ ಜೊತೆಗೆ ಮಾತ್ರ ಸಂಬಂಧಿಸಿರುವುದಿಲ್ಲ. ಅದು ಅವನ ಆಧ್ಯಾತ್ಮಿಕ ಬದುಕನ್ನು ರೂಪಿಸುವ ಸಾಧನವೂ ಹೌದು. ಚರಕಾ ಕ್ರಿಯೆಯು ಗ್ರಾಮೀಣ ಜನರ ಸಹಕಾರದ ತಳಪಾಯದ ಮೇಲೆ ವಿನ್ಯಾಸಗೊಂಡಿದೆ. ಅರ್ಥಾತ್ ಗ್ರಾಮೀಣ ಜನರ ನಡುವೆ ಸಹಕಾರವನ್ನು ಯಂತ್ರ ರೂಢಿಸಬೇಕೆಂಬುದು ಗಾಂಧಿಯವರ ನಿಲುವು. ಆ ಗುಣವಿಲ್ಲದಿದ್ದರೆ ಅದಕ್ಕೆ ಚರಕಾದಂತೆ ಯಂತ್ರಲಕ್ಷಣದ ಸ್ಥಾನಮಾನ ಅರ್ಹತೆ ಅವರ ಪ್ರಕಾರ ಬರುವುದಿಲ್ಲ. ಆದರೆ, ಗ್ರಾಮೀಣ ಜನರ ನಡುವೆ ಸಹಕಾರವನ್ನು ಆಧರಿಸಿಯೇ ಚರಕ ವಿನ್ಯಾಸಗೊಂಡಿತ್ತು. ಹಾಗಾಗಿ, ಅದು ನಿಜವಾದ ಯಂತ್ರ.

ಇಂದು ಹತ್ತಿಯನ್ನು ಕೆಲವು ಪ್ರದೇಶಗಳಲ್ಲಿ ಮಾತ್ರ ಬೆಳೆಯಲಾಗುತ್ತಿದೆ. ಹತ್ತಿಯನ್ನು ಮಾರಾಟ ಮಾಡುವ ಮಂಡಿಗಳ ಸ್ಥಳಗಳಿಗೆ ಮಾತ್ರ ಅದರ ಸರಬರಾಜಾಗುತ್ತದೆ. ಚರಕ ಅದರ ಬಳಕೆಯ ಸೀಮಿತ ವ್ಯಾಪ್ತಿಯಿಂದಾಗಿ ಇಂದು ಅದು ಯಂತ್ರದ ಸ್ಥಾನ ಕಳೆದುಕೊಂಡು ಕೇವಲ ಉಪಕರಣವಾಗಿ ಸಂಕುಚಿತಗೊಂಡಿದೆ. ಆದರೆ ಹತ್ತಿಯನ್ನು ಎಲ್ಲೆಡೆ ಬೆಳೆಯಲು ಆರಂಭಿಸಿದರೆ ಆ ಜಡ ಉಪಕರಣ ತಾನು ಜೀವಂತಗೊಂಡು, ಅನೇಕರಿಗೆ ಜೀವನೀಡುವ ಸಂಜೀವಿನಿಯಾಗುತ್ತದೆ. ಬದುಕಿನ ಶೈಲಿ ಮತ್ತು ನಿಸರ್ಗದ ಲಯದೊಡನೆ ಒಂದಾಗುವಿಕೆಯನ್ನು ಚರಕ ಪ್ರತಿನಿಧಿಸುತ್ತದೆ. ಇದೇ ಅಂಶವನ್ನು ಕುಂಬಾರನ ತಿಗರಿ ಸಹ ಸ್ಪಷ್ಟವಾಗಿ ವಿಶದೀಕರಿಸುತ್ತದೆ.

**ತಿಗರಿ**

ಕುಂಬಾರನನ್ನು ಕುರಿತ ಸಾಹಿತ್ಯದಲ್ಲಿ ಅವನ ಕೌಶಲ್ಯ ಮತ್ತು ನಾವಿನ್ಯದ ಬಗೆಗೆ ಹೊಗಳಿಕೆಯ ಸುರಿಮಳೆಯಾಗಿದೆ. ತಿರುಗುವ ತಿಗರಿಯ ಮೇಲಿನ ಮಣ್ಣಿನ ಮುದ್ದೆಯಲ್ಲಿ ಕಲ್ಪನೆಗೂ ನಿಲುಕದ ಸೌಂದರ್ಯದ ವಸ್ತುಗಳನ್ನು ನಿರ್ಮಿಸುವ ಅವನ ಬೆರಳುಗಳ ಲಾಸ್ಯದ ಬಗ್ಗೆ ಶ್ಲಾಘನೆಯ ಮಹಾಪೂರವೇ ಹರಿದಿದೆ. ಅತ್ಯಂತ ಸರಳವೆಂದು ತೋರುವ ಈ ತಂತ್ರಜ್ಞಾನವು ಸಾವಿರಾರು ವರ್ಷಗಳಿಂದ ಮನುಕುಲಕ್ಕೆ ಸೇವೆ ಸಲ್ಲಿಸುತ್ತಿದೆ. ಆದರೆ ಇಂದು ಅಪಾರವಾಗಿ ಸೃಷ್ಟಿಯಾಗುತ್ತಿರುವ ಲೋಹಗಳು, ಪ್ಲಾಸ್ಟಿಕ್ ವಸ್ತುಗಳು ಮತ್ತು ಬದುಕಿನ ಶೈಲಿಯಲ್ಲಾದ ಬದಲಾವಣೆಗಳಿಂದ ಈ ತಂತ್ರಜ್ಞಾನವು ಅವಜ್ಞೆಗೊಳಗಾಗಿದೆ.

ತಿಗರಿಯು ಸ್ವದೇಶಿ ಜೀವನಶೈಲಿ ಮತ್ತು ಉತ್ಪಾದನಾ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಸ್ಥಳೀಯ ಕೆರೆಯಿಂದ ಸಂಗ್ರಹಿಸುವ ಮಣ್ಣಿನಿಂದ ಮೊದಲು ಅದರಲ್ಲಿರುವ ಕಲ್ಲು, ಕಸವನ್ನು ಶೋಧಿಸಲಾಗುತ್ತದೆ. ಕೆಲವು ದಿನ ನೀರಿನಲ್ಲಿ ನೆನೆಸಿ ಅಂಟಾಗುವಂತೆ ಮಾಡಲಾಗುತ್ತದೆ. ಅನಂತರ ಒಂದು ಹದಕ್ಕೆ ಬರುವಂತೆ ತುಳಿದು ಗಟ್ಟಿ ಮಾಡಿದ ಮುದ್ದೆಯನ್ನು ತಿಗರಿಯ ಮೇಲಿಟ್ಟು ಕುಂಬಾರನು ಮಡಿಕೆ, ಕುಡಿಕೆ, ಗೊಂಬೆ – ಹೀಗೆ ತನಗೆ ಬೇಕಾದ ವಸ್ತುಗಳನ್ನು ತಯಾರಿಸುತ್ತಾನೆ. ಅನಂತರ ಅವುಗಳನ್ನು ಒಣಗಿಸಿ ಆವಿಗೆಯಲ್ಲಿ ಸುಡಲಾಗುತ್ತದೆ. ಕುಂಬಾರನ ಆವಿಗೆ ಅಥವಾ ಭಟ್ಟಿ ಸುಮಾರು 20 x 15 ಅಡಿ ವಿಸ್ತೀರ್ಣದ ತೆರೆದ ಗುಂಡಿಯಂಥ ಸರಳ ರಚನೆ. ಅಲ್ಲಿ ಒಣಗಿದ ಕುರುಳು

(ಸಗಣಿ)ಗಳನ್ನು ಮತ್ತು ವಸ್ತುಗಳನ್ನು ಪದರ ಪದರವಾಗಿ ನಿರ್ದಿಷ್ಟ ವಿನ್ಯಾಸದಲ್ಲಿ ಜೋಡಿಸಿ ಬೆಂಕಿಯನ್ನು ಹೊತ್ತಿಸಿ ಸುಡಲಾಗುತ್ತದೆ. ಅಲ್ಲಿ ಬಳಸಿದ ಕಚ್ಚಾವಸ್ತು ಸ್ಥಳೀಯವಾದದ್ದು. ಅಲ್ಲಿ ಬಳಕೆಯಾದ ಜ್ಞಾನ ಮತ್ತು ಕೌಶಲ್ಯಗಳು ಸ್ಥಳೀಯವೇ. ಮತ್ತು ಮಾರುಕಟ್ಟೆಯೂ ಸ್ಥಳೀಯ. ಈ ವಿಕೇಂದ್ರೀಕೃತ ಉತ್ಪಾದನಾ ಕ್ರಮದಲ್ಲಿ ಬಂಡವಾಳದ ಅವಶ್ಯಕತೆಯೇ ಇಲ್ಲ. ಇಲ್ಲಿಯ ಉತ್ಪಾದನೆಯ ಸಂಪೂರ್ಣ ಪ್ರಕ್ರಿಯೆಯು ಅಕ್ಷರಶಃ ಸ್ಥಳೀಯ ನೆಲದೊಡನೆ ಸಾವಯವ ಸಂಬಂಧ ಪಡೆದುಕೊಂಡಿದ್ದು, ಮಣ್ಣಿನ ಗುಣ ಪಡೆದಿದೆ.

ಕುಂಬಾರ ಸಮುದಾಯವು ನಿಸರ್ಗದ ಲಯದ ಜೊತೆ ಪಾಲ್ಗೊಳ್ಳುತ್ತಿರುವರೋ ಎಂಬಂತೆ ಶಾಂತ ಸ್ವಭಾವದವರೆಂದು ಜನ ಅದನ್ನು ಗುರುತಿಸುತ್ತಾರೆ. ಅವರ ಕ್ರಿಯೆಯು ನಿಸರ್ಗ ಸಹಜ ಶಾಂತ ಸ್ವಭಾವವನ್ನೇ ಉದ್ದೀಪನಗೊಳಿಸಬಹುದೇನೋ ಎನ್ನುವಂತೆ ನೆಮ್ಮದಿಯ ಸಮುದಾಯ ಅವರದಾಗಿದೆ. ನಿಸರ್ಗವು ಉಳಿದಿರುವವರೆಗೆ ತಿಗರಿಯೂ ಉಳಿದಿರುತ್ತದೆ. ಆದರೆ ತೀರಾ ಕಷ್ಟಗಳು ಅದಕ್ಕೆದುರು ಇವೆ. ಅಪಾರ ವಿರೋಧ-ಸಂಕಷ್ಟಗಳ ನಡುವೆ ನರಳುತ್ತಿರುವ ಇಂಥ ಎಷ್ಟೋ ಇತರ ಅನೇಕ ಸಮುದಾಯಗಳೂ ಇವೆ.

**ಭಟ್ಟಿ**

ಕಬ್ಬಿಣದ ಅದಿರನ್ನು ಕರಗಿಸಿ ಲೋಹವನ್ನು ಉತ್ಪಾದಿಸುವ ದೇಶೀವಿಧಾನ ಇನ್ನೂ ಸಂಪೂರ್ಣ ನಾಮಾವಶೇಷವಾಗಿಲ್ಲ. ಪ್ರಾಯಃ ಅದು ಎಂದಿಗೂ ನಾಶವಾಗದು. ಇತಿಹಾಸ ಪ್ರಸಿದ್ಧ ಡಮಾಸ್ಕಸ್ ಅಲುಗಿನ ತಯಾರಿಕೆಯಲ್ಲಿ ಬಳಸಿದಂಥ ಉತ್ಕೃಷ್ಟ ಉಕ್ಕನ್ನು ತಯಾರಿಸುವ ಕಲೆ ಅಗರಿಯ ಜನಾಂಗದವರಿಗೆ ಇನ್ನೂ ತಿಳಿದಿರುವಂತೆ ಕಾಣುತ್ತದೆ.

ಕಬ್ಬಿಣದ ಅದಿರನ್ನು ಕರಗಿಸುವ ವಿಶೇಷ ಕಲೆಯಲ್ಲಿ ಅಗರಿಯ ಬುಡಕಟ್ಟು ಜನರು ನಿಷ್ಣಾತರು: ಸುಮಾರು ಎರಡು ಶತಮಾನಗಳಿಗೂ ಹೆಚ್ಚಿನ ಕಾಲ ಹೊರಗಿನವರ ಆಕ್ರಮಣಕ್ಕೆ ತುತ್ತಾಗಿ ಅವರ ಸಮಾಜ ಮತ್ತು ಆರ್ಥಿಕತೆ ಅಸ್ತವ್ಯಸ್ತಗೊಂಡರೂ, ಅವರಿನ್ನೂ ಪ್ರಧಾನವಾಗಿ ಕಬ್ಬಿಣದ ಕೆಲಸದ ಸುತ್ತ ತಮ್ಮ ಬದುಕು ಮತ್ತು ದುಡಿಮೆಯನ್ನು ಹೆಣೆದುಕೊಂಡಿದ್ದಾರೆ. ಅವರ ಸಾಮಾಜಿಕ ಮೌಲ್ಯ, ನಂಬಿಕೆ ಮತ್ತು ಚರಿತ್ರೆಗಳೆಲ್ಲವೂ ಕಬ್ಬಿಣದ ಕೇಂದ್ರದ ಪರಿಧಿಯಲ್ಲೇ ಸುತ್ತುತ್ತಿವೆ. ಇವರದು ನಿಜವಾದ ಲೋಹಜಾತಿ. ಸಾವಿರಾರು ವರ್ಷಗಳಿಂದ ನಿಸರ್ಗದ ಜೊತೆ ವಿಶೇಷ ಸಂಬಂಧಗಳನ್ನು ರೂಢಿಸಿಕೊಂಡ ಅವರ ವೈಶಿಷ್ಟ್ಯ, ಕಬ್ಬಿಣ ಕರಗಿಸುವಿಕೆ ಅವರ ಸಂಪೂರ್ಣ ಕಾರ್ಯಾಚರಣೆಯೆಲ್ಲವೂ ಭಟ್ಟಿ (ಕುಲುಮೆ)ಯ ಸುತ್ತ ಸಂಘಟಿತವಾಗಿವೆ. ಈ ಭಟ್ಟಿಯ ತಂತ್ರಜ್ಞಾನವು ಆಧುನಿಕ ಲೋಹ ಶಾಸ್ತ್ರಜ್ಞರಿಗೆ ಇಂದಿಗೂ ನಿಗೂಢವಾಗಿಯೇ ಉಳಿದಿದೆ.

ಇಲ್ಲಿ ಇದ್ದಿಲಿನ ತಯಾರಿಕೆಗೆ ಮರದ ರೆಂಬೆಗಳನ್ನು ಬಳಸಲಾಗುತ್ತದೆ. ಭಟ್ಟಿಯನ್ನು ಮಣ್ಣಿನಿಂದ ರೂಪಿಸಲಾಗುತ್ತದೆ. ಇದು ಭೂಮಿಯ ಮೇಲೆ ಪೀಪಾಯಿಯ ಆಕಾರದಲ್ಲಿ ನಿಂತ ರಚನೆ. ಅದರ ತ್ರಿಜ್ಯ 50 ಸೆಂ.ಮೀ. ಎತ್ತರ 75 ಸೆಂ.ಮೀ. ಒಂದು ಸಣ್ಣ

ಗುಂಡಿಯಲ್ಲಿ ನಿಲ್ಲಿಸಿದ ಈ ಭಟ್ಟಿಯ ಊರ್ಧ್ವಮುಖದಲ್ಲಿ 10–15 ಸೆಂ.ಮೀ. ರಂಧ್ರವಿದೆ. ಈ ರಂಧ್ರದ ಮೂಲಕವೇ ಮೇಲಿನಿಂದ ಅದಿರು ಮತ್ತು ಇದ್ದಲಿನ ಮಿಶ್ರಣವನ್ನು ಸುರಿಯಲಾಗುತ್ತದೆ. ತಳಭಾಗದಲ್ಲಿರುವ ಎರಡು ರಂಧ್ರಗಳಲ್ಲಿ ಒಂದರಿಂದ ಕಿಟ್ಟ ಹೊರಬರುತ್ತದೆ. ಮತ್ತೊಂದು ರಂಧ್ರದ ಮೂಲಕ ಗಾಳಿಯನ್ನು ಒಳಕ್ಕೆ ಊದಲಾಗುತ್ತದೆ. ಇದೇ ಗಾಳಿ ರಂಧ್ರದ ಮೂಲಕವೇ ಸಂಸ್ಕರಿಸಿದ ಕಬ್ಬಿಣ ಹೊರಬರುತ್ತದೆ. ಕುಶಲಕರ್ಮಿಗಳು ಮಾಡುವಂಥ ಸರಳ ರಚನೆಯ ಮೂಲಕ ಕೈಯಿಂದಲೇ ಗಾಳಿಯನ್ನು ತುಂಬುವ, ಕಿಟ್ಟವನ್ನು ಹೊರತೆಗೆಯುವ, ಲೋಹದ ಕಾಳಿಕೆಯನ್ನು ಕಳೆಯುವ ಎಲ್ಲಾ ಕಾರ್ಯಾಚರಣೆಗಳು ವಿಜ್ಞಾನ ಮತ್ತು ಕಲೆಯ ಅಪೂರ್ವ ಸಂಯೋಜಕರಿಗೆ ಅಚ್ಚರಿಯ ಕ್ರಿಯೆಗಳಾಗಿವೆ. ಇವುಗಳಿಗೆ ಆಧುನಿಕ ವಿಜ್ಞಾನದಲ್ಲಿ ಸೂಕ್ತವಾದ ಹೆಸರಿಲ್ಲ. ಒಂದು ಭಟ್ಟಿಯಲ್ಲಿ ಎರಡೂವರೆ ಗಂಟೆಗಳ ಕಾಲ ನಡೆಯುವ ಕಲೆ–ವಿಜ್ಞಾನ ಸಂಗಮದ ಕಾರ್ಯಾಚರಣೆಯಲ್ಲಿ 3–5 ಕೆ.ಜಿ. ಲೋಹ ಉತ್ಪಾದನೆಯಾಗುತ್ತದೆ.

ಭಟ್ಟಿಯು ಆಧುನಿಕ ಯಂತ್ರಕ್ಕೆ ವಿಶಿಷ್ಟವಾದ ಸವಾಲೊಡ್ಡುತ್ತದೆ. ಅದು ಎಲ್ಲಾ ವಿಧದಲ್ಲೂ ಅಪ್ಪಟ ಸ್ವದೇಶಿಯಾಗಿದ್ದು, ಆಧುನಿಕ ತಂತ್ರಜ್ಞಾನವು ಅತ್ಯಂತ ಸುಧಾರಿತ ಎಂದು ಮೆಚ್ಚಿಕೊಳ್ಳುವ ಕಾರ್ಯವನ್ನು ಅದು ನಿರ್ವಹಿಸಬಲ್ಲದು. ಕೇವಲ ದಬ್ಬಾಳಿಕೆಯಿಂದ ಈ ತಂತ್ರಜ್ಞಾನವನ್ನು ಸಮಾಜದ ಮುಖ್ಯವಾಹಿನಿಯಿಂದ ಹೊರಗಿಡಲಾಗಿದೆ. ಇದರ ಆಂತರಿಕ ತರ್ಕಕ್ಕೆ ಸಮಾಜ ಜೀವನದಲ್ಲಿ ಒಬ್ಬ ಸಂತನಿಗಿರುವ ಶಕ್ತಿಯ ರೀತಿಯಲ್ಲಿ ಬಲವಂತವಾದ ಶಕ್ತಿಯಿದೆ. ಈ ತಂತ್ರಜ್ಞಾನದ ಹಿಂದಿನ ತರ್ಕ ಚರಕ, ತಿಗರಿಯ ಹಿಂದಿನ ತರ್ಕದಷ್ಟೇ ಸಂಪೂರ್ಣ ವಿಭಿನ್ನವಾದುದು. ಆದುದರಿಂದ ಇವೆಲ್ಲವೂ ಸ್ಪಷ್ಟವಾಗಿ ಆಧುನಿಕ ವಿಜ್ಞಾನಕ್ಕೆ ಒಂದು ಸೈದ್ಧಾಂತಿಕ ಸವಾಲನ್ನು ಹುಟ್ಟುಹಾಕಬಲ್ಲ ಪರ್ಯಾಯಗಳಾಗಿ ಕಾಣುತ್ತಿವೆ. ಅವೆಲ್ಲವೂ ಹೊಸ ಬಗೆಯ ಚಿಂತನೆಗೆ ವಿಜ್ಞಾನ ಮತ್ತು ಬದುಕನ್ನು ಅರಿಯುವ ಹೊಸ ತರ್ಕಗಳಿಗೆ ಪರವಾಗಿ ನಿಂತಂತೆ ಕಾಣುತ್ತದೆ.

●

## ಅಧ್ಯಾಯ ಆರು

# ತರ್ಕಶಾಸ್ತ್ರ

"ನಾನು ಎಲ್ಲೋ ಓದಿದ ನೆನಪು. ಅವರು (ಗಾಂಧೀಜಿ) ಮ್ಯಾಜಿಕ್‌ನ್ನು ನಂಬಿದ್ದಾರೆ. ತರ್ಕ (Logic) ವನ್ನಲ್ಲ" ಎಂದು ಗಾಂಧೀಜಿಯವರನ್ನು ಮೊದಲ ಬಾರಿಗೆ ಭೇಟಿ ಮಾಡಿದ ನಂತರ ಚಿತ್ತರಂಜನದಾಸ್‌ರವರು ತಮ್ಮ ಸ್ನೇಹಿತರಿಗೆ ಹೇಳಿದರಂತೆ. ಇದರ ಸತ್ಯಾಸತ್ಯತೆ ಏನೇ ಇರಲಿ, ಈ ಅಭಿಪ್ರಾಯವು ಗಾಂಧೀಜಿಯವರ ಚಿಂತನೆಯ ಮೂಲಭೂತ ಅಂಶದತ್ತ ನಮ್ಮ ಗಮನವನ್ನು ಸೆಳೆಯುತ್ತದೆ. ಈ ಮೂಲಭೂತ ಸಂಗತಿಯು ನಾವು "ವಿಜ್ಞಾನ ಪ್ರಶ್ನೆ" ಎಂದು ಪರಿಗಣಿಸುತ್ತಿರುವ ಸಮಸ್ಯೆಗೆ ಹೆಚ್ಚು ಸಂಬಂಧಿಸಿದೆ. ಸಾಮಾನ್ಯವಾಗಿ ಯಾರನ್ನಾದರೂ ಕುರಿತು, ಆತ 'ತರ್ಕಬದ್ಧವಾಗಿಲ್ಲ' ಎಂದು ಹೇಳಿದಾಗ, ಅವನು ಅಸಂಗತವಾಗಿ ವರ್ತಿಸುತ್ತಿದ್ದಾನೆಂದು ತಿಳಿಯುವುದಿಲ್ಲ. ಬದಲು ಅವನು ಹೇಳುತ್ತಿರುವ ವಿಚಾರ ನಮಗೆ ಗ್ರಹಿತವಾಗುತ್ತಿಲ್ಲ ಅಥವಾ ಅವನ ವರ್ತನೆ ನಮ್ಮ ಗ್ರಹಿಕೆಗೆ ಮೀರಿದೆ ಮಾತ್ರವಲ್ಲ, ಅವನನ್ನು ಕ್ರಮಬದ್ಧವಾಗಿ ಅರಿತುಕೊಳ್ಳುವ ವಿಧಾನದ ಕೊರತೆ ನಮ್ಮಲ್ಲಿದೆ ಎಂಬ ಅಭಿಪ್ರಾಯವಾಗಿದೆ.

'ತರ್ಕ' ಎನ್ನುವುದು ಕ್ರಮ, ವ್ಯವಸ್ಥೆ, ಶಿಸ್ತು, ದೃಢತೆ, ಸುಸಾಂಗತ್ಯ ರಚನೆ, ಸಂಘಟನೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕಾಣುತ್ತದೆ. ಆಧುನಿಕ ವಿಜ್ಞಾನದ ಜೊತೆಯಲ್ಲೇ ಅಸ್ತಿತ್ವದಲ್ಲಿರುವ ತರ್ಕ ಡೇಕಾರ್ಟನ ಯುಗದಿಂದ ಹೆಚ್ಚು ಮುನ್ನೆಲೆಗೆ ಬಂದರೂ ಅದರ ಮೂಲವನ್ನು ಗ್ರೀಕ್ ತತ್ತ್ವಶಾಸ್ತ್ರ ಮತ್ತು ಅಲ್ಲಿಯ ವಿಜ್ಞಾನದಲ್ಲಿ ಗುರುತಿಸಬಹುದು. ಮನಸ್ಸು ಮತ್ತು ದೇಹವನ್ನು ಬೇರ್ಪಡಿಸಿದ ಡೇಕಾರ್ಟನ ಸಿದ್ಧಾಂತದ ನಂತರ ಆಧುನಿಕ ವಿಜ್ಞಾನವು ತನ್ನದೇ ಸ್ವರೂಪವನ್ನು ಪಡೆಯಿತು. ಬೀಜಗಣಿತ ಮತ್ತು ಜ್ಯಾಮಿತಿ, (ರೇಖಾಗಣಿತದ) ಪರಸ್ಪರ ಪರಿವರ್ತನೆಯ, ಅಲ್ಲಿಂದ ಹ್ಯೂಮ್‌ನ 'ವಸ್ತು ಸಂಗತಿ' (Matters of facts) ಮತ್ತು 'ಭಾವಗಳ ಸಂಬಂಧ' (Relations of Ideas) ಸೂತ್ರಗಳ ಪೃಥಃಕ್ಕರಣದಲ್ಲಿ ಮುಂದುವರಿದು, ಕ್ಯಾಂಟ್‌ನ ಸಂಶ್ಲೇಷಣೆ ಮತ್ತು ವಿಶ್ಲೇಷಣೆಯ ಸೂತ್ರರೂಪಗಳಲ್ಲಿ ಹರಿದಾಡುತ್ತಾ ಆಧುನಿಕ ಪಾಶ್ಚಾತ್ಯ ನಾಗರಿಕತೆಗೆ ವಿಶಿಷ್ಟವೆನಿಸಿದ ಅಮೂರ್ತ ಪ್ರಕಾರವು, ರಸೆಲ್‌ನ ತರ್ಕ, ವೈಟ್‌ಹೆಡ್‌ನ 'ಪ್ರಿನ್ಸಿಪಿಯಾ ಮಾಥ್ ಮ್ಯಾಟಿಕ್' (ಗಣಿತ ನಿಯಮಗಳು) ಕೃತಿ ಹಾಗೂ ಈ ಶತಮಾನದ ಸೂತ್ರರೂಪದ ಸಿದ್ಧಾಂತಗಳಲ್ಲಿ ತನ್ನ ಪರಿಶುದ್ಧ ಅಭಿವ್ಯಕ್ತಿಯನ್ನು ಕಂಡುಕೊಂಡಿತು. ಸಾಮ್ರಾಜ್ಯಶಾಹಿಯ ಜಗತ್ತಿನಾದ್ಯಂತ ವಿಸ್ತರಿಸಿದಂತೆಲ್ಲ ಈ ಪಾಶ್ಚಾತ್ಯ ನಾಗರಿಕತೆಯಲ್ಲಿ ಆವಿರ್ಭವಿಸಿದ ಆಧುನಿಕ ವಿಜ್ಞಾನ ಮಾತ್ರವೇ ತರ್ಕ, ಉಳಿದದ್ದೆಲ್ಲ ಕುತರ್ಕ, ಹಾಗಾಗಿ ಅರ್ಥಹೀನ ಕೇವಲ 'ಮ್ಯಾಜಿಕ್'

ಎಂದು ನಮ್ಮನ್ನು ನಂಬಿಸಲಾಯಿತು. ಆಧುನಿಕ ವಿಜ್ಞಾನ ಸಾರ್ವತ್ರಿಕ ಮನ್ನಣೆ ಗಳಿಸಿತು. ಆಧುನಿಕ ಶಿಕ್ಷಣವನ್ನು ಪಡೆಯದವರು ಅಶಿಕ್ಷಿತರೆನಿಸಿಕೊಂಡಂತೆ, ಆಧುನಿಕ ವೈದ್ಯಕೀಯ ಶಿಕ್ಷಣವಿಲ್ಲದೆ ವೈದ್ಯವೃತ್ತಿಯನ್ನು ಕೈಗೊಂಡವರೆಲ್ಲ ಖೊಟ್ಟಿವೈದ್ಯರು ಎಂಬ ಬಿರುದನ್ನು ಪಡೆದಂತೆ, ಆಧುನಿಕ ವಿಜ್ಞಾನದ ಸತ್ಯಾಸತ್ಯತೆ ಅಥವಾ ಸಾರ್ವತ್ರಿಕತೆಯನ್ನು ಪ್ರಶ್ನಿಸುವವರು, ಮೂಢರ ಪಟ್ಟವನ್ನು ಗಳಿಸಿಕೊಂಡಂತೆ, ಆಧುನಿಕ ತರ್ಕಶಾಸ್ತ್ರದ ಸೂತ್ರಗಳನ್ನು ಅಂಗೀಕರಿಸದವರು 'ಮ್ಯಾಜಿಕ್' (ಅಲೌಕಿಕದ)ನ ಪೋಷಕರೆನಿಸಿಕೊಳ್ಳುತ್ತಾರೆ.

ಈ ಹಿನ್ನೆಲೆಯಲ್ಲಿ ತರ್ಕಶಾಸ್ತ್ರವು ಅರ್ಥಪೂರ್ಣತೆ ಮತ್ತು ಅಸಂಗತತೆಯ ಪರಸ್ಪರ ಹೆಣಿಗೆಯ ಬಗ್ಗೆ ಚರ್ಚೆಯನ್ನಷ್ಟೇ ಒಳಗೊಳ್ಳುವುದಿಲ್ಲ. ಅದು ಒಂದು ನಾಗರಿಕತೆಯ ಮೂಲಸ್ವರೂಪ ಮತ್ತು ಅಗತ್ಯ ವಿಷಯಗಳನ್ನೂ ಇನ್ನೊಂದು ನಾಗರಿಕತೆಯ ದೃಷ್ಟಿಕೋನದಿಂದ ಮಾಡುವ ಅಧ್ಯಯನ ಮತ್ತು ಎತ್ತುವ ಪ್ರಶ್ನೆಗಳನ್ನೂ ಒಳಗೊಳ್ಳುತ್ತದೆ. ಇದಿಷ್ಟೇ ಅಲ್ಲ, ಇವೆರಡೂ ಸಮಸ್ಯೆಗಳನ್ನು ಆಧುನಿಕ ತರ್ಕವಿಧಾನವು ಅಂಗೀಕರಿಸಿರುವ ಗ್ರಹಿಕೆಯ ರಚನೆಗಳ ಮೂಲಕವೇ ಅರ್ಥ ಮಾಡಿಕೊಳ್ಳುವುದು ಸಾಧ್ಯ. ಆದರೆ ಈ ಅಧ್ಯಾಯದಲ್ಲಿ ಮುಂದಕ್ಕೆ ಹೋದಂತೆಲ್ಲ ಆಧುನಿಕ ತರ್ಕವಿಧಾನದ ಜೊತೆಗೆ ಹೊಂದಿಕೆಯಾಗದ ಬೇರೊಂದು ತರ್ಕವಿಧಾನವು ಗಾಂಧಿಯವರಲ್ಲಿರುವುದು ಗೋಚರವಾಗತೊಡಗುತ್ತದೆ, ಮತ್ತು ಅದು ಆಧುನಿಕ ತರ್ಕದಿಂದ ಸಂಪೂರ್ಣ ಭಿನ್ನರೀತಿಯಲ್ಲಿ ಕೆಲಸ ಮಾಡುತ್ತಿರುತ್ತದೆ ಎಂದು ಕಾಣುತ್ತದೆ. ಅದನ್ನು ಗಾಂಧಿಯವರ ತರ್ಕಶಾಸ್ತ್ರ ಎಂದು ಕರೆಯಬಹುದಾದರೆ, ಅದು ಸತ್ಯದ ಪ್ರಮಾಣಕ್ಕೆ ಅಥವಾ ಸತ್ಯವನ್ನು ನಿಕಷಕ್ಕೆ ಒಡ್ಡುವುದಕ್ಕೆ ಹತ್ತಿರವಿದೆಯೆಂದು ಹೇಳಬಹುದು. ಆದರೆ ಆಧುನಿಕ ತರ್ಕಶಾಸ್ತ್ರಕ್ಕೆ ಸತ್ಯ ಎಂಬ ಸಂಗತಿಯೇ ಅಸಂಗತವಾದುದು. ಹಾಗಾಗಿ, ಗಾಂಧಿಯವರ ತರ್ಕದ ಜೊತೆ ಆಧುನಿಕ ತರ್ಕವು ಸಂಧಾನ ಮಾಡಿಕೊಳ್ಳುವುದು ಕಷ್ಟಸಾಧ್ಯ.

ಆಧುನಿಕ ತರ್ಕಶಾಸ್ತ್ರವನ್ನು ವಿಮರ್ಶೆಗೊಳಪಡಿಸುವ ಹಾಗೂ ಗಾಂಧಿಯವರ ತರ್ಕವಿಧಾನವನ್ನು ಪುನಾರಚಿಸುವ ಮುನ್ನ, ತರ್ಕಶಾಸ್ತ್ರದ ಪರಿಕಲ್ಪನೆಗಳನ್ನು ಪರಿಚಯಿಸಿಕೊಳ್ಳುವುದು ಔಚಿತ್ಯಪೂರ್ಣ.

## ತರ್ಕಶಾಸ್ತ್ರದ ಕಲ್ಪನೆ

ತರ್ಕಶಾಸ್ತ್ರವು ಜಿಜ್ಞಾಸೆ, ಸುಸಂಗತತೆ, ಅನುಮಾನ, ವಿವರಣೆ, ಅನುಗಮನ, ನಿಗಮನ, ಸಾಮಾನ್ಯೀಕರಣ, ಅಮೂರ್ತತೆ, ರಚನೆ, ಸಂಘಟನೆ, ವ್ಯವಸ್ಥೆ ಮುಂತಾದವುಗಳಿಗೆ ಸಂಬಂಧಿಸಿದೆ. ಈ ಪಟ್ಟಿಗೆ ಇನ್ನೂ ಅನೇಕ ಪರಿಕಲ್ಪನೆಗಳನ್ನು ಸೇರಿಸಬಹುದು. ಇವೆಲ್ಲವೂ ಒಟ್ಟಾರೆ ತರ್ಕಶಾಸ್ತ್ರವನ್ನು ರೂಪಿಸುವ ಪರಿಕಲ್ಪನೆಗಳ ಗುಚ್ಛ. ಇವುಗಳಲ್ಲಿ ಯಾವುದು ಪ್ರಧಾನ, ಯಾವುದು ಮುಖ್ಯ ಎನ್ನುವುದು ಅವರವರ ದೃಷ್ಟಿಕೋನವನ್ನವ ಲಂಬಿಸಿರುತ್ತದೆ. ಉದಾಹರಣೆಗೆ ಒಬ್ಬರು ತರ್ಕಶಾಸ್ತ್ರವು ಜ್ಞಾನವನ್ನು ಕ್ರಮಬದ್ಧಗೊಳಿಸುವ ವ್ಯವಸ್ಥೆಯೆಂದು ಕರೆಯಬಹುದು. ಮತ್ತೊಬ್ಬರು ಅದು ಅಮೂರ್ತತೆಯ ಸ್ವರೂಪವನ್ನು ಬಿಂಬಿಸಬಹುದೆಂದು ಹೇಳಬಹುದು. ಮಾನವರ

ಚಿಂತನಾ ಕ್ರಮದ ಸ್ಥೂಲರೂಪದ ಅಭಿವ್ಯಕ್ತಿಯೇ ತರ್ಕಶಾಸ್ತ್ರ ಎಂದು ಮಗದೊಬ್ಬರು ಅಭಿಪ್ರಾಯಪಡಬಹುದು. ಒಂದು ವಾದವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಅಂತಿಮವಾಗಿ ಅಲ್ಲಿ ಸ್ಥಿರಭಾವವೊಂದು ಪ್ರಕಟಗೊಂಡರೆ ಅಲ್ಲಿ ತರ್ಕವನ್ನು ಬೇರೊಬ್ಬರು ಗುರುತಿಸಬಹುದು. ತರ್ಕದ ಬಗ್ಗೆ ಇನ್ನೂ ಅನೇಕ ವಿವರಣೆಗಳಿರಬಹುದು. ಆದರೆ, ಈ ನಾಲ್ಕು ಅಭಿಪ್ರಾಯಗಳು ಅದರ ಬಗೆಗಿನ ಜಿಜ್ಞಾಸೆಗೆ ವಿಶಾಲವಾದ ಭಿತ್ತಿಯೊಂದನ್ನು ಒದಗಿಸಬಲ್ಲವು. ಆದುದರಿಂದ ನಮ್ಮ ಚರ್ಚೆಗೆ ಇಷ್ಟು ಅಭಿಪ್ರಾಯಗಳು ಸಾಕು.

ಜಗತ್ತನ್ನು ಅರ್ಥಮಾಡಿಕೊಳ್ಳಲು ಹಲವಾರು ದಾರಿಗಳಿವೆಯೆಂದು ಪ್ರಾಚೀನ ಕಾಲದ ಜನರು ನಂಬಿದ್ದರು. ಬಹುತೇಕ ಜನರು ಈಗಲೂ ಹಾಗೆಯೇ ಭಾವಿಸಿದ್ದಾರೆ. ಆದರೆ ಆಧುನಿಕ ವಿಜ್ಞಾನ ಮಾತ್ರವೇ ಜಗತ್ತನ್ನು ಅರಿಯಲು ಆತ್ಯಂತಿಕ ಸಾಧನ ನೀಡುತ್ತದೆಂಬ ಭಾವನೆ ಇಂದು ಪ್ರಚಲಿತವಾಗಿದ್ದು ನಿಧಾನವಾಗಿ ಘನೀಕೃತವಾಗುತ್ತಿದೆ. ವಿದ್ಯಾವಂತ ಜನರಲ್ಲಿ ಈ ನಂಬಿಕೆ ವ್ಯಾಪಕವಾಗಿದೆ. ಇದರಿಂದಾಗಿ ವಿಜ್ಞಾನದ ಭಂಡಾರವೇ ಜಗತ್ತಿನ ಜ್ಞಾನದ ಏಕೈಕ ಭಂಡಾರವೆನಿಸಿದೆ. ಪರಿಣಾಮವಾಗಿ ತರ್ಕಶಾಸ್ತ್ರವು ಜ್ಞಾನವನ್ನು ಸಮಗ್ರವಾಗಿ ಕ್ರಮಬದ್ಧಗೊಳಿಸುವ ಸೂತ್ರವೆನಿಸಿರುವುದರಿಂದ ಅದೇ ಆಧುನಿಕ ವಿಜ್ಞಾನವನ್ನು ಕ್ರಮಬದ್ಧಗೊಳಿಸುವ ನಿಯಮವೆನಿಸಿದೆ. ಹೀಗಾಗಿ, ಆಧುನಿಕ ತರ್ಕವೇ ಏಕೈಕ ತರ್ಕವೆನಿಸಿಕೊಂಡಿದೆ.

ಅಮೂರ್ತ ವಿಧಾನದ (Mode of abstraction) ಪರಿಕಲ್ಪನೆಯು ಸ್ವಲ್ಪಮಟ್ಟಿಗೆ ಕ್ಲಿಷ್ಟಕರವಾದುದು. ಸರಳವಾಗಿ ಹೇಳುವುದಾದರೆ ಅದು ಮೂರ್ತರೂಪದ ಅಥವಾ ಭೌತಿಕ ವಸ್ತುಗಳನ್ನು ಉಲ್ಲೇಖಿಸದೆಯೇ, ಕಲ್ಪನೆಯ ಮಟ್ಟದಲ್ಲಿ ಮಾಡುವ ಚರ್ಚಾ ವಿಧಾನ. ನಾವು ಲೌಕಿಕ ಜಗತ್ತಿನಲ್ಲಿ ಭೌತಿಕ ವಸ್ತುಗಳೊಡನೆ ಬದುಕುತ್ತೇವೆ. ಅವುಗಳ ಜತೆ ವ್ಯವಹರಿಸುತ್ತಾ ಅವುಗಳ ಬಗ್ಗೆ ಚರ್ಚಿಸುತ್ತೇವೆ. ಆದರೆ 'ಚಿಂತನೆ' ಎಂಬ ಪರಿಕಲ್ಪನೆಯ ಬಗೆಗೆ ಮಾತನಾಡಬಯಸಿದಾಗ, ನೈತಿಕ ಪ್ರಶ್ನೆಗಳ ಬಗ್ಗೆ ಚರ್ಚಿಸಬೇಕಾದಾಗ ಅಥವಾ ಯಾವುದೇ ಭೌತಿಕ ವಸ್ತುಗಳಿಗೆ ಅಧೀನವಾಗದ ಅಸ್ತಿತ್ವದ ಸ್ವರೂಪ ಅಥವಾ ಸಂಬಂಧಗಳ ಬಗ್ಗೆ ಮಾತನಾಡುವಾಗ ಭೌತಿಕ ವಸ್ತುಗಳ ಆಸರೆಯಿಲ್ಲದೆಯೇ ಸ್ವತಂತ್ರ ಹಾದಿಯಲ್ಲಿ ಚರ್ಚೆ ಮುಂದುವರಿಯುವಂತೆ ನಮ್ಮ ಮನಸ್ಸುಗಳನ್ನು ಅಣಿಗೊಳಿಸಬೇಕು. ಯಾವುದೇ ಘಟನೆಗಳ ಮತ್ತು ವಸ್ತುಗಳ ಹಿಂದಿನ ಕಾರಣಗಳನ್ನು ತರ್ಕಿಸುವಾಗ ಅಂಥ ಚರ್ಚೆ ಜರುಗುತ್ತದೆ. ಯಾವುದೇ ಮಾನವ ಸಮುದಾಯವನ್ನು ಹೊರಗಿಟ್ಟು ಮಾನವ ಸಂಬಂಧಗಳ ಸ್ವರೂಪವನ್ನು ಮಾತ್ರ ಅನ್ವೇಷಿಸಬಯಸಿದಾಗ ಅಂಥ ಸ್ವತಂತ್ರ ಚರ್ಚೆ ಸಾಧ್ಯವಾಗುತ್ತದೆ. ಈ ಚಿಂತನ ವಿಧಾನವೇ ಭಾವರೂಪ ಅಥವಾ ಅಮೂರ್ತ ವಿಧಾನ (Mode of abstraction). ಇದರಿಂದ ಉಪಲಬ್ಧವಾಗುವ ಫಲಿತಾಂಶವೇ ಅಮೂರ್ತತೆ (Abstraction) ಆದರೆ ಈ ಅಮೂರ್ತತೆಯ ಸ್ವರೂಪಗಳು ವಿವಿಧ ನಾಗರಿಕತೆಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಹಾಗಾಗಿ, ಬೇರೆ ಬೇರೆ ನಾಗರಿಕತೆಗಳು ಬೇರೆ ಬೇರೆ ತರ್ಕಶಾಸ್ತ್ರವನ್ನು ಪಡೆದಿರುತ್ತವೆ. ಅಂದರೆ ; ಆ ನಾಗರಿಕತೆಗಳಲ್ಲಿ ಅಮೂರ್ತತೆಯ ಸ್ವರೂಪವನ್ನು ಬಿಂಬಿಸುವ ವಿಧಾನಗಳು ಬೇರೆಬೇರೆಯಾಗಿರುತ್ತವೆ. ಆದರೆ ಎಲ್ಲಾ

ಅಮೂರ್ತತೆಯ ಏಕಸ್ವಾಮ್ಯವನ್ನು ಹೊಂದಿರುವಂತೆ ವರ್ತಿಸುವ ಆಧುನಿಕ ವಿಜ್ಞಾನವು ಇಂದು ಈ ವೈವಿಧ್ಯವನ್ನು ಅಂಗೀಕರಿಸುವುದಿಲ್ಲ. ಆಧುನಿಕ ವಿಜ್ಞಾನದ ಪರಿಧಿಯಾಚೆಗಿನ ಎಲ್ಲಾ ಸಾಮಾನ್ಯ ತತ್ತ್ವಗಳನ್ನು ಆಧಾರ ರಹಿತ, ಅತಿ ನೈಸರ್ಗಿಕ ಅಥವಾ ಮಾನವಾತೀತ ಭಾವರೂಪಗಳೆಂದು ಅಥವಾ ಅನುಭವೈಕ (Empirical) ತತ್ತ್ವ ನಿರೂಪಣೆಯೆಂದು ಹೀಗಳೆಯಲಾಗುತ್ತದೆ. ಇಂಥ ವೈವಿಧ್ಯಮಯ ಅಮೂರ್ತತೆಗಳಿಗೆ ಧಾರ್ಮಿಕ ಆಚರಣೆ ಮತ್ತು ಕಲ್ಪನೆಗಳಲ್ಲಿ ಹಾಗೂ ಇನ್ನೊಂದೆಡೆ ಸಾಂಪ್ರದಾಯಿಕ ತಂತ್ರಜ್ಞಾನದಲ್ಲಿ ಹೇರಳವಾದ ಉದಾಹರಣೆಗಳನ್ನು ಕಾಣಬಹುದು.

ಜನರ ಆಲೋಚನಾ ವಿಧಾನಕ್ಕೆ ತರ್ಕಶಾಸ್ತ್ರವು ಸಂಬಂಧಿಸಿದೆ ಎಂದಾಗ ಜನರು ಯಾವುದರ ಬಗ್ಗೆ ಚಿಂತಿಸುತ್ತಿದ್ದಾರೆ ಎಂಬುದಕ್ಕೆ ಅದನ್ನು ಅನ್ವಯಿಸುವುದಿಲ್ಲ. ಬದಲು ಅವರ ಆಲೋಚನಾ ವಿಧಾನಕ್ಕೆ ಅನ್ವಯಿಸುತ್ತಾರೆ. ಅಂದರೆ ತರ್ಕಶಾಸ್ತ್ರವು ಒಂದು ಚಿಂತನೆಯ ಸ್ವರೂಪಕ್ಕೆ ಬದಲು ಚಿಂತನೆಯನ್ನು ಅರ್ಥಮಾಡಿಕೊಳ್ಳುವ ರಚನಾ ವಿಧಾನಗಳಿಗೆ ಅನ್ವಯಿಸುತ್ತದೆ. ತರ್ಕಶಾಸ್ತ್ರವು ವಸ್ತುವಿಗಿಂತ ವಸ್ತುವನ್ನು ಅರ್ಥಮಾಡಿಕೊಳ್ಳುವ ವಿಧಾನಗಳನ್ನು ಕುರಿತದ್ದಾಗಿದೆ. ಚಿಂತನೆಯ ರಚನೆ ಅಥವಾ ಜನರ ಆಲೋಚನಾ ವಿಧಾನದ ರಚನೆ ಮತ್ತು ಅವರಾಡುವ ಭಾಷೆಯ ತರ್ಕ ಎರಡೂ ಒಂದೇ ಎಂದು ಹೇಳಲಾಗುತ್ತದೆ. ಈ ಅಭಿಪ್ರಾಯವು ಭಾಷಾ ವಿಶ್ಲೇಷಣೆಯ ಯುಗದಲ್ಲಿ ಪಾಶ್ಚಿಮಾತ್ಯ ತತ್ತ್ವಜ್ಞಾನದ ಆಧಾರಸ್ತಂಭವಾಯಿತು. ಆಗ ಭಾಷೆಯ ತರ್ಕಶಾಸ್ತ್ರವನ್ನು ವಿಜ್ಞಾನದ ತರ್ಕವನ್ನಾಗಿ ಅನ್ವಯಿಸಲಾಗದು ಹಾಗೂ ಭಾಷೆಯ ತರ್ಕವು ವಿಜ್ಞಾನದ ತರ್ಕಕ್ಕಿಂತ ಉನ್ನತವಾದುದು ಎಂದು ತತ್ತ್ವಶಾಸ್ತ್ರವು ಪ್ರಾಯಶಃ ಸರಿಯಾದ ಅಭಿಪ್ರಾಯವನ್ನೇ ನೀಡಿತು. ಏಕೆಂದರೆ ಭಾಷಾ ತರ್ಕವನ್ನು ಪರಿಷ್ಕರಿಸಿ ಭಟ್ಟಿ ಇಳಿಸಿದ ಅದರ ಸಾರರೂಪವೇ ವಿಜ್ಞಾನದ ತರ್ಕ. ಬಂಡವಾಳಶಾಹಿ ಸಮಾಜದಲ್ಲಿ ಮಾನವ ಸೃಷ್ಟಿಸಿದ ವಸ್ತುಗಳೇ ಅವನ ಹತೋಟಿಯಿಂದ ಸ್ವತಂತ್ರಗೊಂಡು ಅವನನ್ನೇ ನಿಯಂತ್ರಿಸುವ ಶಕ್ತಿಗಳಾಗುತ್ತವೆ. ಅದೇ ರೀತಿ ಭಾಷಾ ತರ್ಕದಿಂದ ಉಗಮಗೊಂಡ ವಿಜ್ಞಾನದ ತರ್ಕವು ದೈನಂದಿನ ಬದುಕಿನ ಕಲೆ, ಭಾಷೆ, ಸಂಗೀತ ಮತ್ತು ಜನರು ಮರಳಿ ಯಥಾವತ್ತಾಗಿ ಸರ್ವವನ್ನೂ ಪಡಿಯಚ್ಚಾಗಿ ಪ್ರತಿಸೃಷ್ಟಿಸುವ ಶಕ್ತಿಗಳಾಗಿ ಭಾಷೆಗಿಂತಲೂ ಉನ್ನತವಾದ ಸ್ಥಾನದೆಡೆಗೆ ಚಲಿಸುತ್ತದೆ. ತರ್ಕವು ಅಸತ್ಯದಿಂದ ಕೂಡಿಲ್ಲ. ಆದರೆ ತಪ್ಪಿಸಲಿಕ್ಕಾಗದ, ಆದರೆ ನ್ಯಾಯಯುತವಾದ ಒರಟುತನ ಮತ್ತು ಕಟುತನ, ಬಿರುಸುಗಳಿಂದ ಕೂಡಿದೆ.

ಇಲ್ಲಿ ಮತ್ತೊಂದು ಮಹತ್ತ್ವದ ವಿಚಾರವಿದೆ. ಜಗತ್ತಿನಾದ್ಯಂತ ಇರುವ ಎಲ್ಲಾ ಜನರ ಆಲೋಚನಾ ವಿಧಾನದಲ್ಲಿ ಏಕರೂಪವಿಲ್ಲ. ಹಾಗೆಯೇ ಅವರ ಆಲೋಚನಾ ವಿಧಾನಗಳ ರಚನೆಗಳಲ್ಲೂ ಏಕತೆಯಿಲ್ಲ. ಸರಿಯಾಗಿ ಹೇಳಬೇಕೆಂದರೆ ಜನರ ಆಲೋಚನೆ ವಿಧಾನದ ವಿನ್ಯಾಸವನ್ನು ತರ್ಕಶಾಸ್ತ್ರವು ಅಭಿವ್ಯಕ್ತಿಸುವುದಿಲ್ಲ. ಬದಲು ತರ್ಕವು 'ಒಂದು' ಜನವರ್ಗದ ಆಲೋಚನಾ ವಿಧಾನವನ್ನು ಅಭಿವ್ಯಕ್ತಿಸುತ್ತದೆ. (ಈ ಎರಡು ಅಭಿಪ್ರಾಯಗಳ ನಡುವಿನ ವ್ಯತ್ಯಾಸದ ಕಡೆ ಗಮನ ಸೆಳೆಯಲು 'ಒಂದು' ಎಂಬ ಪದವನ್ನು ಬಳಸಲಾಗಿದೆ). ಇಲ್ಲಿ 'ಒಂದು' ಜನವರ್ಗ ಎಂಬುದು ಒಂದು ಸಮಾಜ ಅಥವಾ ಸಾಮಾಜಿಕ ಸ್ತರಕ್ಕೆ

ಅನ್ವಯಿಸುತ್ತದೆ. ಆದುದರಿಂದ ಎಷ್ಟು ಸಾಮಾಜಿಕ ಸ್ತರಗಳಿವೆಯೋ ಅಷ್ಟು ಸಂಖ್ಯೆಯ ತರ್ಕವಿಧಾನಗಳಿರುತ್ತವೆ. ಆದರೆ ಸಾಮ್ರಾಜ್ಯಶಾಹಿಯು ಬಂಡವಾಳಶಾಹಿ ಸಮಾಜದ ಒಳಗಿನ ಎಲ್ಲಾ ಸಾಂಪ್ರದಾಯಿಕ ಸಾಮಾಜಿಕ ಸ್ತರಗಳನ್ನು ಮತ್ತು ಅದರ ಹೊರಗಿನ ಎಲ್ಲಾ ಸಾಮಾಜಿಕ ಸ್ತರಗಳನ್ನು ಭಂಗಗೊಳಿಸಿ, ಅದರ ಜೊತೆಯಲ್ಲೇ ಜನರ ಆಲೋಚನಾ ವಿಧಾನಗಳು, ರಚನೆಗಳು ಮತ್ತು ಅವರ ತರ್ಕವನ್ನು ಏಕ ಎರಕಕ್ಕೆ ತಂದುಬಿಡುತ್ತದೆ. ಹಾಗಾಗಿ, ಸಾಮಾಜಿಕ ಸ್ತರಗಳಿರುವಷ್ಟೇ ಸಂಖ್ಯೆಯಲ್ಲಿ ತರ್ಕಗಳೂ ಇರುತ್ತವೆ ಎಂಬ ಅಭಿಪ್ರಾಯಕ್ಕೆ ವಿಜ್ಞಾನದ ತರ್ಕವು ಸವಾಲೊಡುತ್ತದೆ.

ತರ್ಕಶಾಸ್ತ್ರವು ನಿಗಮನ ವಿಧಾನದ (Syllogism) ವಾದವನ್ನೊಳಗೊಂಡಿದೆ. ಈ ನಿಗಮನ ವಿಧಾನಗಳ ಊಹೆ ಅಥವಾ ಆಧಾರಕಲ್ಪನೆಯ ಲಕ್ಷಣವನ್ನು ಹೊಂದಿದೆ. ಅಂದರೆ ತರ್ಕಶಾಸ್ತ್ರದಲ್ಲಿ ನಿಗಮನದ ಆಧಾರ ವಚನಗಳು (Premises) ನಿಜವೋ ಅಥವಾ ಸುಳ್ಳೋ ಎಂಬುದು ಮುಖ್ಯವಲ್ಲ. ಅಂದರೆ, ವಾದಗಳ ಸಮಂಜಸತೆ ಅಥವಾ ಅಸಮಂಜಸತೆಯನ್ನು ಪರಿಗಣಿಸುವಾಗ ಈ ಪ್ರಸ್ತಾವದ ಅರ್ಥವಂತಿಕೆ ಅಮುಖ್ಯ ಎಂಬುದನ್ನು ಇದು ಸೂಚಿಸುತ್ತದೆ. ಅಂದರೆ : ತರ್ಕಶಾಸ್ತ್ರವು ವಾದದ ಸ್ವರೂಪಗಳನ್ನು ಕುರಿತ ಜ್ಞಾನವೇ ಹೊರತು ಅಲ್ಲಿ ಸತ್ಯ, ನೈತಿಕತೆ ಮತ್ತು ಸೌಂದರ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಹುಡುಕುವುದು ಅರ್ಥಹೀನ. ಹಿಂದೆ ಸ್ವಯಂಸಿದ್ಧ ಸತ್ಯದ ಪರಿಕಲ್ಪನೆಯೊಂದಿತ್ತು. ಒಂದು ನಿಗಮನವಾದವಾಗಿ ಇಂದಿಗೂ ಜನಪ್ರಿಯವಾಗಿರುವ ಯೂಕ್ಲಿಡ್‌ನ ರೇಖಾಗಣಿತದಲ್ಲಿ ಈ ಸ್ವಯಂಸಿದ್ಧ ಪರಿಕಲ್ಪನೆಯಿದೆ. ಸೂತ್ರರೂಪ ಸಿದ್ಧಾಂತಗಳ (axiomatic System) ಪರಿಕಲ್ಪನೆ ಗಟ್ಟಿಯಾದ ನಂತರ ಸ್ವಯಂಸಿದ್ಧ ಸತ್ಯ ಎಂಬುದು ಆತ್ಯಂತಿಕವಾಗಿ ಮರೆಯಾಯಿತು. ಸೂತ್ರರೂಪ ಸಿದ್ಧಾಂತಗಳ ಬೆಳವಣಿಗೆಯ ವಿಜ್ಞಾನದಲ್ಲಿನ ಅನುಗಮನ ವಿಧಾನದ ಪರಿಕಲ್ಪನೆಯನ್ನು ತಿರಸ್ಕರಿಸಲು ಆಧಾರವೊದಗಿಸಿತು. ಅನುಗಮನ (Induction) ಪದ್ಧತಿ ವಿಜ್ಞಾನದಲ್ಲಿ ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಚಲಿಸುವ ವಿಧಾನವಾಗಿತ್ತು. ಅಂದರೆ ಅದು ಅನುಭವಗಳನ್ನು ಸಾರ್ವತ್ರಿಕಗೊಳಿಸಿ ಸತ್ಯದೆಡೆಗೆ ಚಲಿಸುವ ವಿಧಾನ. ಆದರೆ, ಈಗ ವಿಜ್ಞಾನವು ನಿಗಮನ ವಿಧಾನವನ್ನು ಬಳಸಿಕೊಳ್ಳುತ್ತಿರುವಂತೆ ಕಾಣುತ್ತಿದೆ. ವಿಜ್ಞಾನದ ವಿಧಾನವನ್ನು ಊಹಾತ್ಮಕ ನಿಮನ ವಿಧಾನವೆಂದು (Hypothetic-deductive method) ಹೇಳಲಾಗುತ್ತಿದೆ. ಹಾಗಾಗಿ ಗಣಿತದಲ್ಲಿರುವ ಸೂತ್ರರೂಪಗಳ ತರ್ಕ ಸರಣಿಯು–ಅಂದರೆ 'ತರ್ಕಶಾಸ್ತ್ರವು' – ವಿಜ್ಞಾನದಲ್ಲಿ ಸತ್ಯ ಹುಡುಕುವ ವಾದಗಳ ಆಧಾರವೆನಿಸಿದೆ. ಆ ಮೂಲಕ ವಿಜ್ಞಾನದ 'ಯಶಸ್ಸು' ತರ್ಕಶಾಸ್ತ್ರದ ಅರ್ಥವನ್ನೇ ಪ್ರತಿಬಂಧಿಸಿ ಆಧಾರಕಲ್ಪನೆ ನಿಗಮನವಾದಗಳ ವಿಧಾನಗಳನ್ನೇ ಅನುಸರಿಸುವಂತೆ ಕಟ್ಟುಪಾಡು ಹೇರಿದೆ.

ಈ ರೀತಿ ಸ್ವಾಯತ್ತತೆ ಪಡೆದ ಆಧುನಿಕ ವಿಜ್ಞಾನವು ಅಗ್ರಪಟ್ಟಕ್ಕೇರುವ ಭರದಲ್ಲಿ ಏಕರೂಪದ ಆಯಾಮಕ್ಕೆ ಹೊಂದಿಕೊಳ್ಳುವಂತೆ ತರ್ಕಶಾಸ್ತ್ರ ಪದ್ಧತಿಗಳಲ್ಲಿದ್ದ ಅನಂತ ಸಾಧ್ಯತೆಗಳನ್ನು ನಾಶಪಡಿಸಿದೆ. ಜ್ಞಾನಕೋಶದ ತತ್ತ್ವಗಳು ವಿಜ್ಞಾನ ಕೋಶದ ತತ್ತ್ವಗಳಾಗಿ ಕುಗ್ಗಿ ಹೋಗಿವೆ. ವಿವಿಧ ನಾಗರಿಕತೆಗಳಲ್ಲಿದ್ದ ಅಮೂರ್ತತೆಯ ವೈವಿಧ್ಯ

ವಿಧಾನಗಳೆಲ್ಲವನ್ನು ವಿಜ್ಞಾನಕ್ಕೆ ಸಮ್ಮತವಾದ ವಿಧಾನಗಳಿಗೆ ಒಗ್ಗಿಕೊಳ್ಳುವಂತೆ ಪರಿವರ್ತಿಸಲಾಗಿದೆ. ಜನರ ಆಲೋಚನ ವಿಧಾನದ ರಚನೆಯ ಕಲ್ಪನೆಯು ತಲೆಕೆಳಗಾಗಿ, ಚಿಂತನೆಯೆಲ್ಲವೂ ವಿಜ್ಞಾನದ ರಚನೆಗಳಿಗೆ ಹಾಗೂ ವಿಜ್ಞಾನದ ವಾದ ಮತ್ತು ವಿಧಾನಗಳಿಗೆ ಹೊಂದಿಕೊಂಡಿದೆ.

ಗಾಂಧೀಜಿ ಪ್ರಾಯಶಃ ಆಧುನಿಕ ವಿಜ್ಞಾನವು ರೂಪಿಸಿರುವ ಈ ಸರಳ ತರ್ಕದ ಬಂಧನದಿಂದ ವಿಮೋಚನೆ ಪಡೆಯುವ ವಿಧಾನಗಳನ್ನು ತೋರಿಸಿರುವಂತೆ ಕಾಣುತ್ತದೆ. ಗಾಂಧೀವಾದದ ತರ್ಕವನ್ನು ಪುನಾರಚಿಸುವ ಮುನ್ನ ಸತ್ಯ ಮತ್ತು ಜ್ಞಾನಕ್ಕೆ ಸಂಬಂಧಿಸಿದಂತೆ ಆಧುನಿಕ ತರ್ಕಶಾಸ್ತ್ರದ ಸ್ವಭಾವವನ್ನು ಮನನ ಮಡಿಕೊಳ್ಳುವುದು ಒಳ್ಳೆಯದು.

**ಆಧುನಿಕ ತರ್ಕಶಾಸ್ತ್ರದ ವಿಮರ್ಶೆ**

ಗ್ರಂಥಾಲಯದಲ್ಲಿ ತರ್ಕಶಾಸ್ತ್ರಕ್ಕೆ ಸಂಬಂಧಿಸಿದ ಕೃತಿಗಳ ರಾಶಿಯೇ ದೊರೆಯುತ್ತದೆ. ಪ್ರಮೇಯ ತರ್ಕ ಅಥವಾ ಕ್ಯಾಲ್ಕ್ಯುಲಸ್ (ಪ್ರೊಪೋಸಿಷನಲ್ ಲಾಜಿಕ್), ಮೋಡಲ್ ಲಾಜಿಕ್, ಪ್ರೆಡಿಕೇಟ್ ಲಾಜಿಕ್, ಕಾಂಬಿನೇಟರಿ ಲಾಜಿಕ್, ಪೊಲಿಷ್ ಲಾಜಿಕ್...ಹೀಗೆ ಪಟ್ಟಿ ಬೆಳೆಯುತ್ತದೆ. ಈ ಕೃತಿಗಳು ತರ್ಕದ ವಿವಿಧ ವಿಷಯಗಳನ್ನು ಮತ್ತು ಅವುಗಳನ್ನು ಅಧ್ಯಯನ ಮಾಡುವ ವಿವಿಧ ವಿಧಾನಗಳನ್ನು ಕುರಿತು ಚರ್ಚಿಸುತ್ತವೆ. ಇವುಗಳೆಲ್ಲದರ ವೈಶಿಷ್ಟ್ಯವೆಂದರೆ ಸಂಕೇತಗಳ ಬಳಕೆ. ಆಧುನಿಕ ತರ್ಕಶಾಸ್ತ್ರವು ಸಂಕೇತಗಳನ್ನೊಳಗೊಂಡ ಶಾಸ್ತ್ರ.

ಇದು 'ಕಾರಣ ಅಥವಾ 'ತರ್ಕ'ದ ಮತ್ತು ಶತಮಾನಗಳಿಂದ ಅವುಗಳ ಜೊತೆಗಿನ ಎಲ್ಲ ಆನುಷಂಗಿಕ ಅರ್ಥಗಳನ್ನು ಕತ್ತರಿಸಿ ಪರಿಷ್ಕರಿಸಿ, ಒಂದು ಸಂಕೇತಾರ್ಥವನ್ನು ಮಾತ್ರ ಪ್ರತಿನಿಧಿಸುವಷ್ಟರ ಮಟ್ಟಿಗೆ ಇಳಿಸಿ ಪರಿಶುದ್ಧಗೊಳಿಸಿದ ಕಾರ್ಯದ ಫಲ. ಸೂತ್ರರೂಪ ವ್ಯವಸ್ಥೆಯ ತರ್ಕಶಾಸ್ತ್ರವು ವಸ್ತುವನ್ನು ಅದರ ವಿನ್ಯಾಸದಿಂದ ಸಂಪೂರ್ಣ ಪ್ರತ್ಯೇಕಗೊಂಡುದನ್ನು ಪ್ರತಿನಿಧಿಸುತ್ತದೆ. ಇಲ್ಲಿ ಬಳಸುವ ಸಂಕೇತಗಳಿಗೆ ಯಾವುದೇ ಅರ್ಥವಿಲ್ಲ. ಅವು ವ್ಯವಸ್ಥೆಯ ವ್ಯಾಖ್ಯಾನಗಳ ಮೂಲಕ ಅರ್ಥವನ್ನು ಪಡೆದುಕೊಳ್ಳುತ್ತವೆ. ವ್ಯಾಖ್ಯಾನ ಅಥವಾ ನಮೂನೆಗಳು ಒಂದು ವ್ಯವಸ್ಥೆಯ ಭಾಗವಲ್ಲ. ಅವುಗಳನ್ನು ಮನಬಂದಂತೆ ಬದಲಿಸಬಹುದು. ಆದುದರಿಂದ ಒಂದೇ ಸಂಕೇತ ಬೇರೆಬೇರೆ ಸಂದರ್ಭ ಅಥವಾ ಅರ್ಥವಿವರಣೆಗಳಲ್ಲಿ ವಿವಿಧ ಅರ್ಥಗಳನ್ನು ಪಡೆದುಕೊಳ್ಳುತ್ತದೆ. ಒಂದು ವ್ಯಾಖ್ಯಾನದ ಅರ್ಥವು ಸ್ಥಿರತೆಯ ದೃಷ್ಟಿಯಿಂದ ಇದೇ ರೀತಿ ಇರಬೇಕೆಂಬ ನಿಯಮ ಬಿಟ್ಟರೆ ಅದರ ಅರ್ಥವಿವರಣೆ ಮಾಡಲು ಯಾವುದೇ ನಿರ್ಬಂಧವಿಲ್ಲ.

ಆದುದರಿಂದ ಒಂದು ತರ್ಕಶಾಸ್ತ್ರ ಪದ್ಧತಿಯು ಒಂದು ನಿರ್ದಿಷ್ಟ ವಿಧಾನದಲ್ಲಿ ಸಂಯೋಜಿಸಿದ 'ಅರ್ಥಹೀನ' ಸಂಕೇತಗಳನ್ನು ಹೊಂದಿರುತ್ತದೆ. ಈ ಸಂಯೋಜನೆಯಲ್ಲಿ ಪಾಲಿಸಬೇಕಾದ ನಿಯಮವೆಂದರೆ ಸಂಕೇತಗಳ ವಿನ್ಯಾಸ ಸುಸಂಗತವಾದ ಅರ್ಥವಿವರಣೆಗೆ

ಒಳಪಟ್ಟಿರಬೇಕು. ಈ ಪದ್ಧತಿಯಲ್ಲಿ ಸಂಕೇತಗಳು ಅಭಿವ್ಯಕ್ತಿಸುವ ಅರ್ಥಗಳಿಗೆ ಮಿತಿಯಿದೆಯೇ ಹೊರತು ಸಂಕೇತಗಳಿಗೆ ಸ್ವಯಂ ಯಾವುದೇ ಅರ್ಥವಿಲ್ಲ. ಇದು ಸತ್ಯದ ಪರಿಕಲ್ಪನೆಯ ಮೇಲೆ ಪರಿಣಾಮ ಬೀರುತ್ತದೆ. ತರ್ಕಶಾಸ್ತ್ರದ ಯಾವುದೇ ಹೇಳಿಕೆ ಸತ್ಯವೂ ಅಲ್ಲ ಮಿಥ್ಯವೂ ಅಲ್ಲ. ಹೇಳಿಕೆಗಳು ಒಂದು ವಿಷಯಕ್ಕೆ ಸಂಬಂಧಿಸಿದಂತೆ ತೃಪ್ತಿಕರವಾದ ಅರ್ಥ ನೀಡಬಹುದು ಅಥವಾ ನೀಡದಿರಬಹುದು. ಸಾಧ್ಯವಾದ ಎಲ್ಲಾ ಕೋನಗಳಿಂದ ತೃಪ್ತಿಕರವಾದ ಹೇಳಿಕೆಯಾಗಿದ್ದರೆ ಅದನ್ನು ಟಾಟಲಜಿ (Tautology) ಎನ್ನುತ್ತಾರೆ. ಟಾಟಲಜಿ ಎಂದರೆ ಒಂದು ವಿಷಯದ ಅರ್ಥ ಹೆಚ್ಚು ಸ್ಪಷ್ಟವಾಗುವ ರೀತಿಯಲ್ಲಿ ಬೇರೆ ಬೇರೆ ಹೇಳಿಕೆ ಅಥವಾ ಮಾತುಗಳಲ್ಲಿ ನಿರೂಪಿಸುವುದು. ಇಲ್ಲಿ ಸತ್ಯದ ಪರಿಕಲ್ಪನೆ ಅಸಂಗತ. ಹಾಗೆ ನೋಡಿದರೆ, ವಾಸ್ತವವಾಗಿ ತರ್ಕಕ್ಕೆ ಸ್ಥಿರವಾದ ಅರ್ಥವೊಂದನ್ನು ಬಿಟ್ಟರೆ ಬೇರಾವುದೇ ಪರಿಕಲ್ಪನೆ ಅನಗತ್ಯ. ಆದುದರಿಂದಲೇ ಆಧಾರ ಕಲ್ಪನೆ ಅಥವಾ ಊಹೆಯ ವಾದವು ತರ್ಕಶಾಸ್ತ್ರದ ಬೆನ್ನೆಲುಬಾಗಿದೆ. ಜ್ಞಾನವನ್ನು ಸಂಯೋಜಿಸುವ ಒಂದು ತತ್ತ್ವವಾಗಿ ತರ್ಕಶಾಸ್ತ್ರ ತುಂಬಾ ಪರಿಮಿತಿಯನ್ನು ಹೊಂದಿದೆ. ಅದು ಜ್ಞಾನವನ್ನು ಪರಿಮಿತಗೊಳಿಸುತ್ತದೆ; ವಿಭಜಿಸುತ್ತದೆ. ಆಧುನಿಕ ವಿಜ್ಞಾನದಲ್ಲಾಗಿರುವಂತೆ ಅನರ್ಥಗಳನ್ನುಂಟು ಮಾಡುತ್ತದೆ. ಈ ಬಗ್ಗೆ ವಿವರವಾಗಿ ಚರ್ಚಿಸೋಣ. ಅನಂತರ ಸಂಕೇತ ಸಾಧನದ ಅರ್ಥಹೀನತೆ ಮತ್ತು ಸತ್ಯವನ್ನು ಸ್ಥಿರತೆಗೆ ತರಲು ಅದನ್ನು ಕುಗ್ಗಿಸುವ ಪ್ರಯತ್ನ ಹೇಗೆ ಮಾನವಕ್ರಿಯೆ ಮತ್ತು ಅವನ ಆತ್ಮೋತ್ಸರ್ಗ ಸಾಧ್ಯತೆಯ ಮೇಲೆ ದುಷ್ಪರಿಣಾಮ ಬೀರುತ್ತದೆಂಬುದನ್ನು ನೋಡಬಹುದು.

**ಜ್ಞಾನದ ಮೇಲಿನ ಪರಿಣಾಮಗಳು**

ಆಧುನಿಕ ತರ್ಕಶಾಸ್ತ್ರವು ಜ್ಞಾನವನ್ನು ಕ್ರಮಬದ್ಧವಾಗಿ ಸಂಯೋಜಿಸುವ ನಿಯಮವಾಗಿ, ಮಾನವನ ಅರಿವಿನ ವಿನ್ಯಾಸಗಳ ಅಭಿವ್ಯಕ್ತಿಯಾಗಿ, ಸಮಂಜಸವಾದ ಏಕೈಕ ಸ್ವರೂಪವಾಗಿ, ಆಧುನಿಕ ನಾಗರಿಕತೆಗಳಿಗೆ ವಿಶಿಷ್ಟವಾದ ಅಮೂರ್ತತೆಯ ವಿಧಾನವಾಗಿ ಎಲ್ಲಾ ಜ್ಞಾನವನ್ನು ಆಧುನಿಕ ವಿಜ್ಞಾನವನ್ನಾಗಿ ಕುಗ್ಗಿಸಲು ಪ್ರಯತ್ನಿಸುತ್ತದೆ. ಆಧುನಿಕ ತರ್ಕಶಾಸ್ತ್ರ ಅಂಗೀಕರಿಸಿರುವ ಪ್ರಮಾಣಗಳ ಪ್ರಕಾರ ಯಾವುದು ಆಧುನಿಕ ವಿಜ್ಞಾನವಲ್ಲವೋ ಅದು ಜ್ಞಾನವೇ ಅಲ್ಲ. ಈ ಅಭಿಪ್ರಾಯ ಕೇವಲ ಮಾನವನ ಅರಿವಿನ ಮೇಲೆ ಮಾತ್ರವಲ್ಲ ಸ್ವತಃ ವಿಜ್ಞಾನದ ಮೇಲೆ ಸಹ ಅನರ್ಥಕಾರಿ ಪರಿಣಾಮಗಳನ್ನು ಬೀರಿದೆ.

ಕಲೆಯ ಲೋಕದಲ್ಲಿ ವಸ್ತು ಮತ್ತು ಅದರ ವಿನ್ಯಾಸದ ಸ್ವರೂಪದ ನಡುವೆ ಇರುವಂಥ ಸಂಬಂಧಗಳೇ ಜ್ಞಾನ ಮತ್ತು ತರ್ಕಶಾಸ್ತ್ರದ ನಡುವೆ ಇದೆ. ಕಲಾ ಸ್ವರೂಪ ಹೆಚ್ಚು ಪರಿಮಿತವಾಗಿದ್ದರೆ ಅದರ ಮೂಲಕ ನಿರೂಪಿಸುವ ಭಾವಗಳಿಗೂ ಮಿತಿಯಿರುತ್ತದೆ. ಈ ಸಂಬಂಧಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಅರ್ಥಪೂರ್ಣ ಸಂವಹನ ಮತ್ತು ಅರ್ಥರಾಹಿತ್ಯ ಸಂವಹನಕ್ಕೆ ಹತ್ತಿರವಾದ ಉದಾಹರಣೆಗಳನ್ನು ಪರಿಗಣಿಸೋಣ. 'ಸ್ಪೇಸ್' ಅಥವಾ ದೇಶಕ್ಕೆ ವಸ್ತುವು ಹೇಗೆ ಸಂಬಂಧ ಹೊಂದಿದೆ? ಇದಕ್ಕೆ 'ಅವಕಾಶ' ಅಥವಾ

'ದೇಶ' (Space) ದ ಜೊತೆಯಲ್ಲಿ 'ವಸ್ತು' (matter) ವಿಗಿರುವ ಸಂಬಂಧವನ್ನು ನೋಡಬಹುದು. ವಸ್ತುವು 'ಸ್ಪೇಸ್' ಅಥವಾ 'ದೇಶ'ವನ್ನು ಆಕ್ರಮಿಸಿಕೊಳ್ಳುತ್ತದೆಂದು ನಮಗೆ ಕಲಿಸಲಾಗಿದೆ. ಅಂದರೆ, ಸ್ಥಳ ಅಥವಾ 'ಸ್ಪೇಸ್'ನ್ನು ಆಕ್ರಮಿಸಿಕೊಳ್ಳದಿರುವುದು ವಸ್ತುವಲ್ಲ ಎಂದಾಯಿತು. ಈ ಹೇಳಿಕೆಯು ವಸ್ತುವಿಗಿಂತಲೂ ದೇಶ ಹೆಚ್ಚು ಮುಖ್ಯ ಎಂದು ಸೂಚಿಸುತ್ತದೆ. ಒಂದರ್ಥದಲ್ಲಿ ಇದು ಸರಿ. ಏಕೆಂದರೆ ಎಲ್ಲಾ ಸ್ಥಳವನ್ನು ವಸ್ತು ಆಕ್ರಮಿಸಿಕೊಂಡಿರುವುದಿಲ್ಲ. ಇನ್ನೊಂದು ದೃಷ್ಟಿಯಿಂದ ಮೂಲಭೂತವಾಗಿ ಈ ಹೇಳಿಕೆ ಸರಿಯಲ್ಲ. ಏಕೆಂದರೆ ವಸ್ತು ಎಂಬುದು ಮಾನವನ ಇಂದ್ರಿಯಗಳಿಗೆ ಅಂದರೆ ನೋಟ, ಸ್ಪರ್ಶಗಳಿಗೆ ನಿಲುಕುತ್ತದೆ. ದೇಶ ಅಥವಾ ಸ್ಥಳ ಇಂದ್ರಿಯಗಳ ಗ್ರಹಿಕೆಗೆ ನಿಲುಕದು. ಇದೊಂದು ತಾತ್ತ್ವಿಕ ರಚನೆ ಮಾತ್ರ. ಹಾಗಾಗಿ ಒಂದು ತಾತ್ತ್ವಿಕ ನಿರ್ಮಾಣ ಅಥವಾ ವಿಕಲ್ಪ ಭೌತಿಕ ವಾಸ್ತವಕ್ಕಿಂತ ಹೆಚ್ಚು ಪ್ರಾಶಸ್ತ್ಯ ಪಡೆಯಲು ಹೇಗೆ ಸಾಧ್ಯ ?

ಆದರ್ಶವಾದಿಗಳಿಗೆ (Idealist) ಆತ್ಯಂತಿಕ ವಾಸ್ತವತೆಯೆಂದರೆ ಭಾವನೆ ಮಾತ್ರ; ವಸ್ತುವಲ್ಲ. ಆದರೆ ಅವರಿಗೂ ಸಹ ಯಾವುದೇ ನಿರ್ದಿಷ್ಟ ವಿಚಾರ (Idea) ವಸ್ತುವಿಗಿಂತ ಹೆಚ್ಚು ಪ್ರಧಾನವಲ್ಲ. ಕೇವಲ ವಿಚಾರದ ವಿಚಾರ ಮಾತ್ರ ಹಾಗಿರಲು ಸಾಧ್ಯ. ಆದುದರಿಂದ 'ಸ್ಪೇಸ್' ಎನ್ನುವುದು ತಾತ್ತ್ವಿಕವಾಗಿ ವಸ್ತುವಿಗಿಂತ ಮೊದಲಿರಲು ಸಾಧ್ಯವಿಲ್ಲ. ಹಾಗಾಗಿ ಅದು ಯಾವುದು ವಸ್ತು, ಯಾವುದು ವಸ್ತುವಲ್ಲ ಎಂದು ನಿರ್ಧರಿಸಲು ಪ್ರಮಾಣವಾಗಲು ಸಾಧ್ಯವಿಲ್ಲ.

ತರ್ಕಶಾಸ್ತ್ರ ಮತ್ತು ಜ್ಞಾನದ ನಡುವಿನ ಸಂಬಂಧವು ಸಹ ದೇಶ ಮತ್ತು ವಸ್ತುವಿನ ಸಂಬಂಧಕ್ಕೆ ಸದೃಶವಾಗಿದೆ. ಭಾವರೂಪದಲ್ಲಿ ತರ್ಕಶಾಸ್ತ್ರವು ಜ್ಞಾನಕ್ಕಿಂತ ಮೊದಲಿರುವಂಥದೆಂದು ಕಂಡರೂ, ಅದು ನಿಜಕ್ಕೂ ಜ್ಞಾನಕ್ಕಿಂತ ಮೊದಲಿನದಲ್ಲ. ಆದುದರಿಂದ ತರ್ಕವು ಯಾವುದು ಜ್ಞಾನ ಯಾವುದು ಜ್ಞಾನವಲ್ಲ ಎಂದು ನಿರ್ಧರಿಸುವ ಪ್ರಮಾಣವಾಗುವುದಿಲ್ಲ.

'ಕಾಲ' ಮತ್ತು 'ಘಟನೆ', 'ದ್ರವ್ಯ' ಮತ್ತು 'ವಸ್ತು' ಹಾಗೂ 'ಚೈತನ್ಯ' ಮತ್ತು 'ಚಲನೆ'ಯ ನಡುವಣ ಸಂಬಂಧಗಳನ್ನು ಪರಿಶೀಲಿಸಿದಾಗಲೂ ಇದೇ ಫಲಿತಾಂಶ ವ್ಯಕ್ತವಾಗುತ್ತದೆ. ಇವುಗಳನ್ನು ಒಂದೊಂದಾಗಿ ಪರಿಶೀಲಿಸಿ ತರ್ಕ ಮತ್ತು ಜ್ಞಾನದ ನಡುವಿನ ಸಂಬಂಧಗಳ ಬಗೆಗಿನ ನಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸೋಣ. ಘಟನೆಗಳು ನಮ್ಮ ಮುಂದೆ ಸಂಭವಿಸುತ್ತವೆ. ಇಂದ್ರಿಯಗಳ ಮೂಲಕ ನಾವು ಅವುಗಳನ್ನು ಗ್ರಹಿಸಲು ಸಾಧ್ಯ. ಆದರೆ ಇಂದ್ರಿಯಗಳ ಗ್ರಹಿಕೆಗೆ ಕಾಲ ಇಲ್ಲ. ಅದೊಂದು ಸೈದ್ಧಾಂತಿಕ ವಿಕಲ್ಪ. ಒಂದು ಘಟನೆಯ ಬಗೆಗಿನ ನಮ್ಮ ಭಾವನೆ ಕಾಲದ ಕಲ್ಪನೆಯನ್ನು ರೂಪಿಸುತ್ತದೆ. ಆಧುನಿಕ ವಿಜ್ಞಾನ ಮಾಡುವಂತೆ ಕಾಲದ ಬಗೆಗಿನ ನಮ್ಮ ಕಲ್ಪನೆ ತುಂಬಾ ನಿಷ್ಠುರವಾಗಿದ್ದರೆ, ಘಟನೆಗಳ ಬಗೆಗಿನ ನಮ್ಮ ಭಾವವನ್ನು ಪರಿಮಿತಗೊಳಿಸುವ, ಕುಗ್ಗಿಸುವ ಒತ್ತಾಯಕ್ಕೆ ಒಳಗಾಗುತ್ತೇವೆ. ಆಗ ನಾವು ಅನೇಕ ವಿದ್ಯಮಾನಗಳನ್ನು ನಿಜವಾದ ಘಟನೆಗಳೆಂದು ಅಂಗೀಕರಿಸಲು ನಿರಾಕರಿಸಬಹುದು.

ಆಧುನಿಕ ವಿಜ್ಞಾನವು ಕಾಲ–ದೇಶ ಅಕ್ಷದ ಸ್ಥಾನ ನಿರ್ದೇಶನ (Co-ordinates) ಗಳನ್ನು ವ್ಯಾಖ್ಯಾನಿಸುತ್ತಾ ಘಟನೆಗಳೆಲ್ಲವೂ ಈ ಕಾಲ–ದೇಶದ ಸ್ಥಾನ ನಿರ್ದೇಶನಗಳಲ್ಲೇ ಸಂಭವಿಸಬೇಕು ಎಂದು ಚಿತ್ರಿಸುವುದಷ್ಟೆ ಆದರೆ, ಕಾಲ–ದೇಶಗಳ ಸ್ಥಾನ ನಿರ್ದೇಶನವಿಲ್ಲದ ಲೌಕಿಕ ಘಟನೆಗಳು ಏಕೆ ಸಂಭವಿಸಬಾರದು ?

ಈ ಬಗ್ಗೆ ಒಂದು ಊಹಾ ಪ್ರಯೋಗವನ್ನು ಮಾಡೋಣ. ಭೂಮಿಯ ಮೇಲೆ ಒಂದು ವಿಶಿಷ್ಟ ಕೀಟ ಸಂಕುಲವೊಂದನ್ನು ಊಹಿಸಿಕೊಳ್ಳಿ. ಅವು ಹಾರಲಾರವು. ಭೂಮಿಯ ಮೇಲ್ಮೈಯಲ್ಲಿನ ವಸ್ತುಗಳನ್ನು ಮಾತ್ರ ನೋಡಬಲ್ಲವು. ಅವುಗಳಲ್ಲಿ ಕೆಲವು ಸತತ ಅಭ್ಯಾಸದಿಂದ ಅಥವಾ ಬೇರಾವುದೇ ವಿಧಾನದಿಂದ ಹಾರುವ ಸಾಮರ್ಥ್ಯ ಗಳಿಸಿಕೊಳ್ಳುತ್ತವೆ ಎನ್ನೋಣ. ಅವುಗಳಲ್ಲಿ ಕೆಲವು ಭೂಮಿಯ ಮೇಲ್ಮೈಯಿಂದ ಆಚೆಗಿನ ವಸ್ತುಗಳನ್ನು ಈಗ ನೋಡಬಲ್ಲವು. ಅವುಗಳಲ್ಲಿ ಒಂದು ಕೀಟ ಆಕಾಶಕ್ಕೆ ಹಾರಿ ಕೆಲಕಾಲ ನಂತರ ಮತ್ತೆ ಭೂಮಿಗೆ ಮರಳುತ್ತದೆ ಎನ್ನೋಣ. ಆಗ ಉಳಿದ ಕೀಟಗಳು ಆ ಕೀಟದ ಬಗ್ಗೆ ಯಾವ ಅಭಿಪ್ರಾಯ ತಾಳಬಹುದು ? ನಭದಲ್ಲಿ ತಾನು ಕಂಡ ನೋಟವನ್ನು ಆ ಕೀಟ ಹೇಳಿದಾಗ ಆ ಸಂಕುಲದಲ್ಲಿಯ 'ಬುದ್ಧಿವಂತ' ಕೀಟಗಳು ಆ ಕತೆಯನ್ನು ಕೇಳಿ ನಗಬಹುದು. ಆ ಕೀಟದ ಭ್ರಮೆ ಅಥವಾ ನಟನೆಯೆಂದು ಹೀಯಾಳಿಸಬಹುದು. ಆ ಕೀಟ ಕೇಳುತ್ತಿರುವ ನೋಟದ ಸತ್ಯಾಸತ್ಯತೆಯನ್ನು ತಾಳೆ ಮಾಡುವುದಾಗಲೀ ಅಥವಾ ಅದನ್ನು ವಸ್ತುಶಃ ಮರುಸೃಷ್ಟಿ ಮಾಡುವುದಾಗಲಿ ಸಾಧ್ಯವಿಲ್ಲವೆಂದು ಹೇಳಬಹುದು. ಭೂಮಿಯ ಮೇಲ್ಮೈಯಿಂದಾಚೆಗೆ ನೋಡುವ ಸಾಮರ್ಥ್ಯ ಗಳಿಸಿಕೊಂಡ ಕೀಟಗಳು ಮಾತ್ರ ಆ ಕತೆಯನ್ನು ಕೇಳಿ ನಗುವುದೂ ಇಲ್ಲ, ಅಥವಾ ಸುಳ್ಳುಗಾರನೆಂದು ಜರೆಯುವುದೂ ಇಲ್ಲ. ಹಾಗೆ ಮೇಲಕ್ಕೆ ಹಾರುವ ವಿಧಾನವನ್ನು ಕಲಿಯಲು ಇಚ್ಛಿಸಬಹುದು. ನಭಕ್ಕೆ ಹಾರಿಬಂದ ಕೀಟದ ಅನುಭವಗಳ ವಿವರಗಳ ಅರ್ಥವನ್ನು ಸಾಮಾನ್ಯವಾಗಿ ಇಡೀ ಸಂಕುಲ ಅರ್ಥಮಾಡಿಕೊಳ್ಳುವುದಿಲ್ಲ. ಆದರೂ ಆ ಅನುಭವದ ಬಗ್ಗೆ ಸಂಶಯವನ್ನೂ ವ್ಯಕ್ತಪಡಿಸುವುದಿಲ್ಲ. ಆ ಸಂಕುಲದ 'ಬುದ್ಧಿವಂತ' ವರ್ಗದ ಕೀಟಗಳಂತೆ ಅವು ಆ ಕೀಟಕ್ಕೆ ಇಂದ್ರಜಾಲದಲ್ಲಿ ನಂಬಿಕೆಯಿದೆಯೇ ಹೊರತು ತರ್ಕದಲ್ಲಲ್ಲ ಎಂದು ಅಲ್ಲಗಳೆಯುವುದೂ ಇಲ್ಲ.

ಮಾನವ ತಿಳುವಳಿಕೆಯ ವಿರುದ್ಧ ನಿರ್ಬಂಧ ಹೇರುವಲ್ಲಿ ಬಹುಶಃ ಆಧುನಿಕ ತರ್ಕಶಾಸ್ತ್ರಕ್ಕಿಂತ ಮಿಗಿಲಾದದ್ದು ಮತ್ತೊಂದಿಲ್ಲ. ಹೆಚ್ಚು ಹೆಚ್ಚು ಆಧುನಿಕ ತರ್ಕಶಾಸ್ತ್ರದಲ್ಲಿ ಪರಿಣತಿ ಪಡೆದಂತೆಲ್ಲ ನೀವು ಸ್ವತಂತ್ರವಾಗಿ ಚಿಂತನೆ ಮಾಡುವುದನ್ನು ಕಡಿಮೆ ಮಾಡುತ್ತೀರಿ. ಗಾಂಧೀಜಿ ತಾನು ಸುಸಂಗತತೆಯ ಬಗ್ಗೆ ತಲೆ ಕೆಡಿಸಿಕೊಳ್ಳಲೇ ಇಲ್ಲ ಎನ್ನುವಾಗ ಉಡಾಫೆಯಿಂದ ಹೇಳಿದ್ದಲ್ಲ. ಅವರು ಎಂದಿನಂತೆ ಅದನ್ನು ಬಹಳ ಗಂಭೀರವಾಗಿಯೇ ಹೇಳಿದ್ದರು.

ದ್ರವ್ಯರಾಶಿ, ವಸ್ತು ಮತ್ತು ಚೈತನ್ಯ ಹಾಗೂ ಚಲನೆಯ ನಡುವಿನ ಸಂಬಂಧಗಳ ಬಗೆಗಿನ ಚರ್ಚೆ ಸಹ ಇಂಥ ತಿಳಿವಳಿಕೆಯನ್ನೇ ಮೂಡಿಸುವಂಥದು. ವಸ್ತು (Matter)

ಮತ್ತು ಘಟನೆ ಹೇಗೆ ದೇಶ-ಕಾಲ ನಿರ್ಮಿತಿಯಲ್ಲೇ ನೆಲೆಗೊಂಡಿದೆಯೋ ಹಾಗೆ ವಸ್ತು (Object) ಮತ್ತು ಚಲನೆ (Motion) ದ್ರವ್ಯರಾಶಿ-ಚೈತನ್ಯದ ಪರಿಕಲ್ಪನೆಯ ಚೌಕಟ್ಟಿನಲ್ಲಿ ನೆಲೆಸಿದೆ. ಆಧುನಿಕ ವಿಜ್ಞಾನವನ್ನು ಅಭ್ಯಾಸಿಸಿದವರಿಗೆ ದ್ರವ್ಯರಾಶಿಯ ಪರಿಕಲ್ಪನೆಯಿಲ್ಲದೆ ವಸ್ತುವಿನ ಬಗ್ಗೆ ಮತ್ತು ಚೈತನ್ಯವಿಲ್ಲದೆ ಚಲನೆಯ ಬಗ್ಗೆ ಮಾತನಾಡುವುದು ಅಸಂಬಂಧವಾಗಿ ಕಾಣುತ್ತದೆ. ನಾನು ಇಲ್ಲಿ ಸ್ಪಷ್ಟಪಡಿಸುತ್ತಿರುವುದೂ ಇದನ್ನೇ. ಅಂದರೆ, ಇತರ ವಾಸ್ತವ ಜ್ಞಾನಕ್ಷೇತ್ರಗಳಲ್ಲಿ ಮುಕ್ತವಾಗಿ ಸಂಚರಿಸಲು ವೈಜ್ಞಾನಿಕ ವ್ಯಾಖ್ಯೆಯ ತರ್ಕವು ಅತಿಯಾದ ಮಿತಿಯನ್ನು ಹೇರುತ್ತದೆ.

ಆದುದರಿಂದ ಆಧುನಿಕ ವಿಜ್ಞಾನದ ತರ್ಕದಂತೆ ಆಧುನಿಕ ತರ್ಕಶಾಸ್ತ್ರವೂ ಮಾನವ ಜ್ಞಾನಭಂಡಾರವನ್ನು ಕ್ರಮಬದ್ಧವಾಗಿ ಸಂಘಟಿಸಲು ಅತಿಯಾದ ಪರಿಮಿತಿಯುಳ್ಳ ತತ್ತ್ವವಾಗಿದೆ. ಅದು ಮಾನವನ ಅರಿವಿನ ಸೀಮೆಯನ್ನು ಕುಗ್ಗಿಸಿಬಿಡುತ್ತದೆ ಎಂಬದು ಮಾತ್ರ ಸಿದ್ಧವಾಗುವುದಲ್ಲ. ಒಟ್ಟು ಜ್ಞಾನದ ಐಡಿಯಾದ ಮೇಲೆಯೇ ಮಿತಿಯನ್ನು ಹೇರುವ ಪ್ರಬಲವಾದ ಸಾಧನವಾಗಿದೆ. ಜ್ಞಾನ ಮತ್ತು ಜ್ಞಾನದ ತತ್ತ್ವಶಾಸ್ತ್ರವೆರಡೂ ಸಂಕಟಕ್ಕೀಡಾಗುತ್ತವೆ. ಈ ಸಂಕಟವೇ ಬಹುಶಃ ಆಧುನಿಕ ತರ್ಕಶಾಸ್ತ್ರದ ಜೊತೆಜೊತೆಗೆ ಇರುವ ಮಾನವ ಕ್ರಿಯೆಯನ್ನೇ ನಿರಾಕರಿಸುವ ಕಾರಣವೂ ಕಾರ್ಯವೂ ಆಗಿದೆ.

## ಮಾನವ ಕ್ರಿಯೆಯ ಮೇಲಿನ ಪರಿಣಾಮಗಳು

ಈ ವೈಚಾರಿಕತೆಯ ವಿಜ್ಞಾನ ಮತ್ತು ಆಧುನಿಕ ತರ್ಕಶಾಸ್ತ್ರವು ಖಂಡಿತವಾಗಿಯೂ ಸತ್ಯಕ್ಕೆ ಸಂಬಂಧಿಸಿರದಿದ್ದರೆ ಆಗ ಸತ್ಯದಲ್ಲಿ ಅಡಕವಾಗಿರುವ ಸಕಲ ಸಂಗತಿಯೂ ಆಧುನಿಕ ತರ್ಕಶಾಸ್ತ್ರಕ್ಕೆ ಸಂಬಂಧಿಸಲಾರದು. ನಿರ್ದಿಷ್ಟವಾಗಿ ಹೇಳುವುದಾದರೆ, ಈ ಮಾತು ಮಾನವ ಕ್ರಿಯೆಗೂ ಅನ್ವಯಿಸುತ್ತದೆ. ಸತ್ಯವು ದೈನಂದಿನ ಬದುಕಿನ ಮಾನವ ಕ್ರಿಯೆಗಳಲ್ಲೇ ತನ್ನ ಪೂರ್ಣಪಥವನ್ನು ಪಡೆಯುತ್ತದೆ ಎಂದು ಈಗಾಗಲೇ ಹೇಳಿದೆ. ಅದನ್ನು ಮತ್ತೆ ಈಗ ನೆನಪಿಸಿಕೊಳ್ಳೋಣ. ಆಧುನಿಕ ತರ್ಕಶಾಸ್ತ್ರವು ಅಂಗೀಕರಿಸಿರುವ ಆಂಟಾಲಜಿಗಳಲ್ಲಿ (Ontology) ಮಾನವ ಕ್ರಿಯೆಗಳಿಗೆ ಯಾವುದೇ ಅವಕಾಶವೂ ಇಲ್ಲ. ಈ ಅಂಟಾಲಜಿಗಳಲ್ಲಿ ಮಾನವರು ಪ್ರಾಣಿ ಸಹಜವಾದ ಕಾರ್ಯಗಳಲ್ಲಿ ಅಂದರೆ ನೀತಿ ನಿರ್ಲಿಪ್ತವಾದ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟ, ನಿದ್ರೆ, ವಂಶಾಭಿವೃದ್ಧಿ ಇತ್ಯಾದಿ ಪ್ರಾಣಿ ಸಹಜ ಪ್ರವೃತ್ತಿಗಳಲ್ಲಿ ಮಾತ್ರ ಸತ್ಯವಾಗಿರುತ್ತಾರೆ. ಆದರೆ ದುರಾದೃಷ್ಟವಶಾತ್ ಈ ನೀತಿ ನಿರ್ಲಿಪ್ತವೆನಿಸಿದ ಅಂಶಗಳೇ ವೈಜ್ಞಾನಿಕ ಅರ್ಥದಲ್ಲಿ ಜ್ಞಾನದ ಅರ್ಹತೆಯನ್ನು ಪಡೆಯುತ್ತವೆ ಮತ್ತು ಇವೇ ಆಧುನಿಕ ತರ್ಕಶಾಸ್ತ್ರವು ಅಂಗೀಕರಿಸಿರುವ ಆದರೆ ಹೊರಗೆ ಬಿಟ್ಟುಕೊಡದೆ ಬಚ್ಚಿಟ್ಟುಕೊಂಡ ವಾದ ಸ್ವರೂಪಗಳಿಗೆ ಮಾತ್ರ ದೊರೆಯುತ್ತದೆ. ಆಧುನಿಕ ತರ್ಕವು ವೈಚಾರಿಕತೆಯ ವಿಜ್ಞಾನವಾದರೆ, ಆಗ ಮಾನವಕ್ರಿಯೆ ಬಹುಶಃ ಅಸ್ತಿತ್ವದಲ್ಲೇ ಇರುವುದಿಲ್ಲ.

ಇದನ್ನು ಸಂಪೂರ್ಣ ಅರ್ಥಹೀನ ವಾಕ್ಯರಚನೆಗಳು ಮೂಡಿಸುವ ಪರಿಣಾಮಗಳನ್ನು ಪರಿಶೀಲಿಸುವುದರ ಮೂಲಕ ಪರಿಗ್ರಹಿಸಬಹುದು. ಸಂಪೂರ್ಣ ಅರ್ಥಹೀನ

ವಾಕ್ಯರಚನೆಯ ಸಂಯೋಜನೆಯೇ ತರ್ಕಶಾಸ್ತ್ರದ ವಿಧಾನ. ಈ ವಾಕ್ಯರಚನೆ ಅಥವಾ ಸಂಕೇತಗಳು ತಮ್ಮ ಸ್ಥಿರವಾದ ಅರ್ಥದ ಮೂಲಕ ಮಾತ್ರ ಮಾನವ ಮತ್ತು ಅವನ ಜಗತ್ತಿಗೆ ಅನ್ವಯಿಸುತ್ತವೆ; ಅರ್ಥ ಪಡೆಯುತ್ತಿವೆ. ಆದರೆ ಈ ಸ್ಥಿರತೆ ಜಡತ್ವದ ಲಕ್ಷಣ. ಆದುದರಿಂದ ಆಧುನಿಕ ತರ್ಕದ ತೆಕ್ಕೆಗೆ ಬರುವ ಮುನ್ನ ನಿಜವಾದ ಜಗತ್ತಿನ ಸಂಗತಿಗಳೆಲ್ಲವೂ ಒಂದು ಪರಿವರ್ತನೆಯನ್ನು ಹಾಯ್ದು ಹೋಗುವುದು ಅನಿವಾರ್ಯ. ಈ ಪರಿವರ್ತನೆ ಕೇವಲ ಪದಗಳ ಅರ್ಥಕ್ಕೆ ಮಾತ್ರ ಸೀಮಿತವಲ್ಲ. ಅದು ಮಾನವನ ಅನಿಯಂತ್ರಿತ ಸಂಕಲ್ಪ, ನೈತಿಕತೆ, ಕ್ರಿಯಾಶೀಲತೆ ಇತ್ಯಾದಿ ಜೊತೆಗೂಡಿದ ಶಕ್ತಿಗಳು ಇಲ್ಲದ ಒಂದು ಜಡಸ್ಥಿತಿಗೆ ಪರಿವರ್ತನೆಗೊಳಿಸುತ್ತದೆ.

ಹಿಂದೆ ನಮ್ಮಲ್ಲಿ ಅನುಗಮನ (Inductive) ಪದ್ಧತಿಯ ತರ್ಕಶಾಸ್ತ್ರವಿತ್ತು. ಆಲೋಚನೆಯು ನಿರ್ದಿಷ್ಟತೆಯಿಂದ ಸಾರ್ವತ್ರಿಕದೆಡೆಗೆ ಅಂದರೆ ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಚಲಿಸುವ ವಿಧಾನವನ್ನು ವಿವರಿಸಲು ಅನುಗಮನ ಪದ್ಧತಿಯನ್ನು ಬಳಸಿಕೊಳ್ಳಲಾಗುತ್ತಿತ್ತು. ಅನುಗಮನ ತರ್ಕವಿಧಾನದಲ್ಲಿ ಬಳಸಿಕೊಳ್ಳುತ್ತಿದ್ದ ಆಧಾರವಚನಗಳಲ್ಲಿನ ಅಂಶಗಳೇ ಬೇರೆ. ಸಂಕಥನದ ನಂತರ ಮೂಡುತ್ತಿದ್ದ ಅನುಮಾನಗಳಲ್ಲಿ ಉಗಮವಾಗುತ್ತಿದ್ದ ಅಂಶಗಳೇ ಬೇರೆ. ಇಲ್ಲಿ ಆಧಾರವಚನ (Premise) ಗಳ ಮತ್ತು ಅನುಮಾನ (Inference) ಗಳಲ್ಲಿನ ಅಂಶಗಳು ಭಿನ್ನವಾಗಿರುತ್ತಿದ್ದವು. ಆದರೆ ಇದಕ್ಕೆ 'ಇರುವ' ಮತ್ತು ಇರಬೇಕೆಂಬ ಕಲ್ಪಿತದ ನಡುವಿನ ಸಂಬಂಧವನ್ನು ಕೈಗೆತ್ತಿಕೊಳ್ಳಲು ಅಸಮರ್ಥವಾದರೂ ಆ ನಿಟ್ಟಿನಲ್ಲಿ ಅದು ಪ್ರಯತ್ನವನ್ನು ಮಾಡದಿದ್ದಲ್ಲಿ ಕೂಡ ಅನುಗಮನ ವಿಧಾನವು ಮಾನವಕ್ರಿಯೆಗಳನ್ನು ಗುರುತಿಸದೆಯೇ ಅದನ್ನು ಅರಿಯುವ ಪ್ರಯತ್ನ ಮಾಡಿತ್ತು. ಅನುಗಮನದ ಸಾಧನೆಯೆಂದರೆ, ಮಾನಕ್ರಿಯೆಯನ್ನು ನಿರ್ವಹಿಸಲು ಸಂಪೂರ್ಣ ವಿಫಲವಾದರೂ ಸಹ ಅಲ್ಪ ಪ್ರಮಾಣದಲ್ಲಾದರೂ ನಿರ್ವಹಿಸಲು ಪ್ರಯತ್ನಿಸುತ್ತಿದ್ದದ್ದು. ಯಾವುದು ತರ್ಕಬದ್ಧ ಯಾವುದು ಮಾನಸಿಕ ನಿರ್ಮಿತಿ ಎಂಬ ಬಗೆಗಿನ ಗೊಂದಲದಲ್ಲಿ ಸಿಲುಕಿ ಈ ಶತಮಾನದಲ್ಲಿ ಅನುಗಮನ ಪದ್ಧತಿಯನ್ನು ಚಾರಿತ್ರಿಕ ಗೊಂದಲವೆಂದು ತಳ್ಳಿಹಾಕಲಾಯಿತು. ಇದರ ನಂತರ ಉಗಮವಾದ ಆಧುನಿಕ ತರ್ಕಶಾಸ್ತ್ರವು ವಿಜ್ಞಾನ ಮತ್ತು ಯುರೋಪ್ ತತ್ತ್ವಜ್ಞಾನಕ್ಕೆ ದೊಡ್ಡ ಆಸ್ತಿಯೆನಿಸಿತು. ಆದರೆ ಈ ತರ್ಕಶಾಸ್ತ್ರವು ಮಾನವ ಕ್ರಿಯೆಗೆ ಸಂಬಂಧಿಸಿದ ಚಾರಿತ್ರಿಕ ಸಮಸ್ಯೆಯನ್ನು ಪರಿಹರಿಸಲು ನಿರಾಕರಿಸಿತು. ಜೊತೆಗೆ ತಾನೊಂದು ಪರಿಶುದ್ಧ ವೈಚಾರಿಕ (Reason) ವಾದವೆಂದು ಹೇಳುತ್ತ ಮಾನವ ಕ್ರಿಯೆಯನ್ನೇ ವರ್ಜಿಸಿತು.

ಮಾನವ ಕ್ರಿಯೆಗೆ ತೋರಿದ ಈ ನಿರಾಕರಣೆ ಅನೇಕ ಮೂಲಭೂತ ಪರಿಣಾಮಗಳಿಗೆ ಕಾರಣವಾಯಿತು. ಅದು ಮಾನವನ ಆತ್ಮೋತ್ಸರ್ಗದ ಸಾಮರ್ಥ್ಯವನ್ನು ಕಸಿಯಿತು. ಇದು ಮಾನವನ ನೈಸರ್ಗಿಕ ಬದುಕು ಮತ್ತು ಶುದ್ಧ ಪ್ರಕೃತಿಯ ನಡುವಿನ ವಿಶಿಷ್ಟತೆಯನ್ನು ಅಳಿಸಿಹಾಕುವಲ್ಲಿ ಮತ್ತು ಧರ್ಮವನ್ನು ಕೇವಲ ಜೀವಪರಿಸರ ವಿಜ್ಞಾನದ ಮಟ್ಟಕ್ಕೆ ಇಳಿಸುವಲ್ಲಿ ಪರ್ಯಾವಸಾನವಾಗಿದೆ. ವಿದ್ಯೆ ಮತ್ತು ಅವಿದ್ಯೆ ನಡುವಿನ ವ್ಯತ್ಯಾಸಗಳನ್ನು ಅಳಿಸಿ ಹಾಕಲಾಗಿದೆ. ಸಾಮಾಜಿಕ ಬದುಕು ಗಂಡು ಮತ್ತು ಹೆಣ್ಣು ತಮ್ಮ ಜನರೊಡನೆ

ಹೊಂದಿರುವ ಸಂಬಂಧಗಳ ಕೇವಲ ಯಾಂತ್ರಿಕ ಜೋಡಣೆಯಾಗಿದೆ. ಮಾನವೀಯ ಗುಣವುಳ್ಳ ಎಲ್ಲ ಸಂಗತಿಗಳ ಮೇಲೂ ಆಸುರಿ ಶಕ್ತಿಗಳು ಮೇಲುಗೈ ಸಾಧಿಸಿವೆ. ವಿಜ್ಞಾನ ಮತ್ತು ರಾಜಕೀಯಗಳು ಸ್ತ್ರೀ ಪುರುಷರ ತಾತ್ತ್ವಿಕ ಮತ್ತು ನಿಜ ಬದುಕನ್ನು ಆಳುತ್ತಿವೆ. ಮನುಕುಲ ಇದರಿಂದ ವಿಮೋಚನೆಗಾಗಿ ಹಂಬಲಿಸಿದೆ.

ಆದುದರಿಂದ ಆಧುನಿಕ ತರ್ಕಶಾಸ್ತ್ರವು ಅಗೋಚರ ಹಾಗೂ ನಿಃಕೃಷ್ಟ ರೀತಿಯಲ್ಲಿ ಕಾರ್ಯನಿರ್ವಹಿಸುವ ಆಯ್ಕೆಗಳನ್ನು ಪ್ರತಿಬಂಧಿಸುವ ಕೆಲಸ ಮಾಡುವ ಬಹುದೊಡ್ಡ ತುಂಟ ಜ್ಞಾನವಾಗಿದೆ. ಗಾಂಧೀಜಿಯು ಇದರಿಂದ ಬಿಡುಗಡೆ ಹೊಂದಿ ಹೊಸ ದಾರಿಗಳನ್ನು ಕಂಡುಕೊಳ್ಳಲು ನಮಗೆ ದಾರಿ ತೋರಿಸಿದರು. ಹಾಗೂ ಈಗ ಗಾಂಧೀಜಿ ಚಿಂತನೆ ಬಿಟ್ಟರೆ ಬೇರೆ ಮಾರ್ಗಗಳಿಲ್ಲ.

**ಗಾಂಧಿಯವರ ತರ್ಕ**

ಗಾಂಧಿಯವರ ತರ್ಕವು ಸತ್ಯದಿಂದ ಸತ್ಯಕ್ಕೆ ಚಲಿಸುವ ತರ್ಕವನ್ನೊಳಗೊಂಡಿದೆ. ಯೂರೋಪಿಯನ್ ಪರಂಪರೆಯಲ್ಲಿನ ತರ್ಕಶಾಸ್ತ್ರದ ಮಿತಿಗಳು ಯೂರೋಪಿಯನ್ ತತ್ತ್ವಶಾಸ್ತ್ರದ ಸಂಪ್ರದಾಯದಲ್ಲಿರುವ ಮೂಲಭೂತ ದೋಷಕ್ಕೂ ನಿಕಟವಾದ ಸಂಬಂಧ ಹೊಂದಿದೆ. ಈ ದೋಷವೆಂದರೆ ಒಂದು ಸ್ಥಿರ ತಂತ್ರಜ್ಞಾನದ ವಿಶ್ಲೇಷಣೆಗೆ 'ಇರುವುದು' (Being) ಅಥವಾ ಜ್ಞಾನ (Knowledge) ಇವು ಜಡ ಅಸ್ತಿತ್ವ ರೂಪದಲ್ಲಿರಬೇಕೆಂಬ ಮೂಲಭೂತ ಅಂಶ. ಜ್ಞಾನ, ಭಾಷೆ, ವಿಚಾರ, ಅಮೂರ್ತತೆ, ವಾದ, ಕಾರಣ ಮತ್ತು ಇದೇ ಬಗೆಯ ಅಂಶಗಳು ವಿವಿಧ ತತ್ತ್ವಜ್ಞಾನಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಪ್ರಧಾನತೆಯನ್ನು ಗಳಿಸಿಕೊಂಡಿದ್ದವು. ಈ ಆಧುನಿಕ ತತ್ತ್ವಶಾಸ್ತ್ರವು ಇದು ಆಯಾ ತತ್ತ್ವಜ್ಞಾನಗಳು ಮತ್ತು ಅವುಗಳ ತರ್ಕಪದ್ಧತಿಯ ವಿಶ್ಲೇಷಣಾ ಸ್ವರೂಪದ ಮೇಲೆ ತೀವ್ರವಾದ ಮಿತಿಯನ್ನು ಹೇರಿತು. ಆದುದರಿಂದ ಒಂದು ಚಟುವಟಿಕೆ ಅಥವಾ ಆಂದೋಲನ ಚಾಲನೆ ಪಡೆದು ಮುಂಚೂಣಿಗೆ ಬಂದಾಗ ಅಂಥ ಬಂಧನಕಾರಿಯಾದ ತರ್ಕಪದ್ಧತಿಯಿಂದ ಜ್ಞಾನದ ವಿಮೋಚನೆಯ ಹಾದಿಯೊಂದು ತೆರೆದುಕೊಳ್ಳುವಂತೆ ಕಾಣುತ್ತದೆ. ಹೆಗೆಲ್‌ನ ತತ್ತ್ವ ಮೀಮಾಂಸೆಯನ್ನು ಚಿಂತನಾ ತರ್ಕದಿಂದ ಚರಿತ್ರೆಯ ತರ್ಕವನ್ನಾಗಿ ಅಂದರೆ ಚರಿತ್ರೆಯ ಮೂಲಕ ಮಾನವನ ಬೆಳವಣಿಗೆಯನ್ನು ಗುರುತಿಸುವ ತರ್ಕವಾಗಿ ಮಾರ್ಕ್ಸ್ ಪರಿವರ್ತಿಸಿದಾಗ ಒದಗಿಬಂದ ಫಲಿತಾಂಶ ಈ ಬಗೆಯದಾಗಿತ್ತು ಮತ್ತು ಇದು ಚರಿತ್ರೆಯಲ್ಲಿ ಮಾನವನ ಮುನ್ನಡೆಯಾಗಿತ್ತು. ಆತ ಗತಿ ತಾರ್ಕಿಕತೆಯನ್ನು ಅದರ ಬಂಧನದಿಂದ ಬಿಡಿಸಿ ವಿಮೋಚನೆಯ ಹಾದಿತೋರಿದ್ದ. ಹಾಗಾಗಿ ಚಲನಶೀಲವಾದ ತರ್ಕಶಾಸ್ತ್ರವೊಂದು ಮಾರ್ಕ್ಸಿಯನ್ ತತ್ತ್ವಮೀಮಾಂಸೆಯ ಹೆಸರಿನಲ್ಲಿ ನಮಗೆ ದಕ್ಕಿತು.

ಆದರೆ ಈ ಚಲನಶೀಲತೆಯನ್ನು ಮೌಲ್ಯ ನಿರ್ಲಿಪ್ತ ಮಿತಿಯಲ್ಲಿ ಪರಿಗ್ರಹಿಸಲಾಗಿದೆ. ಇಲ್ಲಿ ಸತ್ಯ ಎಂದರೆ ಚರಿತ್ರೆಯ ವಾಸ್ತವಗಳು ಮಾತ್ರ. ಈ ತರ್ಕವು ಮಾನವನ ಜೀವನ ಸಾರವು ಕೇವಲ ಸಾಮಾಜಿಕ ಸಂಬಂಧಗಳ ಜಾಲ ಎಂಬ ತಾತ್ತ್ವಿಕ (Ontology)

ಅಭಿಪ್ರಾಯಕ್ಕೆ ಸೂಕ್ತವಾಗಿ ಒಪ್ಪುತ್ತದೆ, ನೈತಿಕತೆಯನ್ನು ಅಸ್ತಿತ್ವದ ಒಂದು ಉಪಾಧಿಯಾಗಿ ಸ್ವೀಕರಿಸಿದಾಗ ಚಲನೆ, ಕ್ರಿಯೆ, ಚಟುವಟಿಕೆ ಮುಂತಾದವುಗಳನ್ನು ಅ–ನೀತಿಕತೆಯ (Amoral) ಪರಿಧಿಯಲ್ಲಿ ಪರಿಗಣಿಸಲು ಸಾಧ್ಯವಿಲ್ಲ. ಗಾಂಧೀಜಿಯವರ ಸತ್ಯದ ಪರಿಕಲ್ಪನೆಯನ್ನು ಆಧುನಿಕ ತರ್ಕಶಾಸ್ತ್ರದ ಸೂತ್ರಗಳಿಂದ ಪರಿಗ್ರಹಿಸಲು ಸಾಧ್ಯವಿಲ್ಲ. ಅದು ಆಧುನಿಕ ತರ್ಕಶಾಸ್ತ್ರದ ಮಿತಿ ಮತ್ತು ಹೇರಿಕೆಗಳ ಸ್ವರೂಪದಿಂದ ಬಿಡುಗಡೆಯಾಗುವ ನಿಜ ಸನ್ನಿವೇಶವನ್ನು ಒದಗಿಸುತ್ತದೆ.

**ಸತ್ಯದಿಂದ ಸತ್ಯಕ್ಕೆ**

ಸತ್ಯದಿಂದ ಸತ್ಯಕ್ಕೆ ಚಲಿಸುವ ಕ್ರಿಯೆಯು ಎಲ್ಲಾ ದುಷ್ಟತೆ, ಅನ್ಯಾಯ, ಶೋಷಣೆ, ದಮನ ಮುಂತಾದವುಗಳ ವಿರುದ್ಧದ ಹೋರಾಟವನ್ನೊಳಗೊಳ್ಳುತ್ತದೆ. ಅದು ದೇವರು ಮತ್ತು ಮಾನವನ ಬಗೆಗೆ ಯಾವ ಪೂರ್ವಗ್ರಹವೂ ಇಲ್ಲದ ಮತ್ತು ಪ್ರೀತಿಯನ್ನು ಒಳಗೊಂಡ ಕ್ರಿಯೆಯಾಗಿದೆ. ಅಂದರೆ ಅದು ಜನಸೇವೆಯಲ್ಲಿ ನಿರತವಾದ ಬದುಕು; ಧರ್ಮದ ಕಟ್ಟುಪಾಡುಗಳಿಗೆ ಒಳಗಾದ ಬದುಕು. ತನ್ನ ಬದುಕನ್ನೇ ಸತ್ಯದಿಂದ ಸತ್ಯದೆಡೆಗಿನ ಚಲನೆಯೆಂದು ಬಣ್ಣಿಸಿಕೊಂಡ ಗಾಂಧೀಜಿಯವರ ಜೀವನದಲ್ಲಿ ಇದೆಲ್ಲವನ್ನೂ ಮಾತ್ರವಲ್ಲ, ಇದಕ್ಕಿಂತಲೂ ಹೆಚ್ಚಿನದನ್ನು ಕಾಣಬಹುದು. ಸತ್ಯದಿಂದ ಸತ್ಯಕ್ಕೆ ಚಲಿಸುವ ಈ ನಡೆ ಎರಡು ಸತ್ಯದ ವಿದ್ಯಮಾನಗಳ ನಡುವಿನ ಚಲನೆಯ ವಿಸ್ತರಣೆ ಮಾತ್ರವಾಗಿರದೆ ಬದುಕಿನ ಒಟ್ಟೊಟ್ಟಿಗೆಯೇ ಸತ್ಯದಿಂದ ಅದರ ಸಾರಾರ್ಥದ ಸಾಕ್ಷಾತ್ಕಾರವಾದ ದೇವರೆಡೆಗೆ ಚಲಿಸುವ ಕ್ರಿಯೆಯೂ ಆಗಿದೆ. ಅಹಿಂಸೆಯ ಅರ್ಥವನ್ನು ತಿಳಿದು ಬದುಕು ಸಾಗಿಸುತ್ತಿರುವವರಿಗೆ ಈ ಕ್ರಿಯೆ ಬಹು ಸರಳ ಮತ್ತು ಸುಲಭ. ಆದರೆ ಆಸೆ ಮತ್ತು ಅಹಂಕಾರದ ಕೈಗೊಂಬೆಗಳಾದವರಿಗೆ ಅದು ಅತ್ಯಂತ ಸಂಕೀರ್ಣ, ಕ್ಲಿಷ್ಟ ಹಾಗೂ ಆಚರಿಸಲಾಗದ ಕ್ರಿಯೆ. ಈ ಚಲನೆಯ ತರ್ಕವು ಮಾನವ ಕ್ರಿಯೆಯ ಮತ್ತು ಆತ್ಮೋತ್ಸರ್ಗದ ತರ್ಕ.

ಸತ್ಯದಿಂದ ಸತ್ಯಕ್ಕೆ ಕ್ರಮಿಸುವ ಈ ಚಲನೆಯ ಸ್ವರೂಪ ಮತ್ತು ಗುರಿ ಅಥವಾ ಅಂತ್ಯ ಬೇರೆ ಬೇರೆಯಲ್ಲ. ಸ್ಪಷ್ಟವಾಗಿ ಹೇಳುವುದಾದರೆ ಈ ಚಲನೆಯ ತರ್ಕವು ಆ ಚಲನೆಯ ಕ್ರಿಯೆಯಿಂದ ಬೇರ್ಪಡಿಸುವಂಥದಲ್ಲ. ಇಲ್ಲಿ ಸಿದ್ಧಾಂತ ಆಚರಣೆಯಾಗುತ್ತದೆ: ಆಚರಣೆಯೇ ಸಿದ್ಧಾಂತವಾಗುತ್ತದೆ. ವಸ್ತುವೇ ಅದರ ಸ್ವರೂಪ ಕೂಡ. ಸತ್ಯ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಚಲನೆಗಳ ಲಕ್ಷಣವೇ ಅಂಥದ್ದು. ನಿಜವಾದ ಮಾನವಕ್ರಿಯೆ ಮತ್ತು ಸತ್ಯದಿಂದ ಸತ್ಯಕ್ಕೆ ಕ್ರಮಿಸುವ ನೈಜ ಮಾನವ ಕ್ರಿಯೆಗೆ, ಚಲನೆಗೆ ಗಾಂಧೀಜಿ ಸ್ವತಃ ತಾವೇ ಪ್ರಮಾಣಗಳನ್ನು ಒದಗಿಸುವುದರಿಂದ ಇವು ಖೊಟ್ಟಿ ಅಮೂರ್ತತೆಗಳಲ್ಲ.

ಗಾಂಧೀಜಿಯವರ ಪ್ರಮಾಣಗಳು ಸಮಾಜದ ಎರಡು ಸಂಪೂರ್ಣ ವಿಭಿನ್ನವಾದ ಧ್ರುವಗಳನ್ನು ಕುರಿತು ಹೇಳುತ್ತವೆ. ಈ ಎರಡು ಧ್ರುವಗಳು ಅಂತಿಮ ವಿಶ್ಲೇಷಣೆಯಲ್ಲಿ ಪರಸ್ಪರ ಬೇರ್ಪಡಿಸಲಾಗದಷ್ಟು ಒಂದೇ ಆಗಿರುತ್ತವೆ. ಅವರು ನಮ್ಮ ಕ್ರಿಯೆಗಳ, ನಿರ್ಧಾರಗಳ ಅಂತರ್ಗತ ಸತ್ಯವನ್ನು ನಿರ್ಧರಿಸಲು ನಮ್ಮನ್ನೇ ಆತ್ಮಾವಲೋಕನ

ಮಾಡಿಕೊಳ್ಳಲು ಮತ್ತು ಸಮಾಜದ ಕಟ್ಟಕಡೆಯ ವ್ಯಕ್ತಿಯತ್ತ ನೋಟಬೀರಲು ಹೇಳುತ್ತಾರೆ. ಆ ಪ್ರಕಾರ 'ಅಂತರಾತ್ಮದ ಧ್ವನಿ' ಮತ್ತು 'ಲೋಕಸಮ್ಮತ' ಎಂಬ ಎರಡು ಕೇಂದ್ರಗಳನ್ನು ಪರಿಗಣಿಸಬೇಕಾಗುತ್ತದೆ; ಮತ್ತು ಇವು ಗಾಂಧೀಜಿಯ ತರ್ಕಶಾಸ್ತ್ರದ ವಾಸ್ತವತೆಯನ್ನು ಒರೆಗಲ್ಲಿಗೆ ಹಚ್ಚುವ ಕೇಂದ್ರಗಳಾಗಿವೆ.

**ಅಂತರಂಗದ ಧ್ವನಿ (Inner Voice)**

ಕಡು ವಿರೋಧದ ನಡುವೆಯೂ ಮಹತ್ತ್ವದ ನಿರ್ಧಾರಗಳಿಗೆ ಬದ್ಧವಾಗಿರಲು ಗಾಂಧೀಜಿ ತಮ್ಮ ಅಂತರಂಗದ ಧ್ವನಿಯನ್ನು ಅವಲಂಬಿಸುತ್ತಿದ್ದರು. ಒಮ್ಮೆ ತಮ್ಮ ಆತ್ಮದ ಧ್ವನಿಯನ್ನು ಸ್ಪಷ್ಟವಾಗಿ ಕೇಳಿಸಿಕೊಂಡ ನಂತರ ಯಾವುದೇ ಬಗೆಯ ವಾದವೂ ಅವರನ್ನು ತಮ್ಮ ನಿರ್ಧಾರದಿಂದ ವಿಚಲಿತಗೊಳಿಸುತ್ತಿರಲಿಲ್ಲ. ನಮ್ಮಲ್ಲಿಯೂ ಅಂಥ ಅಂತರಂಗದ ಧ್ವನಿಯಿದೆ. ನಾವೂ ಅದನ್ನು ಕೇಳಿಸಿಕೊಳ್ಳುತ್ತೇವೆ. ಪ್ರಾಯಶಃ ನಾವು ಗಾಂಧಿಯವರಷ್ಟು ಸ್ಪಷ್ಟವಾಗಿ ಅದನ್ನು ಕೇಳಲಾರೆವು. ತಮ್ಮ ಅಂತರಂಗದ ಧ್ವನಿಗೆ ಅಂಟಿಕೂರಲು ಗಾಂಧಿಯವರಿಗಿದ್ದ ಸ್ಥಿರ ಸಂಕಲ್ಪ ಶಕ್ತಿ ನಮಗಿಲ್ಲವೇನೊ. ವಾಸ್ತವವೆಂದರೆ ನಾವು ಸಹ ಹಲವೊಮ್ಮೆ ನಮ್ಮ ಅಂತರಂಗದ ಧ್ವನಿಯನ್ನು ಚೆನ್ನಾಗಿಯೇ ಕೇಳಿಸಿಕೊಳ್ಳುತ್ತೇವೆ.

ದುಷ್ಟಕಾರ್ಯ ಮಾಡುವವನಿಗೆ ತಾನು ಮಾಡುತ್ತಿರುವುದು ತಪ್ಪು ಎಂಬುದನ್ನು ಚೆನ್ನಾಗಿ ಬಲ್ಲ. ಆದರೆ ಅನೇಕ ಕಾರಣಗಳಿಂದಾಗಿ ಅಂದರೆ ದೌರ್ಬಲ್ಯ, ಹುಸಿ ಪ್ರತಿಷ್ಠೆ, ಮೋಹ, ಸ್ವಾರ್ಥ, ಅಹಂಕಾರ ಇತ್ಯಾದಿಗಳಿಂದ ಆತ ತಪ್ಪೆಸಗುವುದರಿಂದ ದೂರವಿರಲಾರ. ಕುಡಿತದ ಚಟ ಇದಕ್ಕೊಂದು ಸ್ಪಷ್ಟ ಉದಾಹರಣೆ.

ಮದ್ಯ ವ್ಯಸನಿಗೆ ಕುಡಿತದ ಚಟ ಕೆಟ್ಟದ್ದು ಎಂಬ ಅರಿವಿರುತ್ತದೆ. ಆದರೆ ಕುಡಿತದಿಂದ ದೂರವಿರಲು ವಿಫಲನಾಗಿ ತನ್ನ ವ್ಯಕ್ತಿತ್ವ, ಕುಟುಂಬ ಮತ್ತು ಸಮಾಜವನ್ನು ಹಾಳುಮಾಡುತ್ತಾನೆ. ಹಾಗೆಯೇ ರಾಜಕಾರಣಿಯೊಬ್ಬನಿಗೆ ತನ್ನ ಯಾವ ನಿರ್ಧಾರ ಜನವಿರೋಧಿ ಎಂಬ ಅರಿವೂ ಇರುತ್ತದೆ. ಆದರೆ ಸ್ವಹಿತಾಸಕ್ತಿಯಿಂದ ಅನೇಕ ಕಾರಣಗಳಿಗಾಗಿ ಜನವಿರೋಧಿ ನಿರ್ಧಾರಗಳಿಂದ ಆತ ದೂರವಿರಲಾರ. ದೈನಂದಿನ ಬಹುತೇಕ ಎಲ್ಲಾ ಕ್ರಿಯೆಗಳಲ್ಲೂ ಅಂತರಂಗದ ಧ್ವನಿಯ ಕರೆಯನ್ನು ಗುರುತಿಸುವುದು ತುಂಬ ಸುಲಭ. ಆದರೆ ನಮ್ಮ ಕ್ರಿಯೆಗಳು ಅಥವಾ ನಿರ್ಧಾರಗಳು ಸಾಂಸ್ಕೃತಿಕ ಮತ್ತು ನಾಗರಿಕತೆಯ ಕಟ್ಟುಪಾಡುಗಳನ್ನು ಮೀರುವಾಗ ನಿಜವಾದ ಸಮಸ್ಯೆಗಳು ಉಗಮವಾಗುತ್ತವೆ.

ವಿವಿಧ ನಾಗರಿಕತೆಗಳಲ್ಲಿ ಬದುಕಿನ ಬಗೆಗಿನ ಕಲ್ಪನೆಗಳು, ಆಧಾರ ನೆಲೆಗಳು ಭಿನ್ನವಾಗಿರುತ್ತವೆ. ಈ ಹಿನ್ನೆಲೆಯಿಂದ ನೋಡಿದಾಗ ಒಂದೇ ಬಗೆಯ ಸನ್ನಿವೇಶ ಎದುರಾದಾಗ ಭಿನ್ನ ನಾಗರಿಕತೆಗಳ ಜನರ ಅಂತರಂಗದ ಧ್ವನಿ ಭಿನ್ನವಾಗಿರಬಹುದೆಂದು ಅನಿಸುವುದು ಸಹಜ. ಉದಾಹರಣೆಗೆ ಖನಿಜ ಸಂಪನ್ಮೂಲ ಬಳಕೆಯ ಬಗ್ಗೆ ಆಧುನಿಕ ಶಿಕ್ಷಣ ಪಡೆದ ವಿಜ್ಞಾನಿಯು ತಳೆದ ನಿರ್ಧಾರವು ಅವನ ದೃಷ್ಟಿಯಿಂದ ಸರಿಯಿರಬಹುದು.

ಆದರೆ ಗಿರಿಜನರ ದೃಷ್ಟಿಯಿಂದ ಅದು ಆಕ್ಷೇಪಾರ್ಹವಾಗಿ ಕಾಣಬಹುದು. ಆದರೆ ಇಂಥ ಪ್ರತಿಯೊಂದು ಪ್ರಕರಣದಲ್ಲೂ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ತಮ್ಮ ಖಂಡ ದೃಷ್ಟಿಯಿಂದ ನೋಡದೆ ಮಾನವ ಬದುಕಿನ ಮೂಲಭೂತ ನಿಯಮಗಳನ್ನು ಗಮನದಲ್ಲಿರಿಸಿಕೊಂಡು ಪೂರ್ಣ ದೃಷ್ಟಿಯಿಂದ ನೋಡಿದಾಗ ಒಂದು ಸ್ಪಷ್ಟ ನಿರ್ಧಾರಕ್ಕೆ ಬರುವುದು ಸಾಧ್ಯವಾಗುತ್ತದೆ. ಅಂತರಂಗದ ಧ್ವನಿ ಮತ್ತು ಲೋಕಸಮ್ಮತ ಎಂಬ ಎರಡು ಪ್ರಮಾಣಗಳು ಪರಸ್ಪರ ಪೂರಕ ಮಾತ್ರವಲ್ಲ ಪರಸ್ಪರ ನೆರವಾಗುವಂತೆ ಜೈವಿಕವಾಗಿ ಬೆಸೆದುಕೊಂಡಿವೆ.

ಅಂತರಂಗದ ಧ್ವನಿ ಎಂಬ ನಿರ್ದಿಷ್ಟ ಪರಿಕಲ್ಪನೆಗೆ ಹೋಲುವ ಪರಿಕಲ್ಪನೆ, ಆ ರೀತಿಯ ನಿರ್ವಹಣೆ ಆಧುನಿಕ ಪಾಂಡಿತ್ಯದಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ. ಎಲ್ಲೂ ಅವುಗಳ ಬಗ್ಗೆ ಚರ್ಚೆಯಾಗಿರುವುದು ಕಾಣದು. ಅದು ವ್ಯಕ್ತಿಗಳ ವ್ಯಕ್ತಿನಿಷ್ಠ ಪ್ರಜ್ಞೆಯ ಭಾಗವಾಗಿ ಕಾಣುವುದರಿಂದ ವಿಶ್ಲೇಷಣಾತ್ಮಕ ಚರ್ಚೆಗೆ ಸುಲಭವಾಗಿ ದಕ್ಕುವಂಥದಲ್ಲ. ಆದರೆ ವಾಸ್ತವವಾಗಿ ಅದು ಹಾಗಲ್ಲ. ವ್ಯಕ್ತಿನಿಷ್ಠ ಅಂಶದಿಂದ ಬಿಡಿಸಿ ಪರಿಷ್ಕರಿಸಿದಾಗ ಉಳಿಯುವ ಜ್ಞಾನಶೇಷ ಅಂತರಂಗದ ಧ್ವನಿಯಂತಿರುತ್ತದೆ. 'ಅಂತರಂಗದ ಧ್ವನಿ'ಯ ಸಾರ್ವತ್ರಿಕ ಲಕ್ಷಣಗಳನ್ನು ಸಹ ಗುರುತಿಸಬಹುದು. ಇದಕ್ಕೊಂದು ಉತ್ತಮ ಉದಾಹರಣೆಯೆಂದರೆ ಪರರು ನಮಗೆ ಯಾವುದನ್ನು ಮಾಡಬಾರದೆಂದು ಬಯಸುತ್ತೇವೆಯೋ ಅದನ್ನು ನಾವೂ ಇತರರಿಗೆ ಮಾಡಬಾರದೆಂಬ ಕ್ರೈಸ್ತ ಧರ್ಮದ ಸಹಜ ನೈತಿಕ ಸಂಹಿತೆ. ಅಂತರಂಗದ ಧ್ವನಿಯು ಬದುಕಿನ ನೈತಿಕ ಉಪಾಧಿಯಲ್ಲಿ ಬೆರೆತಿರುವಂತೆ ಕಾಣುತ್ತದೆ. ಅದು ಸತ್ಯ ಮತ್ತು ದೇವರ ಸಾರಾರ್ಥಕ ಸಂಪರ್ಕ ಕಲ್ಪಿಸುತ್ತದೆ; ಮತ್ತು ಆ ಬಗೆಗಿನ ಅಸಂಬದ್ಧ ಚಿಂತನೆಯ ಲಭ್ಯತೆಯನ್ನು ಮಿತಿಗೊಳಿಸುತ್ತದೆ.

## ಲೋಕ ಸಮ್ಮತ

ಸತ್ಯದಿಂದ ಸತ್ಯಕ್ಕೆ ಚಲಿಸುವ ಕ್ರಿಯೆಯ ಮತ್ತೊಂದು ಪ್ರಮಾಣ ನಮ್ಮ ಆಲೋಚನೆಗಳು, ಕ್ರಿಯೆಗಳು, ಸಂಬಂಧಗಳು ಮುಂತಾದವುಗಳನ್ನು ಒಳಗೊಂಡ ಲೋಕಸಮ್ಮತ ತತ್ತ್ವದಲ್ಲಿ ಅಡಗಿದೆ. ಸಮಾಜದ ಕಟ್ಟಕಡೆಯ ಮನುಷ್ಯನ ಹಿತದ ಬಗ್ಗೆ ಕ್ರಮಬದ್ಧ ವಿಶ್ಲೇಷಣೆಗೆ ಪ್ರಯತ್ನಿಸಿದಾಗ ಅದನ್ನು ಆರ್ಥಿಕ, ಸಾಮಾಜಿಕ, ರಾಜಕೀಯ ನೆಲೆಯಿಂದ ಪ್ರತ್ಯೇಕವಾಗಿ ಅಥವಾ ಆ ಕ್ಷೇತ್ರಗಳನ್ನು ಸಂಯೋಜಿಸಿ ಅರ್ಥಮಾಡಿಕೊಳ್ಳಲು ಅಸಾಧ್ಯವೆನ್ನುವುದು ಬಹುಬೇಗನೆ ಸ್ಪಷ್ಟವಾಗುತ್ತದೆ. ಗಾಂಧೀಜಿಯವರ 'ಕಟ್ಟ ಕಡೆಯ ಮನುಜ' ಎಂಬುದು ಅಂದಿನ ಭಾರತೀಯ ಸಮಾಜದ ವಿಶಿಷ್ಟವಾದ ವಾಸ್ತವ ಸನ್ನಿವೇಶದೆಡೆಗೆ ಗಮನ ಸೆಳೆಯುವ ಒಂದು ನಿರ್ಮಿತಿ. ಈ ಭಾಷಾ ನುಡಿಗಟ್ಟು, 'ಸ್ವದೇಶಿ' ಸಾಮಾಜಿಕ ವಾಸ್ತವತೆ ಮತ್ತು ಬಡವರು ಮತ್ತು ಶ್ರೀಮಂತರು ಎಂಬ ಸಾಮಾಜಿಕ ವಿಭಜನೆಯ ಪರಿಕಲ್ಪನೆಯನ್ನು ಒಳಗೊಳ್ಳುತ್ತದೆ. ಇಲ್ಲಿ 'ಲೋಕ' ಎಂಬ ಪದವನ್ನು ಸಮಾಜ ತನ್ನನ್ನು ತಾನೆ ಕಂಡುಕೊಂಡ ವಿಶಿಷ್ಟ ಸನ್ನಿವೇಶವೊಂದನ್ನು ಪ್ರತಿನಿಧಿಸಲು ಬಳಸಲಾಗಿದೆ.

ಪ್ರಾಯಶಃ ಗಾಂಧಿಯವರು 'ಲೋಕ' ಎಂಬ ಪದವನ್ನು ಬಳಸಿಲ್ಲ. ಆದರೆ ವಿನೋಬಾರವರು ಸೇರಿದಂತೆ, ಅವರ ಅನುಯಾಯಿಗಳು, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅದನ್ನು ವ್ಯಾಪಕವಾಗಿ ಬಳಸಿದ್ದಾರೆ. ಈ ಅವಧಿಯಲ್ಲಿ ಗಾಂಧಿಯವರಿಗೆ ಸಂಬಂಧಿಸಿದ ಸಾಹಿತ್ಯದಲ್ಲಿ 'ಲೋಕ ಹಿತ', 'ಲೋಕ ನೀತಿ', 'ಲೋಕ ಶಕ್ತಿ' ಮುಂತಾದ ಪಾರಿಭಾಷಿಕ ಪದಗಳನ್ನು ಅಪಾರವಾಗಿ ಬಳಸಲಾಗಿದೆ. 'ಲೋಕ' ಪದವು 'ಜನ' ಎಂಬ ಪದಕ್ಕೆ ಸಂವಾದಿಯಲ್ಲ. ಗಾಂಧೀಜಿಯವರ ಚಿಂತನೆಯ ಸನ್ನಿವೇಶದಲ್ಲಿ 'ಲೋಕ' ಶಬ್ದಕ್ಕೆ ಸ್ಪಷ್ಟವಾದ ಅರ್ಥವ್ಯಾಪ್ತಿ ನಿರ್ದೇಶಿಸಿಲ್ಲ. ಹಾಗಾಗಿ 'ಲೋಕ' ಪದಕ್ಕೆ ಗಾಂಧಿಯವರ ಅರ್ಥವೊಂದನ್ನು ನೀಡಲು ಯತ್ನಿಸೋಣ.

ಭಾರತೀಯ ಸಮಾಜ ವರ್ಗಗಳಿಂದ ಸಂಯೋಜನೆಗೊಂಡಿಲ್ಲ. ಬ್ರಿಟಿಷರು ಭಾರತದ ಸಮಾಜವನ್ನು ಅಸ್ತವ್ಯಸ್ತಗೊಳಿಸಿದಾಗ ಅದು ವರ್ಗಗಳಿಂದ ಕೂಡಿರಲಿಲ್ಲ. ಅದು ಸಾಮಾಜಿಕ ಕೂಡುಕಟ್ಟುಗಳಿಂದ (Social formations) ಕೂಡಿತ್ತು. ಅನೇಕ ಅತಿ ಸಣ್ಣ ಸಾಮಾಜಿಕ ಕೂಡುಕಟ್ಟುಗಳು ಕೂಡಿ ಒಂದು ಸಣ್ಣ ಸಾಮಾಜಿಕ ಸಮುದಾಯವಾಗುತ್ತಿತ್ತು. ಅಂಥ ಅನೇಕ ಸಣ್ಣ ಸಮುದಾಯಗಳು ಒಗ್ಗೂಡಿ ದೊಡ್ಡ ಸಾಮಾಜಿಕ ಸಮುದಾಯ ರಚನೆಯಾಗುತ್ತಿತ್ತು. ಸಣ್ಣ ಸಮುದಾಯಗಳೆಲ್ಲ ಸಂಪೂರ್ಣವಾಗಿ ಒಂದೇ ದೊಡ್ಡ ಸಮುದಾಯವೊಂದರಲ್ಲಿ ಸಂಪೂರ್ಣವಾಗಿ ಲೀನವಾಗುತ್ತಿರಲಿಲ್ಲ. ಅವು ವಿವಿಧ ಸ್ತರಗಳಲ್ಲಿ ಲಂಬವಾಗಿ ಇಲ್ಲವೇ ಸಮತಲವಾಗಿ ವಿಶಿಷ್ಟತೆಯಿಂದ ಗೋಚರಿಸುತ್ತಿದ್ದವು. ಅವು ತಾತ್ತ್ವಿಕವಾಗಿ ಇಲ್ಲವೇ ಬೇರಾವುದೇ ರಾಚನಿಕ ದೃಷ್ಟಿಯಿಂದ ಏಕಸ್ವರೂಪವನ್ನು ಹೊಂದಿರುತ್ತಿರಲಿಲ್ಲ. 'ಸಮಾಜ' ಪದದ ಅರ್ಥವನ್ನು ಇಂಗ್ಲಿಷ್‌ನ 'ಸೊಸೈಟಿ' ಎಂಬ ಪದ ಪ್ರತಿನಿಧಿಸಲಾರದು. ಸಮಾಜ ಪದವನ್ನು ಸನ್ನಿವೇಶ ಮತ್ತು ಅರ್ಥಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ರೀತಿಯಲ್ಲಿ ಅನುವಾದಿಸಬಹುದು. ಹಾಗಾಗಿ ಒಬ್ಬ ವ್ಯಕ್ತಿ ಏಕಕಾಲದಲ್ಲಿ ಅನೇಕ ಸಾಮಾಜಿಕ ಸ್ತರಗಳಿಗೆ ಸೇರಿರುತ್ತಾನೆ. ಈ ಸಾಮಾಜಿಕ ಸ್ತರಗಳು ಹಲವುಬಾರಿ ಒಂದರೊಳಗೊಂದು ಬೆರೆತಿರುತ್ತವೆ. ಹಾಗಾಗಿ ಇಲ್ಲಿಯ 'ಸೊಸೈಟಿ'ಗಳು ಇತರೆ 'ಸೊಸೈಟಿ'ಗಳಿಂದ ಕೂಡಿರುತ್ತವೆ. 'ಪೂರ್ಣ'ವು ಹಲವಾರು 'ಪೂರ್ಣ'ಗಳಿಂದಾದ ಪರಿಕಲ್ಪನೆಯೊಂದು ಇಲ್ಲಿದೆ. ಇಲ್ಲಿನ 'ಪೂರ್ಣ'ವು ಖಂಡಗಳು ಒಟ್ಟುಗೂಡಿ ರೂಪುಗೊಂಡದ್ದಲ್ಲ.

ಆದರೆ ಆಧುನಿಕ ಪಾಶ್ಚಿಮಾತ್ಯ ತತ್ತ್ವಜ್ಞಾನ, ವಿಜ್ಞಾನ ಮತ್ತು ಸಾಮಾಜಿಕ ಚಿಂತನೆಯು ಇದಕ್ಕೆ ವ್ಯತಿರಿಕ್ತವಾದ 'ಪೂರ್ಣತ್ವ'ದ ಪರಿಕಲ್ಪನೆಯನ್ನು ಬಳಸುತ್ತವೆ. ಒಂದು ಪರಮಾಣುವು ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್‌ಗಳಿಂದ ರಚಿತವಾಗಿರುತ್ತದೆ. ಆದರೆ ಆ ಕಣಗಳು ಪರಮಾಣುವಿಗಿಂತ ಸಂಪೂರ್ಣ ಭಿನ್ನವಾಗಿರುತ್ತವೆ. ಹಾಗೆಯೇ ಒಂದು ಸಮಾಜವನ್ನು ರೂಪಿಸುವ ಅನೇಕ ವರ್ಗಗಳು ತಾವು ನಿರ್ಮಿಸಿದ ಸಮಾಜದ ಸ್ವರೂಪಕ್ಕಿಂತ ಭಿನ್ನವಾಗಿರುತ್ತವೆ. ತತ್ವಜ್ಞಾನದಲ್ಲಿ, ಪೂರ್ಣವನ್ನು ನಿರ್ಮಿಸುವ ಭಾಗಗಳು ತಾವು ನಿರ್ಮಿಸಿದ ಪೂರ್ಣಕ್ಕಿಂತ ಭಿನ್ನವಾಗಿರುತ್ತವೆ. ಅವು ಏಕವಾಗಿದ್ದೂ ಪರಸ್ಪರ ಸಂಘರ್ಷದಲ್ಲಿರುತ್ತವೆ. ಇಂಥ ತತ್ತ್ವಜ್ಞಾನಗಳಲ್ಲಿ ಮತ್ತು ವಾಸ್ತವಗಳಲ್ಲಿ ಹಿಂಸೆಯು

ಸಮರ್ಥನೀಯವೆನಿಸಿಕೊಳ್ಳುತ್ತದೆ. ಸಮಾಜ ಮತ್ತು ವ್ಯಕ್ತಿಯ ನಡುವೆ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ನಮ್ಮಂಥ ಸಮಾಜಗಳಲ್ಲಿ ಒಂದು ಅಖಂಡವಾದ, ಪರಸ್ಪರ ಸಂಬಂಧವಿರುವ ಅಸ್ತಿತ್ವದ ಭಾವನೆ ಪ್ರವಹಿಸುವುದರಿಂದ ಅಲ್ಲಿ ಸಮಾಜ ಮತ್ತು ವ್ಯಕ್ತಿಯ ನಡುವೆ ಪ್ರಶ್ನೆಗಳು ಉದ್ಭವವಾಗುವುದಿಲ್ಲ. ಅಲ್ಲಿ ಅಹಿಂಸೆಯು ಮಾನವರ ಸ್ವಾಭಾವಿಕ ಲಕ್ಷಣವಾಗುತ್ತದೆ. ಹಾಗಾಗಿ ಅಹಿಂಸೆಯನ್ನು ಪಾಲಿಸಬೇಕೆಂಬ ಗಾಂಧಿಯವರ ಒತ್ತಾಯವನ್ನು ಇಂಥ ಸಮಾಜಗಳ ಮೇಲೆ ಹಾಕುವ ಒತ್ತಾಯವೆಂದು ಭಾವಿಸಬೇಕು. ಅಂಥ ಸಮಾಜವನ್ನು ನಾವಿಲ್ಲಿ ಸ್ವದೇಶಿ ಸಮಾಜವೆಂದು ಹಾಗೂ ಪಾಶ್ಚಿಮಾತ್ಯ ಮಾದರಿಯ ಸಮಾಜವನ್ನು ವರ್ಗ ಸಮಾಜವೆಂದು ಕರೆಯುತ್ತೇವೆ.

'ಲೋಕ' ಎಂಬ ಕಲ್ಪನೆಯು ಜನ, ಸಮುದಾಯಗಳು ಮತ್ತು ಸಾಮಾಜಿಕ ಸ್ತರಗಳ ಅರ್ಥಗಳನ್ನೊಳಗೊಳ್ಳುತ್ತದೆ. ಇವೆಲ್ಲವೂ ಸ್ವದೇಶಿ ಸಮಾಜದಲ್ಲಿ ಛಿದ್ರಗೊಂಡ ಸ್ಥಿತಿಯಲ್ಲಿವೆ. ಅವುಗಳು ವರ್ಗ ಸಮಾಜವಾಗಿ ನಿರ್ಮಾಣವಾಗಲು ಹೊಸ ಸಾಮಾಜಿಕ ರಚನೆಗಳಾಗಿ ರೂಪುಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಲೋಕಸಮ್ಮತದ ಪ್ರಮಾಣವು ದೈನಂದಿನ ಬದುಕಿನಲ್ಲಿ ತನ್ನ ಮಹತ್ತ್ವವನ್ನು ಗಳಿಸಿಕೊಳ್ಳುತ್ತದೆ. ನಮ್ಮ ಕ್ರಿಯೆಗಳು, ಗುರಿಗಳು, ಹಂಚಿಕೆ, ಇತ್ಯಾದಿಗಳು ಲೋಕ ಸಮ್ಮತವಾಗಿದ್ದರೆ ಆಗ ಸತ್ಯದಿಂದ ಸತ್ಯಕ್ಕೆ ಚಲಿಸುವ ದಾರಿಯಲ್ಲಿ ನಾವಿರುತ್ತೇವೆ. ನಮ್ಮ ಕ್ರಿಯೆಗಳು ಒಂದು ಹೊಸ ಹಾಗೂ ನ್ಯಾಯ ಸಮ್ಮತ ವ್ಯವಸ್ಥೆಯತ್ತ ಮಾನವ ಕುಲ ಕ್ರಮಿಸಲು ನೆರವಾಗುತ್ತದೆ ಎಂದು ಅದರ ಅರ್ಥ. ಅಂದರೆ ಭಾರತೀಯ ಸಂದರ್ಭದಲ್ಲಿ ಮಾನವನ ಆತ್ಮೋದ್ಧಾರಕ್ಕೆ ಸತ್ಯದಿಂದ ಸತ್ಯಕ್ಕೆ ಚಲಿಸುವ ಕ್ರಿಯೆಯಲ್ಲಿ ಲೋಕಸಮ್ಮತ ಪರಿಕಲ್ಪನೆ ಒಂದು ಪ್ರಮಾಣವಾಗುತ್ತದೆ. ಈಗ ನಾವು ದೈನಂದಿನ ಬದುಕಿನಲ್ಲಿ ಲೋಕಸಮ್ಮತದ ಅರ್ಥವನ್ನು ಕಂಡುಕೊಳ್ಳಬೇಕು. ಆ ಮೂಲಕ ಅದು ಲೋಕಸಮ್ಮತದ ಪರಿಕಲ್ಪನೆಗೆ ಒಂದು ಪ್ರಮಾಣ ಒದಗಿಸುತ್ತದೆ. ದೈನಂದಿನ ಬದುಕಿನಲ್ಲಿ ಲೋಕಸಮ್ಮತವಾಗುವ ಅಂಶವನ್ನು ಸತ್ಯ ಮತ್ತು ಅಸತ್ಯವನ್ನು ಗುರುತಿಸುವ ಸಾಧನವನ್ನು ಗುರುತಿಸಲು ನೆರವಾಗುತ್ತದೆ. ಈ ಕೆಲವು ಸಾಧನಗಳೆಂದರೆ ಲೋಕಹಿತ, ಲೋಕನೀತಿ, ಲೋಕಶಕ್ತಿ, ಲೋಕಸ್ಮೃತಿ ಮತ್ತು ಲೋಕವಿದ್ಯೆ. ಇವುಗಳನ್ನೀಗ ಒಂದೊಂದಾಗಿ ಪರಿಶೀಲಿಸೋಣ.

**ಲೋಕಹಿತ**

'ಲೋಕ ಹಿತ' ಎಂಬುದು ಸಾಮಾನ್ಯವಾಗಿ ಆರ್ಥಿಕ ಸಂಗತಿಗೆ ಸಂಬಂಧಿಸಿದ ಪರಿಕಲ್ಪನೆ. ಆದರೆ ಅದು ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಶ್ನೆಗಳನ್ನೂ ಒಳಗೊಳ್ಳಬೇಕು. 'ಹಿತ'ಕ್ಕೆ ಸಂಬಂಧಿಸಿದ ಸಂದರ್ಭಗಳಲ್ಲಿ, 'ಲೋಕ' ಪದವು ರಾಷ್ಟ್ರದ ಆಡಳಿತದಲ್ಲಿ ಭಾಗವಹಿಸದ ಎಲ್ಲ ಜನರಿಗೆ ಅನ್ವಯವಾಗುತ್ತದೆ. ಈ ರೀತಿ ಆಳಿಸಿಕೊಳ್ಳುವ ಜನವರ್ಗವೇ 'ಬಹುಜನ ಸಮಾಜ'ವೆನಿಸಿಕೊಳ್ಳುತ್ತದೆ. 'ಲೋಹ ಹಿತ'ಕ್ಕೆ ಸೂಕ್ಷ್ಮವಾಗಿ ಸ್ಪಂದಿಸುವುದು ಮತ್ತು ಅದನ್ನು ತೃಪ್ತಗೊಳಿಸುವುದೇ ಒಂದು ಪ್ರಜಾತಂತ್ರ ರಾಜ್ಯಾಡಳಿತ ವ್ಯವಸ್ಥೆಯ ಮೂಲ ಆಧಾರವೆಂದು ಪರಿಗಣಿಸಲಾಗಿದೆ; ಮತ್ತು ಈ ಸಂಬಂಧವನ್ನು ಗೌರವಿಸದ

ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳ ಕೊರತೆಯಿರುತ್ತದೆ. ರಾಜಕೀಯವು ಲೋಕಹಿತಕ್ಕೆ ಸದಾ ಸಂವೇದನಾ ರಹಿತವಾಗಿ ವರ್ತಿಸುವುದು ವ್ಯಕ್ತವಾಗಿರುವುದರಿಂದ 'ಪ್ರಜಾತಂತ್ರ'ವು ನಿಜಕ್ಕೂ ಪ್ರಜಾಪ್ರಭುತ್ವ ತತ್ತ್ವದ ಗೈರುಹಾಜರಿಯನ್ನು ಮರೆಮಾಡುವ ತೆರೆಯಂತೆ ವರ್ತಿಸುತ್ತದೆ. ಆದುದರಿಂದ ಲೋಕನೀತಿಯು ರಾಜನೀತಿಗೆ ಒಂದು ಅನಿವಾರ್ಯ ಪರ್ಯಾಯವಾಗಿ ಅರ್ಥ ಕಂಡುಕೊಂಡಿದೆ.

**ಲೋಕನೀತಿ**

'ಲೋಕ'ವು ಒಂದು ಹೊಸ ಸಮಾಜದೆಡೆಗೆ ಚಲಿಸುವ ಹೊಸ ಹಾದಿಗಳನ್ನು 'ಲೋಕನೀತಿ' ತೆರೆಯುತ್ತದೆ. 'ಲೋಕನೀತಿ'ಯು ಒಂದು ರಾಜಕೀಯೇತರ ಸಮಾಜದ ಪರಿಕಲ್ಪನೆಯನ್ನು ಆಧರಿಸಿದೆ. ಅಂದರೆ ಜನರು ಮತ್ತು ಅವರ ಸ್ಥಳೀಯ ಸಹಜ ಶಕ್ತಿಗಳ ಮೇಲೆ ನಿಂತಿ ಸಂಹಿತೆಯನ್ನು ಹೇರುವ ಮತ್ತು ಆಡಳಿತವನ್ನು ಸಾಧಿಸುವ ಅಧಿಕಾರ ಕೇಂದ್ರವಿರದ ವ್ಯವಸ್ಥೆಯ ಸಮಾಜ. ಲೋಕ ನೀತಿಯು ಸ್ಥಳೀಯ ಸ್ವಯಮಾಡಳಿತ, ಸ್ಥಳೀಯ ಶೈಕ್ಷಣಿಕ ವ್ಯವಸ್ಥೆ ಮತ್ತು ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಯ ಪರವಾಗಿರುತ್ತದೆ. ಸಮಾಜವು ಬಂಡವಾಳಿಗರು, ಕಾರ್ಮಿಕರು ಅಥವಾ ಆಡಳಿತಗಾರರು ಮತ್ತು ಕುಶಲಕರ್ಮಿಗಳು ಎಂದು ವಿಭಜನೆಯಾಗುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ಜನರ ಅಗತ್ಯಗಳು ಮತ್ತು ಆಸಕ್ತಿಗಳನ್ನಾಧರಿಸಿದ ಸ್ಥಳೀಯ ಕೈಗಾರಿಕೆಗಳ ಸಂಘಟನೆಯ ಪರವಿರುತ್ತದೆ. ಲೋಕನೀತಿ ಒಂದು ಭ್ರಮಾತ್ಮಕ ಪರಿಕಲ್ಪನೆಯಲ್ಲ; ಮತ್ತು ಅದರ ಅಭಿವೃದ್ಧಿ ಮತ್ತು ತೊಡಗುವಿಕೆ ನಿರ್ದಿಷ್ಟ ಸಮಾಜದ 'ಲೋಕಶಕ್ತಿ', 'ಲೋಕಸ್ಮೃತಿ' ಮತ್ತು 'ಲೋಕವಿದ್ಯೆ'ಯ ಪರಿಕಲ್ಪನೆಗಳನ್ನು ಆಧರಿಸಿರುತ್ತದೆಂದು ಹೇಳಬಹುದು.

**ಲೋಕಶಕ್ತಿ**

'ಲೋಕಶಕ್ತಿ' ನುಡಿಗಟ್ಟನ್ನು ಜನಾಂದೋಲನಗಳ ಸಂಘಟಕರು ವ್ಯಾಪಕವಾಗಿ ಬಳಸುತ್ತಿದ್ದಾರೆ. ಅದನ್ನು ಸ್ವದೇಶಿ ಸಮಾಜದ ಶಕ್ತಿಯೆಂಬಂತೆ ಸರಳವಾಗಿ ಗ್ರಹಿಸಲಾಗಿದೆ. ಸಮಾಜವು ವರ್ಗಗಳಿಂದ ರಚನೆಗೊಂಡಿದೆಯೆಂದು ಭಾವಿಸುವವರು ಮತ್ತು ವರ್ಗ ಸಂಘಟನೆಗಳ ರಚನೆಗೆ ಸಕ್ರಿಯವಾಗಿ ದುಡಿಯುವವರು ಈ ನುಡಿಗಟ್ಟನ್ನು ಉಪಯೋಗಿಸುವುದು ತೀರಾ ಅಪರೂಪ. ಗ್ರಾಮ ಸಂಘಟನೆ, ಮಹಿಳಾ ಸಂಘಟನೆಗಳು, ಒಂದು ಸಮುದಾಯದ ಸಂಘಟನೆ ಮುಂತಾದವುಗಳು ಸೃಷ್ಟಿಸುವ ಸಾಮರ್ಥ್ಯ ಲೋಕಶಕ್ತಿಯ ಸ್ವರೂಪಕ್ಕೆ ಉದಾಹರಣೆಗಳು. ಸಮಾಜದ ಈ ಘಟಕಗಳು ಸ್ವದೇಶಿ ಸಮಾಜದ ಕೆಲವು ರಾಚನಿಕ ಲಕ್ಷಣಗಳನ್ನು ಮತ್ತು ಮೌಲ್ಯಗಳನ್ನು ಜೀವಂತವಾಗಿಟ್ಟಿವೆ. ಅಂಥ 'ಐಡಿಯಾ'ಗಳನ್ನು ಸ್ವಾವಲಂಬಿ ಹಳ್ಳಿಗಳು ಮತ್ತು ಆದರ್ಶ ಮಹಿಳೆ ಬಗೆಗಿನ ಗಾಂಧಿಯವರ ಪರಿಕಲ್ಪನೆಗಳು ಬಲಗೊಳಿಸುತ್ತವೆ. ಹೋರಾಟವು ಅಂತ್ಯವಾಗುವವರೆಗೆ ಈ ಶಕ್ತಿ ಸ್ವರೂಪಗಳು ನಿರಂತರವಾಗಿ ಸ್ಥಿರವಾಗಿ ಉಳಿಯಬೇಕಾದರೆ ಅವು ಲೋಕಸ್ಮೃತಿ ಮತ್ತು ಲೋಕವಿದ್ಯೆಯಲ್ಲಿ ತಮ್ಮ ನೆಲೆಯನ್ನು ಕಂಡುಕೊಳ್ಳಬೇಕು.

**ಲೋಕಸ್ಮೃತಿ**

ಲೋಕಸ್ಮೃತಿಯು ಮಾನವನ ಗತಕಾಲದ ಜ್ಞಾನದ ಮೂಲ. ಅಂದರೆ ಲೋಕ ಸ್ಮೃತಿಯಲ್ಲಿ ಚರಿತ್ರೆಯಲ್ಲಿರುವ ಸತ್ಯದ ಪ್ರಮಾಣ ಅಡಕವಾಗಿರುತ್ತದೆ. ಲೋಕಸ್ಮೃತಿ ಗತದಲ್ಲಿ ಎಷ್ಟು ಹಿಂದಕ್ಕೆ ಹೋಗಬಲ್ಲದೋ ಅಷ್ಟು ಅವಧಿಯ ಚರಿತ್ರೆಯಿದೆ. ಅದರಾಚಿನದು ನಿರಂತರವಾದುದು, ಚಿರಸ್ಥಾಯಿಯಾದುದು. ಭೂಮಿಯ ಮೇಲಿನ ಬದುಕಿಗೆ ಉಪಯುಕ್ತವಾದ ಲೋಕಸ್ಮೃತಿಯ ಸಂಗತಿಗಳೆಲ್ಲವೂ ಎಲ್ಲಾ ಕಾಲಕ್ಕೂ ಸಲ್ಲುವ ಚಿರಸ್ಥಾಯಿ ಮೌಲ್ಯಗಳಾಗಿರುತ್ತವೆ. ವ್ಯವಸ್ಥಿತ ಜ್ಞಾನದ ಚರಿತ್ರೆ ಒಂದು ಮಿಥ್ಯೆ. ಅದು ಆಧುನಿಕ ಬದುಕಿನ ಕೃತ್ರಿಮತೆಗೆ ಆಧಾರವೊದಗಿಸುವ ಘಟನೆಗಳು, ಮಹಾವ್ಯಕ್ತಿಗಳು ಮತ್ತು ಕಥೆಗಳನ್ನು ಸೃಷ್ಟಿಸುತ್ತದೆ. ಆಧುನಿಕ ಮಾನವ ಏಕಾಂಗಿ. ಆತನಿಗೆ ಗ್ರಾಮ, ಕುಲ, ಜಾತಿ ಯಾವುದೂ ಇಲ್ಲ. ಯಾವುದೇ ಸಂಪ್ರದಾಯಕ್ಕೆ ಸೇರಿದವನಲ್ಲ. ಈ ಏಕಾಂಗಿ ವ್ಯಕ್ತಿ ಎಲ್ಲಿಯೂ ಸಲ್ಲುವವನಲ್ಲ. ಯಾವ ಸೃಷ್ಟಿಯೂ ಅವನಿಗಿಲ್ಲ. ತಾನೊಬ್ಬ ಸಾಮಾಜಿಕ ಜೀವಿ ಎಂಬ ಭಾವನೆಯನ್ನು ತರುವ ಚರಿತ್ರೆಯನ್ನು ಬರೆಯಲು ಬೇಕಾದ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವಷ್ಟೇ ಅವನ ಬಳಿಯಿರುವ ಸಾಧನಗಳು. ಕುಲಸ್ಮೃತಿ, ಸಂಪ್ರದಾಯ ಸ್ಮೃತಿ, ಗ್ರಾಮಸ್ಮೃತಿ, ರಾಷ್ಟ್ರಸ್ಮೃತಿ ಮುಂತಾದವು ಲೋಕಸ್ಮೃತಿಯ ಕೆಲವು ಸ್ವರೂಪಗಳು. ಇವೆಲ್ಲವನ್ನು ಒಟ್ಟುಗೂಡಿಸಿದಾಗ ಲೋಕಸ್ಮೃತಿಯ ಆಂತರಿಕ ಪ್ರಮಾಣ ನಿರ್ಮಾಣವಾಗುತ್ತದೆ. ಇವುಗಳಲ್ಲದೆ ಲೋಕವಿದ್ಯೆ, ಲೋಕನೀತಿ, ಲೋಕಹಿತ ಮತ್ತು ಲೋಕಶಕ್ತಿ ಮುಂತಾದವು ಸಹ ಲೋಕಸ್ಮೃತಿಯನ್ನು ನಿರ್ಧರಿಸುವ ಅಂಶಗಳು. ವಾಸ್ತವವಾಗಿ ಇಂಥ ಪರಿಕಲ್ಪನೆಯ ಸಾಧನದಿಂದ ಸೃಷ್ಟಿಯಾದ ಜಾಗತಿಕ ದೃಷ್ಟಿಕೋನದ ಮೂಲಕವೇ ಲೋಕಸ್ಮೃತಿಯ ಪಾತ್ರ ಮತ್ತು ಅರ್ಥ ಸ್ಫುಟರೂಪ ಪಡೆಯುತ್ತವೆ. ಈ ರೀತಿಯಲ್ಲಿ ಲೋಕಸ್ಮೃತಿಯು ಮಿಥ್ಯೆಗೆ ಅವಕಾಶವಿಲ್ಲದ ಮಾನವ ಚಿಂತನೆಯ ಬಹುಮುಖ್ಯ ಸಂಗತಿಯಾಗುತ್ತದೆ.

ಲೋಕವಿದ್ಯೆ ಮತ್ತು ತಂತ್ರಜ್ಞಾನದ ಬಹುದೊಡ್ಡ ಭಾರತೀಯ ಪರಂಪರೆಯು ಇಂದು ಲೋಕವಿದ್ಯೆಯಾಗಿ ಬದುಕಿದೆ. ರೈತರು, ಕುಶಲಕರ್ಮಿಗಳು, ಸ್ತ್ರೀಯರು, ಆದಿವಾಸಿಗಳು–ಇವರೆಲ್ಲ ಲೋಕವಿದ್ಯಾಪಾರಂಗತರು. ಪ್ರತಿಯೊಬ್ಬರ ಆಹಾರಕ್ಕಾಗಿ ರೈತ ಧಾನ್ಯ ಬೆಳೆಯುತ್ತಾನೆ. ಕೈಗಾರಿಕೆಯ ಕಾರ್ಮಿಕರು, ಕುಶಲಕರ್ಮಿಗಳು ಲೋಹ, ಮರ, ಮಣ್ಣು, ಕಲ್ಲು, ಗಾಜು, ಹತ್ತಿ, ಚರ್ಮ ಮುಂತಾದ ವಸ್ತುಗಳಿಂದ ವೈವಿಧ್ಯಮಯ ವಸ್ತುಗಳನ್ನು ತಯಾರಿಸುತ್ತಾರೆ. ಕೈಗಾರಿಕೆ ಮತ್ತು ಕೃಷಿ ಕಾರ್ಯಗಳಲ್ಲಿ ಭಾಗವಹಿಸುವುದರ ಜೊತೆಗೆ ಸ್ತ್ರೀಯರು ತಮ್ಮ ಅರಿವು ಮತ್ತು ಕೌಶಲ್ಯಗಳನ್ನು ಬಳಸಿ ಸಂತತಿ ಪೋಷಣೆ, ಆಹಾರ, ಆರೋಗ್ಯ ಮತ್ತು ಉಡುಪು ನಿರ್ವಹಣೆಯ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಆದಿವಾಸಿ ಜನಾಂಗವೇ ಸಂಪೂರ್ಣ ಕೃಷಿಕರು ಮತ್ತು ಕುಶಲರ್ಮಿಗಳಿಂದಲೇ ಸಂಯೋಜನೆಗೊಂಡಿದೆ. ಆದಿವಾಸಿಗಳ ಬದುಕಿನ ಕನಿಷ್ಠ ಅವಶ್ಯಕತೆಯ ಮೂಲ ಕೇವಲ ದುಡಿಮೆ ಮಾತ್ರವಲ್ಲ. ಏಕೆಂದರೆ ಅದು ಅವರ ಹೊಟ್ಟೆ ಹೊರೆಯುವಷ್ಟು ಕೂಲಿಯನ್ನೂ ನೀಡಲಾರದ ಅಗ್ಗದ ದುಡಿಮೆ. ತಮ್ಮ ಸುತ್ತಲಿನ ನಿಸರ್ಗದಿಂದ ಪಡೆದ

ಅರಿವನ್ನು ಆಧರಿಸಿ ಹರಿಯುವ ನೀರು, ಅರಣ್ಯ, ಬಂಡೆ, ಮಣ್ಣು ಮುಂತಾದವುಗಳನ್ನು ಬಳಸಿಕೊಂಡು ಬದುಕು ಸಾಗಿಸುತ್ತಾರೆ. ಹಾಗೂ ಲೋಕವಿದ್ಯೆಯೆಂದರೆ ಜನರ ನಂಬಿಕೆಯ ಕ್ರಮ ಅಥವಾ ಒಟ್ಟು ಲೋಕದೃಷ್ಟಿಯೇ ಆಗಿರುವ ಅವರ ಮೌಲ್ಯಪದ್ಧತಿಯಿಂದ ಜ್ಞಾನ ಕೌಶಲ್ಯ ಮತ್ತು ವಿಧಾನಗಳಾಗಿವೆ. ಬೇರ್ಪಡಿಸಲಾಗದ ಜನರ ಬದುಕಿನ ಒತ್ತಡಗಳು ಮತ್ತು ಅಗತ್ಯಗಳು ಮುನ್ನಡೆಸುವ ಹಾದಿಯಲ್ಲಿ ಅನುದಿನವೂ ತಮ್ಮ ಪರಂಪರೆ ಮತ್ತು ಅಪ್ಪಟ ಪ್ರತಿಭೆಯ ಸಂಪತ್ತನ್ನು ಬಳಸಿಕೊಂಡು ಅವರು ಸೃಷ್ಟಿಸುವ ಮತ್ತು ಮರುಸೃಷ್ಟಿಸುವ ವಿಧಾನಗಳಲ್ಲಿ ಲೋಕವಿದ್ಯೆ ಅಡಕವಾಗಿದೆ.

ಆಧುನಿಕ ಜ್ಞಾನವು (ವಿಜ್ಞಾನ ಮತ್ತು ತಂತ್ರಜ್ಞಾನ) ವಿಶ್ವವಿದ್ಯಾಲಯ ಜ್ಞಾನ; ಕ್ರಮಬದ್ಧವಾಗಿ ಕಲಿತ ಜ್ಞಾನ. ಇಂಥ ಸಂಘಟಿತ ಜ್ಞಾನ ವ್ಯವಸ್ಥೆ ಆಧುನಿಕ ರಾಷ್ಟ್ರ ಮತ್ತು ವರ್ಗ ಸಮಾಜದ ಬೆಳವಣಿಗೆಯ ಜೊತೆಯಲ್ಲಿಯೇ ಅಭಿವೃದ್ಧಿಯಾಗಿದೆ. ಈ ರೀತಿಯ ಅಭಿವೃದ್ಧಿ ವಿಧಾನವು ನಿರಂತರವಾಗಿ ಲೋಕವಿದ್ಯೆಯನ್ನು ಉಲ್ಲಂಘಿಸಿ ಅಸ್ತವ್ಯಸ್ತಗೊಳಿಸಿದೆ. ಅದು ನಿರಂತರವಾಗಿ ಮಹಿಳೆಯರ, ರೈತರ, ಆದಿವಾಸಿಗಳ ಮತ್ತು ಕೈಗಾರಿಕಾ ಸಮುದಾಯಗಳ ಹಿತಾಸಕ್ತಿಯನ್ನು ಉಲ್ಲಂಘಿಸಿ ಅವರ ಶಕ್ತಿಯ ಮೂಲಸೆಲೆಯನ್ನೇ ನಾಶಪಡಿಸಿದೆ. ಲೋಕವಿದ್ಯೆ ಜನರ ಶಕ್ತಿಯ ಮೂಲವಾಗಬಲ್ಲದು. ಇದು ಗಾಂಧಿಯವರ ಬದುಕು ಮತ್ತು ಖಾದಿ ಮತ್ತು ಗುಡಿ ಕೈಗಾರಿಕೆ ಕಾರ್ಯಕ್ರಮದಿಂದ ದೊರೆಯುವ ಸಂದೇಶ.

ಆಧುನಿಕ ವಿಜ್ಞಾನವು ಸ್ಥಾಪಿಸಿದ ಪ್ರಗತಿಯ ಪ್ಯಾರಡೈಮ್ (Paradigm), ಹಿಂದಿನ ಸಿದ್ಧಾಂತಗಳೆಲ್ಲವೂ ಸುಳ್ಳೆಂದು ಅವುಗಳ ಸ್ಥಾನದಲ್ಲಿ ಹೊಸದನ್ನು ಹಿಂದಿನ ಎಲ್ಲಾ ತತ್ತ್ವ ಸಿದ್ಧಾಂತಗಳನ್ನು ಹುಸಿಗೊಳಿಸಿ ಪರ್ಯಾಯವಾಗಿ ಆ ಜಾಗದಲ್ಲಿ ಹೊಸ ಸಿದ್ಧಾಂತವನ್ನು ಕೂಡಿಸುತ್ತದೆ. ಸ್ಥಾಪಿಸುತ್ತದೆ. ಈ ವ್ಯವಸ್ಥಿತ ಜ್ಞಾನದ (ವಿಜ್ಞಾನ) ತಾಳಕ್ಕೆ ತಕ್ಕಂತೆ ಅದರ ಸುತ್ತ ಸ್ಥಿರತೆ ಮತ್ತು ತಾತ್ತ್ವಿಕ ವಿಮರ್ಶೆಯ ಕೇಂದ್ರ ಎಳೆಯ ಸುತ್ತ ಬಲೆ ಹೆಣೆಯಲಾಗಿದೆ. ಅಂದರೆ ಆಧುನಿಕ ವಿಜ್ಞಾನ ತರ್ಕಬದ್ಧವಾಗಿ, ಸ್ಥಿರಲಕ್ಷಣವನ್ನು ಹೊಂದಿರಬೇಕು. ಇದಕ್ಕೆ ವ್ಯತಿರಿಕ್ತವಾಗಿ ಲೋಕವಿದ್ಯೆಯಲ್ಲಿ ಸ್ಥಿರತೆ ಮತ್ತು ವಿಮರ್ಶೆಗೆ ಸ್ವತಂತ್ರ ಅಸ್ತಿತ್ವವಿಲ್ಲ. ಸತ್ಯ ಮತ್ತು ನೈತಿಕತೆಗೆ ಬದ್ಧವಾದ ಜೀವನಶೈಲಿಯ ಅಂಗವಾಗಿ ಮಾನವ ಚಟುವಟಿಕೆಯ ಆಯಾಮಗಳು ಮೈದಾಳುತ್ತವೆ. ಲೋಕವಿದ್ಯೆ ಇದರಿಂದಾಗಿಯೇ ಪ್ರತಿದಿನವೂ ಪರೀಕ್ಷೆಗೊಳಪಡುವುದು ಮತ್ತು ಲೋಕವಿದ್ಯೆಯ ಪ್ರಗತಿಯು ಸತ್ಯದಿಂದ ಸತ್ಯಕ್ಕೆ ಕ್ರಮಿಸುವ ಅದರ ಚಲನೆಯಲ್ಲೇ ಅಡಗಿದೆ. ಆದುದರಿಂದ ಲೋಕವಿದ್ಯೆಯ ತಾತ್ತ್ವಿಕ ತಳಹದಿಯ ರಚನೆಯನ್ನು ಸ್ವದೇಶಿ ಸಮಾಜದ ತರ್ಕಶಾಸ್ತ್ರದ ರಚನೆ ಮತ್ತು ವರ್ಗ ಸಮಾಜದಿಂದ ಬಿಡುಗಡೆಗೊಳ್ಳುವ ತರ್ಕವು ನಿರ್ದೇಶಿಸುತ್ತದೆ.

ಈ ರೀತಿಯಲ್ಲಿ ಲೋಕವಿದ್ಯೆ, ಲೋಕಸ್ಮೃತಿ, ಲೋಕಶಕ್ತಿ, ಲೋಕನೀತಿ ಮತ್ತು ಲೋಕಹಿತ ಒಟ್ಟಾಗಿ ಲೋಕಸಮ್ಮತದ ಪ್ರಮಾಣಕ್ಕೆ ಆಧಾರವಾಗುವುದನ್ನು ಕಾಣುತ್ತೇವೆ. ಇದು ಕೇವಲ ಹೊಸ ಪ್ರಮಾಣವೊಂದನ್ನು ರೂಪಿಸುವ ಕಾರ್ಯ ಮಾತ್ರವಲ್ಲದೆ,

ಅದರ ಜೊತೆಗೆ ಗಾಂಧಿಯವರ ತರ್ಕದ ಅಗತ್ಯಗಳಿಗೆ ತಕ್ಕಂತೆ ಸಮಂಜಸತೆಯ ಪರಿಕಲ್ಪನೆಯನ್ನು ಪರಿವರ್ತಿಸುವ ಪ್ರಕ್ರಿಯೆಯೂ ಆಗಿದೆ.

ಗಾಂಧಿಯ ತರ್ಕಶಾಸ್ತ್ರ ಸ್ವರೂಪದ ವಿಶ್ಲೇಷಣೆಯು ಅವರು ಪ್ರತಿನಿಧಿಸುವ ಹೊಸ ವಿಜ್ಞಾನದ ಪ್ರವರ್ತಕರಾಗುವ ಸಾಧ್ಯತೆಯಿರುವ ಮತ್ತು ವಿಧಾನಗಳ ಬಳಿಗೆ ನಮ್ಮನ್ನು ಕರೆತಂದಿದೆ.

●

# ಹಿನ್ನುಡಿ

ಸುನಿಲ್ ಸಹಸ್ರಬುಧೆಯವರ "ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು" ಪುಸ್ತಕವು ಗಾಂಧೀಜಿಯವರ "ಹಿಂದ್ ಸ್ವರಾಜ್ಯ"ದ ಬಳಿಕ ನನ್ನ ಮೇಲೆ ಗಾಢ ಪ್ರಭಾವ ಬೀರಿದ ಪುಸ್ತಕವಾಗಿದೆ. "ಹಿಂದ್ ಸ್ವರಾಜ್ಯ" ದಷ್ಟೇ ಪ್ರಮುಖವಾಗಿರುವ ಈ ಗ್ರಂಥ, ಗಾಂಧೀಜಿಯ ಚಿಂತನೆಯನ್ನು ವಿಶ್ವನಿಯತಿ (ಋತ)ಗೊಳಪಟ್ಟ ಸಮಾಜಶಾಸ್ತ್ರೀಯ, ಆರ್ಥಿಕ ಸಿದ್ಧಾಂತದ ಚೌಕಟ್ಟಿನಲಿ ಕೂಡಿಸಿ ಗಟ್ಟಿಗೊಳಿಸಿದೆ. ಸಾಮಾನ್ಯ ಜನರ ದೈನಂದಿನ ಬದುಕಿನ ವಾಸ್ತವತೆಯ ನೆಲೆಗಟ್ಟಿನ ಮೇಲೆ ಪುನಾರಚಿಸಿದ ಸಹಸ್ರಬುಧೆಯ ವಿಚಾರಧಾರೆಯನ್ನು ಓದುತ್ತಾ ಹೋದಂತೆ ನನ್ನ ಮನಸ್ಸು ಅದನ್ನು ಬಹುತೇಕ ಸ್ವೀಕರಿಸುತ್ತಾ ಹೋಗುತ್ತಿತ್ತು. ಪ್ರಾಯಃ ಸಾಮಾನ್ಯ ಬದುಕಿನಲ್ಲಿ (Oridinary life) ಹುದುಗಿರುವ ಸತ್ಯವನ್ನು ಅಪ್ರತಿಮವಾಗಿ ಹಿಡಿದಿಡುವ ಅವರ ಕ್ರಮವೇ ಇದಕ್ಕೆ ಕಾರಣ.

ದೈನಂದಿನ ಕಾಯಕದ ಬದುಕು ವಾಸ್ತವದಲ್ಲಿ ನೆಲೆನಿಂತಿದೆ. ಅದು ಷರತ್ತುರಹಿತ (Unconditional) ವಾಗಿ, ಸಮಗ್ರವಾಗಿ, ವರ್ತಮಾನದಲ್ಲಿ ಸಂಭವಿಸುತ್ತಿರುತ್ತದೆ. ಅದಕ್ಕೆ ಸಿದ್ಧಾಂತಗಳ ಅಗತ್ಯವಿಲ್ಲ. ಅಂಕಿ ಅಂಶಗಳ ಹಂಗಿಲ್ಲ. ಅದು ಕೇವಲ ಇದೆ. ಸತ್ಯ-ಅಸತ್ಯ, ಒಳ್ಳೆಯದು-ಕೆಟ್ಟದು, ಸೌಂದರ್ಯ-ಕುರೂಪತೆ-ಎಲ್ಲವೂ ಕಾಯಕದ ಬದುಕಿನ ವಿವಿಧ ಮೈಗಳಾಗಿವೆ. ಆದರೂ ಈ ಅಂಕು-ಡೊಂಕುಗಳು ಒಟ್ಟು ವಿಶ್ವನಿಯತಿಯನ್ನು (Cosmic order) ಉಲ್ಲಂಘಿಸದೆ ಅದಕ್ಕೆ ಸೀಮಿತವಾಗಿಯಷ್ಟೇ ಕಾಣಿಸಿಕೊಳ್ಳುತ್ತದೆ. ಹಾಗಾಗಿ, ಅದು ಕಾಯಕದ ಬದುಕಿನ ಶ್ರೀಮಂತಿಕೆಯನ್ನು ಛಿದ್ರಗೊಳಿಸುವುದಿಲ್ಲ; ಮಾತ್ರವಲ್ಲದೆ, ನಮ್ಮ ಯಾವ ನಿರ್ವಚನೆಗೂ ಸಿಗದೆ ತಾನೇ ತಾನಾಗಿ ಇರುವಂಥದು. ಅದು ಸತ್ಯತತ್ತ್ವದ ಮೂಲನೆಲೆಯಾಗಿದೆ. ಆದರೆ ಈ ನಿಸರ್ಗ ಪೂರಕ ವಾಸ್ತವವನ್ನು ನೋಡುವ ಸೂಕ್ಷ್ಮ ಕಣ್ಣು, ಆಲಿಸುವ ಸೂಕ್ಷ್ಮ ಕಿವಿ ಬೇಕು. ಅದರ ಶ್ರುತಿಗೆ ನಮ್ಮ ಬದುಕಿನ ಲಯವನ್ನು ಹಚ್ಚುವ ಸೂಕ್ಷ್ಮ ಸಂವೇದನಾಶೀಲ ಮನಸ್ಸು ಬೇಕು.

ವಿಶ್ವನಿಯಮದಲ್ಲಿ ಅಡಕವಾಗಿರುವ ನೈತಿಕ ತತ್ತ್ವಗಳು, ಈ ತತ್ತ್ವಗಳ ವರ್ತುಲದೊಳಗೇ ಸಂಭವಿಸುತ್ತಿರುವ ಪ್ರಪಂಚದ ಸಕಲ ಸೃಷ್ಟಿ ವಿದ್ಯಮಾನಗಳು ಮತ್ತು ಈ ನಿಯತಿಯ ಗರ್ಭದಿಂದಲೇ ಮೂಡಿಬಂದ ಮನುಷ್ಯ, ಪ್ರಕೃತಿದತ್ತವಾಗಿ ಆತನಿಗೆ ಬಂದಿರುವ ವಿಶೇಷ ಸ್ವಾತಂತ್ರ್ಯ, ಈ ದತ್ತ ಸ್ವಾತಂತ್ರ್ಯವನ್ನು ಪ್ರಾಕೃತಿಕ ನಿಯಮಗಳಿಗೆ ಹೊಂದಿಸಿಕೊಂಡೇ ನೈತಿಕವಾಗಿ ಬದುಕಬೇಕಾದ ಆತನ ಅನಿವಾರ್ಯತೆ; ಮಾತ್ರವಲ್ಲ, ಈ ನಿಯಮಗಳಿಗೆ ಭಂಗವುಂಟಾದಾಗ ಆಗುವ ಅನಾಹುತಗಳು, ಮತ್ತು ದುರಾದೃಷ್ಟವಶಾತ್, ಆಧುನಿಕ ವಿಜ್ಞಾನವು ತನ್ನೊಡಲೊಳಗೇ ಧರಿಸಿಕೊಂಡಿರುವ ವಿಶ್ವನಿಯಮಗಳನ್ನು ಛಿದ್ರೀಕರಿಸುವ

ಕ್ರಿಯಾಪ್ರವೃತಿಗಳು – ಇವನ್ನೆಲ್ಲಾ ಸಹಸ್ರಬುಧೆ, ಗಾಂಧೀಜಿಯ 'ರ್‍ಯಾಡಿಕಲ್' ಚಿಂತನೆಯ ಚೌಕಟ್ಟಿನೊಳಗೆ ನಮ್ಮ ಮುಂದೆ ಎಳೆಎಳೆಯಾಗಿ ಬಯಲುಗೊಳಿಸುತ್ತಾರೆ.

ಯಾವ ಸಂದರ್ಭದಲ್ಲೂ ಸಹಸ್ರಬುಧೆ ಗಾಂಧೀಜಿಯ ಬಗ್ಗೆ ಅತಿಭಾವುಕರಾಗುವುದಿಲ್ಲ ; ಭಾವಾವೇಶದಿಂದ ಅವರ ಚಿಂತನೆಯನ್ನು ವೈಭವೀಕರಿಸುವುದಿಲ್ಲ. ಗಾಂಧೀಜಿಯವರನ್ನು ರಂಜನೀಯವಾಗಿ ಚಿತ್ರಿಸುವ (Romanticising) ಹಲಬಗೆಯವರು ನಮ್ಮ ಸುತ್ತ ಸಿಗಬಹುದು. ಆದರೆ, ಸಹಸ್ರಬುಧೆಯಂತೆ ಗಾಂಧೀಜಿಯ ಸತ್ಯ ತತ್ವರತೆಯನ್ನು ಪ್ರಾಕೃತಿಕ ನಿಯತಿಯ ತಳಗಟ್ಟಿನ ಮೇಲೆ 'ಪ್ರಾಕ್ಟಿಕಲ್' ಆಗಿ ವರ್ತಮಾನದಲ್ಲಿ ಪ್ರಸ್ತುತಗೊಳಿಸುತ್ತಾ ಅದನ್ನು ಮೂರನೆಯ ಸಹಸ್ರಮಾನದ ಜೀವಪೋಷಕ ಆಶಾಕಿರಣವಾಗಿ ನಿರೂಪಿಸಿದವರು ಬಹಳ ವಿರಳವೆನ್ನಬಹುದು. ತಾನು ಪಡೆದ ಐ.ಐ.ಟಿ. ಡಿಗ್ರಿಗಳನ್ನೆಲ್ಲಾ ಒತ್ತಟ್ಟಿಗಿಟ್ಟು ಶ್ರಮಿಕರ, ಕರಕುಶಲಗಾರ, ಗ್ರಾಮೀಣ ಮಹಿಳೆಯರ, ಬುಡಕಟ್ಟು ಜನಾಂಗದ ಪರಂಪರಾಗತ ಅನುಭವಜನ್ಯ ಜ್ಞಾನಭಂಡಾರದಲ್ಲಿರುವ ಮುತ್ತು-ರತ್ನಗಳನ್ನು ಹೆಕ್ಕಿ ಪ್ರಸ್ತುತಗೊಳಿಸುವ ಕಾರ್ಯದಲ್ಲಿ ನಿರತರಾಗಿ ಸರಳವಾಗಿ ಬದುಕುತ್ತಿರುವ ಸಹಸ್ರಬುಧೆಯವರ ಪುಸ್ತಕವು ಈ ಕಾಲದ ಮಹತ್ವದ ಗ್ರಂಥ. ಓದುತ್ತಿದ್ದಂತೆ, ನನಗೆ ಈ ಪುಸ್ತಕವು ಕನ್ನಡದಲ್ಲಿ ನಮ್ಮ ಜನಕ್ಕೆ ದೊರೆಯಬೇಕೆಂಬ ಹಂಬಲ ಬಂತು. ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಈ ಬಗ್ಗೆ ಮನವಿ ಮಾಡಿಕೊಂಡೆ. ಕನ್ನಡ ಪುಸ್ತಕ ಪ್ರಾಧಿಕಾರವು ಒಪ್ಪಿ ಭಾಷಾಂತರಕ್ಕೆ ಈ ಪುಸ್ತಕವನ್ನು ಕೈಗೆತ್ತಿಕೊಂಡಿತು. ನಾನು ಈ ಬಗ್ಗೆ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಕೃತಜ್ಞನಾಗಿದ್ದೇನೆ.

ಗಾಂಧೀಜಿ 1920ರ ದಶಕದಲ್ಲೇ ನುಡಿದ ಈ ಮೂರು ಮಾತುಗಳು ಅವರ ಚಿಂತನ ಕ್ರಮದ ಸಾರವನ್ನು ಸೂತ್ರೀಕರಿಸುತ್ತವೆ :

"ಪಾಶ್ಚಾತ್ಯ ರಾಷ್ಟ್ರಗಳ ರೀತಿಯಲ್ಲಿ ಭಾರತವು ಒಟ್ಟಾರೆ ಉದ್ಯಮೀಕರಣದ ಮೋಹಕ್ಕೆ ಬಲಿಬೀಳದಂತೆ ಭಾರತವನ್ನು ದೇವರು ಸಂರಕ್ಷಿಸಲು. ಒಂದು ಚಿಕ್ಕ ದೇಶವಾದ ಇಂಗ್ಲೆಂಡಿನ ಆರ್ಥಿಕ ಸಾಮ್ರಾಜ್ಯಶಾಹೀ ಪ್ರವೃತ್ತಿ ಇಂದು (1920ರ ದಶಕ) ಇಡೀ ಜಗತ್ತನ್ನೇ ಒತ್ತೆಯಿಟ್ಟುಕೊಂಡಿದೆ. 300 ಮಿಲಿಯ ಜನರಿರುವ ಭಾರತವು ಇದೇ ರೀತಿ ಸಾಮ್ರಾಜ್ಯಶಾಹೀ ಆರ್ಥಿಕ ಶೋಷಣೆ ಆರಂಭಿಸಿದರೆ, ಅದು ಜಗತ್ತನ್ನು ಸಂಪೂರ್ಣ ನಗ್ನಗೊಳಿಸೀತು."

"ಬಯಕೆಗಳನ್ನು ಅವಶ್ಯಕತೆಗೆ ತಕ್ಕಷ್ಟೇ ಮಿತಿಗೊಳಿಸುವುದು ಕೈಗಾರಿಕಾಪೂರ್ವ ಸಮಾಜದ ಮೌಲ್ಯವಾಗಿತ್ತು. ಆದರೆ ಇದಕ್ಕೆ ವಿರುದ್ಧವಾಗಿ ಬಯಕೆಗಳನ್ನು ಒಟ್ಟಾರೆಯಾಗಿ ಪ್ರಚೋದಿಸಿ ಬೆಳೆಸುವುದೇ ಆಧುನಿಕ ನಾಗರಿಕತೆಯ ಪ್ರಮುಖ ಲಕ್ಷಣವಾಗಿದೆ."

"ಮನುಷ್ಯ ತನ್ನ ಆಕ್ರಮಣಕಾರೀ ದುರಾಸೆಗಳನ್ನು ಸಿದ್ಧಿಸಿಕೊಳ್ಳಲು, ತನ್ನ ಪಾಶವೀ ಹಸವಿನ್ನು ತಣಿಸಿಕೊಳ್ಳಲು ಕಾಲದೇಶಗಳನ್ನೇ ನಾಶಗೊಳಿಸಿ, ಈ ಭೂಮಿಯ ಅಂಚಿನವರೆಗೂ ಅಪಾಯಕಾರಿಯಾಗಿ ಮುನ್ನುಗ್ಗುವುದನ್ನು ನಾವಿಂದು ಕಾಣುತ್ತಿದ್ದೇವೆ. ನಾನು ಅರ್ಥೈಸಿಕೊಂಡಂತೆ ಇದೇ ಇಂದಿನ ನಾಗರಿಕತೆಯ ಉದ್ದೇಶವಾಗಿದ್ದರೆ, ನಾನು

ಈ ನಾಗರಿಕತೆಯನ್ನು ಪೈಶಾಚಿಕ ನಾಗರಿಕತೆ ಎಂದು ಕರೆಯುತ್ತೇನೆ" ಎಂದು ಹತಾಶೆಯಿಂದ ನುಡಿದಿದ್ದರು. ಈ ಪೈಶಾಚಿಕ ನಾಗರಿಕತೆಗೆ ಬಹುತೇಕ ಕಾರಣವಾದ ಆಧುನಿಕ ವಿಜ್ಞಾನವನ್ನು ಸಹಸ್ರಬುಧೆ 'ಆಸುರೀ ವಿಜ್ಞಾನ" ಎಂದು ಕರೆಯುತ್ತಾರೆ.

ಗಾಂಧೀಜಿಗೆ ತಂತ್ರಜ್ಞಾನ ಪ್ರೇರಿತ ಮನುಷ್ಯನ ಮನೋಭಾವದಲ್ಲೇ ಬಲವಾಗಿ ಬೇರೂರಿದ ಕೊಳ್ಳುಬಾಕ ಸಂಸ್ಕೃತಿಯ ಪ್ರಳಯಾಂತಕ ಮುಖದ ಅರಿವಿತ್ತು. ಇಂದಿನ ದುರಾಸೆಯ ಸಂಸ್ಕೃತಿಯನ್ನು ಹುಟ್ಟು ಹಾಕುವಲ್ಲಿ ಪ್ರಧಾನ ಪಾತ್ರವಹಿಸಿದ ಆಧುನಿಕ ವಿಜ್ಞಾನದ ಬಗ್ಗೆ ತನಗಿದ್ದ ಅನುಮಾನಗಳಿಗೆ ಅವರಿಗೆ ವೈಜ್ಞಾನಿಕ ಪುರಾವೆ ಅಥವಾ ತರ್ಕದ ಬಲದ ಬೆಂಬಲ ಬೇಕಿರಲಿಲ್ಲ. ಅವರ ಮೇಲೆ ಅತ್ಯಂತ ಪ್ರಭಾವ ಬೀರಿದ "ತೇನ ತ್ಯಕ್ತೇನ ಭುಂಜೀಥಾಃ" (ಈ ಭೂಮಿ ಯಾರಿಗೂ ಸೇರಿದ್ದಲ್ಲ ನಿನ್ನ ಅಗತ್ಯಕ್ಕೆ ತಕ್ಕಷ್ಟೇ ಈ ಭೂಮಿಯ ಸಂಪತ್ತನ್ನು ಬಳಸಿಕೊಂಡು ತ್ಯಾಗದಿಂದ ಬದುಕು) ಎಂಬ ಯಾಜ್ಞವಲ್ಕ್ಯರ ನುಡಿಯ ಹಿನ್ನೆಲೆಯಲ್ಲಿ ಸಾಮಾನ್ಯ ಜೀವನಾನುಭವದಿಂದ ಕಂಡುಕೊಂಡ ಒಳನೋಟ ಅದು.

ಕಲ್ಪಿತ ಪ್ರಗತಿಯ ನೆಪದಲ್ಲಿ ನಾವು ನಮ್ಮ ಸುತ್ತಲೂ ಇಂದು ಸೃಷ್ಟಿಸುತ್ತಿರುವ ನರಕಕ್ಕೆ ಅದರದೇ ಆದ ಮೋಡಿಮಾಡುವ ಅಭಿವೃದ್ಧಿ ತರ್ಕಗಳಿವೆ, ಸಿದ್ಧಾಂತಗಳಿವೆ. ಈ ತರ್ಕ ಜಗತ್ತಿನಲ್ಲಿ ಎರಡು ಪರಸ್ಪರ ವಿರೋಧಿ ಬಣಗಳನ್ನೇ ಸೃಷ್ಟಿಸಿದೆ. ಬೃಹತ್ ಉದ್ದಿಮೆದಾರರು, ರಾಜಕಾರಣಿಗಳು ಒಂದೆಡೆ – ರೈತಾಪಿ ವರ್ಗ, ಸಣ್ಣ ಕೈಗಾರಿಕೆ ಮತ್ತು ಗ್ರಾಮೀಣ ಕಸುಬು ಉಪಕಸುಬುಗಳ ವರ್ಗ ಇನ್ನೊಂದೆಡೆ; ಕೈಗಾರಿಕಾ ಸಮಾಜ, ಅಕ್ಷರಸ್ಥ ಪೇಟೆಯ ಜನ ಒಂದೆಡೆ – ವಿಶಾಲ ಗ್ರಾಮೀಣ ಸಮಾಜ, ಅನಕ್ಷರಸ್ಥ ಹಳ್ಳಿಗರು ಇನ್ನೊಂದೆಡೆ; ಇಂಟರ್‌ನೆಟ್ ಗ್ರಾಹಕರು ಒಂದೆಡೆ–ಇನ್ನೂ ಅರೆಬತ್ತಲೆಯಾಗಿ ಬದುಕುವ ಅನಿವಾರ್ಯತೆಯಿರುವ ಗುಡ್ಡಗಾಡು ಜನಾಂಗ ಇನ್ನೊಂದೆಡೆ–ಈ ರೀತಿ ಜಗತ್ತಿನ ಇತಿಹಾಸ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಸಮಸ್ತ ಜನಾಂಗವೇ ಇಬ್ಭಾಗವಾಗುತ್ತಿದೆ; ಈ ಎರಡು ವರ್ಗಗಳ ನಡುವೆ ಆಳವಾದ ಸ್ಪಷ್ಟ ಬಿರುಕು ಕಾಣುತ್ತಿದೆ. ಈ ಬಿರುಕಿಗೆ ಮೂಲಕಾರಣ ಯಂತ್ರ (Machine) ಎಂದು ಗಾಂಧೀಜಿಯವರ ಬಲವಾದ ನಂಬಿಕೆ. ಸಹಸ್ರಬುಧೆ, ಸಹಸ್ರ ದೃಷ್ಟಾಂತಗಳಿಂದ ಇದನ್ನು ಸಮರ್ಥಿಸುತ್ತಾರೆ.

ಗಾಂಧೀಜಿ, ಆಧುನಿಕ ವಿಜ್ಞಾನ ಬೆಳೆಸಿದ ಚಿಂತನ ಕ್ರಮಕ್ಕೆ ಪರ್ಯಾಯವಾಗಿ ತನ್ನ ಚಿಂತನೆಯನ್ನಿಡುವುದಿಲ್ಲ. ಸ್ವವಿಮರ್ಶೆಯ ಪರಿಕಲ್ಪನೆಯೇ ಇಲ್ಲದ, ವಿಶ್ವನಿಯತಿಯ ಬಗ್ಗೆ ತಟಸ್ಥ ಧೋರಣೆ ತಳೆಯುವ, ಮಾತ್ರವಲ್ಲದೆ ಆ ನಿಯತಿಯನ್ನು ಸತತ ಭಂಗಪಡಿಸುವುದರ ಸಮರ್ಥನೆಗೇ ತನ್ನ ತರ್ಕವನ್ನು ಬೆಳೆಸಿಕೊಂಡ ಆಧುನಿಕ ವಿಜ್ಞಾನಕ್ರಮವನ್ನೇ ಸಾರಸಗಟಾಗಿ ತಿರಸ್ಕರಿಸುವ ಮೂಲಕ ವಿಜ್ಞಾನಕ್ಕೆ ಮೂಲಭೂತ ಸವಾಲನ್ನೆಸೆಯುತ್ತಾರೆ; ಮತ್ತು ವಿಶ್ವಋತಕ್ಕೆ ಸಮ್ಮುಖವಾದ ಚಿಂತನಾಕ್ರಮವನ್ನು ತನ್ನ ಬದುಕಿನ ಮೂಲಕವೇ ಹೆಣೆಯುತ್ತಾರೆ.

ಇಷ್ಟೆಂದಾಗಲೂ, ಗಾಂಧೀಜಿಯನ್ನು ಯಂತ್ರ ವಿರೋಧಿಯೆಂದು ಪರಿಗಣಿಸುವುದು ಸಮಂಜಸವಲ್ಲ. ಗಾಂಧೀಜಿಯೇ ಒಮ್ಮೆ, "ನಾನು ಹೇಗೆ ಯಂತ್ರ ವಿರೋಧಿಯಾಗಲಿ? ಈ ಮಾನವ ದೇಹವೇ ಒಂದು ಯಂತ್ರವಲ್ಲವೇ ?" ಎಂದಿದ್ದರು. ಚರಕ, ರಾಟೆ, ಹೊಲಿಗೆಯಂತ್ರ, ಕುಂಬಾರನ ಚಕ್ರಕ್ಕೆ ಅಳವಡಿಸಿದ ಯಂತ್ರವೇ ಮೊದಲಾದ ಮನುಷ್ಯನ ಕೈಗಳನ್ನು ಬಲಪಡಿಸಿ ಅವನ ಸಾಮರ್ಥ್ಯ ವೃದ್ಧಿಪಡಿಸುವ, ಅವನ ಕಸುಬನ್ನು ಬುಡಮೇಲು ಮಾಡದೆ ಆತನ ಏಕತಾನತೆಯ ದೈಹಿಕ ಶ್ರಮವನ್ನು ಒಂದಿಷ್ಟು ಕಡಿಮೆಗೊಳಿಸುವ ಯಂತ್ರಗಳನ್ನು ಅವರು ಸ್ವಾಗತಿಸುತ್ತಾರೆ. ಈ ಪರಂಪರಾಗತ ಯಂತ್ರಗಳು ವಿಶ್ವನಿಯತಿಗೊಳಪಟ್ಟೇ ಮನುಷ್ಯನ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಸಹಕಾರಿಯಾಗಿ ಕೆಲಸ ಮಾಡುತ್ತವೆ. ಆದರೆ ಮನುಷ್ಯನನ್ನೇ ಪದಚ್ಯುತಿಗೊಳಿಸಿ ತಾನು ಆ ಸ್ಥಾನವನ್ನು ಆಕ್ರಮಿಸುವ ಯಂತ್ರಗಳನ್ನು ಅಥವಾ ಮನುಷ್ಯನ ಬದುಕಿನ ವೇಗ, ರಭಸಗಳನ್ನು ಅತಿಯಾಗಿ ಹೆಚ್ಚಿಸಿ ಪ್ರಕೃತಿನಿಯಮಗಳನ್ನೇ ತುಂಡರಿಸುವ ಯಂತ್ರಗಳನ್ನು ವಿರೋಧಿಸುತ್ತಾರೆ. ಆದುನಿಕ ವಿಜ್ಞಾನದ ಅನ್ವೇಷಣಕ್ರಮ ಮತ್ತು ಪ್ರಾಚೀನ ಸಮಾಜಗಳ ಶೋಧನೆಯ ಕ್ರಮಗಳ ನಡುವೆ ಭಿನ್ನತೆ ಇರುವುದು ಇಲ್ಲಿಯೇ. ಪರಂಪರಾಗತ ಸಮಾಜಗಳ ವಿಜ್ಞಾನದ ಅನ್ವೇಷಣೆಯಲ್ಲಿ ವಿಶ್ವದ ಋತ ವ್ಯವಸ್ಥೆಯನ್ನು ಛಿದ್ರೀಕರಿಸುವ ಯಂತ್ರಶೋಧನೆಗಳ ಬಗ್ಗೆ ಅಥವಾ ಅಂಥ ಯಂತ್ರಗಳ ಬಳಕೆಯ ಬಗ್ಗೆ ಅನೇಕ ಆಧ್ಯಾತ್ಮಿಕ ಕಟ್ಟುಪಾಡುಗಳಿದ್ದವು. ಭಸ್ಮಾಸುರನಂತೆ ತಾನು ಕಂಡುಕೊಂಡ ಶಕ್ತಿಯ (ವೈಜ್ಞಾನಿಕ ಆವಿಷ್ಕಾರಗಳು ಕೊಡುವ ಶಕ್ತಿ) ಸ್ವಚ್ಛಂದ ಬಳಕೆಯ ಮೇಲೆ ನಿಯಂತ್ರಣವಿತ್ತು. ಈ ಅನ್ವೇಷಣೆಗಳು ನೀಡಬಲ್ಲ ಶಕ್ತಿಯ ದುರ್ಬಳಕೆಯಿಂದ ಸಂಭವಿಸಬಹುದಾದ ಅನಾಹುತಗಳ ವಿರುದ್ಧ ವಿವೇಕಯುತ ಎಚ್ಚರವಿತ್ತು. ಇವೆಲ್ಲವೂ ನೀತಿನಿಷ್ಠವಾಗಿದ್ದವು.

ಉದಾಹರಣೆಗೆ, ರಸ ವಿಜ್ಞಾನದಿಂದ ಚಿನ್ನವನ್ನು ತಯಾರಿಸುವ ಕಲೆ ಅಥವಾ ಮಂತ್ರ, ತಂತ್ರಾಚಾರ ಮುಂತಾದ ದಕ್ಷಿಣ ಮಾರ್ಗದ ತಾಂತ್ರಿಕ ಅನುಸರಣೆಯಿಂದ ಸಿದ್ಧಿಸುವ ಅದ್ಭುತ ಸೃಷ್ಟಿ ಶಕ್ತಿಗಳಿಗೆ, ಆಯಾಯಾ ಪದ್ಧತಿಯೊಳಗಿಂದಲೇ ಅವು ಅನೈತಿಕವೆಂಬ ಹಣೆಪಟ್ಟಿಯಿತ್ತು, ನಿಷೇಧವಿತ್ತು. ಅವು ಮಾನವನ ಶ್ರೇಯಸ್ಸಿನ ಮಾರ್ಗಗಳಲ್ಲ ಎಂಬ ಪರಿಕಲ್ಪನೆಯಿತ್ತು. ಲೋಕಕ್ಕೆ ಕೇಡಾಗಬಹುದಾದ ಈ ಮಾರ್ಗವನ್ನು ವಾಮಾಚಾರ ಮಾರ್ಗ ಎಂದು ಕರೆದರು. ಇದರಿಂದ ಸಂಚಿತವಾದ ಶಕ್ತಿಯನ್ನು ಆಸುರೀ ಶಕ್ತಿ ಎಂದು ಕರೆದರು ಮತ್ತು ಇಂಥ ಶಕ್ತಿಗಳನ್ನು ಗಳಿಸಿ ಅವನ್ನು ನೈತಿಕ ಸಂಯಮವಿಲ್ಲದೆ ಬಳಸುವವರನ್ನು ರಾಕ್ಷಸರೆಂದು ಕರೆದರು ಅಥವಾ 'ಯೋಗ ಭ್ರಷ್ಟ'ರೆಂದು ಸಂಬೋಧಿಸಿದರು.

ಉದಾಹರಣೆಗೆ, ಪಶ್ಚಿಮಕ್ಕೆ ಗೊತ್ತಾಗುವ ಎಷ್ಟೋ ಶತಮಾನಗಳ ಮೊದಲೇ ಚೀನಾಕ್ಕೆ 'ಗನ್ ಪೌಡರ್'ನ ಉಪಯೋಗದ ಬಗ್ಗೆ ತಿಳಿದಿತ್ತು. ಆದರೆ ಚೀನಾ ಅದನ್ನು ಕೆಲವು ಮದ್ದುಗಳ ತಯಾರಿಕೆಗೆ ಮಾತ್ರ ಉಪಯೋಗಿಸುತ್ತಿತ್ತು. ಪಾಶ್ಚಾತ್ಯರ ಕೈಗೆ ಗನ್ ಪೌಡರ್ ಸಿಕ್ಕಿದ ಕೂಡಲೇ, ಅವರು ಅದನ್ನು ಯುದ್ಧದ ಮದ್ದುಗುಂಡು ತಯಾರಿಕೆಗೆ ಬಳಸಲು ಪ್ರಾರಂಭಿಸಿದರು. ಪೌರ್ವಾತ್ಯ–ಪಾಶ್ಚಾತ್ಯರ ನಡುವಿನ ಈ ಭಿನ್ನಪ್ರವೃತ್ತಿಗೆ ಕನ್ನಡಿ

ಹಿಡಿದಂತೆ 11ನೆಯ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ವಿದೇಶೀ ಪ್ರವಾಸಿಗ (ಅಲ್ಬರೂನಿ ಇರಬೇಕು?). 'ಜಗತ್ತಿನಲ್ಲಿ ವಿಜ್ಞಾನ ಮತ್ತು ಖಗೋಳ ವಿಜ್ಞಾನಗಳಲ್ಲಿ ಮುಂದುವರಿದ ಎಂಟು ರಾಷ್ಟ್ರಗಳಲ್ಲಿ ಭಾರತವು ಮುಂಚೂಣಿಯಲ್ಲಿದೆ. ಕಾರಣ, ಭಾರತವು ವಿಜ್ಞಾನವನ್ನು ತಿಳುವಳಿಕೆಯ ನೈತಿಕ ಸಂಯಮದ ಜೊತೆ ಬೆಳೆಸಿದೆ (Developed science with wisdom) ಎಂದು ಅಂದಿನ ನೀತನಿಷ್ಠ ಪ್ರಗತಿ ಮೌಲ್ಯಗಳನ್ನು ಉಲೇಖಿಸುತ್ತಾನೆ.

12–13 ಶತಮಾನಗಳವರೆಗೆ ಪಾಶ್ಚಾತ್ಯರಲ್ಲೂ ವಿಜ್ಞಾನದಲ್ಲಿ ಮನುಷ್ಯ–ಆತ್ಮ–ವಿಶ್ವನಿಯತಿ (Man-Spirit-Cosmos) ಗಳ ತ್ರಿಪುಟಿಯ ಪರಿಕಲ್ಪನೆಯಿತ್ತು. 14ನೆಯ ಶತಮಾನದಲ್ಲಿ, ಪಾಶ್ಚಾತ್ಯ ಜಗತ್ತಿನಲ್ಲಿ ವಿಜ್ಞಾನವು ತತ್ತ್ವಶಾಸ್ತ್ರದ ಉಪಶಾಖೆಯಾಗಿತ್ತು. ಭೌತವಿಜ್ಞಾನವನ್ನು, ಪ್ರಾಕೃತಿಕ ತತ್ತ್ವಶಾಸ್ತ್ರವೆಂದು 15ನೆಯ ಶತಮಾನದ ಮಧ್ಯಭಾಗದವರೆಗೂ ಪರಿಗಣಿಸಲಾಗುತ್ತಿತ್ತು. ಗಣಿತ ಶಾಸ್ತ್ರವನ್ನು ಪ್ರಾಕೃತಿಕ ತತ್ತ್ವಶಾಸ್ತ್ರದಲ್ಲಿರುವ ಗಣಿತ ತತ್ತ್ವಗಳು ಎಂದು ಸಂಬೋಧಿಸಲಾಗುತ್ತಿತ್ತು. ಆದರೆ 15ನೆಯ ಶತಮಾನದ ಮಧ್ಯದಲ್ಲಿ ವಿಜ್ಞಾನದಲ್ಲಿ ಮೂಡಿಬಂದ ಕ್ರಾಂತಿಕಾರೀ ಪರಿಕಲ್ಪನೆಗಳ ಫಲವಾಗಿ 19ನೆಯ ಶತಮಾನದ ಹೊತ್ತಿಗೆ ವಿಜ್ಞಾನವು ತನ್ನ 'ಮೆಥೆಡ್'ನಲ್ಲೇ ತತ್ತ್ವಶಾಸ್ತ್ರದಿಂದ ನಿರ್ಣಾಯಕವಾಗಿ ಬೇರ್ಪಟ್ಟಿತು. ಅದುವರೆಗಿದ್ದ 'ಪ್ರಕೃತಿಯಲ್ಲಿ ಮನುಷ್ಯ' ಎಂಬ ಅಖಂಡ ಪರಿಕಲ್ಪನೆ ಮಾಯವಾಗಿ 'ಪ್ರಕೃತಿ ಮತ್ತು ಮನುಷ್ಯ' ಎಂಬ ಬಿಡಿಬಿಡಿ ಖಂಡ ಪರಿಕಲ್ಪನೆ ಗಟ್ಟಿಗೊಂಡಿತು. ವಿಜ್ಞಾನ ಸಂಪೂರ್ಣ ನೀತಿ ಮುಕ್ತವಾಗಿ, ಅಗ್ರಪಟ್ಟವೇರಿ, ಸ್ವಚ್ಛಂದವಾಗಿ ವಿಹರಿಸಲು ಆರಂಭಿಸಿತು. ನಿಯಂತ್ರಣಾತೀತ ಸ್ವಚ್ಛಂದತೆಯೇ ಸ್ವಾತಂತ್ರ್ಯ ಎಂದು ನಂಬಿಸಲಾಯಿತು. ಇಂಥ ನೀತಿ ಮುಕ್ತ ಸ್ವಾತಂತ್ರ್ಯವನ್ನು ನಿರಾಕರಿಸುವ ಗಾಂಧೀಜಿ, ಇದಕ್ಕೆ ಎದುರಾಗಿ ತಾನು ಅಂತರ್ ದನಿಯಿಂದ ಕಂಡುಕೊಂಡ 'ಸತ್ಯ'ವನ್ನು ಮುಂದಿಟ್ಟರು.

ತಾನು ಹುಟ್ಟು ಹಾಕಿದ ತರ್ಕದ ಮಾನದಂಡದಲ್ಲೇ ತನ್ನನ್ನು ತಾನು ನೀತಿ ಮುಕ್ತಗೊಳಿಸಿಕೊಂಡು ಸಂಯಮವಿಲ್ಲದ ಸಂಪೂರ್ಣ ಸ್ವಚ್ಛಂದತೆಯಲ್ಲಿ ಸಾಗಲು ತೊಡಗಿದ ಇಂದಿನ ಈ ಆಧುನಿಕ ವಿಜ್ಞಾನ ಪ್ರಣೀತ ನಾಗರೀಕತೆಯನ್ನೇ ಗಾಂಧೀಜಿ ಪಾಶವೀ ನಾಗರಿಕತೆಯೆಂದು ಕರೆದಿರುವರು. ಏಕೆಂದರೆ ಆಧುನಿಕ ವಿಜ್ಞಾನವು ಕಾಲದೇಶಗಳ ಪರಿಮಿತಿಯಲ್ಲಿ ಒಂದು ಸಂಗತಿ (Phenomenon) ಯ ರೂಪವನ್ನು (Form) ಗ್ರಹಿಸುವುದಕ್ಕೆ ಹೆಚ್ಚು ಮಹತ್ತ್ವ ಕೊಡುತ್ತದೆಯೇ ಹೊರತು. ಅದರ ಅಂತರ್ ಸಂಬಂಧಿ ಅಖಂಡ ಸ್ವರೂಪ (Contest) ದರ್ಶನದ ಬಗ್ಗೆ ಗಮನ ಹರಿಸುವುದಿಲ್ಲ. ಅರ್ಥಾತ್, ಒಂದು ಸಂಗತಿಯನ್ನು ಕಾಲ ದೇಶದಲ್ಲಿ ಪ್ರತ್ಯೇಕವಾಗಿ ಕೂಡಿಸಿಟ್ಟು ಅದರ ರೂಪ ಗ್ರಹಣದಲ್ಲೇ ಮಗ್ನವಾಗಿ ಕಾಲದೇಶಗಳನ್ನು ಮೀರಿದ ವಿಶ್ವಜಾಲದ ಜೊತೆಗಿನ ಅಂತರ್ ಸಂಬಂಧ ಸಹಿತ ಆ ಸಂಗತಿಯ ಸತ್ತ್ವ (Core) ವನ್ನು ಗ್ರಹಿಸಲಾರದೇ ಹೋಗುತ್ತದೆ. ಈ ರೀತಿಯ ಬಿಡಿಬಿಡಿಯಾದ ಖಂಡ ಗ್ರಹಿಕೆಯ ಯಾಂತ್ರಿಕ ದೃಷ್ಟಿಕೋನವೇ ಆಧುನಿಕ ವಿಜ್ಞಾನದ ಪ್ರಧಾನ ಸಮಸ್ಯೆಯಾಗಿದೆ. ನಾವು ಇಂದು ನಮ್ಮ ಮುಂದೆ ಕಾಣುತ್ತಿರುವ ಎಲ್ಲ ಬಿಕ್ಕಟ್ಟುಗಳೂ ಈ ವಿಜ್ಞಾನದಲ್ಲಿ ಉದ್ಭವಿಸಿದ ಬೃಹತ್ ಬಿಕ್ಕಟ್ಟಿನ ವಿಭಿನ್ನ ಮುಖಗಳಷ್ಟೇ. ಈ ಬೃಹತ್ ಬಿಕ್ಕಟ್ಟು, ಮೂಲತಃ ನಮ್ಮ ಗ್ರಹಿಕೆಯ ಸಮಸ್ಯೆಯೇ ಆಗಿದೆ.

ವಿಜ್ಞಾನದ ಈ ಮುಖದ ಬಗ್ಗೆ ಅಂದೇ ಎ. ಎನ್. ವೈಟ್ ಹೆಡ್, ಜೆ. ಡಿ. ಹಾಲ್ಡೇನ್, ಬರ್ನಾಲ್ ಮುಂತಾದವರು ತೀವ್ರ ಹತಾಶೆ, ಪ್ರತಿರೋಧ ವ್ಯಕ್ತಪಡಿಸಿದ್ದರು. ಮುಂದೆ ಕಾಪ್ರಾ, ಥಾಮಸ್ ಕುನ್, ಫೇಯರ್ ಬೆಂಡ್, ಡೇವಿಡ್ ಬಾಮ್ ಮೊದಲಾದ ವಿಜ್ಞಾನಿಗಳೂ ವಿಜ್ಞಾನದ ಈ ಸೀಮಿತ ಖಂಡ ಗ್ರಹಿಕೆ ಮತ್ತು ಮೆಥೆಡ್‌ನ್ನು ಟೀಕೆ ಮಾಡಿದ್ದಾರೆ. ಸಹಸ್ರಬುಧೆ ವಿಜ್ಞಾನದ ಮಾನವೀಕರಣದ ಬಗ್ಗೆ ಉಲ್ಲೇಖಿಸುತ್ತಾ, ಗಾಂಧೀಜಿ ಒತ್ತುಕೊಡುವ ಮಾನವ ಆಯಾಮದ ಯಂತ್ರದ ಬಗ್ಗೆ ಪ್ರಸ್ತಾಪಿಸುತ್ತಾರೆ. ಯಂತ್ರಕ್ಕೆ ಮಾನವೀಯ ಆಯಾಮದ ಅನಿವಾರ್ಯತೆಯ ಬಗ್ಗೆ ತುಸು ನೋಡೋಣ.

ಪ್ರಕೃತಿ ತನ್ನ ಎಲ್ಲ ಕಾರ್ಯಚಟುವಟಿಕೆಗಳಲ್ಲೂ ಅಲ್ಪ ಪ್ರಮಾಣದಲ್ಲಿ ಶಕ್ತಿಯನ್ನು ಸಾವಧಾನವಾಗಿ ಬಿಡುಗಡೆಗೊಳಿಸುತ್ತಿರುತ್ತದೆ. ಎಲ್ಲ ಪ್ರಾಕೃತಿಕ ವಿಕಾಸ, ಬೆಳವಣಿಗೆ, ಪರಿವರ್ತನೆಗಳಲ್ಲೂ ಅಲ್ಪ ಪರಿಮಾಣದ ಶಕ್ತಿಯ ಬಿಡುಗಡೆಯಾಗುತ್ತಿರುತ್ತದೆ. ಒಮ್ಮೆಲೇ ಭಾರೀ ಪ್ರಮಾಣದ ಶಕ್ತಿ ಬಿಡುಗಡೆಗೊಂಡಾಗಲೆಲ್ಲಾ ಅದು ಭಾರೀ ಅಪತ್ತಿಗೆ ಕಾರಣವಾಗುತ್ತದೆ. ಉದಾಹರಣೆಗೆ : ಸಿಡಿಲು, ಜ್ವಾಲಾಮುಖಿ, ಭೂಕಂಪಗಳಲ್ಲಿ ಒಮ್ಮೆಲೇ ಅಪಾರಶಕ್ತಿ ಬಿಡುಗಡೆಗೊಂಡು ಅನಾಹುತಕ್ಕೆ ಕಾರಣವಾಗುತ್ತವೆ. ಒಮ್ಮೆಲೇ ಆಗಾಧ ಪ್ರಮಾಣದ ಶಕ್ತಿಯ ಬಿಡುಗಡೆ, ಕೆಲವು ವಿಶೇಷ ಸನ್ನಿವೇಶಗಳಲ್ಲಿ ಮಾತ್ರ ಪ್ರಕೃತಿಯ ನಿಯಮದೊಳಗೇ ನಿಸರ್ಗದ ಸಮಗ್ರ ರಕ್ಷಣೆಗಾಗಿ ಆಗುತ್ತಿರುತ್ತದೆ. ಇಂಥ ವಿದ್ಯಮಾನಗಳು ಬಹಳ ಅಪರೂಪ. ಇಂದು ಈ ಆಧುನಿಕ ವಿಜ್ಞಾನವು ಅತ್ಯಲ್ಪಕಾಲದಲ್ಲಿ ಅಗಾಧ ಪ್ರಮಾಣದ ಶಕ್ತಿಯನ್ನು ಬಯಸುವ ದಿನ ಬಳಕೆಯ ಯಂತ್ರಗಳನ್ನು ಸೃಷ್ಟಿಸಿದೆ. ರಭಸದಿಂದ ಶಕ್ತಿಯನ್ನು ಬಿಡುಗಡೆಗೊಳಿಸಿ, ರಾಕ್ಷಸ ದಕ್ಷತೆಯಿಂದ ಕೆಲಸ ಮಾಡುವ ಮತ್ತು ಮಾನವನಿಂದ ಮುಕ್ತಿ ಪಡೆದ ಸ್ವಯಂಚಾಲಿತ ವಾಹನಗಳು, ಮಿಕ್ಸಿ, ರೆಫ್ರಿಜರೇಟರ್, ಗ್ರೈಂಡರ್ ಮೊದಲಾದ ಉಪಕರಣಗಳು ಇದಕ್ಕೆ ಉದಾಹರಣೆಗಳು. ಈ ಉಪಕರಣಗಳು ಪ್ರಕೃತಿಯ ನಿಯಮವನ್ನು ಉಲ್ಲಂಘಿಸುವ ಮೂಲಕ, ದೀರ್ಘಾವಧಿಯಲ್ಲಿ ಮನುಷ್ಯ ಮತ್ತು ಒಟ್ಟು ವಿಶ್ವಸೃಷ್ಟಿಯ ಮೇಲೆ ತರಬಹುದಾದ ಅನಾಹುತಕಾರೀ ಪರಿಣಾಮಗಳನ್ನು ನಾವು ಸೂಕ್ಷ್ಮವಾಗಿ ಗಮನಿಸಬಹುದು. 'ಮನುಷ್ಯ ಕಾರು ಕಂಡು ಹಿಡಿದ, ತನ್ನ ಕಾಲಿನ ನಡೆಯುವ ಶಕ್ತಿ ಕಳಕೊಂಡ' ಎಂಬ ಅಮೇರಿಕನ್ ಚಿಂತಕ, ಲೇಖಕ ಆರ್. ಡಬ್ಲ್ಯೂ. ಎಮರ್ಸನ್‌ನ ಮಾತಿನಲ್ಲಿ ಸತ್ಯಾಂಶವಿದೆ. ಐಶಾರಾಮ ಬದುಕಿಗೆ ಬೇಕಾದ ನೀತಿ ಮುಕ್ತ ಯಂತ್ರಗಳನ್ನು ವಿವೇಚನೆಯೇ ಇಲ್ಲದೆ ಬಳಸಿಕೊಳ್ಳುವುದರ ಪರಿಣಾಮವಾಗಿ, ಮನುಷ್ಯ ಇಂದು ನಾನಾ ರೀತಿಯ ದೈಹಿಕ-ಮಾನಸಿಕ ಬವಣೆಗಳಿಗೆ, ರೋಗಗಳಿಗೆ ತುತ್ತಾಗುವುದನ್ನು ನಾವು ನೋಡುತ್ತಿದ್ದೇವೆ. ಯಂತ್ರದ ಬಳಕೆಯಿಂದ ಲಭ್ಯವಾದ ಬಿಡುವಿನ ವೇಳೆಯೇ ಇಂದು ಮನುಷ್ಯನನ್ನು ಹಿಡಿದು ನುಂಗುತ್ತಿರುವುದನ್ನು ನಾವಿಂದು ಗಮನಿಸುತ್ತಿದ್ದೇವೆ. ಏರುತ್ತಿರುವ ಹಿಂಸೆ, ಯುದ್ಧ, ಪಾತಕಗಳೂ ನಮ್ಮ ಆಧುನಿಕ ವಿಜ್ಞಾನ ಸಾಗುತ್ತಿರುವ ಕ್ರೌರ್ಯದ ಮುಖವೇ ಆಗಿದೆ. ಜಗತ್ತಿನಲ್ಲಿ ನಡೆಯುವ ಸಮಗ್ರ ವಿದ್ಯಮಾನಗಳನ್ನು, ಅವುಗಳ ಅಂತರ್ ಪ್ರಕ್ರಿಯೆಗಳ ಜೊತೆಗಿಟ್ಟು ಅಖಂಡವಾಗಿ ಗ್ರಹಿಸಿದಾಗ, ನಾವು ಪ್ರತಿಯೊಂದನ್ನು ಪಡೆಯುವಾಗಲೂ ಏನನ್ನೋ

ಕಳೆದುಕೊಳ್ಳುತ್ತಿರುತ್ತೇವೆ ಎಂಬುದನ್ನು ಕಂಡುಕೊಳ್ಳದಿರೆವು. ಆದರೆ ಪಡೆಯುವುದು, ಕಳೆದುಕೊಳ್ಳುವುದಕ್ಕಿಂತ ಅಧಿಕವಾಗಿರುವವರೆಗೆ ಪ್ರಕೃತಿಯಲ್ಲಿ ಸಮತೋಲನವಿರುತ್ತದೆ. ಆದರೆ ಇಂದಿನ ಆಧುನಿಕ ವಿಜ್ಞಾನದ ಬೆಳವಣಿಗೆಯ ರೀತಿಯಲ್ಲೇ ನಾವು ಪಡೆಯುವುದಕ್ಕಿಂತ ಕಳೆದುಕೊಳ್ಳುವುದು ಹೆಚ್ಚಾಗಿ ಮನುಷ್ಯನ ಒಟ್ಟು ಪ್ರಾಪಂಚಿಕ ಬದುಕೇ 'ಅನ್ ಸಸ್ಟೇನೆಬಲ್' ಆಗಿ ಪರಿವರ್ತನೆಯಾಗುತ್ತಿದೆ. ಇಂಥ ವಿದ್ಯೆಯನ್ನೇ ನಮ್ಮ ಪ್ರಾಚೀನರು ಅವಿದ್ಯೆ ಎಂದು ಕರೆದರು. ಸಹಸ್ರಬುಧೆ, ಅಸುರಿ ವಿದ್ಯೆ ಎಂದು ಕರೆಯುತ್ತಾರೆ. ಗಾಂಧೀಜಿ ಪಾಶವೀ ವಿದ್ಯೆ ಎಂದು ಸಂಬೋಧಿಸುತ್ತಾರೆ. ಈ ವಿದ್ಯೆ ನಮ್ಮನ್ನು ಕತ್ತಲೆಗೆ ಒಯ್ಯುತ್ತದೆ ಎಂದು ಈ ಎಲ್ಲರೂ ಎಚ್ಚರಿಸುತ್ತಾರೆ. ಇದನ್ನೆಲ್ಲಾ ಸರಿಯಾಗಿ ಗ್ರಹಿಸುವುದೇ ಪರಿಸರ ವಿಜ್ಞಾನಿಯ ಅಖಂಡ ದೃಷ್ಟಿಯಾಗಿದೆ. ಇದೇ ಅಧ್ಯಾತ್ಮ ದೃಷ್ಟಿಕೋನ ಕೂಡ.

ಇಲ್ಲಿ ನಾನು ನಮ್ಮ ಜನಾಂಗದ ಇನ್ನೊಂದು ವೈಚಾರಿಕ, ವಿಕಲ್ಪವನ್ನೂ ಉಲ್ಲೇಖಿಸಲು ಇಚ್ಛಿಸುತ್ತೇನೆ. ಆಧುನಿಕ ವಿಜ್ಞಾನ ಪಥ ಮತ್ತು ವೈಜ್ಞಾನಿಕ ಮನೋಭಾವಗಳ ನಡುವೆ ಸಾಕಷ್ಟು ಬಿರುಕಿದೆ. ಸ್ವಯಂಕೇಂದ್ರಿತ ತರ್ಕ ನಿರತವಾದ ಇಂದಿನ ವಿಜ್ಞಾನವು ಅನುಸರಿಸುತ್ತಿರುವ ಆತ್ಮಸಂಯಮವಿಲ್ಲದ ಮಾರುಕಟ್ಟೆ ಪ್ರೇರಿತ ಪಥವು ಅತ್ಯಂತ ಅವೈಜ್ಞಾನಿಕವಾದುದು. ವಿಜ್ಞಾನದ ವಿದ್ವಾಂಸನಿಗೆ ವೈಜ್ಞಾನಿಕ ಮನೋಭಾವವಿರುವುದು ಸಹಜವೆಂದು ಭ್ರಮಿಸಿ ಇಂದಿನ ಆಧುನಿಕ ಸಮಾಜ ಆತನನ್ನು ವಿಮರ್ಶಾತೀತ ಅಗ್ರಪೀಠದಲ್ಲಿ ಕೂಡಿಸಿದೆ. ಆದರೆ ವಿಜ್ಞಾನಿಗೆ ವೈಜ್ಞಾನಿಕ ಮನೋಭಾವ ಇರಬೇಕೆಂಬ ನಿಯಮವೇನಿಲ್ಲ. 'ಅನ್ ಸಸ್ಟೇನೇಬಲ್' ಗ್ರಾಹಕ ಸಂಸ್ಕೃತಿಗೆ ವಿಜ್ಞಾನಿಗಳೂ, ಇಂದಿನ ವಿದ್ಯಾವಂತರೂ ಆಕರ್ಷಿತರಾಗುವುದನ್ನು ನಾವು ನೋಡುತ್ತಿದ್ದೇವೆ. ತನ್ನ ವಿಜ್ಞಾನದ ಸಂಶೋಧನೆಯನ್ನು ಅಣುಬಾಂಬು ತಯಾರಿಸಲು ಅಥವಾ ಜೀವ ವಿನಾಶಕ ಶಸ್ತ್ರಾಸ್ತ್ರಗಳನ್ನು ತಯಾರಿಸಲು ಬಳಸಿಕೊಳ್ಳುವ ವಿಜ್ಞಾನಿಯನ್ನು ಅವೈಜ್ಞಾನಿಕ ಮನೋಭಾವದವನೆಂದೇ ಪರಿಗಣಿಸಬೇಕಾಗುತ್ತದೆ. ಹಿಂಸೆಯನ್ನು ವೃದ್ಧಿಸುವ ವೈಜ್ಞಾನಿಕ ಆವಿಷ್ಕಾರಗಳಲ್ಲಿ ರತಿಯಿರುವ ವಿಜ್ಞಾನಿಯನ್ನು ಮನುಕುಲಕ್ಕೆ ಕೇಡುಂಟುಮಾಡುವ ಧಿಮಾಕಿನ ಅವಿದ್ಯಾವಂತನೆಂದೇ ಪರಿಗಣಿಸಬೇಕಾಗುತ್ತದೆ. ಪ್ರಕೃತಿ ನಿಯಮವನ್ನು ಗೌರವಿಸುತ್ತಾ ವಿನಯದಿಂದ ಜೀವ ಪೋಷಕವಾಗಿ ಬಾಳುವುದು ವೈಜ್ಞಾನಿಕ ವಿವೇಕ. ಒಬ್ಬ ಅನಕ್ಷರಸ್ಥನಾದ ಬೇಸಾಯಗಾರನಿಗೆ ಇಂಥ ವೈಜ್ಞಾನಿಕ ವಿವೇಕವಿರಬಹುದು. 'ಚಾಪೆಯಿದ್ದಷ್ಟೇ ಕಾಲು ಚಾಚು' ಎಂಬ ಅತ್ಯಂತ ಸರಳ ಹಳ್ಳಿಯ ಗಾದೆ ಮಾತು, ಅನುಭವ ಜನ್ಯ ವೈಜ್ಞಾನಿಕ ವಿವೇಕದಿಂದ ಮೂಡಿಬಂದುದು. ಉದಾಹರಣೆಗೆ, ಇನ್ನೆರಡು-ಮೂರು ದಶಕಗಳಲ್ಲೇ ಭೂತೈಲ ಇಂಧನದ ದಾಸ್ತಾನು ಭೂಮಿಯಲ್ಲಿ ಬರಿದಾಗಬಹುದು ಎಂದು ಅಂದಾಜು ಮಾಡಿದ್ದಾರೆ. ಇಂಥ ಸಂದರ್ಭದಲ್ಲಿ, ನೂರಾರು ರೀತಿಯ ಕಾರು ಮಾಡೆಲುಗಳನ್ನು ಹೊರತರುತ್ತಾರೆ, ಜನರನ್ನು ಸುಳ್ಳು ಪ್ರಚಾರದಿಂದ ಮೋಡಿ ಮಾಡುತ್ತಾ ಪ್ರತಿಯೊಬ್ಬನೂ ಒಂದು ಕಾರಿಗಿಂತ ಹೆಚ್ಚು ಕಾರನ್ನು ಖರೀದಿಸಲು ಪ್ರಚೋದಿಸುವುದು ನಿಜಕ್ಕೂ ಅವೈಜ್ಞಾನಿಕ ಪ್ರಗತಿ ಮಾದರಿ. ಇಂಥ ಬಿಕಕ್ಕಟ್ಟಿನಲ್ಲಿ, ನಿಜಕ್ಕೂ ಅಮೂಲ್ಯವಾದ ತೈಲ ಇಂಧವನ್ನು ತೀರ ಅವಶ್ಯಕತೆಗಷ್ಟೇ ಬಳಸುವಂತೆ ಜನರಲ್ಲಿ ಜಾಗ್ರತಿ ಮೂಡಿಸಬೇಕು.

ಮಾತ್ರವಲ್ಲದೆ, ಸಾಧ್ಯವಿದ್ದಲ್ಲೆಲ್ಲ, ಒಬ್ಬೊಬ್ಬ ಒಂದೊಂದು ಪ್ರತ್ಯೇಕ ಪ್ರತ್ಯೇಕ ಕಾರು ಬಳಸುವ ಬದಲು ಸಾಮುದಾಯಿಕ ಸಾರಿಗೆ ವ್ಯವಸ್ಥೆಯನ್ನು ಪ್ರಚೋದಿಸಬೇಕು. ಇದು ವೈಜ್ಞಾನಿಕ ವಿವೇಕ. ಇರುವ ಒಂದೇ ಭೂಮಿಯ ಸಂಪನ್ಮೂಲವನ್ನು ಅವಿವೇಕದಿಂದ ಎಗ್ಗಿಲ್ಲದೆ ಬಳಸಿ ಬರಿದು ಮಾಡುವ ಮಾರುಕಟ್ಟೆ ಪ್ರೇರಿತ ಅಭಿವೃದ್ಧಿ ಪಥವೇ ಅವೈಜ್ಞಾನಿಕವಾಗಿರುವಾಗ ಇದಕ್ಕೆ ಪೂರಕವಾಗಿ ಕೆಲಸ ಮಾಡುವ ವಿಜ್ಞಾನಿಯಲ್ಲಿ ವಿವೇಕ ಎಲ್ಲಿದೆ ? ಈ ದೃಷ್ಟಿಯಲ್ಲಿ ಜನಪದದ ಅನುಭವ ಜನ್ಯ ತಿಳುವಳಿಕೆಯ ತಳಗಟ್ಟಿನ ಮೇಲೆ ವಿಶ್ವ ನಿಯಮದೊಳಗೇನೇ ಬದುಕನ್ನು ರೂಪಿಸಿಕೊಳ್ಳುವ ಸಾಮಾನ್ಯ ಮನುಷ್ಯನ ನಿತ್ಯ ಬದುಕು, ಅದರೆಲ್ಲ ತೋರಿಕೆಯ ಕುರೂಪತೆಯ ನಡುವೆಯೂ, ವೈಜ್ಞಾನಿಕ ಮನೋಭಾವ ಆಧಾರದಲ್ಲಿ ಹರಳುಗಟ್ಟಿದೆ ಎಂದು ನನಗನ್ನಿಸುತ್ತದೆ. ಗಾಂಧೀಜಿ ಸಾಮಾನ್ಯ ಮನುಷ್ಯನ ಬದುಕಿನಲ್ಲಿರುವ ವೈಜ್ಞಾನಿಕ ವಿವೇಕವನ್ನು ಕಂಡುಕೊಂಡು ಆ ವಿವೇಕದಲ್ಲೇ ತನ್ನ ಬದುಕನ್ನು ರೂಪಿಸಿಕೊಂಡವರು

ವಿಜ್ಞಾನವು ಉದಾತ್ತಾರ್ಥದಲ್ಲಿ ಧರ್ಮದಂತೆ ಸತ್ಯಶೋಧನೆಯ ಮಾರ್ಗವಾಗಿ ಮನುಷ್ಯನ ಬಿಡುಗಡೆಯ ಮೂಲ ಆಶಯದಿಂದ ಹೊರಟಂಥದು. ಧರೆ ಇಂದು ಧರ್ಮ ಮತ್ತು ವಿಜ್ಞಾನ–ಎರಡೂ ಸ್ವಹಿತಾಸಕ್ತಿಗಳಿಂದ ದುರ್ಬಳಕೆಗೊಳಪಟ್ಟು ತಮ್ಮ ಮೂಲಗುಣ ಕಳಕೊಂಡು ಭ್ರಷ್ಟಗೊಂಡಿವೆ. ಧರ್ಮವು ಸಾಂಸ್ಥೀಕರಣಗೊಂಡು ಮತೀಯ ಕಟ್ಟುನಿಟ್ಟಿನ ಅಂಧಾಚರಣೆಗಳಾಗಿ ಭ್ರಷ್ಟಗೊಳ್ಳುತ್ತಾ ಹೋಯಿತು. ಮುಂದೆ ಮತ–ಮತಗಳ ಮೇಲಾಟದಲ್ಲಿ ಧರ್ಮವು ಕೇವಲ ಮತೀಯ ಮೂಲಭೂತವಾದಿಗಳ ಗುಂಪಾಗಿ ಹರಳುಗಟ್ಟುತ್ತಾ ಹೋಗಿ ಜಡ್ಡಾಯಿತು. ಇತ್ತ ಹಾಲ್ಡೇನ್ ಹೇಳುವಂತೆ ವಿಜ್ಞಾನವನ್ನು ಒಂದು ತತ್ತ್ವಜ್ಞಾನೀಯ ದೃಷ್ಟಿಕೋನವೆಂದು ಪರಿಗಣಿಸದೆ, ಅದರೊಳಗೆ ಇರಲೇಬೇಕಾಗಿದ್ದ ನೈತಿಕ ನಿಯತಿಯನ್ನು ಬಿಟ್ಟುಕೊಟ್ಟದ್ದರ ಪರಿಣಾಮವಾಗಿ ವಿಜ್ಞಾನವು ತನ್ನೆಲ್ಲ ಪಾವಿತ್ರ್ಯತೆಯನ್ನು ಕಳಕೊಂಡು, ವಾಣಿಜ್ಯ ಹಿತಾಸಕ್ತಿಗಳ ಕೈಯೊಳಗೆ ಸಿಲುಕಿ, ಮನುಷ್ಯನ ಅತಿ ಸುಖಭೋಗದ ಅನೈತಿಕ ದುರಾಸೆಯನ್ನು ತಣಿಸುವ ತಂತ್ರಜ್ಞಾನವಾಗಿ ಪರಿವರ್ತಿತವಾಯಿತು. ಮುಂದೆ ಕೇವಲ ನೈತಿಕ ನಿಯಂತ್ರಣಾತೀತ ಮಾರುಕಟ್ಟೆ ಆಧಾರಿತ ಅವೈಜ್ಞಾನಿಕ ಅಭಿವೃದ್ಧಿ ಮಾದರಿಯನ್ನು ಪೋಷಿಸುವ ಸಾಧನವಾಗಿ, ಕೊನೆಯಲ್ಲಿ ಅಂತಃನಿರೀಕ್ಷಣೆಯೇ ಇಲ್ಲದ ಉಪಭೋಗವಾದ (Consumerism)ವನ್ನು ಪೋಷಿಸುವ ಪಾಪದ ಕೈಂಕರ್ಯಕ್ಕಿಳಿಯಿತು. ಕನ್ಸ್ಯೂಮರಿಸಂನ ವಿಕಾರ ಮುಖವಾದ ಜಾಗತೀಕರಣವೊಂದೇ ಅಭಿವೃದ್ಧಿ ಮಾರ್ಗ ಎನ್ನುವ ಧೋರಣೆಯಿಂದ ವಿಜ್ಞಾನವೂ ತರ್ಕಾತೀತ, ಚರ್ಚಾತೀತವಾಗಿ ಒಂದರ್ಥದಲ್ಲಿ ಸರ್ವಾಧಿಕಾರ ಪ್ರವೃತ್ತಿಯ ಮೂಲಭೂತವಾದವಾಗಿಯೇ ಪರಿವರ್ತಿತವಾಯಿತೆನ್ನಬಹುದು. ಹೀಗೆ ವಿಜ್ಞಾನ ಹುಟ್ಟುಹಾಕಿದ ಮನುಷ್ಯ ನಾಗರಿಕತೆಯ ಅಭಿವೃದ್ಧಿ ಮಾದರಿ, ತನ್ನ ಆಸಕ್ತಿಯನ್ನು ಕಾಪಾಡಿಕೊಳ್ಳಲಿಕ್ಕಾಗಿ ಜಗತ್ತನ್ನೇ ನಿಯಂತ್ರಿಸುವ, ಪ್ರಕೃತಿ ಸಹಜವಾದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವೈವಿಧ್ಯತೆಯನ್ನೇ ಹೊಸಕಿ ಹಾಕುತ್ತಿದೆ. ಸೃಷ್ಟಿಯ ಅನಂತ ವೈವಿಧ್ಯತೆಯ ಮೂಲ ಆಶಯವನ್ನೇ ವಿಕೃತಗೊಳಿಸುತ್ತಾ, ಭಂಗಪಡಿಸುತ್ತಾ, ತನಗೆ ಮ್ಯಾನೇಜ್

ಮಾಡಲು ಸಾಧ್ಯವಾಗುವಂತೆ ಕೆಲವೇ ಸಾಧ್ಯತೆಗಳ ಏಕರೂಪವಾಗಿ ಪಲ್ಲಟಿಸುತ್ತಿದೆ. ತನ್ನ ಮೂಲ ಸ್ವರೂಪದಲ್ಲೇ ಈ ಮಾರುಕಟ್ಟೆ ಪ್ರೇರಿತ ಮಾಡೆಲ್, ಯಂತ್ರದ ಒಡೆಯರಾದ 'ನಾವು' ಯಂತ್ರದಿಂದ ವಂಚಿತರಾದ 'ಅವರನ್ನು' ನಿಯಂತ್ರಿಸಲು ಬೇಕಾದ ಶಕ್ತಿಯನ್ನು ತನ್ನಲ್ಲಿ ಕೇಂದ್ರಿಕೃತಗೊಳಿಸುತ್ತಿರುತ್ತದೆ. ಈ ನಿಯಂತ್ರಣಕ್ಕೆ ಅನಿವಾರ್ಯವಾದ ದಮನ, ದಬ್ಬಾಳಿಕೆಗಳಿಗೆ ಆತ್ಮರತಿ ನಿರತವಾದ ವಿಜ್ಞಾನವನ್ನು ಬಳಸಿಕೊಳ್ಳುತ್ತದೆ. ಇದಕ್ಕೆ ಮೂಲ ಕಾರಣ ವಿಜ್ಞಾನದ 'ಮೆಥೆಡ್'ನಲ್ಲೇ ಸಂಯಮದ ವ್ಯಾಖ್ಯಾನ ಇಲ್ಲದಿರುವುದು.

ಇದರ ಫಲವಾಗಿ ಮಾನವನ ಹೃದಯದ ಮೂಲದ್ರವ್ಯವಾದ ಜನಸಾಮಾನ್ಯರ ದೈನಂದಿನ ಬಾಳಿನ ನೆಮ್ಮದಿ, ಸೌಂದರ್ಯಗಳು ಹದಗೆಡುತ್ತಿವೆ; ವಿಜ್ಞಾನವು ತನ್ನ ಮೂಲಭೂತ ವೈಚಾರಿಕತೆಗಳ ಸಂಶೋಧನಾ ಶಕ್ತಿಗಳನ್ನು ಕೂಡ ತೊರೆದು ಇಂದು ತಂತ್ರಜ್ಞಾನಕ್ಕಷ್ಟೇ ಪರಿಮಿತಗೊಳ್ಳುತ್ತಿದೆ; ಕಲೆಯು ಅತಿತಾಂತ್ರಿಕತೆಯ ಭಾರದಿಂದಾಗಿ ಸೌಂದರ್ಯೋಪಾಸನೆಯ ಗುಣ ಕಳಕೊಂಡು ಮಾರುಕಟ್ಟೆ ಪ್ರೇರಿತ 'ಹೈಟೆಕ್' ಉತ್ಪಾದನೆಯಾಗುತ್ತಿದೆ. ವಿಜ್ಞಾನಪೂರ್ವ ನಾಗರಿಕತೆಯಲ್ಲಿ ಹಿತ–ಉಪಯುಕ್ತತೆ–ಸೌಂದರ್ಯ–ಈ ತತ್ತ್ವಗಳ ನಡುವೆ ಸುಮಾರಾಗಿ ಇದ್ದ ಸಾಮರಸ್ಯ ಕಳಚಿಹೋಗಿ, ಕೇವಲ ಮನುಷ್ಯನ ದೈಹಿಕ ಸುಖದ ಉಪಯುಕ್ತತೆಯ ಯಾಂತ್ರಿಕ ದೃಷ್ಟಿ ಇಂದು ಸಾರ್ವತ್ರಿಕವಾಗಿದೆ. ಹಾಗಾಗಿ ಸೌಂದರ್ಯೋಪಸನೆಯ ನೈತಿಕ ನೆಲೆ ವಿಜ್ಞಾನದಲ್ಲಿ ನಷ್ಟವಾಗಿದೆ. ಇದರ ಪರಿಣಾಮವಾಗಿ ಪ್ರಕೃತಿಯನ್ನು ಕೇವಲ ನಿರ್ಜೀವ ಆಸ್ತಿಯಂತೆ ಮಾರುವ ಸರಕಾಗಿ ಪರಿವರ್ತಿಸಲಾಗಿದೆ. ಈ ಪ್ರಕೃತಿ ವಿರೋಧಿ ಮನೋಧರ್ಮವೇ ಆತ್ಯಂತಿಕವಾಗಿ ನೀತಿಮುಕ್ತ ಆಧುನಿಕ ವಿಜ್ಞಾನದ ಬಳುವಳಿ. ಹಾಗಾಗಿಯೇ ಸಹಸ್ರಬುಧೆ ಇದನು ಆಸುರೀ ವಿಜ್ಞಾನ ಎಂದು ಸಂಬೋಧಿಸುತ್ತಾರೆ. ವಿಶ್ವನಿಯತಿಯ ಲಯದ ಜೊತೆ ಮೇಳೈಸಿಕೊಂಡು ಮುಂದೆ ಸಾಗುವಂತೆ ತನಗೆ ತಾನೇ ನೈತಿಕ ಆಯಾಮವನ್ನು ಕೊಟ್ಟುಕೊಳ್ಳಲು ಬೇಕಾದ ಸೌಲಭ್ಯ, ಸಲಕರಣೆಗಳೇ ಆಧುನಿಕ ವಿಜ್ಞಾನವು ಪ್ರಕೃತಿ ಸಹಜ ಋತುವನ್ನು ಭಂಗಪಡಿಸುವುದರಿಂದ, ವೈವಿಧ್ಯತೆಯ ಸೃಷ್ಟಿ ಕಣ್ಮರೆಯಾಗಿ, ವಿಕೃತಿಯ ಹಾದಿ ಹಿಡಿಯುತ್ತದೆ. ಇಂದಿನ ಯಂತ್ರಯುಗವು ತನ್ನ ಅತಿ ವಿಜೃಂಭಿತ ಸಾಧನೆಯಿಂದ ತತ್ ಕ್ಷಣಕ್ಕೆ ಕಣ್ಣು ಕೋರೈಸುವಂತೆ ಹೊಳೆಯಬಹುದು. ಆದರೆ, ದೀರ್ಘಾವಧಿಯಲ್ಲಿ ಅದು ಸಾಧಿಸುವುದಕ್ಕಿಂತ ಕಳಕೊಳ್ಳುವುದೇ ಹೆಚ್ಚಾಗಿ ಆರುವ ನಂದಾದೀಪವಾಗಬಹುದು. ಒಟ್ಟು ಲಾಭ ನಷ್ಟಗಳ ತಃಖ್ತೆಯನ್ನು ತಯಾರಿಸಿದಾಗ ನಷ್ಟದ ಖಾತೆಯೇ ಹೆಚ್ಚು ಎಂಬುದನ್ನು ನಾವು ನಮ್ಮ ಕಣ್ಮುಂದೆಯೇ ಇಂದು ಕಾಣುತ್ತಿದ್ದೇವೆ.

ಆಧುನಿಕ ವಿಜ್ಞಾನದ ನೋಟದ ಕ್ರಮದಲ್ಲೇ ಅಂತರ್ಗತವಾಗಿರುವ ಪ್ರಭುತ್ವದ ಭಾಷೆ, ಸಂಕೇತ, ಆಕೃತಿ, ಪ್ರಕ್ರಿಯೆಗಳ ಪ್ರತಿರೋಧಾತ್ಮಕ ನೆಲೆಯನ್ನು ನಾವು ಎಲ್ಲಿ ಕಂಡುಕೊಳ್ಳಬಹುದು ? ಇದಕ್ಕೆ ಗಾಂಧೀಜಿಯ ಪುನರವಲೋಕನ ಒಂದು ಉತ್ತಮ ಮಾರ್ಗ ಎಂದು ನನ್ನ ನಂಬಿಕೆ. ಗಾಂಧೀಜಿ ಪ್ರತಿನಿಧಿಸುವ ಸಾಮಾನ್ಯರ ವರ್ತಮಾನದ ಬದುಕಿನ ಮೌಲ್ಯಗಳ ಗಟ್ಟಿ ನೆಲೆಯಿಂದ ಆಧುನಿಕ ವಿಜ್ಞಾನಕ್ಕೆ ಪ್ರತಿರೋಧಾಕೃತಿಯು ಹಾಜರಾಗಬಲ್ಲದು. ಆಧುನಿಕ ವೈಜ್ಞಾನಿಕ ಲೋಕದೃಷ್ಟಿಯು ನಿರ್ಮಿಸುತ್ತಿರುವ ಆರ್ಥಿಕ,

ಸಾಮಾಜಿಕ, ಸಾಂಸ್ಕೃತಿಕ ಗೊಂದಲಕ್ಕೆ, ಸಾಮಾನ್ಯರ ಕಾಯಕದ ಬದುಕಿನ ಬತ್ತದ ನೆಲೆಗಳನ್ನು ಸಂದರ್ಶಿಸಿ ಅದರಲ್ಲಿ ಅಡಕವಾಗಿರುವ ತತ್ತ್ವವನ್ನು ಯಾವೊಂದೂ ಪೂರ್ವಗ್ರಹವಿಲ್ಲದೆ ಮರುವಿಮರ್ಶೆಗೊಡ್ಡಬೇಕು. ಗಾಂಧೀಜಿ ಬ್ರಿಟಿಷರ ವಿರುದ್ಧ ತನ್ನ ಪ್ರತಿರೋಧದ ಆಕೃತಿಗಾಗಿ ಚರಕ, ಖಾದಿ, ಉಪ್ಪು, ಉಪವಾಸ ವ್ರತ, ಬಡತನದ ಸ್ವಂತ ಆಯ್ಕೆ, ಋತಶೀಲ ಸರಳ ಬದುಕು ಮುಂತಾದವುಗಳ ಆಯ್ಕೆಗಾಗಿ ಮತ್ತೆ ಮತ್ತೆ ಸಾಮಾನ್ಯ ಜನರ ಲೋಕವಿದ್ಯೆಗೆ ಮರುಳುತ್ತಿದ್ದರಲ್ಲಾ, ಆ ನೆಲೆಗಟ್ಟಿನಲ್ಲೇ ಜಾಗತಿಕ ಶಕ್ತಿಗಳನ್ನೂ ದಂಗುಪಡಿಸುವ ಶಕ್ತಿಗಳಿವೆ.

ಗಾಂಧೀಜಿ ತನ್ನ ಬದುಕಿನ ಮೂಲಕ, ಬಲ, ಅಹಮಿಕೆ ದಬ್ಬಾಳಿಕೆಗಳನ್ನು ಸಂಪೂರ್ಣ ನಿರಾಕರಿಸುತ್ತಾರೆ. 20–21ನೆಯ ಶತಮಾನದ ಆಧುನಿಕ ವೈಜ್ಞಾನಿಕ ಜಗತ್ತು ಬಲದ ಆರಾಧಕರಾಗಿರುವಾಗ ಗಾಂಧಿ ನಿರ್ಬಲತೆಯನ್ನು ಆರಾಧಿಸುತ್ತಾರೆ. ಗಾಂಧಿಯ ಲೋಕ ನಿಶ್ಯಕ್ತರ ಲೋಕ, ದುರ್ಬಲರ ಲೋಕ, ಜನಸಾಮಾನ್ಯರ ಲೋಕ. ಈ ಲೋಕದ ಸತ್ಯದಿಂದಲೇ ತಮ್ಮ ಬದುಕನ್ನು ರೂಪಿಸಿಕೊಂಡವರು. ಗಾಂಧೀಜಿ ದುರ್ಬಲರನ್ನು ಬಲಡಿಸುವ ಕ್ರಿಯೆಯಲ್ಲಿ ನಿರತರಾಗಿದ್ದರು. ಹೆಣ್ತನದ ಲಾಲನೆ–ಪಾಲನೆ, ಪೋಷಣೆ, ಸ್ಯೆರಣೆಯ ಅಂಶ ಗಾಂಧಿಯ ಜೀವನದಲ್ಲಿ ಪ್ರಮುಖ ಲಕ್ಷಣವಾಗಿತ್ತು. ಗಂಡು ದರ್ಪದ ಆಧುನಿಕ ವಿಜ್ಞಾನ ಪ್ರೇರಿತ ಆಕ್ರಮಣಕಾರೀ ಬದುಕಿಗೆ ತನ್ನ ಹೆಣ್ತನದ ಜೀವ ಸಂರಕ್ಷಕ ಮೌಲ್ಯಗಳನ್ನು ಮುಖಾಮುಖಿಯಾಗಿ ನಿಲ್ಲಿಸಿದವರು ಅವರು.

ಈ ದೇಹ ಮತ್ತು ದೇಹಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಗಾಂಧಿ ಬಹಳ ಮಹತ್ತ್ವ ಕೊಡುತ್ತಿದ್ದರು. ದೇಹದ ಶುಚಿ, ಲಾಲನೆ–ಪಾಲನೆ, ಆಹಾರ ಮುಂತಾದ ದೈನಂದಿನ ಸಾಮಾನ್ಯ ವಿಷಯಗಳು ಗಾಂಧಿ ಸದಾ ಹಚ್ಚಿಕೊಂಡಿದ್ದ ಕಾಳಜಿಗಳಾಗಿದ್ದವು. ಒಬ್ಬ ನೇತಾರನಿಗೆ ಕ್ಷುಲ್ಲಕವೆನಿಸಬಹುದಾದ ತಿನ್ನುವುದರಿಂದ ಹಿಡಿದು ಮಲವಿಸರ್ಜನೆಯವರೆಗಿನ ದೈನಂದಿನ ಕ್ರಿಯೆಗಳಿಗೆಲ್ಲಾ ಗಾಂಧೀಜಿ ಬಹಳ ಮಹತ್ತ್ವ ಕೊಡುತ್ತಿದ್ದರು. ಕ್ವಿಟ್ ಇಂಡಿಯಾ ಚಳುವಳಿ, ಉಪ್ಪಿನ ಸತ್ಯಾಗ್ರಹಗಳಂತಹ ದೇಶವ್ಯಾಪೀ ಸ್ವಾತಂತ್ರ್ಯ ಸಂಗ್ರಾಮದ ಚಳುವಳಿಗಳ ಜೊತೆ ಜೊತೆಯೇ ಗಾಂಧಿ ಯಾವ ಆಹಾರ ತಿಂದರೆ ಸುಲಭದಲ್ಲಿ ಮಲವಿಸರ್ಜನೆ ಆಗುತ್ತದೆ, ಯಾವ ಆಹಾರ ಬೇಯಿಸಿದಾಗ ಅದು ಒದಗಿ ಬಡವನಿಗೆ ಅಗ್ಗದಲ್ಲಿ ಹೊಟ್ಟೆ ತುಂಬುತ್ತದೆ, ಅಕ್ಕಿ ತೌಡಿನಿಂದ ಗಂಜಿ–ಪಾನಕ ಮಾಡುವುದು ಹೇಗೆ ಎಂಬೆಲ್ಲ ವಿಷಯಗಳ ಬಗ್ಗೆ ಕೂಡ ಯೋಚಿಸುತ್ತಿದ್ದರು; ಮಾತ್ರವಲ್ಲ, ಅದರಲ್ಲಿ ಪ್ರಯೋಗ ನಡೆಸುತ್ತಿದ್ದರು. ಹಸಿವಿಲ್ಲದವನಿಗೆ ಇವೆಲ್ಲಾ ತಲೆತಿರುಕತನ (Cranky idea) ಎಂದೆನಿಸಬಹುದು. ಹಸಿವಲ್ಲೇ ಬದುಕುವ ಅಸಂಖ್ಯ ಜನರಿಗೆ ಈ ಯೋಚನೆಗಳು ಬಹಳ ಪ್ರಸ್ತುತವಾಗಿ ಬಿಡುತ್ತವೆ.

ಆಹಾರದ ಜೊತೆ, ಸಾಮಾನ್ಯರ ಆರೋಗ್ಯದ ಬಗ್ಗೆಯೂ ಗಾಂಧೀಜಿಗೆ ಕಾಳಜಿಯಿತ್ತು. ನೀರಿನ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಇತರ ನೈಸರ್ಗಿಕ ಚಿಕಿತ್ಸೆ ಹೀಗೆ ಬಡವರಿಗೆ ಎಟುಕಬಹುದಾದ ಅಗ್ಗದ ಚಿಕಿತ್ಸಾ ಕ್ರಮಗಳ ಬಗ್ಗೆ ಗಾಂಧೀಜಿ ಪ್ರಯೋಗಗಳನ್ನು

ಮಾಡುತ್ತಿದ್ದರು. ಶ್ರೀಮಂತನಿಗೆ ಮಾತ್ರ ಎಟುಕುತ್ತಿದ್ದ 'ಅಲೋಪತಿ' ವೈದ್ಯಪದ್ಧತಿಯನ್ನು ಬಳಸುವವನಿಗೆ ಅಗ್ಗದ ನೈಸರ್ಗಿಕ ಚಿಕಿತ್ಸೆಯು ಮನುಷ್ಯನ ಘನತೆಯನ್ನೇ ಬಗ್ಗು ಬಡಿಯುವ ರಾಕ್ಷಸ ಯಂತ್ರಗಳ ಬಲದ ನಿರಾಕರಣೆಯ ಸಂಕೇತವೇ ಆಗಿದೆ.

ಗಾಂಧೀಜಿ ಇವೆಲ್ಲವನ್ನೂ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿದ್ದುಕೊಂಡು, ಅಷ್ಟೇ ಗಂಭೀರವಾಗಿ ಪರಿಗಣಿಸುತ್ತಾರೆ. ದನಗಳಿಗೆ ಹುಲ್ಲು ಹಾಕುತ್ತಿರುವಾಗ ಹಟ್ಟಿಯಲ್ಲೇ ಮಹತ್ತ್ವದ ರಾಜಕೀಯ ಚರ್ಚೆಗಳನ್ನೂ ಮಾಡುತ್ತಾರೆ. ದನಕ್ಕೆ ಹುಲ್ಲು ಹಾಕುವುದು, ಅಕ್ಕಚ್ಚು ಇಡುವುದು ಮುಂತಾದ ದೈನಂದಿನ ಬದುಕಿನ ಸಾಮಾನ್ಯ ಕ್ರಿಯೆಗಳೂ ಗಾಂಧೀಜಿಗೆ ಸ್ವಾತಂತ್ರ್ಯ ಚಳುವಳಿಯಷ್ಟೇ ಪ್ರಮುಖ ಸಂಗತಿಗಳಾಗಿದ್ದವು. ಜನ ಸಾಮಾನ್ಯರ ಬದುಕನ್ನು ಪುನಾರಚಿಸಿ ಬ್ರಿಟಿಷರ ವಿರುದ್ಧ ಕೇಂದ್ರಸ್ಥಾನದಲ್ಲಿ ಕೂಡಿಸುವ ಕ್ರಿಯೆಯೂ ಸ್ವಾತಂತ್ರ್ಯ ಚಳುವಳಿಯಷ್ಟೇ ಮುಖ್ಯವಾಗಿತ್ತು.

ಗಾಂಧೀಜಿ ಈ ದೇಶವನ್ನು ಕೇವಲ ರಾಷ್ಟ್ರವನ್ನಾಗಿ ನೋಡುತ್ತಿರಲಿಲ್ಲ, ಏಕಕಾಲದಲ್ಲಿ ದೇಶವನ್ನು ರಾಷ್ಟ್ರವನ್ನಾಗಿಯೂ ಸಮಾಜವನ್ನಾಗಿಯೂ ಗ್ರಹಿಸುತ್ತಾ, ವಿದೇಶಿ ಆಳ್ವಿಕೆಯಿಂದ ರಾಷ್ಟ್ರ ಮುಕ್ತಿಯ ಜೊತೆ, ಸಮಾಜವನ್ನು ಸಾಮಾಜಿಕ ಅನಿಷ್ಟಗಳಿಂದೆಲ್ಲ ಆಂತರಿಕವಾಗಿ ಮುಕ್ತಿಗೊಳಿಸುವ ಬಗೆಗೂ ಕೆಲಸ ಮಾಡುತ್ತಿದ್ದರು. ಅಸ್ಪೃಶ್ಯತೆ, ಸ್ತ್ರೀಯರ ಮೇಲಿನ ದಬ್ಬಾಳಿಕೆ ಮುಂತಾದ ಪಿಡುಗಿನ ವಿರುದ್ಧವೂ ಹೋರಾಡುತ್ತಿದ್ದರು. ಅದಕ್ಕಾಗಿ, ಅವರು ಜನಸಾಮಾನ್ಯರ ಸಾಮಾನ್ಯ ಬದುಕಿನೆಡೆಗೆ ಮತ್ತೆ ಮತ್ತೆ ಹೊರಳಿಕೊಳ್ಳುತ್ತಿದ್ದರು. ಪರಂಪರಾಗತವಾಗಿ ಹರಿದುಬಂದ ಜನಸಾಮಾನ್ಯರ ಮೌಲ್ಯಗಳಾದ ಅಸ್ವಾದ, ಋತುಶೀಲ ಸರಳ ಬದುಕು, ಅಹಿಂಸೆ, ಸತ್ಯ, ಮುಂತಾದ ಅನೇಕ ಧಾರ್ಮಿಕ ತತ್ತ್ವಗಳನ್ನು ಗಾಂಧೀಜಿ ಅನುಷ್ಠಾನ ಮಾಡುವ ಮೂಲಕ ಈ ಮೌಲ್ಯಗಳಲ್ಲಿ ಆಧುನಿಕ ವಿಜ್ಞಾನ ಮತ್ತು ಮಾರುಕಟ್ಟೆ ಆರ್ಥಿಕತೆ ಹುಟ್ಟುಹಾಕಿದ ಅತಿರಾವಿನ ಗ್ರಾಹಕ ಸಂಸ್ಕೃತಿಗಳ ವಿರುದ್ಧ ಪ್ರತಿರೋಧದ ವಿದ್ರೋಹೀ ನೆಲೆಯನ್ನು ಕಂಡುಕೊಂಡರು.

ಜನಸಾಮಾನ್ಯರ ದೈನಂದಿನ ಬದುಕಿನ ಮೌಲ್ಯಗಳು ಮಾತ್ರ ನಿರಂತರ ಅಭಿವೃದ್ಧಿ (ಸಸ್ಟೇನೆಬಲ್) 'ಸಮಷ್ಟಿ ಕಲ್ಯಾಣ, ಸಮಗ್ರ ಹಿತಕ್ಕೆ ಪೂರಕವಾಗಲು ಸಾಧ್ಯ ಎಂಬುದನ್ನು ಗಾಂಧೀಜಿ ಅರಿತುಕೊಂಡಿದ್ದರು. ಈ 'ಸಸ್ಟೇನೆಬಲ್' ಸಮುದಾಯಗಳ ವೈಜ್ಞಾನಿಕ ಮನೋಭಾವದ ಬದುಕಿನ ಸಂರಚನೆಗಳು ನಾವು ಇಂದು ಬದುಕುತ್ತಿರುವ, ಅವೈಜ್ಞಾನಿಕ ಮನೋಭಾವದ ಮೇಲೆಯೇ ನಿಂತಿರುವ 'ಅನ್ ಸಸ್ಟೇನೆಬಲ್' ಸಮುದಾಯಗಳ ಬದುಕಿನ ಸಂರಚನೆಗಿಂತ ಆಶಯ-ಆಕೃತಿಗಳೆರಡರಲ್ಲೂ ತೀರ ಭಿನ್ನ. 'ಅನ್ ಸಸ್ಟೇನೆಬಲ್' ಸಮುದಾಯಗಳಿಗೆ ಸತ್ಯವು ವಿಜ್ಞಾನದ ಅನ್ವೇಷಣೆಯಂತೆ ಹೊರಗಿನಿಂದ ಅರಸುವ ಸಂಗತಿಯೆಂದರೆ, ಸಾಮಾನ್ಯ ಜನ ಸಮುದಾಯಗಳು ಸತ್ಯವನ್ನು ತಮ್ಮ ಬದುಕಿನ ಜೀವಶಕ್ತಿಯ ಮೂಲಕವೇ ಸತತವಾಗಿ ಬೇಕಾದಂತೆ ಕಟ್ಟುತ್ತಾ (Constuct), ಮುರಿಯುತ್ತಾ (Deconstruct) ವರ್ತಮಾನದ ಜೀವಂತಿಕೆಯಲ್ಲೇ ರೂಪಿಸುತ್ತಿರುತ್ತವೆ. ಇದು ನಿಜ ಸಂತರ ಪರಂಪರೆ. ಇದೇ ಗಾಂಧಿಯ ಪರಂಪರೆಯೂ ಆಗಿತ್ತು. ಅವರು ಅದನ್ನು

ತಮ್ಮ ಬದುಕಿನ ಕ್ರಮದಲ್ಲೇ ಸಾಧಿಸುತ್ತಾರೆ. ಇಂಥ ಸಮುದಾಯಗಳ ಬದುಕಿನ ಸತ್ಯದ ರಚನೆ, ಪುನಾರಚನೆಯ ಮೂಲಕ ಈ ಜೀವನ ತತ್ತ್ವ, ಆಧುನಿಕ ವಿಜ್ಞಾನದ ಆಸುರೀ ವೃತ್ತಿಯಿಂದ ಉದ್ಭವಿಸಿದ ಜಾಗತೀಕರಣದಂಥ 'ಅನ್‌ಸಸ್ಟೇನೆಬಲ್' ಮಾದರಿಗೆ ಸವಾಲಾಗಬಲ್ಲದು.

ಕೃಷಿಕರು, ಕೈಕಸುಬುದಾರರು, ದಲಿತರು, ಗಿರಿಜನರು, ಮಹಿಳೆಯರು ಮುಂತಾದ ದೇಶೀ ಸಮಾಜಗಳ ಮತ್ತು ಮೂಲನಿವಾಸಿಗಳ ಜೀವನದರ್ಶನದಲ್ಲಿ ಅಡಕವಾಗಿರುವ ಶತಮಾನಗಳಿಂದ ದತ್ತವಾಗಿ ಹರಿದುಬಂದಿರುವ ವೈವಿಧ್ಯಮಯ ಹಾಗೂ ಸಂಚಿತ ಅನುಭವಜನ್ಯ ಜ್ಞಾನ ಸಂಪನ್ಮೂಲಗಳನ್ನು ನಾವು ಈ ನೆಲದ 'ಜನಪದೀಯ ಜ್ಞಾನ ಭಂಡಾರ' (Peoples' accumulated experiencila knowledge base) ಅಥವಾ 'ಜಾನಾಂಗೀಯ ಪ್ರತಿಭೆ' ಎಂದು ಕರೆಯಬಹುದು. ಇದನ್ನೇ ಸಹಸ್ರಬುಧೆ ಸೂತ್ರೀಕರಿಸಿ 'ಲೋಕವಿದ್ಯೆ' ಎಂದು ಕರೆಯುತ್ತಾರೆ. ವಿಶ್ವವಿದ್ಯಾಲಯಗಳ ಶೈಕ್ಷಣಿಕ ಹಣೆಪಟ್ಟಿಯ ಹಂಗಿಲ್ಲದ ಜನಪದದ ಪ್ರಾದೇಶಿಕ ತಿಳುವಳಿಕೆಯ ಮೊತ್ತವಾದ ಈ ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ಜೀವಂತ ನೆಲೆಗಳು ಲೋಕವಿದ್ಯೆಯ ರೂಪದಲ್ಲಿ ಪ್ರಕಟಗೊಳ್ಳುತ್ತಿರುತ್ತವೆ. ಈ ಜ್ಞಾನ ಶಾಖೆಗಳ ವಿಶಿಷ್ಟ ರೂಪಗಳು ಸ್ಥಳೀಯ ಸಂದರ್ಭ, ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ತಂತ್ರಜ್ಞಾನೀಯ ಆವಿಷ್ಕಾರಗಳಾಗಿ, ವಿನ್ಯಾಸಗಳಾಗಿ ರೂಪಾಂತರಗೊಳ್ಳುವ ಅಂತಃಶಕ್ತಿ ಪಡೆದಿವೆ. ಲೋಕವಿದ್ಯೆಯ ಈ ರೂಪಾಂತರ ಪ್ರತಿಭೆಯು ನಿಜಕ್ಕೂ ಒಂದು ದೇಶದ ಮೂಲ ಆಸ್ತಿ. ಇದನ್ನು ಸಹಸ್ರ ವ್ಯಾಖ್ಯೆಗಳಿಂದಲೂ ಸಮರ್ಪಕವಾಗಿ ನಿರ್ವಚಿಸಲು ಬರುವುದಿಲ್ಲ; ಅನುಭವಿಸುವುದು ಮಾತ್ರ ಸಾಧ್ಯ. ಈ ಲೋಕವಿದ್ಯಾ ದೃಷ್ಟಿ ನಮ್ಮನ್ನು ಬಿಡುಗಡೆಗೊಳಿಸುವಂಥದು. ಇದು ಗಾಂಧೀಜಿಯ ದೃಷ್ಟಿ ಕೂಡ. ಲೋಕವಿದ್ಯೆಯು ತನ್ನಲ್ಲಡಗಿರುವ ದಿಗ್ಭ್ರಮೆಗೊಳಿಸುವ 'ಅಪರಿಚಿತ' ಹಾಗೂ 'ಅನಿರೀಕ್ಷಿತ' ಬಹಮುಖೀ ಹತಾರಗಳನ್ನು ವಿಸರ್ಜಿಸುವ ಮೂಲಕ ಏಕಮುಖೀ ಆಧುನಿಕ ವಿಜ್ಞಾನಕ್ಕಿಂತಲೂ ದೊಡ್ಡ ರಾಕ್ಷಸನನ್ನು ಎದುರಿಸಬಲ್ಲ ಎಂದೂ ಬತ್ತದ ಜೀವಸೆಲೆ. ಪರಂಪರೆಯ ನಿಜಸಾರವಿರುವುದು ಈ ಅನುಭವೀ ವಿದ್ಯೆಯ ಸೃಷ್ಟಿ, ಮರುಸೃಷ್ಟಿಗಳಲ್ಲಿ ತೊಡಗುವುದರಲ್ಲಿ. ಇದು ಹಳತರ ಹಳಹಳಿಕೆಯಲ್ಲ; ಬದಲಾಗಿ ಪೂರ್ವಗ್ರಹವಿಲ್ಲದೆ ದತ್ತವಾದ ಈ ಬಯಲ ತತ್ತ್ವವನ್ನು ಪುನರ್ ವಿಮರ್ಶೆ ಮಾಡಿ ಸತ್ತ್ವಯುತವಾದದ್ದನ್ನು ಪ್ರಸ್ತುತಗೊಳಿಸುವ ಕ್ರಮ. ಈ ಕೆಲಸವನ್ನು ಜನಸಮುದಾಯಗಳು, ದಿನದಿನವೂ ತಮ್ಮ ದೈನಂದಿನ ಬದುಕಿಗೆ ಬಂದೆರಗುವ ಆಘಾತಗಳಿಗೆ ಪ್ರತ್ಯಾಘಾತಗಳನ್ನು ಒಡ್ಡುತ್ತ ಸಂಘರ್ಷಾತ್ಮಕ ನೆಲೆಯಲ್ಲೇ ಬದುಕಿನ ಸತ್ಯಗಳನ್ನು ನಿರಂತರವಾಗಿ ಪುನಾರಚಿಸಿಕೊಳ್ಳುವುದರ ಮೂಲಕ ರೂಢಿಸಿಕೊಳ್ಳುತ್ತವೆ. ಹಾಗಾಗಿಯೇ ಈ ದಾರಿ ನಿತ್ಯ ನಾವೀನ್ಯತೆಯನ್ನು ಪಡೆದಿದೆ. ಆಧುನಿಕ ವಿಜ್ಞಾನದ ದಬ್ಬಾಳಿಕೆಯ ಎಡೆಯಲ್ಲೂ ತನ್ನದೇ ಆದ ಇಕ್ಕಟ್ಟಿನ ಜಾಗದಲ್ಲಿ ಆಧುನಿಕ ವಿಜ್ಞಾನದ ತರ್ಕದ ಹಂಗಿಲ್ಲದೆ ಬಹುಮಟ್ಟಿಗೆ ಸ್ವತಂತ್ರವಾಗಿ ಕ್ರಿಯಾಶೀಲವಾಗಿ ಸಾಮಾನ್ಯ ಜನಪದ ಬಾಳಿದೆ. ಗಾಂಧೀಜಿ ಸಂಕೇತಿಸುವ ಚರಕ, ಖಾದಿ, ಗುಡಿಕೈಗಾರಿಕೆಗಳು ಮತ್ತು ವಿಕೇಂದ್ರೀಕೃತ ಸ್ಥಳೀಯ ಉತ್ಪಾದನೆಯ

ಮಾರುಕಟ್ಟೆ ಸೌಲಭ್ಯಗಳ ಮೂಲಕ ಗ್ರಾಮ ಸ್ವರಾಜ್ಯ ಈ ಅರ್ಥದಲ್ಲಿ ಈ ಬಹುಮುಖೀ ಪ್ರಜ್ಞೆಯ ಬಿಂಬರೂಪಗಳು. ಇದೇ ಗಾಂಧೀಜಿಯು ಆಧುನಿಕ ವಿಜ್ಞಾನಕ್ಕೆ ಸವಾಲೆಸೆಯುವ ಸ್ವದೇಶಿ ದರ್ಶನ. ಲೋಕ ವಿದ್ಯೆಯ ಈ ತತ್ತ್ವಾನುಭವವನ್ನು ಬದಲಾದ ಸಂದರ್ಭಕ್ಕೆ ತಕ್ಕಂತೆ ಜೀವಶಕ್ತಿ ತುಂಬಿ ಪರಿಷ್ಕರಿಸಬೇಕು. ಬಹುಶಃ ಸ್ವಾಯತ್ತತೆಯು ಸಮಾಜಗಳ ಅಂತಃವಿಸ್ತಾರದಲ್ಲೇ ಇವು ಬಹು ಸೂಕ್ಷ್ಮವಾಗಿ ಸತತ ಪರಿವರ್ತನೆಗೊಳ್ಳುತ್ತಲೇ ಇರುತ್ತವೆ. ಹಾಗಾಗಿ ಈ ಲೋಕವಿದ್ಯೆಯು ಪೂರ್ಣಪ್ರಮಾಣದಲ್ಲಿ ವಿಕಾಸವಾಗಿ, ಕ್ರಿಯಾರೂಪದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಗುವಂತೆ, ಸ್ವಾಯತ್ತತೆಯನ್ನು ಪೋಷಿಸುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಾಗಿದೆ.

ಆದರೆ, ಜೀವಪ್ರೀತಿಯ ಇಂಥ ಮೌನ ಪರಿವರ್ತನೆ. ಸಮಾಜದ ಪ್ರಧಾನ ವಾಹಿನಿಯಲ್ಲಿ ಸೇರಿಕೊಳ್ಳಬೇಕಾದರೆ ಸಾಮಾನ್ಯ ಮನುಷ್ಯನ ಬದುಕಿನ ತತ್ತ್ವಜ್ಞಾನವು ಒಂದು ಸಾಮಾಜಿಕ ಶಕ್ತಿಯಾಗಿಯೂ ಅಭಿವ್ಯಕ್ತಿ ಪಡೆಯುವ ಅಗತ್ಯವಿದೆ. ಆಗ ಈ ತತ್ತ್ವಜ್ಞಾನದ ತಿಳುವಳಿಕೆ ಮತ್ತು ಕ್ರಿಯೆ ಒಂದೇ ಆಗಿ ಬಿಡುತ್ತದೆ; ತಿಳುವಳಿಕೆಯೇ ಕ್ರಿಯೆಯಾಗಿ ಬಿಡುತ್ತದೆ.

ನಿಜಕ್ಕೂ ಲೋಕವಿದ್ಯೆಯ ತಳಹದಿಯೇ 'ರ್‍ಯಾಡಿಕಲ್' ಚಿಂತನರೂಪಿಯಾಗಿದ್ದು, ಇದೇ ನಿಜಕ್ಕೂ ಬದಲಾವಣೆಯ ಭಾಷೆಯೂ ಆಗಿದೆ. ಈ ವಿದ್ಯಾರೂಪಿಕೆಯನ್ನು ನಾವು ಕೇವಲ ಬೌದ್ಧಿಕವಾಗಿ ಅರ್ಥೈಸಿಕೊಂಡರೆ ಅದರ ಶಕ್ತಿಯು ನಿಜ ಪರಿಚಯವಾಗಲಾರದು. ಕ್ರಿಯೆಯ ಮೂಲಕವೇ ಅರ್ಥೈಸಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಲೋಕವಿದ್ಯೆಯ ಲೋಕದ ಮೌಲ್ಯಗಳು, ಜ್ಞಾನಶಾಖಾ ನಿರೂಪಣೆಗಳು, ಎಲ್ಲವೂ ಸಂಪೂರ್ಣ ಭಿನ್ನ. ಕೇವಲ ಸಿದ್ಧಾಂತಗಳು ಇಲ್ಲಿ ಕೆಲಸಕ್ಕೆ ಬರುವುದಿಲ್ಲ. ಇದು ಯಾವ ನಿರ್ಬಂಧಕ್ಕೂ ಒಳಪಡದೆ ನಿಬ್ಬೆರಗಾಗಿಸುವ ಸ್ವಂತಿಕೆ ಪಡೆದಂಥದು. ಹಾಗಾಗಿಯೇ ಇದು ಆಧುನಿಕ ವಿಜ್ಞಾನಕ್ಕೆ ಸವಾಲಾಗುವ ಶಕ್ತಿ ವಿನ್ಯಾಸಗಳನ್ನು ಪಡೆದಿದೆ. ಮಾತ್ರವಲ್ಲ ದೇಶದ ಸಿಂಹಾಸನಾರೂಢ ಆಧುನಿಕ ವಿಜ್ಞಾನದ ಯಾಜಮಾನ್ಯ ರಾಜಕೀಯಕ್ಕೂ ಸವಾಲಾಗುವ ರಾಜಕೀಯವನ್ನೂ ಮಾಡಬಲ್ಲದು. ಏಕೆಂದರೆ ಇಂದು ರಾಜಕೀಯ, ಆರ್ಥಿಕ ನಿರ್ಮಿತಿಗಳೊಳಗೆ ಆಕೃತಿ ಪಡೆಯುವುದಕ್ಕಷ್ಟೇ ಸೀಮಿತವಾದ ಆಧುನಿಕ ವಿಜ್ಞಾನದ ಆಸುರೀ ಶಕ್ತಿಗೆ ಹೋಲಿಸಿದರೆ, ಈ ಲೋಕವಿದ್ಯೆಯ ಶಕ್ತಿಯ ಮೂಲದಲ್ಲಿ ಜೀವದಾಯಕ ಗುಣವಿದೆ. ನ್ಯಾಯ–ನೈತಿಕ ಭಾವಗಳು ಹಾಸುಹೊಕ್ಕಾಗಿ ಅಡಕವಾಗಿವೆ. ಈ ನೈತಿಕ ಮೌಲ್ಯಗಳೇ ಅನೈತಿಕ ಆಧುನಿಕ ವಿಜ್ಞಾನಕ್ಕೆ ಸವಾಲಾಗುವ ಸಾಧ್ಯತೆಯಿರುವ ಅದರ ಅಂತಃಚೇತನ ಕೂಡ.

ಈ ಅಂತಃಚೇತನವನ್ನು ಇನ್ನಷ್ಟು ಜಾಗೃತಗೊಳಿಸುವ ಪ್ರಯತ್ನವೇ ಗಾಂಧೀಜಿಯ ತತ್ತ್ವ ಮೀಮಾಂಸೆ. ನಾವು ಹಾಗಾಗಿ ಗಾಂಧೀಜಿಯವರಿಂದ ನಿಜಕ್ಕೂ ಇದಕ್ಕೆ ಸಹಾಯ ಪಡೆಯಬಹುದು. ಗಾಂಧೀಜಿ ಕನಸುಕಂಡ ವಿಕೇಂದ್ರಿಕರಣ, ಗ್ರಾಮ ಸ್ವಾಯತ್ತೆಗಳಿಗಾಗಿ ಜನ ಸಂಘರ್ಷ, ಚಳುವಳಿಗಳನ್ನು ರೂಪಿಸುವುದೂ, ಲೋಕವಿದ್ಯಾ ಪ್ರಕ್ರಿಯೆಯನ್ನು

ಬಲಪಡಿಸುವ ಮಾರ್ಗ. ಗಾಂಧೀಜಿಯ ಸ್ವಾಯತ್ತತೆಯ ಗ್ರಹಿಕೆ, ಛಿದ್ರೀಕರಣಗೊಂಡ ಕೇವಲ ರಾಜಕೀಯ ಸ್ವಾಯತ್ತತೆಯ ಆಕೃತಿಯಲ್ಲ. ಯಾಕೆಂದರೆ ಆರ್ಥಿಕ–ರಾಜಕೀಯ–ಸಾಂಸ್ಕೃತಿಕ ಸ್ವಾಯತ್ತತೆಗಳು ಒಂದನ್ನೊಂದು ಬಿಟ್ಟಿಲ್ಲ. ಇವೆಲ್ಲವೂ ಅಂತರ್ ಪ್ರಕ್ರಿಯೆಗಳ ಮೂಲಕ ಲೋಕವಿದ್ಯೆಯಲ್ಲಿ ಅಖಂಡವಾಗಿ ಹೆಣೆದುಕೊಂಡಿವೆ; ಮತ್ತು ಬಹರೂಪತೆಯ ಸಂಸ್ಕೃತಿ ಸಮಾಜಕ್ಕೆ ಪೋಷಕವಾಗಿವೆ. ಗಾಂಧೀಜಿ ಕಾಣುವ ಈ ಸ್ವಾಯತ್ತತೆಯ ಬಹುಮುಖೀ ಸಮಾಜದಲ್ಲಿ ಆಧುನಿಕ ವಿಜ್ಞಾನದ ಅನೈತಿಕ ದಬ್ಬಾಳಿಕೆ ಇರಲು ಸಾಧ್ಯವಿಲ್ಲ; ಮಾತ್ರವಲ್ಲ ಒಂದು ನಿರ್ದಿಷ್ಟ ಬಗೆಯ ಜ್ಞಾನ, ಒಂದು ನಿರ್ದಿಷ್ಟ ಬಗೆಯ ಚಿಂತನೆ, ತರ್ಕ, ಮೆಥಡ್‌ಗಳನ್ನಷ್ಟೇ ವಿಜೃಂಭಿಸಿ, ಉಳಿದೆಲ್ಲ ಸಾಧ್ಯತೆಗಳನ್ನು, ಸೃಷ್ಟಿ ಶಕ್ತಿಗಳನ್ನು ಅಲ್ಲಗಳೆಯುವ ಆಧುನಿಕ ವಿಜ್ಞಾನದ ಸಾರ್ವಭೌಮತೆಯೂ ಸಾಧ್ಯವಿಲ್ಲ.

**ಡಾ. ನಿ. ಮುರಾರಿ ಬಲ್ಲಾಳ**

# ಪಾರಿಭಾಷಿಕ ಪದ ವಿವರಣೆ

**ಅನುಗಮನ (Induction)**

ಹಲವಾರು ನಿರ್ದಿಷ್ಟವಾದ ಅಂಶಗಳು ಮತ್ತು ವಿಷಯಗಳನ್ನು ಅವಲೋಕಿಸಿ ಒಂದು ಸಾಮಾನ್ಯ ಸೂತ್ರವನ್ನು ಅಥವಾ ಅಭಿಪ್ರಾಯವನ್ನು ನಿರ್ಮಿಸುವ ವಾದ ವಿಧಾನ. ಉದಾಹರಣೆಗೆ ಒಂದು ವರ್ಗದ ಕೇಂದ್ರ ಸದಸ್ಯರ ಲಕ್ಷಣಗಳನ್ನು ಅವಲೋಕಿಸಿ ಇದೇ ವರ್ಗದ ಸದಸ್ಯರ ಬಗ್ಗೆ ಒಂದು ಸಾರ್ವತ್ರಿಕ ತೀರ್ಮಾನಕ್ಕೆ ಬರುವ ವಿಧಾನ. ನೋಡಿ ನಿಗಮನ.

**ಅವಿದ್ಯೆ**

ಸುಳ್ಳಿನಿಂದ ಕೂಡಿದ ಅಪಾಯಕಾರಿ ಜ್ಞಾನ.

**ಅಹಿಂಸೆ**

ಹಿಂಸೆಯನ್ನು ಮಾಡದಿರುವುದು. ಇದು ಹಿಂಸೆಯ ವಿರೋಧ ಪದವಲ್ಲ. ಇದು ದೌರ್ಬಲ್ಯದ ಲಕ್ಷಣವಲ್ಲ. ಸತ್ಯದ ಸಾಕ್ಷಾತ್ಕಾರಕ್ಕೆ ಸಬಲರು ಆಚರಿಸುವ ತತ್ತ್ವ ದುರ್ಬಲ ಜನಾಂಗ ಇದನ್ನು ಅನುಸರಿಸಿದರೆ ಅದಕ್ಕೆ ಗುಣಾತ್ಮಕವಾದ ಅರ್ಥವಿರದು.

**ಆಂಟಾಲಜಿ (Ontology)**

ವಸ್ತುಗಳ ಮೂಲತತ್ತ್ವವನ್ನು ಕುರಿತು ವಿಚಾರ ಮಾಡುವ ಆಧ್ಯಾತ್ಮಶಾಸ್ತ್ರ ಅಥವಾ ತತ್ತ್ವಶಾಸ್ತ್ರದ ಶಾಖೆ. ನಮಗೆ ಸಂಪೂರ್ಣ ತಿಳಿದಿರಲಿ ಅಥವಾ ತಿಳಿಯದಿರಲಿ, ಜಗತ್ತಿನಲ್ಲಿ ಅಸ್ತಿತ್ವದಲ್ಲಿರುವ ವಸ್ತು-ವಿಷಯವನ್ನು ಚಿಂತಿಸುವ ಅರಿವಿನ ಶಾಖೆ. ಇದನ್ನು ಇರುವಿಕೆ ಅಥವಾ ಅಸ್ತಿತ್ವದ ತತ್ತ್ವ (theory of being) ಎಂದೂ ಕರೆಯುತ್ತಾರೆ.

**ಆಗರಿಯರು**

ಕಬ್ಬಿಣದ ಅದಿರನ್ನು ಕರಗಿಸಿ ಅದರ ಲೋಹವನ್ನು ತೆಗೆಯುವಲ್ಲಿ ನಿಷ್ಣಾತಿ ಪಡೆದ ಒಂದು ಬುಡಕಟ್ಟು ಜನಾಂಗ.

**ಆರ್ಯಭಟ**

ಐದನೇ ಶತಮಾನದಲ್ಲಿ ಬದುಕಿದ ಭಾರತದ ಖಗೋಳ ವಿಜ್ಞಾನಿ. ಭೂಮಿಯ ಪರಿಭ್ರಮಣ ಹಾಗೂ ಗ್ರಹಗಳ ವರ್ತುಲ ಚಲನೆಯ ಬಗ್ಗೆ ದಾಖಲಿಸಿದ ಹಾಗೂ ಅನೇಕ ಗಣಿತ ಸೂತ್ರಗಳನ್ನು ನೀಡಿದ ಮೇಧಾವಿ.

**ಆಯುರ್ವೇದ**

ಭಾರತೀಯ ವೈದ್ಯ ಪದ್ಧತಿಯೆಂದು ಸರಳವಾಗಿ ಕರೆಸಿಕೊಳ್ಳುತ್ತಿರುವ ಪ್ರಾಚೀನ ಬದುಕಿನ ವಿಜ್ಞಾನ. ಕ್ರಿಪೂ. 2000 ವರ್ಷಗಳ ಹಿಂದೆಯೇ ಆರಂಭವಾದ ಆಯುರ್ವೇದ ಜ್ಞಾನವು ಬದುಕುವ ವಿಧಾನ ಮತ್ತು ಬದುಕಿನ ವಿಜ್ಞಾನವನ್ನೊಳಗೊಂಡ ಜ್ಞಾನ.

**ಆಸುರಿ**

ಮಾನವೀಯತೆಗೆ ವಿರುದ್ಧವಾಗಿ ಕಾರ್ಯ ಪ್ರವೃತ್ತವಾಗುವ ರಾಕ್ಷಸೀಭಾವ: ಅಮಾನವೀಯ ವರ್ತನೆ.

**ಉಷ್ಣಗತಿ ಚಲನ ವಿಜ್ಞಾನ (Thermodynamics)**

ಉಷ್ಣವು ಉಂಟುಮಾಡುವ ಚಲನೆ ಅಥವಾ ಬಲ ಮತ್ತು ಅವೆರಡಕ್ಕೂ ಇರುವ ಸಂಬಂಧವನ್ನು ಕುರಿತ ವಿಜ್ಞಾನ. ಬೆಳಕು, ವಿದ್ಯುತ್ ಮುಂತಾದ ಚೈತನ್ಯ (Energy) ರೂಪಗಳು ಶಾಖವಾಗಿ ಪರಿವರ್ತನೆಗೊಳ್ಳುತ್ತವೆ. ಶಾಖವೂ ಸಹ ಬೆಳಕು, ವಿದ್ಯುತ್, ಚಲನೆ (ಯಾಂತ್ರಿಕ) ಮುಂತಾದ ರೂಪಗಳಿಗೆ ಪರಿವರ್ತನೆ ಯಾಗಬಹುದು. ಹೀಗೆ ಶಾಖದಿಂದ ಇತರ ಚೈತನ್ಯ ರೂಪಗಳು ಮತ್ತು ಇತರ ಚೈತನ್ಯ ರೂಪಗಳಿಂದ ಶಾಖವು ಪರಿವರ್ತನೆಯಾಗುವುದಕ್ಕೆ ಅಧೀನವಾಗುವ ನಿಯಮಗಳನ್ನು ಉಷ್ಣಗತಿ ಚಲನವಿಜ್ಞಾನದಲ್ಲಿ ಅಧ್ಯಯನ ಮಾಡಲಾಗುತ್ತದೆ.

**ಎನ್‌ಟ್ರೋಪಿ (Entropy)**

ಶಾಖ ಅಥವಾ ಯಾವುದೇ ರೂಪದ ಚೈತನ್ಯವನ್ನು ಸೃಷ್ಟಿಸುವುದಾಗಲೀ, ನಾಶಪಡಿಸುವುದಾಗಲೀ ಅಸಾಧ್ಯ. ಒಂದು ಚೈತನ್ಯರೂಪವನ್ನು ಮತ್ತೊಂದು ಚೈತನ್ಯರೂಪವನ್ನಾಗಿ ಮಾರ್ಪಡಿಸಬಹುದು. ಇದು ಉಷ್ಣಗತಿ ಚಲನೆಯ ಮೊದಲನೆಯ ನಿಯಮ. (First Law of Thermodynamics) ಆದರೆ ಚಲಿಸುತ್ತಿರುವ ಸಾಧನಗಳು ಘರ್ಷಣೆಯನ್ನು ಎದುರಿಸುವಾಗ ಸೆಳೆದುಕೊಂಡ ಶಾಖದಲ್ಲಿ ಸ್ವಲ್ಪ ಅಂಶ ವ್ಯಯವಾಗುತ್ತದೆ. ಹಾಗೆ ಪೋಲಾದ ಶಾಖ ಎಲ್ಲಿ ಹೋಯಿತು ? ಪೋಲಾದ ಶಾಖ ಕಾರ್ಯಕ್ಕೆ ಒದಗಿಬರುವುದಿಲ್ಲ. ಹೀಗೆ ಕಾರ್ಯಕ್ಕೆ ಒದಗಿಬರದ ಜಡೋಷ್ಣವೇ ಎನ್‌ಟ್ರೋಪಿ. ಬೆಳಕು, ಧ್ವನಿ, ಯಾಂತ್ರಿಕ ಚೈತನ್ಯಗಳು ಸುಲಭವಾಗಿ ಶಾಖರೂಪಕ್ಕೆ ಪರಿವರ್ತನೆಯಾಗುತ್ತವೆ. ಆದರೆ ಹಾಗೆ ಬದಲಾದ ಶಾಖ ಇತರ ರೂಪಗಳಿಗೆ ಬದಲಾಗುವುದಿಲ್ಲ. ಅಂದರೆ ದಿನೇ ದಿನೇ ಹೆಚ್ಚು ಶಾಖವು 'ಲಭಿಸದ ಶಾಖ'ವಾಗಿ ಶೇಖರವಾಗುತ್ತದೆ. ಎನ್‌ಟ್ರೋಪಿಯ ಕಲ್ಪನೆಯ ಮೂಲವಿದು. ಎನ್‌ಟ್ರೋಪಿಯು ಅಲಭ್ಯವಾದ ಶಾಖದ ಮಟ್ಟವನ್ನು ಅಥವಾ ಚೈತನ್ಯದ ಅಲಭ್ಯತೆಯನ್ನು ಕುರಿತು ಹೇಳುತ್ತದೆ.

**ಏಕದಶಾವ್ರತ (ಹನ್ನೊಂದು ವ್ರತ)**

ಗಾಂಧೀಜಿಯವರು ಪಾಲಿಸುತ್ತಿದ್ದ ಹನ್ನೊಂದು ವ್ರತಗಳು – ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಆಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮ ಸಮಭಾವ, ಸ್ವದೇಶಿ ಮತ್ತು ಸ್ಪರ್ಶ ಭಾವನ.

**ಕಾರ್ಟೀಸಿಯನ್ ಯುಗ**

ಡೇಕಾರ್ಟ್ ಎಂಬ ಫ್ರೆಂಚ್ ತತ್ತ್ವಜ್ಞಾನಿಯ ಪ್ರಭಾವದಲ್ಲಿ ಅರಳಿದ ತತ್ತ್ವಜ್ಞಾನ ಕುರಿತ ಜಿಜ್ಞಾಸೆಯ ಅವಧಿ. ನೋಡಿ : ಡೇಕಾರ್ಟ್.

**ಕ್ಯಾಂಟ್, ಇಮ್ಯಾನ್ಯುಯೆಲ್**

ಜರ್ಮನಿಯ ಪ್ರಸಿದ್ಧ ತತ್ತ್ವಜ್ಞಾನಿ ಇಮ್ಮಾನ್ಯುಯಲ್ ಕ್ಯಾಂಟ್ (1724–1804) ತತ್ತ್ವಜ್ಞಾನಿ ಹ್ಯೂಮ್‌ನ ಸಂದೇಹವಾದವನ್ನು ಪ್ರಶ್ನಿಸಿ, ಮಾನವನ ಜ್ಞಾನದ ಬಗೆಗೆ ಸತತ ಚಿಂತನೆ ನಡೆಸಿದವನು. ಅತನ 'ಎ ಕ್ರಿಟಿಕ್ ಆಫ್ ಪ್ಯೂರ್ ರೀಸನ್' ಒಂದು ಮಹಾಕೃತಿ.

**ಚಿತ್ತರಂಜನ್ ದಾಸ್**

ಬಂಗಾಳದ ರಾಷ್ಟ್ರೀಯ ನೇತಾರ. ಪ್ರಸಿದ್ಧ ವಕೀಲ.

**ಜಡೋಷ್ಣ**

*ನೋಡಿ ಎನ್‌ಟ್ರೋಪಿ*

**ಜ್ಞಾನ ಶಾಸ್ತ್ರ (Epistemology)**

ತತ್ತ್ವಶಾಸ್ತ್ರದ ಒಂದು ಭಾಗ. ಜ್ಞಾನವು ಉಂಟಾಗುವ ಅಥವಾ ಅದರ ಉಗಮದ ವಿಧಾನ ಮತ್ತು ಅದರ ಆಧಾರಗಳನ್ನು ಕುರಿತ ಶಾಸ್ತ್ರಭಾಗ.

**ಜ್ಯೋತಿಷ್ಯ**

ಇದನ್ನು ಭಾರತೀಯ ಖಗೋಳವಿಜ್ಞಾನವೆಂದು ಪರಿಗಣಿಸಲಾಗುತ್ತದೆ. ಗ್ರಹಗಳ ಚಲನೆ, ಗ್ರಹಣ, ನಕ್ಷತ್ರಗಳು, ಋತುಮಾನಗಳು ಇತ್ಯಾದಿಗಳನ್ನು ಕುರಿತ ಶಾಸ್ತ್ರ. ಆದರೆ ಈಗ 'ಫಲಜ್ಯೋತಿಷ್ಯ' ಮುಂಚೂಣಿಗೆ ಬಂದು ನಿಜವಾದ ಜ್ಯೋತಿಷ್ಯಶಾಸ್ತ್ರದ ಉದ್ದೇಶ ಮರೆಯಾಗಿದೆ.

**ಜೀವ ಪರಿಸರ ವಿಜ್ಞಾನ (Ecology)**

ಒಂದು ನಿರವಯದ ಭೌಗೋಳಿಕ ಪರಿಸರ ಮತ್ತು ಅಲ್ಲಿ ಜೀವಿಸುವ ಜೀವಿಗಳ ಸಂಬಂಧ, ಹೋರಾಟ, ಹೊಂದಾಣಿಕೆ ಮತ್ತು ಜೀವಜಾಲಗಳ ಸೂಕ್ಷ್ಮ ಅಧ್ಯಯನಕ್ಕೆ ಸಂಬಂಧಿಸಿದ ವಿಜ್ಞಾನ.

**ಟಾಟಾಲಜಿ (Tautology)**

ಒಂದು ವಿಷಯ, ವಸ್ತುವನ್ನು ಬೇರೆ ಬೇರೆ ಅಭಿಪ್ರಾಗಳಿಂದ ಸಮರ್ಥಿಸುವ ವಿಧಾನ.

**ಡೇಕಾರ್ಟ್, ರೆನೆ**

ಆಧುನಿಕ ತತ್ತ್ವಜ್ಞಾನದ ಪಿತಾಮಹ ಫ್ರಾನ್ಸ್‌ನ ರೆನೆ ಡೇಕಾರ್ಟ್ (1596–1650) ತನ್ನ ಹಿಂದಿನ ತತ್ತ್ವಜ್ಞಾನದ ಪದ್ಧತಿಗಳನ್ನು ತಿರಸ್ಕರಿಸಿ ತನ್ನದೇ ಹೊಸ ಹಾದಿಯಲ್ಲಿ ಸಾಗಿದವನು. ಮನಸ್ಸು ಮತ್ತು ದೇಹ ಎರಡು ವಿಭಿನ್ನ ಅಂಶಗಳೆಂದು ಪ್ರತಿಪಾದಿಸಿದ ಡೇಕಾರ್ಟ್ "ಡಿಸ್ಕೋರ್ಸ್ ಆನ್ ಮೆಥೆಡ್" ಎಂಬ ತನ್ನ ಕೃತಿಯಲ್ಲಿ ಸತ್ಯಾನೇಷಣೆಗಿರುವ ಹಲವಾರು ದಾರಿಗಳನ್ನು ಚರ್ಚಿಸಿದ್ದಾನೆ. ಸೈನದ್ಯಲ್ಲಿರುವಾಗ ರೇಖಾಗಣಿತವನ್ನು ಅಭ್ಯಾಸ ಮಾಡಿದ ನಂತರ ಆತ ತನ್ನ ಬದುಕನ್ನು ಶುದ್ಧ ಗಣಿತಶಾಸ್ತ್ರದ ಅಧ್ಯಯನಕ್ಕೆ ಮೀಸಲಿಟ್ಟ.

**ಧರ್ಮ**

ಜಗತ್ತಿನ ಎಲ್ಲ ಜೀವಿಗಳ ಜೊತೆ ಸಹಜ ನಿಯಮಗಳಿಗನುಸಾರವಾಗಿ ಸಾಮರಸ್ಯದಿಂದ ಬದುಕುವ ಜೀವನ ವಿಧಾನ.

**ನ್ಯಾಯ ವೈಶೇಷಿಕ**

ಭೌತವಿಜ್ಞಾನ ಮತ್ತು ತರ್ಕಶಾಸ್ತ್ರವನ್ನು ಕುರಿತ ಪ್ರಾಚೀನ ಭಾರತೀಯ ದರ್ಶನ.

**ನಿಗಮನ (Deduction)**

ಸಾಮಾನ್ಯತೆಯಿಂದ ನಿರ್ದಿಷ್ಟತೆಯೆಡೆಗೆ ಕ್ರಮಿಸುವ ವಿಶ್ಲೇಷಣಾತ್ಮಕ ವಾದ ಪದ್ಧತಿ. ಆಧಾರ ವಚನಗಳನ್ನು ವಿಶ್ಲೇಷಿಸುತ್ತಾ ಅನುಮಾನ ತಾಳಿ, ಒಂದು ತೀರ್ಮಾನೆದೆಡೆಗೆ ಸಾಗುವ ತರ್ಕ ವಿಧಾನವೇ ನಿಗಮನ.

**ನಿರ್ವಿಕಲ್ಪ ಸಮಾಧಿ**

ಧ್ಯಾನದ ಒಂದು ವಿಶಿಷ್ಟ ಹಂತ.

**ನೀತಿ ವ್ಯಾಪ್ತ**

ನೀತಿಯಿಂದ ಆವೃತಗೊಂಡದ್ದು.

**ಪಾಣಿನಿ**

ಭಾರತದ ಪ್ರಾಚೀನ ವ್ಯಾಕರಣ ಪಂಡಿತ. ತಕ್ಷಶಿಲೆಯಲ್ಲಿದ್ದ ಈತನು ಬರೆದ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂಸ್ಕೃತ ವ್ಯಾಕರಣ ಕುರಿತ ಮೂಲಭೂತ ಕೃತಿಯೆಂದು ಪರಿಗಣಿಸಲಾಗಿದೆ.

**ಮಾರ್ಕ್ಸ್, ಕಾರ್ಲ್ಸ್**

ಜಗತ್ತಿನ ಚಿಂತನೆಯ ದಿಕ್ಕನ್ನು ತನ್ನ 'ದಾಸ್ ಕ್ಯಾಪಿಟಲ್' ಮೇರು ಕೃತಿಯ ಮೂಲಕ ಬದಲಿಸಿದ ಮಾರ್ಕ್ಸ್ (1818–1883) ಕಮ್ಯುನಿಸಂ ತತ್ತ್ವದ ಪ್ರವಾದಿ.

**ಯೂಕ್ಲಿಡ್**

ಗ್ರೀಕ್‌ನ ಪ್ರಸಿದ್ಧ ರೇಖಾಗಣಿತಜ್ಞ, ಕ್ರಿ.ಪೂ. 300ಕ್ಕೂ ಹಿಂದೆ ಜೀವಿಸಿದ್ದವ. ರೇಖಾಗಣಿತವನ್ನು ವೈಜ್ಞಾನಿಕ ಚೌಕಟ್ಟಿಗೆ ಅಳವಡಿಸಿದವನು. ಸುಮಾರು ಎರಡು ಸಾವಿರ ವರ್ಷಗಳ ಕಾಲ ಆತ ಪ್ರತಿಪಾದಿಸಿದ ನಿಯಮಗಳು ಜಗತ್ತನ್ನೇ ಆಳಿದವು. ಅವನು ರಚಿಸಿದ "ಪ್ರಿನ್ಸಿಪಲ್ ಆಫ್ ಜ್ಯಾಮಿಟ್ರಿ" ನೂರಾರು ಭಾಷೆಗಳಿಗೆ ಅನುವಾದಗೊಂಡಿದೆ.

**ರಸೆಲ್, ಬರ್ಟ್ರೆಂಡ್ ಆರ್ಥರ್ ವಿಲಿಯಂ**

ಇಪ್ಪತ್ತನೆಯ ಶತಮಾನದ ಕ್ರಾಂತಿಕಾರಕ ತತ್ತ್ವಜ್ಞಾನಿ, ಹೋರಾಟಗಾರ ಹಾಗೂ ಶಾಂತಿ ಪ್ರತಿಪಾದಕ. ಗಣಿತ ವಿಜ್ಞಾನ ಮತ್ತು ತತ್ತ್ವಜ್ಞಾನ ಕುರಿತು ಕೃತಿಗಳನ್ನು ರಚಿಸಿದ ರಸೆಲ್ ಪ್ರಚಂಡ ವಿಚಾರವಾದಿ. ಸಾಹಿತ್ಯಕ್ಕಾಗಿ ನೀಡುವ ನೊಬೆಲ್ ಪಾರಿತೋಷಕ ಪಡೆದ ಮಹಾನ್ ಬುದ್ಧಿಜೀವಿ.

**ಲೋಕ**

ಜನ, ಜನಸಮುದಾಯ, ಸಾಮಾಜಿಕ ಸ್ತರವನ್ನು ಪ್ರತಿನಿಧಿಸುವ ಪದ.

**ಲೋಕಸಮ್ಮತ**

ಗಾಂಧೀಯವರ ತರ್ಕದಲ್ಲಿ ಸರ್ವರಿಗೂ ಒಪ್ಪಿಗೆಯಾಗುವ ಸಮಂಜಸತೆಯ ಪ್ರಮಾಣ ಅಥವಾ ಪರೀಕ್ಷೆ.

**ವರ್ಣಾಶ್ರಮ**

ಸಮಾಜವನ್ನು ಬದುಕಿನ ರೀತಿಯ ಆಧಾರದ ಮೇಲೆ ವಿಭಜಿಸುತ್ತಿದ್ದ ವರ್ಗೀಕರಣ

**ವಿದ್ಯೆ**

ವಿಜ್ಞಾನ, ಕಲೆ, ತಂತ್ರಜ್ಞಾನ, ಮೌಲ್ಯ ಮುಂತಾದವುಗಳ ಬಗೆಗಿನ ಅರಿವು.

**ವೈಟ್‌ಹೆಡ್**

ಇಪ್ಪತ್ತನೇ ಶತಮಾನದ ತತ್ತ್ವಜ್ಞಾನಿಗಳಲ್ಲಿ ಪ್ರಮುಖನೆನಿಸಕೊಂಡ ಎ.ಎನ್. ವೈಟ್‌ಹೆಡ್ (1861–1947) ರಸೆಲ್ ಜೊತೆಯಲ್ಲಿ 'ಪ್ರಿನ್ಸಿಪಿಯಾ ಮ್ಯಾಥ್ ಮ್ಯಾಟಿಕಾ' ಎಂಬ ಉತ್ಕೃಷ್ಟ ಗಣಿತವಿಜ್ಞಾನ ಕೃತಿಯನ್ನು ರಚಿಸಿದವನು. ಇಪ್ಪತ್ತನೇ ಶತಮಾನದಲ್ಲಿ ಹೊಸ ರೂಪ ಪಡೆದ ತರ್ಕಶಾಸ್ತ್ರಕ್ಕೆ ಈತನ ಕೊಡುಗೆ ದೊಡ್ಡದು.

**ಸಂಯಮ**

ನೈತಿಕ ನಿಯಂತ್ರಣ

**ಸತ್ಯಾಗ್ರಹ**

ಸತ್ಯಕ್ಕಾಗಿ ನಡೆಸುವ ಒತ್ತಾಯ : ಸತ್ಯದ ಪ್ರತಿಪಾದನೆಗೆ ನಡೆಸುವ ಹೋರಾಟ.

**ಹ್ಯೂಂ, ಡೇವಿಡ್**

ಆಧುನಿಕ ಯುಗದ ಅನುಭವೈಕವಾದಿ ತ್ರಿವಳಿಗಳಲ್ಲಿ ಒಬ್ಬ. (ಜಾನ್ ಲಾಕ್ ಮತ್ತು ಜಾರ್ಜ್ ಬರ್ಕಲಿ ಇತರ ಇನ್ನಿಬ್ಬರು) ಡೇವಿಡ್ ಹ್ಯೂಂ (1771–76) ತನ್ನ 'ಟ್ರೀಟೀಸ್' ಮತ್ತು 'ಎನ್‌ಕ್ವೈರಿ' ಕೃತಿಯಲ್ಲಿ ಜ್ಞಾನದ ಪರಿಮಿತಿಗಳನ್ನು ಕುರಿತು ಹೇಳಿದ್ದಾನೆ.

●

ಗಾಂಧೀಜಿಯವರ ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಬಹುಮುಖಿ ಸಂಸ್ಕೃತಿಗಳ ಶ್ರಮ ಹಾಗೂ ಸೃಜನಶೀಲತೆಗಳನ್ನು ಗೌರವಿಸಿದಂತೆ ಸ್ವಾವಲಂಬನೆಯ ಮಾರ್ಗವನ್ನು ತೆರೆದು ತೋರಿಸಿದ ಜೀವನ ವಿಧಾನ. ಅಹಿಂಸಾ ತತ್ವದಿಂದ ಪ್ರಕಟಗೊಂಡ ಸತ್ಯಾಗ್ರಹ, ಸ್ವದೇಶಿ, ಸ್ವರಾಜ್ಯಗಳ ಚಿಂತನೆ ನಿಸರ್ಗ ಲಯಗಳೊಡನೆ ಸಂಲಗ್ನಗೊಂಡ ಧರ್ಮದೃಷ್ಟಿಯಿಂದ ಕೂಡಿದುದಾಗಿದೆ. ಭಾರತದ ಬದುಕಿನ ಗತಿಯನ್ನು ರೂಪಿಸುವಾಗಲೆಲ್ಲಾ ನಮ್ಮ ರಾಜಕೀಯ ಪ್ರಜ್ಞೆ, ಗಾಂಧೀಜಿಯವರ ಇಂಥ ಚಿಂತನೆಗಳನ್ನು ಅವಜ್ಞೆಗೈದಿದೆ ; ತಿರಸ್ಕರಿಸಿದೆ. ಅದರ ಪರಿಣಾಮ ಇಂದಿನ ವೈಪರೀತ್ಯ. ಈ ವೈಪರೀತ್ಯದ ಒಳ ಸಂಕಟಗಳನ್ನು ಚಿಂತನೆಯ ದ್ರವ್ಯವಾಗಿಸಿಕೊಂಡು ಗಾಂಧೀಜಿಯವರ ಆಲೋಚನೆಗಳಿಗೆ ಮುಖಾಮುಖಿಯಾಗಿ ರೂಪಿತಗೊಂಡ ಕೃತಿ ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು. ಮೂಲತಃ ಎಡಪಂಥೀಯ ಆಲೋಚನೆಯನ್ನು ರಾಜಕೀಯ ಬದುಕಾಗಿಸಿಕೊಂಡಿರುವ ಪಶ್ಚಿಮ ಬಂಗಾಳದ ನೆಲದಿಂದ ಬಂದವರು ಶ್ರೀ ಸುನೀಲ್ ಸಹಸ್ರಬುಧೆ ಅವರು. ಗಾಂಧೀಜಿಯವರ ಜೀವನ ದರ್ಶನವನ್ನು ಸಮಗ್ರವಾಗಿ ಆಧುನಿಕ ವಿಜ್ಞಾನದ ಬೆಳವಣಿಗೆಗೆ ಒಡ್ಡಿಕೊಂಡಂತೆ ವಸ್ತುನಿಷ್ಠವಾಗಿ ವಿಶ್ಲೇಷಣೆಗೆ ಒಳಗು ಮಾಡಿದ್ದಾರೆ. ಆ ದೂರಗಾಮಿ ದರ್ಶನದಲ್ಲಿ ಮನುಷ್ಯನ ಬದುಕನ್ನು ಗ್ರಹಿಸಿದ ಪರಿಣಾಮದ ಫಲ ಈ ಕೃತಿ.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಬೆಲೆ ರೂ. ೬೦/-

ISBN : 81 - 7713 - 159 - 1

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು